ಶುಕ್ರವಾರ, ಆಗಸ್ಟ್ 22, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಡ್ರೋನ್ ಪತ್ತೆ

ಜಮ್ಮುವಿನ ಗಡಿಭಾಗದಲ್ಲಿ ಗುರುವಾರ ಅನುಮಾನಾಸ್ಪದ ಡ್ರೋನ್‌ವೊಂದು ಪತ್ತೆಯಾಗಿದೆ

ಜಮ್ಮುವಿಗೆ ಸಿಆರ್‌ಪಿಎಫ್‌ನ 3 ತುಕಡಿ

ಜಮ್ಮು ಪ್ರದೇಶದಲ್ಲಿ ಭದ್ರತೆಗಾಗಿ ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಮೂರು ತುಕಡಿಗಳನ್ನು ನಿಯೋಜಿಸುವಂತೆ ಕೇಂದ್ರ ಸರ್ಕಾರ ನಿರ್ದೇಶಿಸಿದೆ ಎಂದು ಮೂಲಗಳು ತಿಳಿಸಿವೆ

ಮಾತು ಗಮ್ಮತ್ತು

ಅಬ್ಬರಿಸಿದ ಕಂದಕೂರ

‘ಅನಗತ್ಯವಾಗಿ ಚರ್ಚೆ ಮಾಡಬೇಡಿ, ಮಸೂದೆಗೆ ಸೀಮಿತವಾಗಿ ಅಭಿಪ್ರಾಯ ತಿಳಿಸಿ’ ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ನೀಡಿದ ಸಲಹೆಗೆ ಜೆಡಿಎಸ್‌ನ ಶರಣಗೌಡ ಕಂದಕೂರ ಕೆರಳಿ ಕೆಂಡವಾದರು. ರೋಷಾವೇಶದಿಂದ ಅಬ್ಬರಿಸಿದ ಕಂದಕೂರ, ಕಲಾಪದಿಂದ ಹೊರ ನಡೆಯಲು ಮುಂದಾದ ಪ್ರಸಂಗವೂ ವಿಧಾನಸಭೆಯಲ್ಲಿ ನಡೆಯಿತು.

ಜನಸಂದಣಿ ನಿಯಂತ್ರಣ ಮಸೂದೆಯ ಚರ್ಚೆಯ ವೇಳೆ ಕಂದಕೂರ, ಈ ಮಸೂದೆಯಿಂದ ಉತ್ತರ ಕರ್ನಾಟಕ ಭಾಗದ ಜಾತ್ರೆಗಳಿಗೆ ಯಾವ ರೀತಿ ಅಡಚಣೆ ಆಗಲಿದೆ ಎಂದು ವಿವರಿಸಿದರು. ಮಧ್ಯಪ್ರವೇಶಿಸಿದ ಸಭಾಧ್ಯಕ್ಷರು, ‘ಭಾಷಣ ಮಾಡಬೇಡಿ. ಬೇರೆಯವರಿಗೂ ಮಾತನಾಡಲು ಅವಕಾಶ ನೀಡಬೇಕು’ ಎಂದು ತಿಳಿ ಹೇಳಿದರು.

ಆಗ ಕಂದಕೂರ, ‘ನನಗೆ ಪ್ರತಿ ಬಾರಿ ಅಡಿಪಡಿಸಲಾಗುತ್ತಿದೆ. ನನ್ನನ್ನೇ ಗುರಿ ಮಾಡುತ್ತಿದ್ದೀರಿ. ಮಾತನಾಡುವುದು ಬೇಡ ಎಂದಾದರೆ ಹೊರಹೋಗುತ್ತೇನೆ’ ಎಂದು ಸಿಡಿಮಿಡಿಗೊಂಡರು. ಆಗ ಸಭಾಧ್ಯಕ್ಷರು, ‘ಮನೆಗೆ ಹೋಗುವುದಾದರೆ ಹೋಗಿ’ ಎಂದರು. ಕಾವೇರಿದ ಸನ್ನಿವೇಶ ಸೃಷ್ಟಿಯಾಯಿತು.

ಕಂದಕೂರ, ‘ನಾನು ಮಾತನಾಡಿದ್ದು ತಪ್ಪೇ’ ಎಂದು ಕಾನೂನು ಸಚಿವರ ಅಭಿಪ್ರಾಯ ಕೇಳಿದರು. ಪ್ರತಿಕ್ರಿಯಿಸಿದ ಎಚ್‌. ಕೆ. ಪಾಟೀಲ, ‘ನೀವು ಆರಂಭದಲ್ಲಿ ಮಾತನಾಡಿದ್ದು ಸರಿ ಇತ್ತು. ನಂತರದ ಮಾತುಗಳು ಸರಿ ಇಲ್ಲ’ ಎಂದರು. ‘ನೀವುಗಳು ಉತ್ತಮ ಸಂಸದೀಯ ಪಟುಗಳಾಗಬೇಕು. ಸಹನೆ, ಸಂಯಮ ರೂಢಿಸಿಕೊಳ್ಳಿ’ ಎಂದು ಸಲಹೆ ನೀಡಿದರು.

‘ಸಭಾಧ್ಯಕ್ಷರಿಗೂ ತಾಳ್ಮೆ ಬೇಕು. ಹೊರ ಹೋಗುತ್ತೇನೆ ಎಂದ ತಕ್ಷಣ ಹೋಗಿ ಎನ್ನುವುದು ಪೀಠದಿಂದ ಹೇಳುವ ಮಾತಲ್ಲ’ ಎಂದು ಬಿಜೆಪಿಯ ಸಿ.ಸಿ. ಪಾಟೀಲ ಹೇಳಿದರು.

ಬಸನಗೌಡ ಪಾಟೀಲ ಯತ್ನಾಳ, ‘ಸಭಾಧ್ಯಕ್ಷರು ತಾಳ್ಮೆ ಕಳೆದುಕೊಳ್ಳಬಾರದು. ಕಡಿಮೆ ಮಾತನಾಡಬೇಕು. ಬೇಗ ಮುಗಿಸಿ ಎಂದು ಒತ್ತಡ ಹಾಕಿದರೆ ಹೇಳಬೇಕಾದ ಅಭಿಪ್ರಾಯಗಳೇ ಮರೆತು ಹೋಗುತ್ತವೆ’ ಎಂದರು.

ಕಂದಕೂರ ಅವರಿಗೆ ಮಾತನಾಡಲು ಅವಕಾಶ ನೀಡುವಂತೆ ಬಿಜೆಪಿ, ಜೆಡಿಎಸ್ ಶಾಸಕರು ಮನವಿ ಮಾಡಿದರು. ಸಭಾಧ್ಯಕ್ಷರು ಅನುಮತಿ ನೀಡಿದರು.

ಅಭಿಮಾನದ ಬಗ್ಗೆ ಎಚ್ಚರ

ವಿಧಾನ ಪರಿಷತ್ತಿನಲ್ಲಿ ಅಗ್ನಿಶಾಮಕ ದಳ ಮಸೂದೆಯ ಮೇಲಿನ ಚರ್ಚೆಯ ವೇಳೆ ಗೃಹ ಸಚಿವ ಜಿ.ಪರಮೇಶ್ವರ ಅವರು, ‘17 ಬಾರಿ ಬಜೆಟ್ ಮಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ’ ಎಂದರು. ಬಿಜೆಪಿಯ ಕೇಶವ ಪ್ರಸಾದ್ ಅವರು, ‘16 ಬಜೆಟ್’ ಎಂದು ಸರಿಪಡಿಸಿದರು.

ಆಗ ಪರಮೇಶ್ವರ ಅವರು, ‘ಹೌದು ಸರಿಪಡಿಸಿಕೊಂಡೆ. 16 ಬಜೆಟ್’ ಎಂದು ಸಿದ್ದರಾಮಯ್ಯ ಅವರತ್ತ ನೋಡಿದರು. ವಿರೋಧ ಪಕ್ಷಗಳ ಕೆಲ ಸದಸ್ಯರು, ‘ಕೇಶವ ಅವರದ್ದು ಅಭಿಮಾನದ ಮಾತು’ ಎಂದರು. ಪ್ರತಿಯಾಗಿ ಪರಮೇಶ್ವರ, ‘ಹೌದು ಅವರು ಬಹಳ ಒಳ್ಳೆಯವರು. ಅವರು ಅಭಿಮಾನದಿಂದಲೇ ಹೇಳಿದ್ದು’ ಎಂದರು.

ಸಭಾಪತಿ ಬಸವರಾಜ ಹೊರಟ್ಟಿ ಅವರು ಮಧ್ಯ ಪ್ರವೇಶಿಸಿ, ‘ಅವರ ಅಭಿಮಾನದ ಬಗ್ಗೆ ಬಹಳ ಎಚ್ಚರಿಕೆಯಿಂದ ಇರಿ’ ಎಂದು ಕಾಲೆಳೆದರು.

ವಿಪಕ್ಷಗಳ ಪಟ್ಟು: ಸದನ ಸಮಿತಿಗೆ ಮಸೂದೆ

ಕಾರ್ಯಕ್ರಮ, ಸಮಾರಂಭಗಳಲ್ಲಿ ಜನಸಂದಣಿ ನಿಯಂತ್ರಣ ಉದ್ದೇಶದ ಮಸೂದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಯಕ್ರಮ ಮತ್ತು ಸಮಾರಂಭಗಳಲ್ಲಿ ಜನಸಂದಣಿ ನಿಯಂತ್ರಿಸುವ ಜೊತೆಗೆ, ಕಾನೂನುಬಾಹಿರವಾಗಿ ಗುಂಪುಗೂಡುವುದನ್ನು ತಡೆಯುವ ಉದ್ದೇಶದ ‘ಕರ್ನಾಟಕ ಜನಸಂದಣಿ ನಿಯಂತ್ರಣ (ಕಾರ್ಯಕ್ರಮಗಳು ಮತ್ತು ಗುಂಪುಗೂಡುವ ಸ್ಥಳಗಳಲ್ಲಿ ಜನಸಂದಣಿಯ ನಿರ್ವಹಣೆ) ಮಸೂದೆಯನ್ನು ವಿಧಾನಸಭೆಯ ಸದನ ಸಮಿತಿಗೆ ವಹಿಸಬೇಕೆಂಬ ವಿರೋಧ ಪಕ್ಷಗಳ ಸದಸ್ಯರ ಪಟ್ಟಿಗೆ ಸರ್ಕಾರ ಮಣಿಯಿತು.

ಮಸೂದೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ವಿರೋಧ ಪಕ್ಷಗಳ ಸದಸ್ಯರು, ‘ಇದೊಂದು ಗಂಭೀರವಾದ ಮಸೂದೆ. ಹೆಚ್ಚಿನ ಚರ್ಚೆಯ ಅಗತ್ಯವಿದೆ’ ಎಂದು ಆಗ್ರಹಿಸಿದರು. ಗೃಹ ಸಚಿವ ಜಿ. ಪರಮೇಶ್ವರ ಅವರು ಆಕ್ಷೇಪಗಳಿಗೆ ವಿವರಣೆ ನೀಡಿದರೂ ವಿಪಕ್ಷಗಳ ಸದಸ್ಯರು ಸಮಾಧಾನಗೊಳ್ಳಲಿಲ್ಲ. ಹೀಗಾಗಿ, ಸದನ ಸಮಿತಿಗೆ ವಹಿಸುವುದಾಗಿ ಪ್ರಕಟಿಸಿದರು.

ಮಸೂದೆ ಮಂಡಿಸಿದ ಪರಮೇಶ್ವರ, ‘ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತವೂ ಸೇರಿದಂತೆ ಹಲವೆಡೆ ಸಂಭವಿಸಿದ ಕಾಲ್ತುಳಿತ ದುರ್ಘಟನೆಯನ್ನು ಗಮನದಲ್ಲಿ ಇಟ್ಟುಕೊಂಡು ಸಾರ್ವಜನಿಕ

ಹಾಗೂ ಖಾಸಗಿ ಆಸ್ತಿಗಳ ರಕ್ಷಣೆ ಹಾಗೂ ಆಯೋಜಕರನ್ನು ಜವಾಬ್ದಾರರನ್ನಾಗಿ ಮಾಡುವ ಉದ್ದೇಶದಿಂದ ಈ ಮಸೂದೆ ತರಲಾಗಿದೆ’ ಎಂದರು.

‘ಮಸೂದೆಯ ಪ್ರಕಾರ, ಆಯೋಜಕರು ಜನಸಂದಣಿ ನಿಯಂತ್ರಣ ಮತ್ತು ನಿರ್ವಹಣೆ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯುವುದು ಕಡ್ಡಾಯ. ಏಳು ಸಾವಿರ ಜನರಗಿಂತ ಕಡಿಮೆ ಇದ್ದರೆ ಆ ವ್ಯಾಪ್ತಿಯ ಪೊಲೀಸ್ ಠಾಣೆಯ ಉಸ್ತುವಾರಿ ಅಧಿಕಾರಿ, ಏಳು ಸಾವಿರಕ್ಕಿಂತ ಹೆಚ್ಚಿದ್ದರೆ ಡಿವೈಎಸ್ಪಿ, ಬೆಂಗಳೂರಿನಲ್ಲಿ ಎಸಿಪಿ, 50 ಸಾವಿರಕ್ಕಿಂತ ಹೆಚ್ಚಿದ್ದರೆ ಎಸ್‌ಪಿ ಅಥವಾ ಕಮಿಷನರ್ ಅನುಮತಿ ಕೊಡಬೇಕಾಗುತ್ತದೆ. ಆಯೋಜಕರು ಕಾರ್ಯಕ್ರಮಕ್ಕೆ 10 ದಿನ ಮೊದಲು ಸಿದ್ಧತೆ, ನಡೆಯುವ ಜಾಗ ಸೇರಿದಂತೆ ಸಂಪೂರ್ಣ ಮಾಹಿತಿ ನೀಡಬೇಕು. ಖಾಸಗಿ ಹಾಗೂ ಸಾರ್ವಜನಿಕ ಸ್ವತ್ತಿಗೆ ಹಾನಿಯಾಗದ ರೀತಿ ಕ್ರಮ ಕೈಗೊಳ್ಳುವ ಜವಾಬ್ದಾರಿ ಹೊರಬೇಕು’ ಎಂದರು.

ಪ್ರಾಧಿಕಾರದ ಅನುಮತಿ ನೀಡುವ ಮೊದಲು ಅಗ್ನಿಶಾಮಕ, ಲೋಕೋಪಯೋಗಿ ಮತ್ತು ಆರೋಗ್ಯ ಇಲಾಖೆಯ ಅನುಮತಿಯನ್ನು ಆಯೋಜಕರು ಪಡೆದಿರಬೇಕು. ಸಂಬಂಧಿಸಿದ ಪ್ರಾಧಿಕಾರದ ಅಧಿಕಾರಿ ಅರ್ಜಿದಾರರಿಗೆ ಈ ಎಲ್ಲ ನಿರ್ದೇಶನಗಳನ್ನು ನೀಡಬೇಕಾಗುತ್ತದೆ ಎಂದು ಹೇಳಿದರು.

‘ಈ ಮಸೂದೆಯಲ್ಲಿರುವ ಅಂಶಗಳು ಗೊಂದಲ ಉಂಟು ಮಾಡುವಂತಿದೆ. ಜಾತ್ರೆ, ಹಬ್ಬಗಳ ಬಗ್ಗೆ ಸ್ಪಷ್ಟತೆ ಇಲ್ಲ’ ಎಂದು ಆಕ್ಷೇಪಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಬಿಜೆಪಿಯ ಎಸ್. ಸುರೇಶ್‌ಕುಮಾರ್, ವಿ. ಸುನಿಲ್‌ಕುಮಾರ್, ಸುರೇಶ್ ಗೌಡ, ಉಮಾನಾಥ ಕೋಟ್ಯಾನ್, ಬಿಜೆಪಿಯ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ್, ಜೆಡಿಎಸ್‌ನ ಶರಣಗೌಡ ಕಂದಕೂರ ಮುಂತಾದವರು ಸದನ ಸಮಿತಿ ರಚಿಸುವಂತೆ ಪಟ್ಟು ಹಿಡಿದರು.

ಮಸೂದೆಯ ಮೂಲಕ ದಬ್ಬಾಳಿಕೆ ಮಾಡಲು ಅವಕಾಶ ಕೊಡಬೇಡಿ. ರಾಜಕೀಯ ಪಕ್ಷಗಳ, ರೈತರ ಹೋರಾಟಗಳನ್ನು ಹತ್ತಿಕ್ಕುವ ಕೆಲಸ ಮಾಡಬೇಡಿ
ಬಿ.ವೈ. ವಿಜಯೇಂದ್ರ, ಬಿಜೆಪಿ ಶಾಸಕ

ಒಂದು ಧರ್ಮಕ್ಕೆ ದಿನದ ಐದು ಬಾರಿ ಧ್ವನಿವರ್ಧಕದಲ್ಲಿ ಪ್ರಾರ್ಥನೆ ಮಾಡಲು ಅವಕಾಶ ಮಾಡಿಕೊಡಲಾಗುತ್ತದೆ. ಗಣೇಶೋತ್ಸವದ ಡಿಜೆ ಸದ್ದು ಮಾತ್ರ ಸರ್ಕಾರಕ್ಕೆ ಕಿರಿಕಿರಿಯಾಗುತ್ತಿದೆ
ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿಯ ಉಚ್ಚಾಟಿತ ಶಾಸಕ

ನಾವು ರಾಜಕೀಯದಲ್ಲಿದ್ದೇವೆ. ಯಾವುದೋ ಕಾರ್ಯಕ್ರಮ ಮಾಡಿದಾಗ ಸಣ್ಣಪುಟ್ಟ ತಪ್ಪುಗಳಿಗೆ ಕ್ರಿಮಿನಲ್ ಕೇಸ್ ಹಾಕಿ ಜೀವಾವಧಿ ಶಿಕ್ಷೆ ವಿಧಿಸಿದರೆ ಏನು ಮಾಡಬೇಕು?
ಆರ್. ಅಶೋಕ, ವಿರೋಧ ಪಕ್ಷದ ನಾಯಕ

ದಂಡ–ಶಿಕ್ಷೆ ಪ್ರಮಾಣ ಎಷ್ಟು?

‘ಅನುಮತಿ ಪಡೆಯದಿದ್ದರೆ ಕಾರ್ಯಕ್ರಮದ ಆಯೋಜಕರಿಗೆ ಮೂರು ವರ್ಷದಿಂದ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ, ₹1 ಕೋಟಿವರೆಗೆ ದಂಡ ಅಥವಾ ಎರಡನ್ನೂ ವಿಧಿಸಲಾಗುವುದು’ ಎಂದು ಜಿ. ಪರಮೇಶ್ವರ ವಿವರಿಸಿದರು.

ಮಸೂದೆ ಕುರಿತು ಸದನಕ್ಕೆ ವಿವರ ನೀಡಿದ ಅವರು, ‘ಸುಳ್ಳು ಹೇಳಿಕೆ, ವದಂತಿಗಳ ಮೂಲಕ ಹಿಂಸಾಚಾರ, ಆಸ್ತಿ ನಷ್ಟ, ಶಾಂತಿಭಂಗಕ್ಕೆ ಪ್ರಚೋದಿಸಿದರೆ ಮೂರು ವರ್ಷಗಳ ವರೆಗೆ ವಿಸ್ತರಿಸಬಹುದಾದ ಜೈಲು, ₹50 ಸಾವಿರ ದಂಡ ಅಥವಾ ಎರಡನ್ನೂ ವಿಧಿಸಬಹುದು. ಪೊಲೀಸರ ನಿರ್ದೇಶನ ಉಲ್ಲಂಘಿಸಿದರೆ ಒಂದು ತಿಂಗಳ ಶಿಕ್ಷೆ, ₹50 ಸಾವಿರ ದಂಡ ವಿಧಿಸಲಾಗುತ್ತದೆ. ಜೊತೆಗೆ, ಸ್ವತ್ತಿಗೆ ಉಂಟಾದ ನಷ್ಟವನ್ನು ಆಯೋಜಕರು ಭರಿಸಬೇಕು. ಜೀವಹಾನಿ ಜವಾಬ್ದಾರಿಯನ್ನೂ ಹೊರಬೇಕು. 50 ಸಾವಿರ ಜನರಿಗಿಂತ ಹೆಚ್ಚಿದ್ದಾಗ ₹1 ಕೋಟಿ ಮೊತ್ತದ ನಷ್ಟ ಭರ್ತಿ ಬಾಂಡ್ ನೀಡಬೇಕು’ ಎಂದು ಹೇಳಿದರು.

‘ಕಾಲ್ತುಳಿತ: ಕ್ರೀಡಾ ಇತಿಹಾಸದ ಕಪ್ಪುದಿನ’

ಆರ್‌ಸಿಬಿ ವಿಜಯೋತ್ಸವದ ವೇಳೆ ನಡೆದ ಕಾಲ್ತುಳಿತ ಪ್ರಕರಣವು ಕ್ರೀಡಾ ಇತಿಹಾಸದಲ್ಲಿ ಕಪ್ಪು ದಿನವಾಗಿದೆ. ಏನೇ ಕ್ರಮ ಕೈಗೊಂಡರೂ ಹೋದ ಜೀವಗಳನ್ನು ಮರಳಿ ತರಲು ಆಗದು. ಭವಿಷ್ಯದಲ್ಲಿ ಇಂತಹ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಲಾಗುವುದು ಎಂದು ಗೃಹ ಸಚಿವ ಪರಮೇಶ್ವರ ಹೇಳಿದರು.

ವಿಧಾನಸಭೆಯಲ್ಲಿ ಈ ಕುರಿತ ನಡೆದ ಚರ್ಚೆಗೆ ಉತ್ತರ ನೀಡಿದ ಅವರು, ಸರ್ಕಾರ ಮೃತ 11 ಮಂದಿಯ ಕುಟುಂಬಗಳಿಗೆ ತಲಾ ₹25 ಲಕ್ಷ ಪರಿಹಾರ, ಗಾಯಗೊಂಡವರ ಸಂಪೂರ್ಣ ಚಿಕಿತ್ಸಾ ವೆಚ್ಚ ಭರಿಸಿದೆ. ನಿರ್ಲಕ್ಷ್ಯ ವಹಿಸಿದವರ ವಿರುದ್ಧ ಕ್ರಮಕೈಗೊಳ್ಳಲಾಗಿದೆ ಎಂದರು.

‘ಐಪಿಎಲ್ ಕಪ್ ಗೆದ್ದ ತಂಡಗಳನ್ನು ಆಯಾ ರಾಜ್ಯ ಸರ್ಕಾರಗಳು ಅಭಿನಂದಿಸಿವೆ. ಅಲ್ಲಿನ ಮುಖ್ಯಮಂತ್ರಿಗಳು ವಿಜಯೋತ್ಸವ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಇದೆಲ್ಲ ಪ್ರಾದೇಶಿಕ ಅಭಿಮಾನದಿಂದ ನಡೆಯುವ ಚಟುವಟಿಕೆಗಳು. ಕಾಲ್ತುಳಿತ ಪ್ರಕರಣಗಳು ಇತರೆ ರಾಜ್ಯಗಳಲ್ಲೂ ಸಾಕಷ್ಟು ನಡೆದಿವೆ. ಆದರೆ, ಅಂತಹ ಘಟನೆಗಳನ್ನು ಚಿನ್ನಸ್ವಾಮಿ ಕ್ರೀಡಾಂಗಣದ ಕಾಲ್ತುಳಿತಕ್ಕೆ ಸಮರ್ಥನೆಯಾಗಿ ಬಳಸಲು ಆಗದು’ ಎಂದರು.

‘ಇದು ಸರ್ಕಾರಿ ಪ್ರಾಯೋಜಿತ ಕೊಲೆ, ಮೃತಪಟ್ಟವರು ಮರಳಿ ಬರುವುದಿಲ್ಲ. ಸರ್ಕಾರ ಕ್ಷಮೆ ಕೇಳಬೇಕು. ಭದ್ರತೆ ನಂಬಿಕೊಂಡು ಬಂದು ಪ್ರಾಣ ಕಳೆದುಕೊಂಡ ಅವರ ಆತ್ಮಕ್ಕಾದರೂ ಶಾಂತಿ ಸಿಗಲಿ’ ಎಂದು ವಿರೋಧ ಪಕ್ಷಗಳ ಸದಸ್ಯರು ಒತ್ತಾಯಿಸಿದರು.

ಗೋವಿಂದರಾಜು ವಿರುದ್ಧ ಕ್ರಮಕ್ಕೆ ಕಾರಣವೇನು?

‘ಮೂರು ಸಂಸ್ಥೆಗಳು, ಪೊಲೀಸರು, ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡಿದ್ದೀರಿ. ಆದರೆ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿಯಾಗಿದ್ದ ಗೋವಿಂದರಾಜು ವಿರುದ್ಧ ಕ್ರಮಕ್ಕೆ ಅಸಲಿ ಕಾರಣ ಏನು’ ಎಂದು ಆರ್. ಅಶೋಕ ಪ್ರಶ್ನಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಪರಮೇಶ್ವರ, ಅವರು ಬ್ಯಾಸ್ಕೆಟ್‌ಬಾಲ್ ಆಟಗಾರ, ಕ್ರೀಡಾ ಸಂಸ್ಥೆಗಳಲ್ಲೂ ಇದ್ದಾರೆ. ವಿಜೇತ ಆಟಗಾರರನ್ನು ವಿಧಾನಸೌಧದ ಮುಂದೆ ಸನ್ಮಾನಿಸಲು ಸಲಹೆ ನೀಡಿರಬಹುದು. ಘಟನೆಯ ನಂತರ ಕ್ರಮಜರುಗಿಸುವ ಭಾಗವಾಗಿ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ಮುಖ್ಯಮಂತ್ರಿ ಬಿಡುಗಡೆ ಮಾಡಿದ್ದಾರೆ ಎಂದರು.

‘ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಇಸ್ಪೀಟ್ ಆಡಿದ್ದಾರೆ. ನೋಡಲು ಹೋದ ಗೃಹ ಸಚಿವರು ಸಿಕ್ಕಿಬಿದ್ದಿದ್ದಾರೆ. ಸತ್ಯವನ್ನು ಹೇಳಲು ಸಾಧ್ಯವಾಗದೆ ಹಾರಿಕೆಯ ಉತ್ತರ ನೀಡುತ್ತಿದ್ದಾರೆ’ ಎಂದು ಅಶೋಕ ಕಾಲೆಳೆದರು.

ಅವರ ಮಾತಿಗೆ ಉತ್ತರಿಸಿದ ಡಿ.ಕೆ. ಶಿವಕುಮಾರ್, ‘ನಾನು ಕ್ರೀಡಾಭಿಮಾನಿ, ಕೆಎಸ್‌ಸಿಎ ಸದಸ್ಯ, ಅಲ್ಲಿ ನನ್ನ ಸ್ನೇಹಿತರೂ ಇದ್ದಾರೆ. ಹಾಗಾಗಿ, ಕನ್ನಡ ಬಾವುಟ ಹಿಡಿದೆ. ಕಾರ್ಯಕ್ರಮದಲ್ಲಿ ಭಾಗವಹಿಸಿದೆ. ಸನ್ಮಾನಿಸಿದೆ. ಟ್ರೋಫಿಗೆ ಮುತ್ತಿಕ್ಕಿದೆ’ ಎಂದು ಸಮರ್ಥಿಸಿಕೊಂಡರು.

ಕೇಂದ್ರದ ಅನುದಾನ ಶ್ವೇತಪತ್ರಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ನಿರಂತರ ಅನ್ಯಾಯವಾಗುತ್ತಿದ್ದು, ರಾಜ್ಯದ ಯೋಜನೆಗಳಿಗೆ ಕೇಂದ್ರ ಈವರೆಗೆ ನೀಡಿರುವ ಅನುದಾನ ಬಗ್ಗೆ ಶ್ವೇತಪತ್ರ ಮಂಡಿಸಬೇಕು ಎಂದು ಕಾಂಗ್ರೆಸ್ ಸದಸ್ಯರು ಸರ್ಕಾರವನ್ನು ಒತ್ತಾಯಿಸಿದರು.

ಜಿಎಸ್‌ಟಿ ರಾಜ್ಯಕ್ಕೆ ಅನ್ಯಾಯ

ವಿಧಾನಸಭೆಯಲ್ಲಿ ಈ ಕುರಿತು ಚರ್ಚೆ ವೇಳೆ ಮಾತನಾಡಿದ ಕಾಂಗ್ರೆಸ್‌ನ ಕೆ.ಎಂ.ಶಿವಲಿಂಗೇಗೌಡ, ಜಿಎಸ್‌ಟಿ ವ್ಯವಸ್ಥೆ ಜಾರಿ ನಂತರ ರಾಜ್ಯಕ್ಕೆ ಹೆಚ್ಚು ಅನ್ಯಾಯವಾಗುತ್ತಿದೆ. ರಾಜ್ಯದ ಪಾಲಿಗಾಗಿ ಜೆಡಿಎಸ್ ಮತ್ತು ಬಿಜೆಪಿ ಹೋರಾಡಬೇಕು ಎಂದರು.

ಜಿಎಸ್‌ಟಿ ಜಾರಿಗೆ ಬರುವುದಕ್ಕೂ ಮೊದಲು ರಾಜ್ಯದಲ್ಲಿ ವ್ಯಾಟ್ ವ್ಯವಸ್ಥೆ ಇತ್ತು. ಜಿಎಸ್‌ಟಿ ಜಾರಿ ಮಾಡುವಾಗ ತೆರಿಗೆ ಸಂಗ್ರಹದಲ್ಲಿ ಕೊರತೆಯಾದರೆ ಆ ಮೊತ್ತವನ್ನು ತುಂಬಿ ಕೊಡುವುದಾಗಿ ಕೇಂದ್ರ ಭರವಸೆ ನೀಡಿತ್ತು. 2022 ರವರೆಗೆ ಕೊರತೆಯನ್ನು ತುಂಬಿ ಕೊಟ್ಟಿತು. ಆದರೆ, ಆ ಬಳಿಕ ಕೊರತೆ ತುಂಬಿ ಕೊಡುತ್ತಿಲ್ಲ ಎಂದು ಶಿವಲಿಂಗೇಗೌಡ ಟೀಕಿಸಿದರು.

ಇದಕ್ಕೆ ಬಿಜೆಪಿ ಸದಸ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದೂ ಅಲ್ಲದೇ, ಶಿವಲಿಂಗೇಗೌಡರ ಮಾತಿಗೆ ಅಡ್ಡಿಪಡಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಅವರು, ‘ನಾನು ಇಲ್ಲಿ ಸಂತೆ ಭಾಷಣ ಮಾಡಲು ಬಂದಿಲ್ಲ. ಗಂಭೀರ ವಿಷಯ ಪ್ರಸ್ತಾಪಿಸಲು ಬಂದಿದ್ದೇನೆ’ ಎಂದರು.

‘ರಾಜ್ಯ ಸರ್ಕಾರ ನಮ್ಮ ಕ್ಷೇತ್ರಗಳಿಗೆ ಸರಿಯಾಗಿ ಅನುದಾನ ನೀಡದೇ, ತಾರತಮ್ಯ ಮಾಡಲಾಗುತ್ತಿದೆ. ನಾವೂ ಕರ್ನಾಟಕದಲ್ಲಿ ಇದ್ದೇವೆ, ನಿಮ್ಮ ಸರ್ಕಾರ ಹೀಗೆ ಏಕೆ ಮಾಡುತ್ತಿದೆ’ ಎಂದು ಬಿಜೆಪಿಯ ವೇದವ್ಯಾಸ ಕಾಮತ್ ಪ್ರಶ್ನಿಸಿದರು.

ಈ ವೇಳೆ, ಕಾಂಗ್ರೆಸ್‌ನ ಶರತ್ ಬಚ್ಚೇಗೌಡ ಅವರು ಪ್ರಧಾನಿ ಮೋದಿ ಅವರ ಕುರಿತು ಆಡಿದ ಮಾತನ್ನು ಕಡತದಿಂದ ತೆಗೆಯುವಂತೆ ವಿಪಕ್ಷ ನಾಯಕ ಆರ್.ಅಶೋಕ ಒತ್ತಾಯಿಸಿದರು. ಬಳಿಕ ಆ ಮಾತುಗಳನ್ನು ಕಡತದಿಂದ ತೆಗೆದುಹಾಕಲು ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಸೂಚಿಸಿದರು.

ಶಿವಲಿಂಗೇಗೌಡ–ರಾಯರಡ್ಡಿ ಚಕಮಕಿ

ಕಾಂಗ್ರೆಸ್‌ನ ಶಿವಲಿಂಗೇಗೌಡ ಅವರು ಸೆಸ್ ಮತ್ತು ಸರ್‌ಚಾರ್ಜ್ ಕುರಿತು ಮಾತನಾಡುತ್ತಿದ್ದಾಗ ಬಸವರಾಜ ರಾಯರಡ್ಡಿ ಅವರು ಜೆಡಿಎಸ್‌ನ ಎಂ.ಟಿ. ಕೃಷ್ಣಪ್ಪ ಅವರತ್ತ ನೋಡಿ ಕೈಯಿಂದ ಎರಡು ಬಾರಿ ತಲೆ ಚಚ್ಚಿಕೊಂಡರು.

‘ನಿಮ್ಮ ಮಾತುಗಳನ್ನು ಕೇಳಿ ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರರೇ ತಲೆ ಚಚ್ಚಿಕೊಳ್ಳುತ್ತಿದ್ದಾರಲ್ಲ’ ಎಂದು ಬಿಜೆಪಿ ಸದಸ್ಯರು ಕಾಲೆಳೆದರು. ಇದು ಶಿವಲಿಂಗೇಗೌಡ ಅವರನ್ನು ಕೆರಳಿಸಿತು. ರಾಯರಡ್ಡಿಯವರತ್ತ ಕೆಕ್ಕರಿಸಿ ನೋಡಿದರು.

ತಕ್ಷಣ ಎದ್ದು ನಿಂತ ರಾಯರಡ್ಡಿ, ‘ನಿಮ್ಮ ಭಾಷಣದ ಆಶಯ, ಉದ್ದೇಶಗಳೇನೋ ಸರಿಯಾಗಿಯೇ ಇವೆ. ಆದರೆ, ತಾಂತ್ರಿಕ ಮಾಹಿತಿ ಸರಿ ಇಲ್ಲ’ ಎಂದರು.

ಮುಜುಗರಕ್ಕೆ ಒಳಗಾದ ಶಿವಲಿಂಗೇಗೌಡ ಅವರು, ‘ನಾನೇನಾದ್ರೂ ಮಿಸ್ಟೇಕ್ ಮಾಡಿದರೆ ಸರಿಪಡಿಸಿ, ನಾನೇನು ತಪ್ಪು ಹೇಳಿಲ್ಲ’ ಎಂದು ಪ್ರತಿಕ್ರಿಯಿಸಿದರು.

‘ಕೇಂದ್ರ ಸರ್ಕಾರ ತುಂಬಾ ಹಿಂದಿನಿಂದಲೂ ಸರ್‌ಚಾರ್ಜ್ ಮತ್ತು ಸೆಸ್ ವಿಧಿಸುತ್ತಿದೆ. ಆ ಅಧಿಕಾರ ರಾಜ್ಯಕ್ಕೆ ಕೊಡಬೇಕಾದರೆ ಸಂವಿಧಾನಕ್ಕೇ ತಿದ್ದುಪಡಿ ಆಗಬೇಕು. ತಾಂತ್ರಿಕ ಸೂಕ್ಷ್ಮಗಳನ್ನು ಮಾತನಾಡಬಾರದು. ನೀವು ದಡ್ಡರು ಅಥವಾ ಕಡಿಮೆ ಗೊತ್ತಿರುವವರು ಎನ್ನುತ್ತಿಲ್ಲ. ಏನಾದ್ರೂ ತಪ್ಪಾದ್ರೆ ಹೇಳಿ ಎಂದಿದ್ದರಿಂದ ಹೇಳಿದ್ದೇನೆ ಅಷ್ಟೇ’ ಎಂದು ರಾಯರಡ್ಡಿ ಹೇಳಿದರು.

ಕೇಂದ್ರ ಸರ್ಕಾರ ತಾಯಿ ಸ್ಥಾನದಲ್ಲಿದೆ. ರಾಜ್ಯಗಳು ಮಕ್ಕಳ ಸ್ಥಾನದಲ್ಲಿವೆ. ತಾಯಿ ವಾತ್ಸಲ್ಯದಂತೆಯೇ ಎಲ್ಲ ರಾಜ್ಯಗಳನ್ನು ನೋಡಿಕೊಳ್ಳಬೇಕು
ಎನ್‌.ಎಚ್‌. ಕೋನರಡ್ಡಿ, ಕಾಂಗ್ರೆಸ್

ಗ್ಯಾರಂಟಿಗಳ ಜಾರಿಯಿಂದ ಫಲಾನುಭವಿ ಕುಟುಂಬಗಳಿಗೆ ವರ್ಷಕ್ಕೆ ₹60 ಸಾವಿರದಷ್ಟು ಸಿಗುತ್ತದೆ. ರಾಜ್ಯದ ಉತ್ತಮ ಆರ್ಥಿಕ ಸ್ಥಿತಿಯ ಕಾರಣ ಹಣದುಬ್ಬರ ಪ್ರಮಾಣವೂ ಕಡಿಮೆ ಆಗಿದೆ
ಶರತ್ ಬಚ್ಚೇಗೌಡ, ಕಾಂಗ್ರೆಸ್

‘ಪರಿಶಿಷ್ಟರ ವಿರೋಧಿ ಬಿಜೆಪಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಧಿಕಾರಕ್ಕೆ ಬಂದು 10 ಕಳೆದರೂ ಕೇಂದ್ರದಲ್ಲಿ ಪರಿಶಿಷ್ಟರ ಅಭಿವೃದ್ಧಿಗೆ ಹಣ ಮೀಸಲಿಡಲಿಲ್ಲ. ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲೂ ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಗಿರಿಜನ ಉಪ ಯೋಜನೆಯಡಿ ಅನುದಾನವಿಟ್ಟಿಲ್ಲ. ಬಿಜೆಪಿಯವರು ಬಡವರು ಹಾಗೂ ಪರಿಶಿಷ್ಟ ಸಮುದಾಯದವರ ವಿರೋಧಿಗಳು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

₹3,351.96 ಕೋಟಿ ಮೊತ್ತದ ಮೊದಲ ಮೊದಲ ಪೂರಕ ಅಂದಾಜಿಗೆ ಅನುಮೋದನೆ ಪಡೆಯುವ ವೇಳೆ, ಬಿಜೆಪಿ ತಕರಾರಿಗೆ ಉತ್ತರಿಸಿದ ಸಿದ್ದರಾಮಯ್ಯ ಹೀಗೆ ಟೀಕಿಸಿದರು.

ವಿಧಾನ ಪರಿಷತ್‌ನಲ್ಲಿ ಧನವಿನಿಯೋಗ ಮಸೂದೆ ಮೇಲಿನ ಚರ್ಚೆಯಲ್ಲಿ, ‘ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಎಸ್‌ಪಿ) ಹಾಗೂ ಗಿರಿಜನ ಉಪ ಯೋಜನೆಯಡಿ (ಟಿಎಸ್‌ಪಿ) ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಸರ್ಕಾರ ವಿನಿಯೋಗಿಸಿಕೊಂಡಿದೆ. ಪರಿಶಿಷ್ಟರ ಅಭಿವೃದ್ಧಿಗೆ ಸಿಗಬೇಕಾದ ಹಣವನ್ನು ನಿವೃತ್ತ ನ್ಯಾಯಮೂರ್ತಿ ನಾಗಮೋಹನ ದಾಸ್ ಆಯೋಗದ ವೆಚ್ಚಕ್ಕೂ ಬಳಸಿಕೊಂಡಿರುವುದು ವಿರೋಧ ನೀತಿ’ ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿಯ ರವಿಕುಮಾರ್, ಸಿ.ಟಿ. ರವಿ, ಭಾರತಿ ಶೆಟ್ಟಿ, ಕೇಶವಪ್ರಸಾದ್, ಜೆಡಿಎಸ್‌ನ ಶರವಣ ದೂರಿದರು.

‘ನಾನು ಮೊದಲು ಮುಖ್ಯಮಂತ್ರಿಯಾಗಿದ್ದಾಗ 2013ರಲ್ಲಿ ಎಸ್‌ಸಿಎಸ್‌ಪಿ–ಟಿಎಸ್‌ಪಿ ಕಾಯ್ದೆಯನ್ನು ಜಾರಿಗೆ ತರಲಾಯಿತು. ಹಣ ಬಳಕೆಯಲ್ಲಿ ಅಲ್ಪಸ್ವಲ್ಪ ದೋಷವಾಗಿರಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ, ಬಿಜೆಪಿ ಆಡಳಿತರಿರುವ ಯಾವುದೇ ರಾಜ್ಯದಲ್ಲೂ ಇಂತಹ ಕಾಯ್ದೆ ಇಲ್ಲ. ಪೂರಕ ಅಂದಾಜು ಮಂಡಿಸಿದ ಮೇಲೆ ಚರ್ಚೆಯೇ ಇರುವುದಿಲ್ಲ. ನೀವು ರಾಜಕೀಯಕ್ಕಾಗಿ ಚರ್ಚೆ ಮಾಡಿ, ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತಿದ್ದೀರಿ. ಚರ್ಚೆ ಅಪ್ರಯೋಜಕ’ ಎಂದು ಸಿದ್ದರಾಮಯ್ಯ ಹೇಳಿದರು.

ಕಾಂಗ್ರೆಸ್ ಸಮಾವೇಶಕ್ಕೆ ವೆಚ್ಚ

ವಿಜಯನಗರದಲ್ಲಿ ನಡೆದ ಸಾಧನಾ ಸಮಾವೇಶ, ಕೇರಳದ ವಯನಾಡಿನ ದುರಂತದಲ್ಲಿ ಮನೆ ಕಳೆದುಕೊಂಡವರಿಗೆ ತಲಾ ₹10 ಕೋಟಿ ನೀಡಿದಕ್ಕೆ ವಿಧಾನಸಭೆಯಲ್ಲಿ ವಿರೋಧ ಪಕ್ಷಗಳ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

‘ಅದು ಸರ್ಕಾರದ ಸಾಧನಾ ಸಮಾವೇಶ ಅಲ್ಲ, ಕಾಂಗ್ರೆಸ್ ಸಮಾವೇಶ. ರಣದೀಪ್‌ಸಿಂಗ್ ಸುರ್ಜೇವಾಲಾ ಅವರನ್ನು ಯಾವ ಶಿಷ್ಟಾಚಾರದ ಅಡಿ ಆಹ್ವಾನಿಸಲಾಗಿತ್ತು? ಈ ಹಣವನ್ನು ಕಾಂಗ್ರೆಸ್‌ನಿಂದಲೇ ಭರಿಸಬೇಕು ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಒತ್ತಾಯಿಸಿದರು.

‘ಸಾಧನಾ ಸಮಾವೇಶ ಸರ್ಕಾರದ ಕಾರ್ಯಕ್ರಮ. ಹಿಂದೆ ಬಿಜೆಪಿ ಆಡಳಿತದಲ್ಲೂ ಖರ್ಚು ಮಾಡಲಾಗಿತ್ತು. ಇನ್ನು ಪ್ರವಾಹ, ಭೂಕಂಪನ, ಭೂಕುಸಿತದಂತಹ ಪ್ರಕೃತಿ ವಿಕೋಪದ ಸಮಯದಲ್ಲಿ ನೆರೆಯ ರಾಜ್ಯಗಳಿಗೆ ನೆರವು ನೀಡುವುದು ಮಾನವೀಯತೆ. ಕರ್ನಾಟಕದಲ್ಲೂ ನೆರೆ ಬಂದು ಉತ್ತರ ಕರ್ನಾಟಕ ಸಂಕಷ್ಟ ಅನುಭವಿಸಿದಾಗ ಅಂದಿನ ಬಿಜೆಪಿ ನೇತೃತ್ವದ ಸರ್ಕಾರ ನೆರವು ಪಡೆದಿತ್ತು. ಇಂತಹ ಕೆಲಸಗಳು ಮಾನವೀಯತೆ ತೋರುತ್ತದೆ. ಬಿಜೆಪಿ ನಾಯಕರಿಗೆ ಮಾನವೀಯತೆ ಇಲ್ಲ. ಹೃದಯಹೀನರು’ ಎಂದು ಸಿದ್ದರಾಮಯ್ಯ ಹೇಳಿದರು.

ಅದಕ್ಕೆ ಸುಮ್ಮನಾಗದ ಬಿಜೆಪಿ ಸದಸ್ಯರು ಮತ್ತೆ ಸ್ಪಷ್ಟನೆ ಕೇಳಲು ಮುಂದಾದರು. ಸಭಾಪತಿ ಬಸವರಾಜ ಹೊರಟ್ಟಿ ಅದಕ್ಕೆ ಅವಕಾಶ ಕೊಡಲಿಲ್ಲ. ಆಗ, ‘ಕಾಂಗ್ರೆಸ್ ಪರಿಶಿಷ್ಟರ ವಿರೋಧಿ, ಗ್ಯಾರಂಟಿಗಳಿಗೆ ಎಸ್‌ಸಿಎಸ್‌ಪಿ–ಟಿಎಸ್‌ಪಿ ಹಣ ಬಳಸುವುದು ತಪ್ಪು. ರಾಜ್ಯದ ಮೇಲೆ ಸಾಲದ ಹೊರೆ ಹೆಚ್ಚಿಸುತ್ತಿದ್ದೀರಿ’ ಎಂದು ದೂರಿದರು.

ಸೌಹಾರ್ದ ಸಹಕಾರಿ ಮಸೂದೆಗೆ ಮತ್ತೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್ತಿನಲ್ಲಿ ವಿರೋಧ ಪಕ್ಷದ ಒತ್ತಾಯದಿಂದಾಗಿ ಬುಧವಾರ ಮತ ವಿಭಜನೆಗೆ ಹಾಕಿದ್ದರಿಂದ ಸೋಲು ಕಂಡಿದ್ದ ‘ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಮಸೂದೆ’ಯನ್ನು ವಿಧಾನಸಭೆಯಲ್ಲಿ ಗುರುವಾರ ಪುನರ್ ಪರ್ಯಾಲೋಚನೆ ನಡೆಸಿ ಮತ್ತೆ ಅಂಗೀಕಾರ ಪಡೆಯಲಾಯಿತು.

ವಿಧಾನಪರಿಷತ್ತಿನಿಂದ ತಿರಸ್ಕೃತರೂಪದಲ್ಲಿದ್ದ ಮಸೂದೆಯನ್ನು ಕಾನೂನು ಸಚಿವ ಎಚ್‌.ಕೆ. ಪಾಟೀಲ ಅವರು ಮಂಡಿಸಿದರು.

ವಿಧಾನಪರಿಷತ್ತಿನಲ್ಲಿ ಈ ಮಸೂದೆಯ ಕುರಿತು ಸುದೀರ್ಘ ಚರ್ಚೆಯ ಬಳಿಕ ಅನುಮೋದನೆ ವೇಳೆಯಲ್ಲಿ ಆಡಳಿತ ಪಕ್ಷದ ಸದಸ್ಯರು ಕಡಿಮೆ ಇರುವುದನ್ನು ಗಮನಿಸಿದ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ವಿಭಜನೆ ಮತಕ್ಕೆ ಆಗ್ರಹಿಸಿದರು. ಮಸೂದೆಯನ್ನು ಮತಕ್ಕೆ ಹಾಕಿದಾಗ ಮಸೂದೆ ಪರ 23 ಮಸೂದೆ ವಿರುದ್ಧ 26 ಮತಗಳು ಚಲಾವಣೆಗೊಂಡಿದ್ದರಿಂದಾಗಿ, ಮಸೂದೆಗೆ ಸೋಲುಂಟಾಗಿತ್ತು.

‘ಓ, ಚಿನ್ನದ್ದಾ...!!

ಪ್ರಜಾವಾಣಿ ಚಿತ್ರ: **ಪ್ರಶಾಂತ್ ಎಚ್‌.ಜಿ.**

ಜೆಡಿಎಸ್ ಸದಸ್ಯ ಟಿ.ಎ.ಶರವಣ ಅವರು ವಿಧಾನ ಪರಿಷತ್ತಿನ ಎಲ್ಲ ಸದಸ್ಯರಿಗೆ ಸ್ವಾತಂತ್ರ್ಯ ದಿನಾಚರಣೆ ಸಂಭ್ರಮದಲ್ಲಿ ಚಿನ್ನಲೇಪಿತ ಬೆಳ್ಳಿಯ ಗಂಡಭೇರುಂಡ ಲಾಂಛನವನ್ನು ಉಡುಗೊರೆಯಾಗಿ ನೀಡಿದ್ದರು. ಕಾಂಗ್ರೆಸ್‌ನ ಮಂಜುನಾಥ ಭಂಡಾರಿ ಅವರಿಗೆ ಗುರುವಾರದ ಕಲಾಪದ ವೇಳೆಯಲ್ಲಿಯೇ ಲಾಂಛನವನ್ನು ನೀಡಿದರು. ಅದನ್ನು ಗಮನಿಸಿದ ಡಿ.ಕೆ.ಶಿವಕುಮಾರ್ ಉಡುಗೊರೆ ಪೊಟ್ಟಣವನ್ನು ತರಿಸಿಕೊಂಡು, ಅದರಲ್ಲೇನಿದೆ ಎಂದು ಪರಿಶೀಲಿಸಿದರು. ಆಗ ಜಮೀರ್ ಅಹಮದ್ ಖಾನ್ ಚಿನ್ನದ್ದಾ ಎಂದು ಉದ್ಗರಿಸಿದರು.

ಕೌಶಲಾಭಿವೃದ್ಧಿಗೆ ಸರ್ಕಾರ ದುಡ್ಡು ಕೊಟ್ಟರೂ ತರಬೇತಿ ನೀಡದ ಇಲಾಖೆ

ಕೊಟ್ಟಿದ್ದು ₹541 ಕೋಟಿ– ಬಳಕೆ ₹230 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಯುವಜನರ ಕೌಶಲಾಭಿವೃದ್ಧಿಗೆಂದು ರಾಜ್ಯ ಸರ್ಕಾರವು ನೀಡಿದ್ದು ₹541.11 ಕೋಟಿ. ಆದರೆ ಕೌಶಲಾಭಿವೃದ್ಧಿ ಇಲಾಖೆಯು ಅದರಲ್ಲಿ ಬಳಸಿಕೊಂಡಿದ್ದು ₹230 ಕೋಟಿ ಮಾತ್ರ.

ಕೌಶಲಾಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವಲ್ಲಿ ಇಲಾಖೆಯು ವಿಫಲವಾಗಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ. ವಿಧಾನ ಪರಿಷತ್ತಿನಲ್ಲಿ ಗುರುವಾರ ಮಂಡಿಸಲಾದ ‘2028–2023ರ ಅವಧಿಯ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ ಸಂಖ್ಯೆ–06’ರಲ್ಲಿ ಈ ಮಾಹಿತಿ ಇದೆ.

ಯುವಜನರಲ್ಲಿ ಉದ್ಯೋಗಾರ್ಹತೆ ಹೆಚ್ಚಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು 2018ರಲ್ಲಿ, ‘ಮುಖ್ಯಮಂತ್ರಿಗಳ ಕೌಶಲ ಕರ್ನಾಟಕ ಯೋಜನೆ’ ರೂಪಿಸಿತ್ತು. ಕೌಶಲ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ಈ ಯೋಜನೆಯನ್ನು ಅನುಷ್ಠಾನಕ್ಕೆ ತಂದಿತ್ತು.

‘2017–18ರಿಂದ 2022–23ರವರೆಗಿನ ಆರು ಆರ್ಥಿಕ ವರ್ಷಗಳಲ್ಲಿ ಸರ್ಕಾರವು ಈ ಯೋಜನೆಗೆಂದು ಒಟ್ಟು ₹549.18 ಕೋಟಿ ಹಂಚಿಕೆ ಮಾಡಿತ್ತು. ಇದರಲ್ಲಿ ₹541.11 ಕೋಟಿಯನ್ನು ಬಿಡುಗಡೆಯೂ ಮಾಡಿತ್ತು. ಆದರೆ ಕೌಶಲಾಭಿವೃದ್ಧಿಗೆ ಬಳಕೆಯಾಗಿದ್ದು ₹230.01 ಕೋಟಿಯಷ್ಟೆ’ ಎಂದು ಸಿಎಜಿ ಹೇಳಿದೆ.

‘ಬಿಡುಗಡೆಯಾದ ಅನುದಾನವು ಬಳಕೆಯಾಗದ ಕಾರಣ ₹173.55 ಕೋಟಿ ಸರ್ಕಾರಕ್ಕೆ ವಾಪಸಾಯಿತು. ₹230.02 ಕೋಟಿ ತರಬೇತಿಗೆ ಬಳಕೆಯಾಗಿದ್ದರೆ, ₹119.89 ಕೋಟಿಯನ್ನು ಇಲಾಖೆಯು ತನ್ನ ಬಳಿಯೇ ಉಳಿಸಿಕೊಂಡಿದೆ. ಅನುದಾನವನ್ನು ಸದುಪಯೋಗ ಮಾಡಿಕೊಳ್ಳುವ ಹೊಣೆಯನ್ನು ನಿರ್ವಹಣೆ ಮಾಡಿಲ್ಲ. ಸರ್ಕಾರಕ್ಕೆ ಪೂರ್ಣ ಹಣವನ್ನು ಹಿಂದಿರುಗಿಸಿಯೂ ಇಲ್ಲ’ ಎಂದು ಆಕ್ಷೇಪ ವ್ಯಕ್ತಪಡಿಸಿದೆ.

‘ಸರ್ಕಾರವು ಈ ಬಗ್ಗೆ ಗಮನಹರಿಸಿ, ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ಉದ್ಯೋಗಾರ್ಹತೆ ಹೆಚ್ಚಿಸಿ, ನಿರುದ್ಯೋಗ ನಿವಾರಣೆಯಲ್ಲಿ ಮಹತ್ವದ ಪಾತ್ರವಹಿಸುವ ಈ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಬೇಕು’ ಎಂದು ಶಿಫಾರಸು ಮಾಡಿದೆ.

ಗುರಿ 2.50 ಲಕ್ಷ, ಸಾಧನೆ 1.65 ಲಕ್ಷ

2018–2023ರ ಅವಧಿಯಲ್ಲಿ, ಒಟ್ಟು 2.50 ಲಕ್ಷ ಯುವಜನರಿಗೆ ತರಬೇತಿ ನೀಡುವ ಗುರಿಯನ್ನು ಇಲಾಖೆ ಹಾಕಿಕೊಂಡಿತ್ತು. ಆದರೆ ತರಬೇತಿ ನೀಡಲು ಸಾಧ್ಯವಾಗಿದ್ದು 1.65 ಲಕ್ಷ ಮಂದಿಗೆ ಮಾತ್ರ. ಜತೆಗೆ ತರಬೇತಿ ಪಡೆದವರ ಸಂಖ್ಯೆ ಪ್ರತಿ ವರ್ಷ ಇಳಿಕೆಯಾಗಿದೆ ಎಂದು ಸಿಎಜಿ ಹೇಳಿದೆ



ಪ್ರಗತಿ ಕುಂಠಿತಕ್ಕೆ ಕಾರಣಗಳು

- ಸಾಂಪ್ರದಾಯಿಕ ಕಸುಬಿಗೆ ಸಂಬಂಧಿಸಿದ ತರಬೇತಿಗೆ ಆದ್ಯತೆ ನೀಡಿದ್ದರಿಂದ ಯುವಜನರ ನಿರಾಸಕ್ತಿ
- ಜಿಲ್ಲಾ ಕೇಂದ್ರಗಳಲ್ಲಿ ಲಭ್ಯವಿರುವ ಸಮಕಾಲೀನ ಕೌಶಲಗಳ ತರಬೇತಿ ನೀಡಬಲ್ಲಂತಹ ಸಂಸ್ಥೆಗಳು ಇವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳದೆ ಹೊಣೆಗಾರಿಕೆ ನೀಡಿದ್ದು
- ಕೃಷಿ ಚಟುವಟಿಕೆ ಕಡಿಮೆ ಇರುವ ಹಲವು ಜಿಲ್ಲೆಗಳಲ್ಲಿ ಕೃಷಿಯನ್ನೇ ಪ್ರಧಾನವನ್ನಾಗಿಸಿಕೊಂಡು ತರಬೇತಿ ಕಾರ್ಯಕ್ರಮ ರೂಪಿಸಲಾಗಿತ್ತು
- ತರಬೇತಿ ಕಾರ್ಯಕ್ರಮಗಳನ್ನು ರೂಪಿಸುವಾಗ ಆಯಾ ಜಿಲ್ಲೆಯ ಕೈಗಾರಿಕಾ ಸ್ಥಿತಿಗತಿಯನ್ನು ಪರಿಗಣಿಸಿಯೇ ಇಲ್ಲ

ಬಹುಮಹಡಿ ಕಟ್ಟಡಗಳಿಗೆ ಅಗ್ನಿ ಸೆಸ್ ಹೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಬಹುಮಹಡಿ ಕಟ್ಟಡಗಳಿಗೆ ಶೇಕಡ 1ರಷ್ಟು ಅಗ್ನಿ ಸೆಸ್ ವಿಧಿಸಲು ಅವಕಾಶ ಮಾಡಿಕೊಡುವ ‘ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ಮಸೂದೆ–2025’ಕ್ಕೆ ವಿಧಾನ ಮಂಡಲದ ಉಭಯಸದನಗಳ ಅನುಮೋದನೆ ದೊರೆತಿದೆ.

21 ಮೀಟರ್‌ಗಿಂತಲೂ ಹೆಚ್ಚು ಎತ್ತರವಿರುವ ಬಹುಮಹಡಿ ಕಟ್ಟಡಗಳಿಗೆ, ಅವುಗಳ ತೆರಿಗೆಯ ಮೇಲೆ ಶೇ1ರಷ್ಟು ಅಗ್ನಿ ಸೆಸ್ ವಿಧಿಸಲು ಈ ಮಸೂದೆ ಅವಕಾಶ ಮಾಡಿಕೊಡುತ್ತದೆ. ಈ ಮಸೂದೆಗೆ ರಾಜ್ಯಪಾಲರ ಅಂಕಿತ ಬಿದ್ದ ನಂತರ, ಅದು ಕಾಯ್ದೆಯಾಗಲಿದೆ. ನಂತರ ಬಹುಮಹಡಿ ಕಟ್ಟಡಗಳ ಮಾಲೀಕರಿಗೆ ತೆರಿಗೆಯ ಹೊರೆ ಹೆಚ್ಚಲಿದೆ.

ಗೃಹ ಸಚಿವ ಜಿ.ಪರಮೇಶ್ವರ ಅವರು ವಿಧಾನ ಪರಿಷತ್ತಿನಲ್ಲಿ ಗುರುವಾರ ಈ ಮಸೂದೆ ಮಂಡಿಸಿದರು. ಅಗ್ನಿ ಸೆಸ್ ವಿಧಿಸುವುದಕ್ಕೆ ವಿಪಕ್ಷಗಳ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ವಿರೋಧ ಪಕ್ಷದ ಮುಖ್ಯ ಸಚೇತಕ ಎನ್‌.ರವಿ ಕುಮಾರ್, ‘ಈ ಸರ್ಕಾರವು ಎಲ್ಲದಕ್ಕೂ ತೆರಿಗೆ ವಿಧಿಸುತ್ತಿದೆ. ಗಾಳಿಗೆ ತೆರಿಗೆ ವಿಧಿಸುವುದೊಂದೇ ಬಾಕಿ’ ಎಂದರು.

ವಿಪಕ್ಷಗಳ ಸದಸ್ಯರ ಆಕ್ಷೇಪಗಳಿಗೆ ಉತ್ತರಿಸಿದ ಪರಮೇಶ್ವರ, ‘ಬಹುಮಹಡಿ ಕಟ್ಟಡಗಳಿಗೆ ಅಗ್ನಿ ಸೆಸ್ ವಿಧಿಸುತ್ತಿಲ್ಲ. ಈ ಕ್ರಮ ಇಲ್ಲದ ಕಾರಣ ಸಂಭಾವ್ಯ ಆದಾಯ ಖೋತಾ ಆಗುತ್ತಿದೆ ಎಂದು ಸಿಎಜಿ ಆಕ್ಷೇಪ ವ್ಯಕ್ತಪಡಿಸಿದ್ದರು. ಈ ಬಗ್ಗೆ ಕ್ರಮ ತೆಗೆದುಕೊಂಡಿದ್ದೀರಾ ಎಂದು ಪ್ರಶ್ನಿಸಿ ಆರು ಬಾರಿ ಪತ್ರ ಬರೆದಿದ್ದರು. ಅದರ ಆಧಾರದಲ್ಲಿ ಅಗ್ನಿ ಸೆಸ್ ವಿಧಿಸುತ್ತಿದ್ದೇವೆ’ ಎಂದರು.

ಇದ್ದರೂ ಇರದಂತಾದ ವಾಹನಗಳು

‘ಅಗ್ನಿಶಾಮಕ ದಳದ ಮಂಗಳೂರು ಘಟಕದಲ್ಲಿ ಐದು ಅಗ್ನಿಶಾಮಕ ವಾಹನಗಳಿವೆ. ಆದರೆ, ಅವುಗಳನ್ನು ರಸ್ತೆಗೆ ಇಳಿಸುವಂತಿಲ್ಲ. ಘಟಕದ ಎದುರಿನ ರಸ್ತೆಯಲ್ಲಿ ಬೆಂಕಿ ಬಿದ್ದರೂ, ಆ ವಾಹನಗಳನ್ನು ರಸ್ತೆಗೆ ತರುವಂತಿಲ್ಲ...’ ಎಂದು ಅಗ್ನಿ ಸೆಸ್ ಮೇಲಿನ ಚರ್ಚೆಯ ವೇಳೆ ಕಾಂಗ್ರೆಸ್ ಐವನ್ ಡಿಸೋಜ ಅಸಮಾಧಾನ ವ್ಯಕ್ತಪಡಿಸಿದರು.

ಬಿಜೆಪಿ ಮತ್ತು ಜೆಡಿಎಸ್‌ನ ಕೆಲ ಸದಸ್ಯರೂ ಇದಕ್ಕೆ ದನಿಗೂಡಿಸಿದರು.

ಈ ಬಗ್ಗೆ ಉತ್ತರಿಸಿದ ಪರಮೇಶ್ವರ, ‘15 ವರ್ಷಕ್ಕಿಂತ ಹಳೆಯದಾದ ವಾಹನಗಳಿಗೆ ಅರ್ಹತಾ ಪ್ರಮಾಣ ಪತ್ರ ನೀಡಲು ಕೇಂದ್ರ ಸರ್ಕಾರ ಅವಕಾಶ ನೀಡುತ್ತಿಲ್ಲ. ಈ ವಾಹನಗಳು 15 ವರ್ಷದಲ್ಲಿ 1,000 ಕಿ.ಮೀ. ದೂರವನ್ನೂ ಕ್ರಮಿಸಿಲ್ಲ, ಅಷ್ಟು ಹೊಸತಾಗಿವೆ’ ಎಂದರು.

‘ಸುಸ್ಥಿತಿಯಲ್ಲಿರುವ ಈ ವಾಹನಗಳು ಕೇಂದ್ರ ಸರ್ಕಾರದ ನೀತಿಯಿಂದ ನಿರುಪಯುಕ್ತವಾಗಿವೆ. ಈ ವಾಹನಗಳಿಗಾದರೂ ವಿನಾಯತಿ ನೀಡಿ ಎಂದು ಕೇಂದ್ರಕ್ಕೆ ಪತ್ರ ಬರೆಯಲಾಗಿತ್ತು. ವಿನಾಯತಿಗೆ ಅವರು ಒಪ್ಪಿಲ್ಲ’ ಎಂದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಡಿಎಂಕೆ ಎದುರು ಟಿವಿಕೆ

ತಮಿಳಗ ವೆಟ್ರಿ ಕಳಗಂ ಪಕ್ಷವು ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಡಿಎಂಕೆ ಎದುರು ಸೆಣಸಲಿದೆ ಎಂದು ಪಕ್ಷದ ಸಂಸ್ಥಾಪಕರೂ ಆದ ನಟ ವಿಜಯ್ ಹೇಳಿದ್ದು, ಮೈತ್ರಿ ಸಾಧ್ಯತೆಯನ್ನು ತಳ್ಳಿಹಾಕಿದ್ದಾರೆ

ಒಂದೇ ಲಡ್ಡು: ಸಿ.ಎಂಗೆ ದೂರು

ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಪೊಟ್ಟಣದಲ್ಲಿ ಎರಡು ಲಡ್ಡುಗಳ ಬದಲು ಒಂದನ್ನಷ್ಟೇ ನೀಡಿದ್ದಾರೆ ಎಂದು ಮಧ್ಯಪ್ರದೇಶದ ಭಿಂಡ್ ಗ್ರಾಮದ ಕಮಲೇಶ್ ಕುಶ್ವಾಹ ಎಂಬವರು ಮುಖ್ಯಮಂತ್ರಿ ಸಹಾಯವಾಣಿಗೆ ದೂರು ನೀಡಿದ್ದಾರೆ

ಸೆನ್ಸೆಕ್ಸ್ 82,000 | ನಿಫ್ಟಿ 25,083 | $/₹ 87.25 | ಚಿನ್ನ (Std. 10g) ₹1,04,100 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,20,100 (ಬೆಂಗಳೂರು)

ಗಣಿ ಅಕ್ರಮ: ₹52,453 ಕೋಟಿ ನಷ್ಟ

2006–07ರಿಂದ 2010ರ ಅವಧಿಯಲ್ಲಿ ಸಾಗಣೆ– ಸಂಪುಟ ಉಪ ಸಮಿತಿ ವರದಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಅವಿಭಜಿತ ಬಳ್ಳಾರಿ, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ 2006-07ರಿಂದ 2010ರ ಅವಧಿಯಲ್ಲಿ ಒಟ್ಟು 19.07 ಕೋಟಿ ಟನ್ ಕಬ್ಬಿಣದ ಅದಿರು ಅಕ್ರಮ ಸಾಗಣೆಯಿಂದ ₹52,453 ಕೋಟಿ ನಷ್ಟ ಆಗಿದೆ ಎಂದು ಸಚಿವ ಸಂಪುಟ ಉಪ ಸಮಿತಿ ಅಂದಾಜಿಸಿದೆ.

ಗಣಿಗಾರಿಕೆಯಲ್ಲಿ ನಡೆದ ಅಕ್ರಮಗಳ ಕುರಿತು ಲೋಕಾಯುಕ್ತ ನೀಡಿದ್ದ ವರದಿಯ ಅನ್ವಯ ತೆಗೆದುಕೊಳ್ಳ ಬೇಕಾದ ಕ್ರಮಗಳ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಾನೂನು ಸಚಿವ ಎಚ್.ಕೆ. ಪಾಟೀಲ ಅಧ್ಯಕ್ಷತೆಯ ಸಚಿವ ಸಂಪುಟ ಉಪ ಸಮಿತಿ ಸಲ್ಲಿಸಿರುವ ವರದಿಯಲ್ಲಿ ಈ ವಿವರಗಳಿವೆ.

2006-07ರಿಂದ 2010ರ ಅವಧಿಯಲ್ಲಿ ಅಂದಾಜು 2.98 ಕೋಟಿ ಟನ್ ಕಬ್ಬಿಣದ ಅದಿರು ಅಕ್ರಮವಾಗಿ ರಫ್ತಾಗಿದ್ದು ಅದರಿಂದ ಸರ್ಕಾರಕ್ಕೆ ₹12,228 ಕೋಟಿ ನಷ್ಟವಾಗಿದೆ ಎಂದು ನ್ಯಾಯಮೂರ್ತಿ ಸಂತೋಷ ಹೆಗ್ಡೆ ನೇತೃತ್ವದ ಅಂದಿನ ಲೋಕಾಯುಕ್ತದ ವರದಿ ಹೇಳಿತ್ತು.

ಲೋಕಾಯುಕ್ತ ವರದಿಯಲ್ಲಿ ಉಲ್ಲೇಖಿಸಿದ್ದ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ 16.09 ಕೋಟಿ ಟನ್ ಅಕ್ರಮ ರಫ್ತಾಗಿದೆ ಎಂದು 2006-07 ಮತ್ತು 2018-19ನೇ ಸಾಲಿನ ಉಪಗ್ರಹ ಚಿತ್ರಗಳ ಮಾಹಿತಿ ಆಧರಿಸಿ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರವು (ಕೆಎಸ್‌ಆರ್‌ಎಸ್‌ಎಸಿ) ಪತ್ತೆ ಮಾಡಿದೆ. ಈ 16.09 ಕೋಟಿ ಟನ್ ಕಬ್ಬಿಣದ ಅದಿರನ್ನು ಸ್ಥಳೀಯವಾಗಿ ಬಳಸಲಾಗಿದೆ ಎಂದು ಪರಿಗಣಿಸಿದರೆ (ಲೋಕಾಯುಕ್ತರ ವರದಿಯಲ್ಲಿ ಪರಿಗಣಿಸಿದಂತೆ ಪ್ರತಿ ಟನ್‌ಗೆ ಇದ್ದ ರಾಯಧನ ₹2,500) ಸರ್ಕಾರಕ್ಕೆ ₹40,225 ಕೋಟಿ ಆಗಿದೆ. ಲೋಕಾಯುಕ್ತ ವರದಿಯಲ್ಲಿ ಉಲ್ಲೇಖಿಸಿದ ಪ್ರಮಾಣವನ್ನೂ ಸೇರಿಸಿದರೆ ಸರ್ಕಾರಕ್ಕೆ ಒಟ್ಟು ₹52,453 ಕೋಟಿ ನಷ್ಟ ಆಗಿರುವ ಸಾಧ್ಯತೆ ಇದೆ ಎಂದು ಸಮಿತಿ ಅಂದಾಜಿಸಿದೆ.

ಲೋಕಾಯುಕ್ತರ ವರದಿಯಲ್ಲಿ ಪರಿಗಣಿಸಿದ ಸರಾಸರಿ ರಾಯಧನ ಪ್ರತಿ ಟನ್‌ಗೆ ₹4,103ರಂತೆ ಲೆಕ್ಕ ಹಾಕಿದರೆ 16.09 ಕೋಟಿ ಟನ್ ಅಕ್ರಮ ಸಾಗಣೆಯಿಂದ ಸರ್ಕಾರಕ್ಕೆ ಆಗಿರುವ ನಷ್ಟ ಒಟ್ಟು ₹66,017.27 ಕೋಟಿ ಎಂದು ಸಮಿತಿಯ ವರದಿ ಉಲ್ಲೇಖಿಸಿದೆ.

▶15

ಗಣಿ ಲೂಟಿಯಿಂದ ಬೊಕ್ಕಸಕ್ಕೆ ಆಗಿರುವ ಕೋಟ್ಯಂತರ ರೂಪಾಯಿ ನಷ್ಟವನ್ನು ಮರಳಿ ಪಡೆಯಲು ವಸೂಲಿ ಆಯುಕ್ತರನ್ನು ನೇಮಿಸಲು ಸರ್ಕಾರ ಉದ್ದೇಶಿಸಿದೆ

ಎಚ್.ಕೆ. ಪಾಟೀಲ, ಕಾನೂನು ಸಚಿವ

ಸ್ವತ್ತು ವಶ, ಜಪ್ತಿ ಮಸೂದೆಗೆ ಅಂಗೀಕಾರ

ಅಕ್ರಮ ಗಣಿಗಾರಿಕೆಯಿಂದ ಗಳಿಸಿದ ಸ್ವತ್ತನ್ನು ವಶಪಡಿಸಿಕೊಳ್ಳಲು ಮತ್ತು ಜಪ್ತಿಗಾಗಿ ವಸೂಲಿ ಆಯುಕ್ತರನ್ನು ನೇಮಿಸುವ ಉದ್ದೇಶದಿಂದ ರೂಪಿಸಿದ ಮಸೂದೆಗೆ ವಿಧಾನಸಭೆ ಗುರುವಾರ ಅಂಗೀಕಾರ ನೀಡಿತು. ಗಣಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪರ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಈ ಮಸೂದೆಯನ್ನು ಮಂಡಿಸಿದರು.

ಮಸೂದೆ ಕುರಿತು ವಿವರಿಸಿದ ಎಚ್.ಕೆ. ಪಾಟೀಲ, ‘ಅಕ್ರಮವಾಗಿ ಗಳಿಸಿದ ಸಂಪತ್ತನ್ನು 1964ರ ಕ್ರಿಮಿನಲ್ ವಿಶೇಷ ಆಜ್ಞೆ ಪ್ರಕಾರ ವಶಪಡಿಸಿಕೊಳ್ಳಬಹುದು. ಯಾವುದೇ ಅಕ್ರಮ ಅಥವಾ ಅಪರಾಧದಿಂದ ಸರ್ಕಾರದ ಸ್ವತ್ತುಗಳು ಲೂಟಿಯಾದ ಪ್ರಕರಣಗಳಲ್ಲಿ ಪೊಲೀಸರು ಅಥವಾ ಸರ್ಕಾರದ ತನಿಖಾ ಸಂಸ್ಥೆಗಳು ಪ್ರಕರಣ ದಾಖಲಿಸುತ್ತವೆ ಮತ್ತು ಆರೋಪಿಗಳನ್ನು ಬಂಧಿಸುತ್ತವೆ. ಆದರೆ, ಲೂಟಿಯಾದ ಸ್ವತ್ತಿನ ಮರು ಜಪ್ತಿ ಆಗುತ್ತಿಲ್ಲ. ಈ ಕಾರಣಕ್ಕೆ ಹೊಸ ಕಾಯ್ದೆ ಜಾರಿಗೆ ತರಲು ಈ ಮಸೂದೆ ರೂಪಿಸಲಾಗಿದೆ’ ಎಂದರು. ವಿರೋಧ ಪಕ್ಷಗಳ ಸದಸ್ಯರು ಆಕ್ಷೇಪ ವ್ಯಕ್ತಪಡಿಸದ ಕಾರಣ ಯಾವುದೇ ಚರ್ಚೆ ಇಲ್ಲದೆ ಮಸೂದೆ ಅಂಗೀಕಾರಗೊಂಡಿತು.

ಅದಿರು ಅಕ್ರಮದ ದಾರಿಗುಂಟ...

9.37 ಕೋಟಿ ಟನ್ — **60** ‘ಬಿ’ ವರ್ಗದ ಗಣಿಗುತ್ತಿಗೆ	**9.70** ಕೋಟಿ ಟನ್ — **51** ‘ಸಿ’ ವರ್ಗದ ಗಣಿಗುತ್ತಿಗೆ	**19.07** ಕೋಟಿ ಟನ್ — ಒಟ್ಟು ಅಕ್ರಮ ಅದಿರು ಸಾಗಣೆ

₹78,245.27 ಕೋಟಿ — ಸರ್ಕಾರಕ್ಕೆ ನಷ್ಟ (ಪ್ರತಿ ಟನ್‌ಗೆ ಸರಾಸರಿ ₹ **4,103** ರಂತೆ)	**₹52,453** ಕೋಟಿ — ಸರ್ಕಾರಕ್ಕೆ ನಷ್ಟ (ಪ್ರತಿ ಟನ್‌ಗೆ ₹ **2,500** ರಂತೆ)

ನ್ಯಾಯಾಲಯದ ಕೈ ಕಟ್ಟಿ ಹಾಕಬಹುದೇ?

ನವದೆಹಲಿ (ಪಿಟಿಐ): ‘ರಾಜ್ಯಪಾಲರು ನಿಷ್ಕ್ರಿಯತೆ ತೋರಿದ ಸಂದರ್ಭದಲ್ಲಿ ಸಾಂವಿಧಾನಿಕ ನ್ಯಾಯಾಲಯಗಳ ಕೈ ಕಟ್ಟಿ ಹಾಕಬಹುದೇ’ ಎಂದು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರವನ್ನು ಕೇಳಿದೆ.

ವಿವರ ▶15

ಚಿನಕುರುಳಿ ಪ್ರಕಾಶ್ ಶೆಟ್ಟಿ

ಮಹೇಶ್ ಶೆಟ್ಟಿ ತಿಮರೋಡಿ ಬಂಧನ

ಪ್ರಜಾವಾಣಿ ವಾರ್ತೆ



ಮಹೇಶ್ ಶೆಟ್ಟಿ

ಉಡುಪಿ: ಸೌಜನ್ಯಾ ಪರ ಹೋರಾಟಗಾರರಾಗಿರುವ ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆ ಅಧ್ಯಕ್ಷ ಮಹೇಶ್ ಶೆಟ್ಟಿ ತಿಮರೋಡಿ ಅವರನ್ನು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಆರೋಪದಲ್ಲಿ ಬ್ರಹ್ಮಾವರ ಪೊಲೀಸರು ಗುರುವಾರ ಬಂಧಿಸಿದರು.

▶10

ಸಮೀರ್‌ಗೆ ನಿರೀಕ್ಷಣಾ ಜಾಮೀನು

ಸಮೀರ್ ಎಂ.ಡಿ.

ಮಂಗಳೂರು: ಧರ್ಮಸ್ಥಳ ಠಾಣೆಯ ಪೊಲೀಸರು ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಪ್ರಕರಣದಲ್ಲಿ ಯೂಟ್ಯೂಬರ್ ಸಮೀರ್ ಎಂ.ಡಿ.ಗೆ ಇಲ್ಲಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಗುರುವಾರ ಜಾಮೀನು ನೀಡಿದೆ.

ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಹೂತು ಹಾಕಿರುವುದರ ಬಗ್ಗೆ ಕೃತಕ ಬುದ್ಧಿಮತ್ತೆ ನೆರವಿನಿಂದ ತಯಾರಿಸಿದ ವಿಡಿಯೊವನ್ನು ‘ದೂತ’ ಯೂಟ್ಯೂಬ್ ಚಾನೆಲ್‌ನಲ್ಲಿ ಪ್ರಸಾರ ಮಾಡಿದ್ದರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು

▶10

ಪಿಒಪಿ ಮೂರ್ತಿ: ಮುಚ್ಚಳಿಕೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ಲಾಸ್ಟರ್ ಆಫ್ ಪ್ಯಾರಿಸ್‌ನ (ಪಿಒಪಿ) ಗಣೇಶ ಮೂರ್ತಿಗಳನ್ನು ಬಳಸುವುದಿಲ್ಲ’ ಎಂದು ಸಾರ್ವಜನಿಕ ಗಣೇಶೋತ್ಸವ ಸಮಿತಿಗಳಿಂದ ಮುಚ್ಚಳಿಕೆ ಬರೆಸಿಕೊಂಡು ಪೆಂಡಾಲ್‌ಗೆ ಅನುಮತಿ ನೀಡುವಂತೆ ಸ್ಥಳೀಯಾಡಳಿತ ಸಂಸ್ಥೆಗಳಿಗೆ ಸೂಚಿಸಲಾಗಿದೆ ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಿಒಪಿ ಮೂರ್ತಿಗಳನ್ನು ನೀರಿನಲ್ಲಿ ವಿಸರ್ಜನೆ ಮಾಡಿದರೆ ಅವು ಕರಗುವುದಿಲ್ಲ ಎಂದರು.

▶10

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಮಳೆಯಾಗುವ ಸಾಧ್ಯತೆ ಇದೆ

ರಾಹುಲ್ ಚಾಲಕನ ವಿರುದ್ಧ ಎಫ್‌ಐಆರ್

ನವಾದಾ (ಬಿಹಾರ್) (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಾಹನ ಚಾಲಕನ ವಿರುದ್ಧ ಎಫ್‌ಐಆರ್ ದಾಖಲಾಗಿದೆ ಎಂದು ಪೊಲೀಸರು ಗುರುವಾರ ಹೇಳಿದ್ದಾರೆ.

ಎರಡು ದಿನಗಳ ಹಿಂದೆ ಇಲ್ಲಿ ನಡೆದ 'ಮತದಾರನ ಅಧಿಕಾರ ಯಾತ್ರೆ'ಯ ವೇಳೆ ಅವರು ಚಲಾಯಿಸುತ್ತಿದ್ದ ವಾಹನ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರಿಗೆ ಡಿಕ್ಕಿಯಾಗಿತ್ತು.

'ಮಕ್ಕಳ ಅಭಿಪ್ರಾಯಕ್ಕೆ ಮನ್ನಣೆ ನೀಡಿ'

ಬಿಜಿಎಸ್ ಪಿಯು ಕಾಲೇಜಿನ ನೂತನ ತರಗತಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದ ನಾಥ ಸ್ವಾಮೀಜಿ ಮಾತನಾಡಿದರು. ಪ್ರಕಾಶನಾಥ ಸ್ವಾಮೀಜಿ, ಧನ್ಯಾ ರಾಮ್‌ಕುಮಾರ್ ಇದ್ದಾರೆ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಶೈಕ್ಷಣಿಕ ವಿಷಯದಲ್ಲಿ ಮಕ್ಕಳ ಅಭಿಪ್ರಾಯಕ್ಕೆ ಪೋಷಕರು ಮನ್ನಣೆ ನೀಡಬೇಕು. ಅವರ ಆಯ್ಕೆಯ ವಿಷಯಗಳನ್ನು ಅಭ್ಯಾಸ ಮಾಡಲು ಅವಕಾಶ ನೀಡಿದರೆ ಸಾಧನೆ ಮಾಡಬಹುದು ಎಂದು ಆದಿ ಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಕೆಂಗೇರಿ ಬಿಜಿಎಸ್ ಪಿಯು ಕಾಲೇಜಿನ ನೂತನ ತರಗತಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಐನ್‌ಸ್ಟೈನ್ ಬಾಲ್ಯದಿಂದಲೂ ಕುತೂಹಲಕಾರಿ ವ್ಯಕ್ತಿತ್ವ ಹೊಂದಿದ್ದರು. ಪ್ರಶ್ನಾ ಮನೋಭಾವ ರೂಢಿಸಿಕೊಂಡಿದ್ದರು. ಹೀಗಾಗಿಯೇ ಅವರು ಜಗತ್ತಿನ ಶ್ರೇಷ್ಠ ವಿಜ್ಞಾನಿಯಾಗಿ, ಅತ್ಯುತ್ತಮ ವ್ಯಕ್ತಿಯಾಗಿ ರೂಪುಗೊಳ್ಳಲು ಸಾಧ್ಯವಾಯಿತು ಎಂದು ತಿಳಿಸಿದರು.

ನಟ ತಬಲಾ ನಾಣಿ ಮಾತನಾಡಿ, 'ಅಕ್ಷರ ಜ್ಞಾನ ಹೊಂದಿರದವರು ಪಶುವಿಗೆ ಸಮಾನ ಎಂಬ ಮಾತಿದೆ. ಸಂಸ್ಕಾರ ರಹಿತ ಶಿಕ್ಷಣದಿಂದಲೂ ಸಮಾಜಕ್ಕೆ ಯಾವುದೇ ಕೊಡುಗೆ ಲಭಿಸುವುದಿಲ್ಲ' ಎಂದರು.

ನೃಪತುಂಗ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಶ್ರೀನಿವಾಸ್ ಬಳ್ಳಿ ಮಾತನಾಡಿದರು. ಗಾಯಕ ಕಡಬಗೆರೆ ಮುನಿರಾಜು ಜನಪದ ಗೀತೆಗಳನ್ನು ಹಾಡಿ ರಂಜಿಸಿದರು. ಬಿಜಿಎಸ್ ಮತ್ತು ಎಸ್‌ಜೆಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ, ನಟಿಯರಾದ ಧನ್ಯಾ ರಾಮ್‌ಕುಮಾರ್, ರೂಪಿಕಾ, ಪಿಯು ಕಾಲೇಜು ಪ್ರಾಂಶುಪಾಲೆ ನೇತ್ರಾವತಿ ವೈ.ಎಸ್, ಶೈಕ್ಷಣಿಕ ನಿರ್ದೇಶಕ ಪುಟ್ಟರಾಜು, ಅಮರ್ ನಾಥ್, ವೀರಪ್ಪಾಜಿ ಬಿ., ಶಿವಣ್ಣ ಉಪಸ್ಥಿತರಿದ್ದರು.

ಕಂಟ್ರಿ ಕ್ಲಬ್: ವಿಐಪಿ ಗೋಲ್ಡ್ ಕಾರ್ಡ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥ್ಯಸೇವಾ ಕಂಪನಿ, ಕಂಟ್ರಿ ಕ್ಲಬ್ ಹಾಸ್ಪಿಟಾಲಿಟಿ ಆ್ಯಂಡ್ ಹಾಲಿಡೇಸ್ ಲಿಮಿಟೆಡ್ (ಸಿಸಿಎಚ್‌ಎಚ್‌ಎಲ್) 'ವಿಐಪಿ ಗೋಲ್ಡ್ ಮೆಂಬರ್‌ಷಿಪ್ ಕಾರ್ಡ್' ಬಿಡುಗಡೆ ಮಾಡಿದೆ.

ಸಿಕ್ಕಿಂ ರಾಜ್ಯದ ಗ್ಯಾಂಗ್ಟಕ್‌ನಲ್ಲಿ ಹೊಸದಾಗಿ 'ವ್ಯಾಲಿ ವಿಸ್ಟಾ ರೆಸಾರ್ಟ್' ನಿರ್ಮಿಸಲಾಗಿದೆ. ಇದರೊಂದಿಗೆ ಕಂಪನಿಯ ವಿಲಾಸಿ ರೆಸಾರ್ಟ್‌ಗಳ ಸಂಖ್ಯೆ 51ಕ್ಕೇರಿದೆ. ಗ್ಯಾಂಗ್ಟಕ್‌ನಲ್ಲಿ ಕಂಪನಿಯ ಸೇವೆ ಆರಂಭವಾಗಿರುವುದು ಹಾಗೂ 79ನೇ ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಈ ಕಾರ್ಡ್ ಬಿಡುಗಡೆ ಮಾಡಲಾಗಿದೆ ಎಂದು ಕಂಪನಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ವೈ.ರಾಜೀವ್ ರೆಡ್ಡಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಈ ವಿಶೇಷ ಸದಸ್ಯತ್ವದ ಮೂಲಕ ಹೊಸ ಸದಸ್ಯರಿಗೆ ಹಾಗೂ ಈಗಾಗಲೇ ಸದಸ್ಯರಾಗಿರುವವರಿಗೆ ಗ್ಯಾಂಗ್ಟಕ್‌ನಲ್ಲಿ 2 ರಾತ್ರಿ, 3 ಹಗಲುಗಳ ವಾಸ್ತವ್ಯದ ಕೊಡುಗೆ ಸೇರಿ ಇನ್ನಿತರ ಸೌಲಭ್ಯಗಳನ್ನು ನೀಡಲಾಗುವುದು ಎಂದರು.

ಮೂರು ದಶಕದಿಂದ ಕಂಪನಿ ಗುಣಮಟ್ಟದ ಆತಿಥ್ಯ ಸೇವೆಯನ್ನು ಪ್ರವಾಸಿಗರಿಗೆ ನೀಡುತ್ತಿದೆ. ಪ್ರಸ್ತುತ 20 ಲಕ್ಷಕ್ಕೂ ಹೆಚ್ಚು ಸದಸ್ಯರನ್ನು ಕಂಟ್ರಿ ಕ್ಲಬ್ ಹೊಂದಿದೆ. ಉತ್ತರ ಭಾರತ ಮತ್ತು ಈಶಾನ್ಯ ಭಾರತದ ಮತ್ತಷ್ಟು ಸ್ಥಳಗಳಿಗೆ ವಹಿವಾಟನ್ನು ವಿಸ್ತರಿಸುವ ಉದ್ದೇಶ ಹೊಂದಲಾಗಿದೆ ಎಂದು ಹೇಳಿದರು.

ವ್ಯಂಗ್ಯಚಿತ್ರಕಾರ ಜೀವನ್ ಶೆಟ್ಟಿಗೆ ಪ್ರಶಸ್ತಿ

ಜೀವನ್ ಶೆಟ್ಟಿ

ಬೆಂಗಳೂರು: ಕರ್ನಾಟಕ ವ್ಯಂಗ್ಯ ಚಿತ್ರಕಾರ ಸಂಘ ನೀಡುವ 2025ನೇ ಸಾಲಿನ ಪ್ರಶಸ್ತಿಗೆ ಉಡುಪಿಯ ವ್ಯಂಗ್ಯಚಿತ್ರಕಾರ ಜೀವನ್ ಶೆಟ್ಟಿ ಆಯ್ಕೆಯಾಗಿದ್ದಾರೆ.

1980ರಿಂದ ವ್ಯಂಗ್ಯ ಚಿತ್ರಗಳನ್ನು ಬರೆಯುತ್ತಿದ್ದು, ಹತ್ತು ಸಾವಿರಕ್ಕೂ ಹೆಚ್ಚು ವ್ಯಂಗ್ಯ ಚಿತ್ರಗಳು ಕನ್ನಡದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಶಾಲಾ, ಕಾಲೇಜುಗಳಲ್ಲಿ ವ್ಯಂಗ್ಯ ಚಿತ್ರ ಪ್ರಾತ್ಯಕ್ಷಿಕೆಗಳನ್ನು ನಡೆಸಿ, ವಿದ್ಯಾರ್ಥಿಗಳಿಗೆ ವ್ಯಂಗ್ಯ ಚಿತ್ರಗಳ ಅರಿವು ಮೂಡಿಸಿದ್ದಾರೆ. ಗೆರೆ-ಬರೆ ಸಂಸ್ಥೆ ಸ್ಥಾಪಿಸಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಸಂಘದ ಅಧ್ಯಕ್ಷ ವಿ.ಆರ್.ಸಿ.ಶೇಖರ್ ತಿಳಿಸಿದ್ದಾರೆ.

ಶ್ರೀರಾಮ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ. 146, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, 7ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003. ಕೇಂದ್ರ ಕಛೇರಿ : 23364609, 23464713 ಶಾಖೆ : 23481556.

ವಾರ್ಷಿಕ ಮಹಾಸಭೆಯ ನೋಟೀಸ್

ಮೇಲ್ಕಂಡ ಬ್ಯಾಂಕಿನ 2024–25ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ: 14/09/2025 ರ ಭಾನುವಾರ ಬೆಳಿಗ್ಗೆ 9:30 ಗಂಟೆಗೆ ಸರ್ಕಾರಿ ಪದವಿ ಪೂರ್ವ ಮಹಿಳಾ ಕಾಲೇಜಿನ ಸಭಾಂಗಣ, 13ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560 003 ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರಿಗೆ ಸಭೆಯ ನೋಟೀಸನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ನೋಟೀಸ್ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಅಧಿಕೃತ ನೋಟೀಸ್ ಎಂದು ತಿಳಿದು ಮಾನ್ಯ ರೆಗ್ಯೂಲರ್ ಸದಸ್ಯರು ಕಡ್ಡಾಯವಾಗಿ ಬ್ಯಾಂಕಿನಿಂದ ನೀಡಿರುವ ಗುರುತಿನ ಚೀಟಿಯೊಂದಿಗೆ ಸಭೆಗೆ ಆಗಮಿಸಬೇಕಾಗಿ ವಿನಂತಿಸಲಾಗಿದೆ. 2025 ರ ವರ್ಷದಲ್ಲಿ ಕರ್ನಾಟಕ ಸ್ಟೇಟ್ ಬೋರ್ಡ್‌ನ SSLC/II PUC ಪರೀಕ್ಷೆಯಲ್ಲಿ ಶೇ.85ಕ್ಕೂ ಹೆಚ್ಚು ಹಾಗೂ CBSE/ICSE ಯಲ್ಲಿ SSLC/II PUC ಪರೀಕ್ಷೆಯಲ್ಲಿ ಶೇ. 80ಕ್ಕೂ ಹೆಚ್ಚು ಅಂಕ ಗಳಿಸಿರುವ ಸದಸ್ಯರ/ಸಹ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರದ ಅರ್ಜಿಯನ್ನು ಬ್ಯಾಂಕಿನಲ್ಲಿ ವಿತರಿಸಲಾಗುತ್ತಿದೆ. ಭರ್ತಿ ಮಾಡಿದ ಅರ್ಜಿಯನ್ನು ಸ್ವೀಕರಿಸಲು ಅಂತಿಮ ದಿನಾಂಕ 04-09-2025ರ ಸಂಜೆ 6.00 ಗಂಟೆ ಆಗಿರುತ್ತದೆ.

ದಿನಾಂಕ:22/08/2025 ಬೆಂಗಳೂರು | ಶ್ರೀ. ಎಸ್.ಕೆ.ಕರಿಯಪ್ಪಗೌಡ ಅಧ್ಯಕ್ಷರು | ಶ್ರೀ. ಟಿ.ಎನ್.ಗಂಗನರಸಿಂಹಯ್ಯ ಉಪಾಧ್ಯಕ್ಷರು | ಶ್ರೀ. ಜಿ.ಶ್ರೀನಿವಾಸ್ ಜನರಲ್ ಮ್ಯಾನೇಜರ್

ಸೇನಾ ವಿಹಾರ್ ಓನರ್ಸ್ ಕೋ-ಆಪರೇಟಿವ್ ಸೊಸೈಟಿ ನಿ.,

ಸೇನಾ ವಿಹಾರ್ ಕಾಂಪ್ಲೆಕ್ಸ್, ಕಮ್ಮನಹಳ್ಳಿ ಮುಖ್ಯರಸ್ತೆ, ಕಲ್ಯಾಣ ನಗರ ಅಂಚೆ, ಬೆಂಗಳೂರು–560043.

ಚುನಾವಣಾ ಪ್ರಕಟಣೆ

ಸೇನಾ ವಿಹಾರ್ ಓನರ್ಸ್ ಕೋ-ಆಪರೇಟಿವ್ ಸೊಸೈಟಿ ನಿ., ಆಡಳಿತ ಮಂಡಳಿ **ಚುನಾವಣೆಯು ದಿನಾಂಕ: 07/09/2025ರಂದು ಭಾನುವಾರ ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.00 ಘಂಟೆಯವರೆಗೆ ಸಂಘದ ಸೇನಾ ವಿಹಾರ್ ಕಾಂಪ್ಲೆಕ್ಸ್‌ನಲ್ಲಿ ನಡೆಯಲಿದೆ.** ನಾಮಪತ್ರ ಸಲ್ಲಿಸಲು ದಿ:30/08/2025 ಕೊನೆಯ ದಿನವಾಗಿದ್ದು, ನಾಮಪತ್ರ ಪರಿಶೀಲನೆ ದಿ:31/08/2025 ಮತ್ತು ನಾಮಪತ್ರಗಳ ವಾಪಸಾತಿ ದಿ:01/09/2025 ರಂದು ನಡೆಯಲಿದೆ.

ಮಾನ್ಯ ಸದಸ್ಯರ ವಿಳಾಸಕ್ಕೆ ಚುನಾವಣಾ ವೇಳಾಪಟ್ಟಿ/ಸೂಚನಾ ಪತ್ರಗಳನ್ನು ಈಗಾಗಲೇ ಅಂಚೆ ಮೂಲಕ ರವಾನಿಸಲಾಗಿದೆ. ಒಂದು ವೇಳೆ ಸೂಚನಾ ಪತ್ರ ನಿಗದಿತ ಅವಧಿಯಲ್ಲಿ ತಲುಪದೆ ಇದ್ದಲ್ಲಿ, ಇದನ್ನೆ ಚುನಾವಣಾ ಸೂಚನಾ ಪತ್ರವೆಂದು ಪರಿಗಣಿಸಿ ಚುನಾವಣೆಯಲ್ಲಿ ಭಾಗವಹಿಸಲು ಕೋರಲಾಗಿದೆ.

(ಸಹಿ/–) ಮುಖ್ಯ ಪ್ರವರ್ತಕರು, ಸೇನಾ ವಿಹಾರ್ ಓನರ್ಸ್ ಕೋ-ಆಪರೇಟಿವ್ ಸೊಸೈಟಿ ನಿ, ಸೇನಾ ವಿಹಾರ್ ಕಾಂಪ್ಲೆಕ್ಸ್ ಕಮ್ಮನಹಳ್ಳಿ ಮುಖ್ಯರಸ್ತೆ, ಕಲ್ಯಾಣ ನಗರ ಅಂಚೆ, ಬೆಂಗಳೂರು–560043

(ಸಹಿ/–) ರಿಟರ್ನಿಂಗ್ ಆಫೀಸರ್, ಸೇನಾ ವಿಹಾರ್ ಓನರ್ಸ್ ಕೋ-ಆಪರೇಟಿವ್ ಸೊಸೈಟಿ ನಿ, ಸೇನಾ ವಿಹಾರ್ ಕಾಂಪ್ಲೆಕ್ಸ್ ಕಮ್ಮನಹಳ್ಳಿ ಮುಖ್ಯರಸ್ತೆ, ಕಲ್ಯಾಣ ನಗರ ಅಂಚೆ, ಬೆಂಗಳೂರು–560043

ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಕೇಂದ್ರ ಕಛೇರಿ : ಮಲ್ಲೇಶ್ವರಂ, ಬೆಂಗಳೂರು–560 055.
ದೂರವಾಣಿ ಸಂಖ್ಯೆ : 080–23442648,080–23341972

ವಾರ್ಷಿಕ ಮಹಾಸಭೆಯ ತಿಳುವಳಿಕೆ

ಬ್ಯಾಂಕಿನ 2024–25ನೇ ಸಾಲಿನ 60ನೇ ವಾರ್ಷಿಕ ಸರ್ವಸದಸ್ಯರ ಸಭೆಯು ದಿನಾಂಕ: 24.08.2025 ರಂದು ಭಾನುವಾರ ಬೆಳಿಗ್ಗೆ 9.30 ಘಂಟೆಗೆ ಸರಿಯಾಗಿ ವೈ.ಮುನಿಸ್ವಾಮಪ್ಪ ಕಲ್ಯಾಣ ಮಂಟಪ, ಯಶವಂತಪುರ, (ಗೋಪಾಲ್ ಟಾಕೀಸ್ ಪಕ್ಕ), ಬೆಂಗಳೂರು–22 ಈ ವಿಳಾಸದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ. ಸಿ.ಎಲ್.ಮರಿಗೌಡ, ಇವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರಿಗೆ ಸಭೆಯ ನೋಟಿಸ್‌ನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು ನೋಟಿಸ್ ತಲುಪದ್ದಿದ್ದಲ್ಲಿ ಈ ಪ್ರಕಟಣೆಯನ್ನೇ ಅಧಿಕೃತ ನೋಟಿಸ್ ಎಂದು ತಿಳಿದು ಮಾನ್ಯ ಸಾಮಾನ್ಯ ಸದಸ್ಯರು ಗುರುತಿನ ಚೀಟಿಯ ಜೊತೆಗೆ ಸಭೆಗೆ ಹಾಜರಾಗಲು ಕೋರಲಾಗಿದೆ.

ವಿಶೇಷ ಸೂಚನೆ :–

ಹಿರಿಯ ಸದಸ್ಯರಿಗೆ ಸನ್ಮಾನ:	ದಿನಾಂಕ:23.08.2025 ರಂದು ಶನಿವಾರ ಬೆಳಿಗ್ಗೆ 10.00 ರಿಂದ 1.00
ಸಾಂಸ್ಕೃತಿಕ ಕಾರ್ಯಕ್ರಮ :	ದಿನಾಂಕ:23.08.2025 ರಂದು ಶನಿವಾರ ಸಂಜೆ 3.00 ರಿಂದ 5.00 ಘಂಟೆಯವರೆಗೆ.
ಪ್ರತಿಭಾ ಪುರಸ್ಕಾರ ಸಮಾರಂಭ:	ದಿನಾಂಕ:23.08.2025 ರಂದು ಶನಿವಾರ ಸಂಜೆ 5.00 ಘಂಟೆಗೆ.
ಸ್ಥಳ :	ಶ್ರೀ. ವೈ.ಮುನಿಸ್ವಾಮಪ್ಪ ಕಲ್ಯಾಣ ಮಂಟಪ, ಯಶವಂತಪುರ (ಗೋಪಾಲ್ ಟಾಕೀಸ್ ಪಕ್ಕ) ಬೆಂಗಳೂರು–560022.

ಸಹಿ/–ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ಪ್ರಭಾರ)

ಕರ್ನಾಟಕ ಸರ್ಕಾರ

ತೋಟಗಾರಿಕೆ ಇಲಾಖೆ

ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ (ಜಿಪಂ), ಬೆಂಗಳೂರು ನಗರ ಜಿಲ್ಲೆ

ಸಂ:ತೋಉನಿ/ಜಿಪಂ/ಬೆಂನ/ಅಧೀ/05/2025–26 ದಿನಾಂಕ: 21.08.2025

:: ಮರು ಇ–ಟೆಂಡರ್ ಪ್ರಕಟಣೆ ::

ವಿಷಯ: ಬೆಂಗಳೂರು ನಗರ, ಜಿಲ್ಲೆಯ ತೋಟಗಾರಿಕೆ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಬೆರಳಚ್ಚುಗಾರರು, ವಾಹನ ಚಾಲಕ, ಗ್ರೂಪ್–ಡಿ ಸೇವೆಯನ್ನು ಒದಗಿಸಲು ಮರು ಇ–ಟೆಂಡರ್ ಪ್ರಕಟಣೆಯನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಬಗ್ಗೆ.

ಈ ಕಛೇರಿಗೆ ಹಾಗೂ ಅಧೀನದಲ್ಲಿ ಬರುವ ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ಬೆಂಗಳೂರು ನಗರ ಜಿಲ್ಲೆ 2025–26 ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಬೆರಳಚ್ಚುಗಾರರು, ವಾಹನ ಚಾಲಕರು, ಗ್ರೂಪ್–ಡಿ ಸೇವೆಯನ್ನು ಈ ಕಛೇರಿಗಳಿಗೆ ಅವಶ್ಯವಿರುವ ಸಿಬ್ಬಂದಿಗಳನ್ನು ಪೂರೈಸಲು ಹೊರ ಸಂಪನ್ಮೂಲಗಳಿಂದ ಸೇವೆಯನ್ನು ಪಡೆಯಲು ಉದ್ದೇಶಿಸಲಾಗಿದೆ. ಅದರಂತೆ ಅರ್ಹ ಮತ್ತು ಅನುಭವ ಹೊಂದಿದ ಹಾಗೂ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಮಾನವ ಸಂಪನ್ಮೂಲ ಏಜೆನ್ಸಿ ಹೊರಗುತ್ತಿಗೆದಾರ ವ್ಯಕ್ತಿ/ಸಂಸ್ಥೆಗಳಿಂದ E-procurement portal ನಲ್ಲಿ ಇ–ಟೆಂಡರ್ ಅನ್ನು ಆಗಸ್ಟ್–2025 ರಿಂದ ಜುಲೈ–2026 ರವರೆಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಅರ್ಹ ವ್ಯಕ್ತಿ/ಸಂಸ್ಥೆಗಳ ಟೆಂಡರ್ ಅರ್ಜಿಗಳನ್ನು ಕಛೇರಿ ಸಮಯದಲ್ಲಿ ಪಡೆಯಬಹುದಾಗಿದೆ. (ಹೆಚ್ಚಿನ ವಿವರಗಳನ್ನು www.e-proc.kar.in ವಿಳಾಸದಲ್ಲಿ ಪಡೆಯಬಹುದು).

ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ	21.08.2025
ಅರ್ಜಿಗಳನ್ನು ಸಲ್ಲಿಸುವ ಅಂತಿಮ ದಿನಾಂಕ	29.08.2025
ಟೆಂಡರ್ ತೆರೆಯುವ ದಿನಾಂಕ	30.08.2025, ಸಂಜೆ 4.30 ಗಂಟೆ
ಟೆಂಡರ್ ತೆರೆಯುವ ಸ್ಥಳ	ತೋಟಗಾರಿಕೆ ಉಪನಿರ್ದೇಶಕರ ಕಛೇರಿ (ಜಿಪಂ) ಬೆಂಗಳೂರು ನಗರ ಜಿಲ್ಲೆ, ಕಬ್ಬನ್ ಪಾರ್ಕ್

ಸಹಿ/– ತೋಟಗಾರಿಕೆ ಉಪ ನಿದೇಶಕರು (ಜಿಪಂ) ಬೆಂಗಳೂರು ನಗರ ಜಿಲ್ಲೆ.

ವಾಸಾಸಂಇ/ವಾ.ಪ್ರ./ಎಸ್‌ಎಸ್‌ಸಿ/2413/2025–26

PUBLIC NOTICE

Publics are hereby informed that my client **M/s DS-Max Properties Pvt.Ltd.**, Rep; by its Authorized Signatory **Mr Shivashankar Chikkeri**, Having its Office at No. 1854, 17th Main, 30th 'B' Cross, HBR Layout, 1st Stage, 5th Block, Bengaluru- 43 and intend to enter into Absolute Sale Deed with Owner/s **Smt Nagarathnamma.J** w/o Sri Nanjundappa.G.N and another are the absolute joint owner/s of Agricultural land property bearing old Sy.No. **76**, New Sy. No. **76/4**, which measuring **1 acre 20 guntas**, situated at **Guvalakanahalli Village**, Kasaba Hobli, Chikkaballapura Taluk, Chikkaballapura District and bounded on **East by:** Land of Sy.No. 78/1, **West by:** Remaining Land of same Sy.No. 76 belongs to Sri.Shivanna, **North by:** Land of Sy.No. 96/1, **South by:** Remaining Land of same Sy.No. 76 and referred to as schedule property of **Item.No.I**.

WHEREAS Sri Purushotham M s/o Late D.S. Munishamagowda and another are the absolute joint owner/s of Agricultural land property bearing old Sy.No. **76/1**, New Sy. No. **76/5**, which measuring **4 acres 20 guntas**, situated at **Guvalakanahalli Village**, Kasaba Hobli, Chikkaballapura Taluk, Bangalore Rural District and bounded on **East by:** Land of Sy.No. 78, **West by:** Land of Sy.No. 144, **North by:** Private Lands, **South by:** Land of Sy.No. 76/3 & 76/2 and referred to as schedule property of **Item.No.II**.

WHEREAS Sri Naveen Kumar s/o Sri Umakumar and another are the absolute joint owner/s of Agricultural land property bearing Sy. No. **78/1**, which measuring **4 acre 08.08 guntas** and exclusive of **12 guntas 'B'** kharab land, situated at **Guvalakanahalli Village**, Kasaba Hobli, Chikkaballapura Taluk, Chikkaballapura District and bounded on **East by:** N.H.Road No. 7, **West by:** Land of Sy.No. 76 & 77, **North by:** River Besin, **South by:** Land of Sy.No. 77 & Government Land and referred to as schedule property of **Item.No.III**.

WHEREAS Smt Savitha.Y.G w/o Sri Gangahanumaiah and another are the absolute joint owner/s of Agricultural land property bearing old Sy. No. **78/2**, New Sy.No. **78/6**, which measuring **2 acre 08.08** guntas and exclusive of **02 guntas 'B'** kharab land, situated at **Guvalakanahalli Village**, Kasaba Hobli, Chikkaballapura Taluk, Chikkaballapura District and bounded on **East by:** Bangalore – Ballari Road N.H.7 Road, **West by:** Land of Sy.No. 78/1, **North by:** Land of Sy.No. 82 & Lake Besin, **South by:** Land of Sy.No. 78/1 and referred to as schedule property of **Item.No.IV**.

WHEREAS Mr Hemanth Kumar.R s/o Sri Renukaiah is the absolute owner of Agricultural land property bearing old Sy. No. **78/1**, New Sy. No. **78/3**, which measuring **05.08 guntas**, situated at **Guvalakanahalli Village**, Kasaba Hobli, Chikkaballapura Taluk, Chikkaballapura District and bounded on **East by:** Remaining portion of Sy.No. 78/1, **West by:** Land belongs to C.S.Ramakrishna Shetty, **North by:** 40 feet Road, **South by:** Land of Sy.No. 77 and referred to as schedule property of **Item.No.V**.

WHEREAS Sri C.S.Ramakrishna Shetty s/o Late Chikkasubbaraya Shetty is the absolute owner of Agricultural land property bearing old Sy. No. **78/1**, New Sy. No. **78/4**, which measuring **09 guntas**, situated at **Guvalakanahalli Village**, Kasaba Hobli, Chikkaballapura Taluk, Chikkaballapura District and bounded on **East by:** Land of Mr.Hemanth Kumar, **West by:** Land of Sy.No. 76 & 40 feet Road, **North by:** 40 feet Road, **South by:** Land of Sy.No. 77 and referred to as schedule property of **Item.No.VI**.

WHEREAS Sri B.Mahesh s/o Sri Jaganath and others are the absolute joint owner/s of Agricultural land property bearing old Sy. No. **78/1**, New Sy. No. **78/5**, which measuring **05.08 guntas**, situated at **Guvalakanahalli Village**, Kasaba Hobli, Chikkaballapura Taluk, Chikkaballapura District and bounded on **East by:** Land of Sy.No.78/1, **West by:** Land of Sy.No.78/1, **North by:** 40 feet Road, **South by:** Land of Sy.No.77 and referred to as schedule property of **Item.No.VII**.

WHEREAS Sri Sathyanarayana Shetty s/o Sri Keshavayya Shetty and others are the absolute joint owner/s of Agricultural land property bearing old Sy. No. **78/1**, New Sy. No. **78/7**, which measuring **05.08 guntas**, situated at **Guvalakanahalli Village**, Kasaba Hobli, Chikkaballapura Taluk, Chikkaballapura District and bounded on **East by:** Land of Sy.No.78/1, **West by:** Land of Sy.No.78/5, **North by:** 40 feet Road, **South by:** Land of Sy.No.77 and referred to as schedule property of **Item.No.VIII**.

WHEREAS Sri Challa Kishore s/o Sri Challa Kesava Rao and others are the absolute joint owner/s of Agricultural land property bearing old Sy. No. **78/1**, New Sy. No. **78/8**, which measuring **05.08 guntas**, situated at **Guvalakanahalli Village**, Kasaba Hobli, Chikkaballapura Taluk, Chikkaballapura District and bounded on **East by:** Land of Sy.No.78/1, **West by:** Land of Sy.No.78/1, **North by:** 40 feet Road, **South by:** Land of Sy.No.77 and referred to as schedule property of **Item.No.IX**.

WHEREAS Sri Katakam Pavan Kumar s/o Sri Katakam Balasubramanyam and another are the absolute joint owner/s of Agricultural land property bearing old Sy. No. **78/1**, New Sy. No. **78/9**, which measuring **05.08 guntas**, situated at **Guvalakanahalli Village**, Kasaba Hobli, Chikkaballapura Taluk, Chikkaballapura District and bounded on **East by:** Land of Sy.No.78/5, **West by:** Land of Sy.No.78/3, **North by:** 40 feet Road, **South by:** Land of Sy.No.77 and referred to as schedule property of **Item.No.X.**

WHEREAS Sri Nekkanti Anudeep s/o Sri Nekkanti Satyanarayana and another are the absolute joint owner/s of Agricultural land property bearing old Sy. No. **78/1**, New Sy. No. **78/10**, which measuring **05.08 guntas**, situated at **Guvalakanahalli Village**, Kasaba Hobli, Chikkaballapura Taluk, Chikkaballapura District and bounded on **East by:** Remaining Land of Sy.No.78/1, **West by:** Remaining Land of Sy.No.78/1, **North by:** Land of Sy.No.94 (Lake), **South by:** 40 feet Road and referred to as schedule property of **Item.No.XI**.

WHEREAS Sri N.Parithosh Murthy s/o Sri Nagaraja Murthy is the absolute owner of Agricultural land property bearing old Sy. No. **78/1**, New Sy. No. **78/11**, which measuring **05.08 guntas**, situated at **Guvalakanahalli Village**, Kasaba Hobli, Chikkaballapura Taluk, Chikkaballapura District. and bounded on **East by:** Remaining Land of Sy.No.78/1, **West by:** Remaining Land of Sy.No.78/1, **North by:** Land of Sy.No.94(Lake), **South by:** 40 feet Road and referred to as schedule property of **Item.No.XII**.

WHEREAS Smt Nagarathnamma.J w/o Sri.Nanjundappa J.N and another are the absolute joint owner/s of Agricultural land property bearing Sy. No. **96/3**, which measuring **1 acre 26 guntas** and exclusive of **07 guntas 'A'** kharab land and exclusive of **0.0.12 gunta 'B'** kharab land, situated at **Guvalakanahalli Village**, Kasaba Hobli, Chikkaballapura Taluk, Bangalore Rural District and bounded on **East by:** Land of Sy.No.78/1 & Kharab, **West by:** Land belongs to Shettappa, **North by:** Land belongs to Shettappa, **South by:** Land of Sy.No.78 and referred to as schedule property of **Item.No.XIII**.

which total measuring of **Item.No.I to XIII = 15 Acres 10.08 guntas** and exclusive of **07 guntas 'A'** kharab land and **14.012 guntas 'B'** kharab land and commonly bounded on **East by:** N.H.Road, **West by:** Private Lands, **North by:** Private Lands, **South by:** Private Lands and referred to as **"composite schedule property".**

Any Person or Any Authorities or Any Promoters having any asserting right, title, interest and claims to oppose for Absolute Sale Deed of property and further having any manner of right, title, claims etc., and may lodge their objections, claims over the property along with relevant papers in support of their claims, right to the below address within **10** days from the date of this notice, if any objections fails to comply, my client shall take further steps and shall deemed for entering into Absolute Sale Deed of property.

LINGARAJ. S. NADAGOUDA.,
ADVOCATE
No.1854, 17th Main, 30th 'B' Cross, HBR Layout, 1st Stage, 5th Block, Bangalore - 560 043.
Mob : 96204 74780 , 94481 35970

ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್.,

Kirloskar

ನೋಂದಾಯಿತ ಕಛೇರಿ : ಸಂ. 19, 2ನೇ ಮುಖ್ಯ ರಸ್ತೆ, ಪೀಣ್ಯ 1ನೇ ಸ್ಟೇಜ್, ಫೇಸ್–1, ಪೀಣ್ಯ, ಬೆಂಗಳೂರು – 560058.
ದೂರವಾಣಿ : 080 28397256; **ಫ್ಯಾಕ್ಸ್ :** 080 28396727; **ವೆಬ್‌ಸೈಟ್ :** www.kirloskarelectric.com
ಇ–ಮೇಲ್ : investors@kirloskarelectric.com **CIN :** L31100KA1946PLC000415

78ನೇ ವಾರ್ಷಿಕ ಮಹಾಸಭೆಯ ಉದ್ದೇಶಕ್ಕಾಗಿ, ಪುಸ್ತಕ ಮುಚ್ಚುವಿಕೆ ಮತ್ತು ಇ–ಮತದಾನ, ಇತ್ಯಾದಿಗಳ ಮಾಹಿತಿ ಮತ್ತು ಸೂಚನೆ

ಈ ಹಿಂದೆ ತಿಳಿಸಿದಂತೆ, ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯ ('ಎಂ.ಸಿ.ಎ') ದ ಎಲ್ಲಾ ಕಾಯಿದೆ ಕಟ್ಟಳೆಗಳನ್ವಯ ಕಂಪನಿ ಕಾಯ್ದೆ 2013ರ (ಕಾಯ್ದೆ) ಅನ್ವಯವಾಗುವ ಎಲ್ಲಾ ನಿಯಮಗಳೂ ಮತ್ತು ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳು ಮತ್ತು ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ('ಸೆಬಿ') (ಲಿಸ್ಟಿಂಗ್ ಹೊಣೆಗಾರಿಕೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು 2015, ಈ ವಿಷಯದ ಕುರಿತು ಸೆಬಿ (ಇನ್ನು ಮುಂದೆ ಒಟ್ಟಾರೆಯಾಗಿ "ಸುತ್ತೋಲೆಗಳು" ಎಂದು ಕರೆಯಲಾಗುತ್ತದೆ) ಹೊರಡಿಸಿದ, ಎಜಿಎಂ ಸೂಚನೆ ಮತ್ತು ಎಜಿಎಂ ಅನುಬಂಧ ಸೂಚನೆಯಲ್ಲಿ ನಿಗದಿಪಡಿಸಿದ ವ್ಯವಹಾರವನ್ನು ನಡೆಸಲು, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ('ಎಂ.ಸಿ.ಎ') ಸೆಪ್ಟೆಂಬರ್ 19, 2024 ರಂದು ಹೊರಡಿಸಿದ ಸಾಮಾನ್ಯ ಸುತ್ತೋಲೆ ಸಂಖ್ಯೆ 09/2024 ಮತ್ತು ಸೆಬಿ ಅಕ್ಟೋಬರ್ 03, 2024 ರಂದು ಹೊರಡಿಸಿದ ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/CIR/2024/133 ರ ಅನುಸಾರವಾಗಿ **ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್** (ಕಂಪನಿ) ನ **78ನೇ ವಾರ್ಷಿಕ ಮಹಾಸಭೆಯು ('ಎಜಿಎಂ') ಮಂಗಳವಾರ, ಸೆಪ್ಟೆಂಬರ್ 16, 2025 ರಂದು ಬೆಳಿಗ್ಗೆ 11.00 (ಐ.ಎಸ್.ಟಿ) ಗಂಟೆಗೆ** ವಿಡಿಯೋ ಕಾನ್ಫರೆನ್ಸ್ ('ವಿಸಿ') / ಇತರೆ ಆಡಿಯೋ ವಿಷುಯಲ್ ಮೀನ್ಸ್ ('ಒಎವಿಎಂ') ಮೂಲಕ ನಡೆಯಲಿದೆ.

ಸದರಿ ಸುತ್ತೋಲೆಗಳ ಅನುಸಾರ ಹಣಕಾಸು ವರ್ಷ 2024–25ರ ಕಂಪನಿಯ 78ನೇ ವಾರ್ಷಿಕ ವರದಿಯೊಂದಿಗಿರುವ ಎಜಿಎಂ ಸೂಚನಾ ಪತ್ರ ಮತ್ತು ಎಜಿಎಂ ನ ಪರಿಷ್ಕೃತ ಸೂಚನೆಯನ್ನು ಕಂಪನಿ / ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ / ಡೆಪಾಸಿಟರೀಸ್ / ಡೆಪಾಸಿಟರಿ ಪಾರ್ಟಿಸಿಪೆಂಟ್‌ರಲ್ಲಿ ನೋಂದಾಯಿತವಾದ ಸದಸ್ಯರ ಇ–ಮೇಲ್ ವಿಳಾಸಗಳಿಗೆ ಕಳುಹಿಸಲಾಗಿದೆ. 78ನೇ ಎಜಿಎಂ ಸೂಚನೆ ಹಾಗೂ ಎಜಿಎಂ ಅನುಬಂಧ ಸೂಚನೆ ಮತ್ತು ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್ www.kirloskarelectric.com ನಲ್ಲಿ ಲಭ್ಯವಿದ್ದು, ಸ್ಟಾಕ್ ಎಕ್ಸ್‌ಚೇಂಜ್ ಅಂದರೆ, ಕ್ರಮವಾಗಿ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯ ಲಿಮಿಟೆಡ್ ವೆಬ್‌ಸೈಟ್ www.bseindia.com ಮತ್ತು www.nseindia.com ನಿಂದ ಹಾಗೂ ಸಿಡಿಎಸ್‌ಎಲ್ ನ ವೆಬ್‌ಸೈಟ್ www.evotingindia.com ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಸಭೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಮತ್ತು ಪ್ರಶ್ನೆಗಳನ್ನು ಸಭೆಯ ಅವಧಿಯಲ್ಲಿ ವ್ಯಕ್ತಪಡಿಸಲು ಇಚ್ಛಿಸುವ ಸದಸ್ಯರು ಸಭೆಯ **07 ದಿನಗಳ ಮುಂಚೆ** ಅವರ ಹೆಸರು, ಡಿಮ್ಯಾಟ್ ಅಕೌಂಟ್ ಸಂಖ್ಯೆ / ಫೋಲಿಯೋ ಸಂಖ್ಯೆ, ಇ–ಮೇಲ್ ಐಡಿ, ಮೊಬೈಲ್ ಸಂಖ್ಯೆಗಳನ್ನು ನಮೂದಿಸಿ investors@kirloskarelectric.com ಗೆ ಕಳುಹಿಸಬೇಕು. ಯಾವ ಸದಸ್ಯರು ಸ್ಪೀಕರ್ ಆಗಿ ಅವರ ಹೆಸರನ್ನು ನೋಂದಾಯಿಸಿಕೊಂಡಿರುತ್ತಾರೋ ಅಂತಹ ಷೇರುದಾರರಿಗೆ ಮಾತ್ರ ಪ್ರಶ್ನೆಗಳನ್ನು ಸಭೆಯಲ್ಲಿ ಕೇಳುವುದಕ್ಕಾಗಿ ಅನುಮತಿಸಲಾಗುವುದು.

ಎಜಿಎಂನ ಉದ್ದೇಶಕ್ಕಾಗಿ, ಸದಸ್ಯರ ರಿಜಿಸ್ಟರ್ ಮತ್ತು ಷೇರು ವರ್ಗಾವಣೆ ಪುಸ್ತಕಗಳನ್ನು **ಬುಧವಾರ, ಸೆಪ್ಟೆಂಬರ್ 10, 2025 ರಿಂದ ಮಂಗಳವಾರ, ಸೆಪ್ಟೆಂಬರ್ 16, 2025 ರವರೆಗೆ** (ಎರಡೂ ದಿನಗಳು ಸೇರಿದಂತೆ) ಮುಚ್ಚಲಾಗುತ್ತದೆ.

2013ರ ಕಂಪನಿಯ ಕಾಯಿದೆಯ ಕಲಂ 108ರ ಷರತ್ತುಗಳಂತೆ ಕಂಪನಿಯು ತನ್ನ ಸದಸ್ಯರುಗಳಿಗೆ ದೂರದ ಇ–ಮತದಾನವನ್ನು ಒದಗಿಸಿದ್ದು ಸದಸ್ಯರು ವಿದ್ಯುನ್ಮಾನದ ಮೂಲಕ ಇ–ಮತಗಳನ್ನು ಚಲಾಯಿಸುವಂತಾಗಲು ದೂರದ ಇ–ಮತದಾನ ಸೇವೆಗಳನ್ನು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ ಸಿಡಿಎಸ್‌ಎಲ್ ನಿಂದ ಒದಗಿಸಲಾಗುವುದು. ಈ ಉದ್ದೇಶಕ್ಕಾಗಿ ಅಂತಿಮ **ಕಟ್–ಆಫ್ ದಿನಾಂಕ, ಮಂಗಳವಾರ, ಸೆಪ್ಟೆಂಬರ್ 09, 2025** ಆಗಿರುತ್ತದೆ. ಕಟ್–ಆಫ್ ದಿನಾಂಕದಂದು ಸದಸ್ಯರ ರಿಜಿಸ್ಟರ್‌ನಲ್ಲಿ ಹೆಸರು ಇರುವ ಸದಸ್ಯರು ಅಥವಾ ಲಾಭದಾಯಕ ಮಾಲೀಕರ ರೆಜಿಸ್ಟರ್‌ನಲ್ಲಿರುವ ಸದಸ್ಯರು ಇ–ಮತದಾನದ ಸೇವೆಗಳನ್ನು ಪಡೆಯಲು ಅರ್ಹರಾಗುತ್ತಾರೆ.

ಇ–ಮತದಾನದ ಅವಧಿಯು **ಶುಕ್ರವಾರ, ಸೆಪ್ಟೆಂಬರ್ 12, 2025 ರಂದು (ಬೆಳಿಗ್ಗೆ 9.00 ರಿಂದ)** ಪ್ರಾರಂಭವಾಗುತ್ತದೆ ಮತ್ತು ವಾರ್ಷಿಕ ಮಹಾಸಭೆಗಾಗಿ **ಸೋಮವಾರ, ಸೆಪ್ಟೆಂಬರ್ 15, 2025 ರಂದು (ಸಂಜೆ 5.00)** ಗಂಟೆಗೆ ಮುಕ್ತಾಯಗೊಳ್ಳುತ್ತದೆ. ತದನಂತರ ಇ–ವೋಟಿಂಗ್ ಮಾಡ್ಯೂಲ್‌ನ್ನು ಸಿಡಿಎಸ್‌ಎಲ್ ನಿಷ್ಕ್ರಿಯಗೊಳಿಸುತ್ತದೆ. ಇ–ಮತದಾನದ ಮೂಲಕ ಸಭೆಗೆ ಮೊದಲು ರಿಮೋಟ್ ಮತದಾನ ಚಲಾಯಿಸಿದ ಸದಸ್ಯರು ಸಭೆಯಲ್ಲಿ ಭಾಗವಹಿಸಬಹುದು, ಆದರೆ ಮತ್ತೊಮ್ಮೆ ಮತದಾನ ಮಾಡಲು ಅವಕಾಶವಿರುವುದಿಲ್ಲ. ಇ–ಮತದಾನದ ಮೂಲಕ ಮತದಾನದ ಸೌಲಭ್ಯವು ಸಭೆಯ ಸಮಯದಲ್ಲಿ ಲಭ್ಯವಿರುತ್ತದೆ ಮತ್ತು ಸಭೆಯಲ್ಲಿ ಭಾಗವಹಿಸುವ ಸದಸ್ಯರು ರಿಮೋಟ್ ಇ–ಮತದಾನದ ಮೂಲಕ ಈಗಾಗಲೇ ಮತ ಚಲಾಯಿಸದಿದ್ದಲ್ಲಿ ಸಭೆಯಲ್ಲಿ ತಮ್ಮ ಹಕ್ಕನ್ನು ಚಲಾಯಿಸಲು ಸಾಧ್ಯವಾಗುತ್ತದೆ. ಎಜಿಎಂ ಸಮಯದಲ್ಲಿ ರಿಮೋಟ್ ಇ–ಮತದಾನ / ಇ–ಮತದಾನ ಮತ್ತು ವಿಸಿ / ಒಎವಿಎಂ ಮೂಲಕ ಸಭೆಗೆ ಹಾಜರಾಗುವ ಸದಸ್ಯರಿಗೆ ಮಾಹಿತಿಯನ್ನು ಎಜಿಎಂ ನೋಟೀಸ್‌ನಲ್ಲಿ ನೀಡಲಾಗಿದೆ. ಒಂದು ಬಾರಿ ನಿರ್ಣಯದ ಮೇಲೆ ಮತವನ್ನು ಸದಸ್ಯರು ಚಲಾಯಿಸಿದರೆ, ನಂತರ ಅದನ್ನು ಬದಲಾಯಿಸಲು ಅಥವಾ ಮತ್ತೊಮ್ಮೆ ಮತ ಚಲಾಯಿಸಲು ಅನುಮತಿ ನೀಡಲಾಗುವುದಿಲ್ಲ.

ಎಜಿಎಂನ ಸೂಚನಾ ಪತ್ರದ ವಿತರಣೆಯ ನಂತರ ಯಾವುದೇ ವ್ಯಕ್ತಿ ಕಂಪನಿಯ ಸದಸ್ಯನಾಗಿದ್ದಲ್ಲಿ ಮತ್ತು ಅಂತಿಮ (ಕಟ್–ಆಫ್) ದಿನಾಂಕದಂದು ಷೇರುಗಳನ್ನು ಹೊಂದಿದ್ದಲ್ಲಿ ಅವರು ಆರ್‌ಟಿಎ ಇಂಟಿಗ್ರೇಟೆಡ್ ರಿಜಿಸ್ಟ್ರಿ ಮೇನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ರವರನ್ನು ಯೂಸರ್ ಐಡಿ, ಪಾಸ್‌ವರ್ಡ್ ಮತ್ತಿತರ ಸಂಗತಿಗಳ ವಿವರಗಳನ್ನು ತಿಳಿದುಕೊಳ್ಳುವುದಕ್ಕಾಗಿ ದೂರವಾಣಿ ಸಂ. 91–80–23460815–818ಗೆ ಕರೆ ಮಾಡಿ ಅಥವಾ irg@integratedindia.in ಗೆ ಇ–ಮೇಲ್ ಕಳುಹಿಸಬಹುದು.

ಕಂಪನಿಗಳ ಕಾಯಿದೆ 2013ರ ಸೆಕ್ಷನ್ 160 ರ ಪ್ರಕಾರ ಕಂಪನಿಗಳ ನಿಯಮ 13 (ನೇಮಕಾತಿ ಮತ್ತು ಅರ್ಹತೆ) ನಿಯಮಗಳು, 2014ರ ಸೆಬಿ (ಪಟ್ಟಿ ಮಾಡುವ ಕಟ್ಟುಪಾಡುಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015ರ ಪ್ರಕಾರ, ಕಂಪನಿಯು ಶ್ರೀ ಆನಂದ್ ಬಿ ಹುನ್ನೂರ್ (ಡಿಐಎನ್: 06650798) ಇವರನ್ನು ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಕ ಮಾಡಲು ಪ್ರಸ್ತಾಪಿಸುವ ಲಿಖಿತ ನೋಟೀಸನ್ನು ಸದಸ್ಯರಿಂದ ಸ್ವೀಕರಿಸಿದೆ. ಅವರ ನೇಮಕಾತಿಗೆ ಸಂಬಂಧಿಸಿದ ಐಟಂಗಳನ್ನು ಕಂಪನಿಯ 78ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆಯಲ್ಲಿ ಪ್ರಕಟಿಸಲಾಗಿದೆ.

ಇ–ಮತದಾನದ ಬಗ್ಗೆ ಮತ್ತು ಎಜಿಎಂನಲ್ಲಿ ಭಾಗವಹಿಸುವ ಬಗ್ಗೆ ಯಾವುದೇ ದೂರುಗಳಿದ್ದಲ್ಲಿ ಸಿಡಿಎಸ್‌ಎಲ್ ಅವರ ಇ–ಮೇಲ್ ಐಡಿ helpdesk.evoting@cdslindia.com ಗೆ ಬರೆದು ತಿಳಿಸಬಹುದು ಅಥವಾ ಟೋಲ್ ಫ್ರೀ ಸಂಖ್ಯೆ 1800 21 09911 ಗೆ ಕರೆ ಮಾಡಿ ತಿಳಿಸಬಹುದು ಮತ್ತು / ಅಥವಾ NSDL ಅವರ ಇ–ಮೇಲ್ ಐಡಿ evoting@nsdl.co.in ಗೆ ಬರೆದು ತಿಳಿಸಬಹುದು ಅಥವಾ 022–4886700 / 24997000 ಗೆ ಕರೆ ಮಾಡಿ ತಿಳಿಸಬಹುದು ಹಾಗೂ ಒಂದು ಪ್ರತಿಯನ್ನು investors@kirloskarelectric.com ಗೆ ಕಳುಹಿಸಬೇಕು.

ನಿರ್ದೇಶಕರ ಮಂಡಳಿಯ ಆದೇಶದ ಅನುಸಾರ, **ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್‌**ನ ಪರವಾಗಿ,
ಸಹಿ/–
ಮಹಾಬಲೇಶ್ವರ ಭಟ್,
ಕಂಪನಿ ಕಾರ್ಯದರ್ಶಿ ಮತ್ತು ಕಂಪ್ಲಯೆನ್ಸ್ ಆಫಿಸರ್

ಸ್ಥಳ : ಬೆಂಗಳೂರು
ದಿನಾಂಕ : ಆಗಸ್ಟ್ 21, 2025

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

House

Sanjaynagar

NAGASHETTIHALLI-SANJAYNAGAR HOUSE for Sale 30X45 South Face G +1 Brokers excuse 9880886377

JOB OPPORTUNITIES

General

REQUIRED IMMEDIATELY Communication Skilled MANAGERS, LADY EXECUTIVES. MARKETING EXECUTIVES. Good Salary. Walkin V&V GROUP, Behind IIMB, Bannerghatta Road: 99000-54462

REPUTED DISGNOSTICS at Tumkur Road required Marketing person, Receptionist and other Diagnostics staffs. Interested candidates call 63649-35735

PERSONAL

Change of Name

I RASHIKA GOURAV GULECHHA Alias RASHIKA R/a, #.88, Flat no. 202, HB Samaja Road, Basavanagudi, Bangalore- 560004 I Hereby Declare that both the Name Belongs to Me Only vide Affidavit Dated 20/08/2025 before Notary Mamatha N.K Bangalore

CHANGE OF NAME
I, **LAKSHMI RANADE**, residing at No.5/3rd A Cross, Sri M.V. Nagar, Ramamurthy Nagar, Bengaluru-560016, have changed my name to **LAKSHMI DILIP RANADE** vide affidavit dated 20.08.2025 before notary G Dayananda, Bengaluru. Henceforth I shall be called **LAKSHMI DILIP RANADE** only

I, VIJAY Kumar, son of Damodhar Pattadakall, aged 46years, #5, Deepak Reddy Layout, Raghavana Palya, Jambusavari Dinne, JPNagar 8th Phase, Bannerghatta Road, Bengaluru- 560076 have changed my name from Vijayakumar son of Damodar Pattadakallu to Vijay Kumar, son of Damodhar Pattadakall vide Affidavit dated 18-08-2025 sworn before the Notary Shri.Aravind Patil G.G., Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

CONNECT

BOREWELL DRILLING (SENSOR & ROBO) and
Installing New Pumps & Repairing Old Pumps

VIJAYALAKSHMI BOREWELLS
64/35, 7th Main Road, 2nd Block, Jayanagar, Bangalore - 560 011
Call : 9448171416

ಜಾಹೀರಾತು

ದಕ್ಷಿಣ ಭಾರತದ! ಜನಪ್ರಿಯ ಮುಖ್ಯಮಂತ್ರಿ ಸಿದ್ಧರಾಮಯ್ಯ

ಮುಖ್ಯಮಂತ್ರಿ ಜೊತೆ ದುರ್ಗದ ರಾಜೇಗೌಡ

ದಕ್ಷಿಣ ಭಾರತದಲ್ಲೇ ಅತ್ಯಂತ ಜನಪ್ರಿಯ ದಕ್ಷ, ಪ್ರಗತಿಶೀಲ ಆಡಳಿತಗಾರ; ಸಿದ್ದರಾಮನ ಹುಂಡಿಯ ಸಿದ್ದರಾಮೇಗೌಡ ಸಿದ್ದರಾಮಯ್ಯ, ಕಾಂಗ್ರೆಸ್ ಪಕ್ಷದ ಸಂಘಟನೆ ದಿಟ್ಟ ಆಳ್ವಿಕೆಯ ಅಮಾತ್ಯ. ಭಾರತ ಸಂಸತ್ತಿನ ವಿರೋಧ ಪಕ್ಷದ ನಾಯಕ ರಾಹುಲ್‌ಗಾಂಧಿಯ ಪರಮ ಆಪ್ತ ಮುಖ್ಯಮಂತ್ರಿ. 78 ವರ್ಷಗಳ ವಸಂತಗಳನ್ನು ಕಂಡಿರುವ ಸಿದ್ದರಾಮಯ್ಯನವರಿಗೆ ಆರೋಗ್ಯ ಮತ್ತು ದೀರ್ಘಾಯಸ್ಸು ನೀಡಲೆಂದು ಆಶಿಸುತ್ತೇನೆ. ಬೆಂಗಳೂರಿನ ಗವಿಗಂಗಾಧರೇಶ್ವರ, ಮೈಸೂರಿನ ನಾಡದೇವತೆ ಚಾಮುಂಡೇಶ್ವರಿ, ಕಾಗಿನೆಲೆಯ ಬೀರೇಶ್ವರ, ಧೈವಶಕ್ತಿಯಲ್ಲಿ ಪ್ರಾರ್ಥಿಸುತ್ತೇನೆ. ಬಿಜೆಪಿ ನಾಯಕರುಗಳ ಹೇಳಿಕೆಯಂತೆ ಸಿದ್ದರಾಮಯ್ಯ ನಾಸ್ತಿಕರಲ್ಲ. ಯಾಕೆಂದರೆ ಅವರ ರಾಜಕೀಯದ ಯಶಸ್ಸಿನ ಹಿಂದೆ ಅವರ ಪತ್ನಿ ಪಾರ್ವತಿ ಸಿದ್ದರಾಮಯ್ಯನವರ ಭಕ್ತಿಯ ಅಖಂಡ ಪೂಜ ಫಲವಿದೆ. ಭಕ್ತಿಯ ಧ್ಯೋತಕವಾಗಿ ಸಿದ್ದರಾಮಣ್ಣ ನಾಡದೇವಿ ಚಾಮುಂಡೇಶ್ವರಿಗೆ ಚಿನ್ನದ ತೇರು ಮಾಡಿಸಲು ಮುಜರಾಯಿ ಇಲಾಖೆಗೆ ಆದೇಶ ಮಾಡಿದ್ದಾರೆ. ಸಮಸ್ತ ಕನ್ನಡಿಗರು ದೇಶದ ನಾನಾ ರಾಜ್ಯಗಳ ಚಾಮುಂಡೇಶ್ವರಿ ಭಕ್ತರು ಹೆಮ್ಮೆ ಪಡುವಂತ ಅಭೂತಪೂರ್ವಘಟ್ಟ. ಹಿಂದು ಧರ್ಮವನ್ನೇ ತಮ್ಮ ತಮ್ಮ ಕೈಯಲ್ಲಿ ಇಟ್ಟು ಕೊಂಡಿರುವಂತೆ ಮಾತನಾಡುವ ಬಿಜೆಪಿ ನಾಯಕರುಗಳು, ಬಿಜೆಪಿ ಸರ್ಕಾರ ಇದ್ದಾಗ ಚಾಮುಂಡೇಶ್ವರಿ ದೇವಿಗೆ ಯಾಕೆ ಚಿನ್ನದ ತೇರನ್ನು ಮಾಡಿಸಲಾಗಲಿಲ್ಲ. ಚಾಮುಂಡೇಶ್ವರಿ ದೇವಸ್ಥಾನ ಪ್ರಾಧಿಕಾರ, ದೇವಿಗೆ ಚಿನ್ನದ ತೇರು ಮಾಡಿಸಿದ ಕೀರ್ತಿ ಸಿದ್ದರಾಮಣ್ಣರಿಗೆ ಸಲ್ಲುತ್ತದೆ. ಸಿದ್ದರಾಮಯ್ಯನವರ ಈ ಘನಕಾರ್ಯಕ್ಕೆ ಸಮಸ್ತ ಕನ್ನಡಿಗರು ಅಭಿನಂದಿಸಬೇಕು. ಸಿದ್ದರಾಮಯ್ಯ ನಾಸ್ತಿಕರೋ, ಆಸ್ತಿಕರೋ ದೇವರ ಬಗ್ಗೆ ಭಕ್ತಿ ಭಾವ ಇದೆಯೋ ಇಲ್ಲವೋ ಬಿಜೆಪಿಯವರು ನಿರ್ಧರಿಸಬೇಕು. ಭಾರತ ಒಕ್ಕೂಟದ ಜಾತ್ಯತೀತ ಜನತಂತ್ರದ ವ್ಯವಸ್ಥೆಯಲ್ಲಿ ನಾವು ಮಾತ್ರ ಹಿಂಧುತ್ವದವರು ಬೇರೆಯವರು ಅಲ್ಲ ಎಂಬುದು ವೈಚಾರಿಕ ಚಿಂತನೆಯಲ್ಲ. ಭೌದ್ಧಿಕ ವಿಕಾಶದ ವಿವೇಚನೆಯೂ ಅಲ್ಲ. ಈ ಆದಿಶಕ್ತಿ ಪರಾಶಕ್ತಿಯ ಮಾಯೆ! ಪಂಚಭೂತಗಳ ಛಾಯೆ ಆಗಿರುವ ಚಾಮುಂಡೇಶ್ವರಿ ಗುಡಿಯನ್ನು ಕಟ್ಟಿದವರು ತಲಕಾಡಿನ ಗಂಗರು. ಮೈಸೂರಿನ ರಾಜ ಒಡೆಯರ್‌ಗಳು ಈ ದೇವಾಲಯಗಳನ್ನು ಕಟ್ಟಿದವರಲ್ಲ. ಚಾಮುಂಡೇಶ್ವರಿ ದೇವಸ್ಥಾನ ಪ್ರಾಧಿಕಾರವನ್ನು ಸ್ಥಾಪಿಸಿದ್ದಕ್ಕಾಗಿ ಸಮಸ್ತ ಕನ್ನಡಿಗರ ಪರವಾಗಿ ಅಭಿನಂದಿಸುತ್ತೇನೆ.

ಬಂಡವಾಳ ಶಾಯಿಗಳ ಬಿಜೆಪಿ ಸರ್ಕಾರಕ್ಕೆ ಪರ್ಯಾಯವಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕಾದರೆ, ಹಿಂದುಳಿದ ಸಮುದಾಯಗಳ ಅಗ್ರ ನಾಯಕ ಸಿದ್ದರಾಮಯ್ಯನವರ ನಾಯಕತ್ವ ಕಾಂಗ್ರೆಸ್ ಪಕ್ಷಕ್ಕೆ ಇಂದು ಅತ್ಯಂತ ಅನಿವಾರ್ಯವಾಗಿದೆ. ದಲಿತ, ಹಿಂದುಳಿದ ಅಲ್ಪಸಂಖ್ಯಾತ ಹಾಗೂ ಶೋಷಿತ ವರ್ಗದ ಜತೆಗೆ ಪ್ರಬಲ ಕೋಮಿನ ಬೆಂಬಲ ಪಡೆಯುವುದು ಬಹಳ ಮುಖ್ಯವಾಗಿದೆ. ಪ್ರತಿದಿನ ಜನರ ಅಹವಾಲುಗಳನ್ನು ಸ್ವೀಕರಿಸಿ ಆದೇಶ ನೀಡುವುದು ಅವರ ಕಾಯಕವಾಗಿದೆ. ದಕ್ಷ ಧೀಮಂತ ಆಡಳಿತಗಾರ ಸಾಮಾಜಿಕ ನ್ಯಾಯ ಆರ್ಥಿಕ ಸಮಾನತೆ, ಹಿಂದುಳಿದ ಶೋಷಿತ ಸಮುದಾಯಗಳ ಚಿಂತನಕಾರ. ಇನ್ನು ಹತ್ತು ವರ್ಷಗಳ ಕಾಲ ಸಿದ್ದರಾಮಯ್ಯ ಭಾರತದ ರಾಜಕಾರಣದಲ್ಲಿ ಸಕ್ರಿಯವಾಗಿ ದುಡಿಯಬೇಕೆಂಬುದು ಸಮಸ್ತ ಕಾಂಗ್ರೆಸಿಗರ ಮಹತ್ವಾಕಾಂಕ್ಷೆ. ಸಿದ್ದರಾಮನ ಹುಂಡಿಯ ಸಿದ್ದರಾಮೇಗೌಡ ಸಿದ್ದರಾಮಯ್ಯ ರಾಜಕಾರಣದಲ್ಲಿ ಭಾರತದ ಎತ್ತರಕ್ಕೆ ಹಾರಿದ್ದು, ರೋಚಕ ಮತ್ತು ರೋಮಾಂಚನಕಾರಿಯಾದ ಕಾಲಘಟ್ಟ, ರಾಷ್ಟ್ರದಲ್ಲಿ ಸಮಾಜವಾದಿಯಾಗಿ ಗುರುತಿಸಿಕೊಂಡಿರುವ ಸಿದ್ದರಾಮಯ್ಯ ಶೋಷಿತ ಸಮುದಾಯಗಳನ್ನು ಮುಖ್ಯವಾಹಿನಿಗೆ ತರುವ ಕಾರ್ಯಕ್ರಮ ಹಮ್ಮಿಕೊಂಡಿರುವುದು ಪ್ರಶಂಸನೀಯ. ಭಾರತ ದೇಶವನ್ನೇ ತಮ್ಮ ವಶದಲ್ಲಿ ಇಟ್ಟುಕೊಂಡಿರುವಂತೆ ಬೀಗುತ್ತಿರುವ ಬಿಜೆಪಿ ನಾಯಕರು ಮತ್ತು ಸರ್ಕಾರಕ್ಕೆ ಸಾಮಾಜಿಕ ಕಳಕಳಿಯ ಬದ್ಧತೆಯೆ ಇಲ್ಲ. ಸಾಮಾಜಿಕ ನ್ಯಾಯ ಆರ್ಥಿಕ ಸಮಾನತೆ ಸಮಾಜದ ಸರ್ವಾಂಗಿಕರಣದ ಅಭಿವೃದ್ಧಿಯ ಪರಿಕಲ್ಪನೆಯೆ ಇಲ್ಲ. ಮೂರು ಸಾವಿರ ಕೋಟಿ ರೂ. ವೆಚ್ಚದಲ್ಲಿ ಶ್ರೀರಾಮನ ದೇವಾಲಯ ಭಾರತದ ಶ್ರೀ ರಾಮನ ಭಕ್ತರಿಗೆ ದೊಡ್ಡ ಕೊಡಿಗೆಯೇ. ಎರಡು ಸಾವಿರ ಮಂದಿ ನೌಕರರನ್ನು ನೇಮಿಸಿಕೊಳ್ಳಲಾಗಿದೆ. ಶ್ರೀರಾಮ ಪುರುಷೋತ್ತಮ, ತಂದೆಯ ಮಾತಿಗೆ ಕಾಡಿಗೆ ಹೋಗಿ ಪಿತೃಪಾಲನೆ ಮಾಡಿದ ಮಹಾನುಭಾವ. ಅಯೋಧ್ಯೆಯ ರಾಮಮಂದಿರದ ಪ್ರಾಧಿಕಾರದಲ್ಲಿ ಒಂದೇ ಕೋಮಿನ ವೈದಿಕರು ಶ್ರೀರಾಮನ ಸೇವೆ ಮಾಡುತ್ತಿದ್ದಾರೆ. ಆದರೆ ದಲಿತ, ಹಿಂದುಳಿದ, ಅದಿವಾಸಿ ಮತ್ತು ಶೋಷಿತ ಸಮುದಾಯದವರನ್ನು ಯಾತಕ್ಕೆ ಒಬ್ಬರನ್ನು ಕೆಲಸಕ್ಕೆ ನೇಮಿಸಿಕೊಂಡಿಲ್ಲ? ಎಂಬುದನ್ನು ಬಿಜೆಪಿ ನಾಯಕರು ದೇಶದ ಜನತೆಗೆ ಹೇಳಬೇಕಾಗಿದೆ. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್‌ಗಾಂಧಿ, ಸೋನಿಯಾಗಾಂಧಿಯವರ ವಿರುದ್ಧ ನಿರಂತರವಾಗಿ ಬಿಜೆಪಿ ನಾಯಕರುಗಳು ತೇಜೋವಧೆ ಮಾಡುತ್ತಿದ್ದಾರೆ. ಇದು ಸಲ್ಲದು. ಕೇಂದ್ರ ಸರ್ಕಾರದ ದ್ವೇಷ ರಾಜಕಾರಣ ಭಾರತದ ಒಕ್ಕೂಟಕ್ಕೆ ಕಂಟಕಕಾರಿಯಾಗಿದೆ. ಆಂತರಿಕವಾಗಿ ಇದು ಸರ್ವಾಧಿಕಾರದ ಆಳ್ವಿಕೆಯ ಭಯ ಗುಸುಗುಟ್ಟುತ್ತಿದೆ. ಚಾಣಾಕ್ಯ ನೀತಿಯ ಪ್ರಧಾನಿ ಮೋದಿಯವರಿಗೆ ಜನತಂತ್ರದ ಸವಲತ್ತಿನ ಪರಾಕಾಷ್ಠತೆ ತಿಳಿಯದು. ದೇಶ ಜಾತ್ಯಾತೀತ, ಜನತಂತ್ರದ ಪ್ರಣಾಳಿಕೆಯೇ ಪ್ರಧಾನವಾದದ್ದು. ರಾಜಕೀಯ ಪಕ್ಷಗಳು ಅನಿವಾರ್ಯವೂ ಅಲ್ಲ, ಶಾಶ್ವತವೂ ಅಲ್ಲ. ದೇಶದ ಜನತಂತ್ರವೇ ಪರಮೋಚ್ಚವಾದದ್ದು ಎಂದು ಎಲ್ಲರೂ ತಿಳಿಯಬೇಕು.

ಈ ಭೂಮಿಕೆಯಲ್ಲಿ ಪ್ರಧಾನಿ ಮೋದಿಯವರು ಪ್ರಜಾಪ್ರಭುತ್ವದ ರಾಜಕೀಯ ಪಕ್ಷಗಳನ್ನು ಒಡೆಯುವ, ನಾಶ ಮಾಡುವ ದುಷ್ಟ ಪ್ರಯತ್ನ ಮಾಡಬಾರದು. ಯುರೋಪಿನ ಜರ್ಮನಿ, ಇಟಲಿ, ಫ್ರಾನ್ಸ್ ಮುಂತಾದ ದೇಶಗಳಲ್ಲಿ ಕೆಲವು ಪಕ್ಷಗಳು ಸೇರಿ ಸರ್ಕಾರ ನಡೆಸುತ್ತಿವೆ. ಜಪಾನ್‌ನಂತಹ ಮುಂದುವರೆದ ದೇಶಗಳಲ್ಲೂ ಹಲವು ಪಕ್ಷಗಳು ಸೇರಿ ಸರ್ಕಾರ ನಡೆಸುತ್ತಿವೆ. ಪ್ರಜಾಪ್ರಭುತ್ವದ ಒಕ್ಕೂಟದ ವ್ಯವಸ್ಥೆಯನ್ನು ಭದ್ರ ಬುನಾದಿಯ ಮೇಲೆ ಕಟ್ಟಬೇಕೆ ಹೊರತು ದುರ್ಬಲಗೊಳಿಸಬಾರದು. 200 ವರ್ಷಗಳ ಹಿಂದೆಯೇ ಫ್ರಾನ್ಸ್‌ನ ಮಹಾಕ್ರಾಂತಿ ನೀಡಿದ ಸಂದೇಶ ಇದು. ಜಾಗತಿಕ ವಿಶ್ವದ ಜನರ ಮಂಥನವೇ ಸ್ವಾತಂತ್ರ್ಯ, ಸಾಮಾಜಿಕ ನ್ಯಾಯ, ಆರ್ಥಿಕ ಸಮಾನತೆ ಮತ್ತು ಜಾತ್ಯಾತೀತ ತತ್ವದ ಮೇಲಿದೆ. ಸಮಾಜವಾದದ ಈ ಆಂದೋಲನ ಪ್ರಪಂಚದಾದ್ಯಂತ ಅಬ್ಬರಿಸಬೇಕು. ಸಮಾಜದ ಕಟ್ಟಕಡೆಯ ವ್ಯಕ್ತಿಯು ಈ ಹಕ್ಕುಗಳನ್ನು ಪಡೆಯಬೇಕು. ಈ ಸಂಘರ್ಷ ಹಾದಿ ತಪ್ಪಿದರೆ ಪ್ರಜಾಪ್ರಭುತ್ವವೇ ಸತ್ತು ಹೋಗುತ್ತದೆ. ಹಿಂದುಳಿದ ಸಮುದಾಯಗಳ ಅಭಿವೃದ್ಧಿಯ ಚಿಂತನೆ ಮೊಳಕೆ ಹೊಡೆದಿದ್ದೆ ಮೈಸೂರಿನಲ್ಲಿ. ನಾಲ್ವಡಿ ಕೃಷ್ಣರಾಜ ಒಡೆಯರ್ ದೇಶ ಕಂಡ ಅತ್ಯಂತ ಪ್ರಗತಿಶೀಲ ಅಭಿವೃದ್ಧಿಯ ರಾಜರಾಗಿದ್ದರು. ಮೈಸೂರು ರಾಜ್ಯದ ದಿವಾನಗಿರಿ ತಮಿಳು, ತೆಲುಗು, ಐಯ್ಯಂಗಾರಿಗಳ ಹಿಡಿತದಲ್ಲಿತ್ತು. ವೈದಿಕರ ಹಾವಳಿಯ ವಿರುದ್ಧ ಸಿಟ್ಟೆದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಹಿಂದುಳಿದ ಸಮುದಾಯಗಳ ಆಯೋಗ ಅಂದೇ ರಚಿಸಿದರು. ಈ ಆಯೋಗ ಇಡೀ ಭಾರತದಲ್ಲೇ ದೊಡ್ಡ ಆಂದೋಲನವಾಗಿತ್ತು. ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಹಿಂದುಳಿದ ಸಮುದಾಯಗಳಿಗೆ ರಾಜಕೀಯದ ಸ್ಥಾನಮಾನ ಕೊಡುವ ಕ್ರಾಂತಿಯನ್ನೆ ಮಾಡಿದರು, ಸಮಾಜವಾದಿ ನಾಯಕ ಡಾ. ರಾಮ್‌ಮನೋಹರ್ ಲೋಹಿಯಾ ಸಂಸತ್ತಿನಲ್ಲಿ ಸಮಾಜವಾದ ಕುರಿತು ಅಬ್ಬರಿಸಿದರು. ಲೋಹಿಯಾರವರ ಭಾಷಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹಿಂದುಳಿದ ಆಯೋಗದ ತಿರುಳು ಪ್ರೇರಕ ಶಕ್ತಿಯಾಗಿ ಕಿಡಿ ಹಚ್ಚಿಸಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮೈಸೂರಿನಲ್ಲೇ ಮೊಳಕೆಯೊಡೆದ ಹಿಂದುಳಿದ ಸಮುದಾಯಗಳ ಅಭಿವೃದ್ಧಿಯ ಆಂದೋಲನ ಮೈದುಂಬಿಕೊಂಡಿದೆ. ಇದು ಈ ಹೊತ್ತಿನ ಜಾಗತಿಕ ಚಿಂತನೆಯ ಅಗ್ರಮಾನ್ಯತೆ. ಹೊಸ ವಿಕಾಸದ ಈ ಅಲೆ ಸಿದ್ದರಾಮನ ಹುಂಡಿಯ ಸಿದ್ದರಾಮಯ್ಯರನ್ನು ಭಾರತದ ಮಟ್ಟದಲ್ಲಿ ನಿಲ್ಲುವಂತೆ ಮಾಡಿತು. ಸಿದ್ದರಾಮಯ್ಯ ಈ ಸೈದ್ಧಾಂತಿಕ ವಿಚಾರಗಳ ಸಂಘರ್ಷದಿಂದ ಭಾರತದ ಎತ್ತರಕ್ಕೆ ಹಾರಿದರು. ಸಿದ್ದರಾಮಯ್ಯ ಒಬ್ಬ ಚಾಣಾಕ್ಷ ರಾಜಕಾರಣಿ. ತನ್ನ ಆಳ್ವಿಕೆಯ ಹೊತ್ತಿನಲ್ಲಿ ಶೋಷಿತ, ದಿಕ್ಕು ದಿಸೆಯಿಲ್ಲದ ಸಮುದಾಯಗಳಿಗೆ: ಶಾಶ್ವತ ಪರಿಹಾರ ಕೊಡಬೇಕೆಂಬುದು ಉತ್ಕಟಕಾಂಕ್ಷೆಯ ಮೇರುಘಟ್ಟ. ಸಾಮಾಜಿಕ, ಆರ್ಥಿಕ, ಬೌದ್ಧಿಕ ಮತ್ತು ಶೈಕ್ಷಣಿಕ ಆಂದೋಲನದ ಭೂಮಿಕೆಯಲ್ಲಿ ತಮ್ಮನ್ನು ಗುರುತಿಸಿಕೊಳ್ಳಲು ಹೊರಟಿದ್ದಾರೆ. ಇದು ನಾಗರೀಕ ಜಗತ್ತಿನ ವಿಜೃಂಭದ ವಿರಾಟ. ಈ ಎಲ್ಲಾ ವಿಚಾರ ಮಂಥನಗಳ ಅವಲೋಕನದಲ್ಲಿ ನಾನು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಬೆಂಬಲಿಸಿಕೊಂಡು ಬಂದಿದ್ದೇನೆ. ಇಂದಿರಾಗಾಂಧಿ, ರಾಮ್‌ಮನೋಹರ್ ಲೋಹಿಯಾ, ನಾಲ್ವಡಿ ಕೃಷ್ಣರಾಜ ಒಡೆಯರ್, ದೇವರಾಜ ಅರಸುರವರು, ಸಮಾಜವಾದಿ ಗೋಪಾಲಗೌಡರ ಹಾದಿ ನನ್ನದು. ನಾನು ವಿಶ್ವಮಾನವತೆಯನ್ನು ಸಾಹಿತ್ಯ, ಭಾಷಣ, ಕವನ, ಗ್ರಂಥ ಮಂಥನಗಳಲ್ಲಿ ವಿಜೃಂಭಿಸಿಕೊಂಡು ಬಂದಿದ್ದೇನೆ. ಸಿದ್ದರಾಮಯ್ಯನವರು ನನ್ನ ಅಚ್ಚುಮೆಚ್ಚಿನ ನಾಯಕರು. ಫಿಲಾಸಫರ್, ಸ್ನೇಹಿತರು ಮತ್ತು ಬಾಂದವರು

ದುರ್ಗದ ರಾಜೇಗೌಡ, ಜಾಗತಿಕ ಬರಹಗಾರರು, ಅಂತರರಾಷ್ಟ್ರೀಯ ಮಾನವ ಹಕ್ಕುಗಳ ವೇದಿಕೆ ಅಧ್ಯಕ್ಷ – 97409 29960

ಕರ್ನಾಟಕದಲ್ಲಿರುವ ಶೋರೂಂಗಳು: ಎಂ.ಜಿ ರೋಡ್ । ಡಿಕೆನ್ಸನ್ ರಸ್ತೆ । ಜಯನಗರ । ರಾಜಾಜಿನಗರ । ಕೋರಮಂಗಲ । ಫೀನಿಕ್ಸ್ ಮಾರ್ಕೆಟ್‌ಸಿಟಿ । ಮಾರತ್ತಹಳ್ಳಿ । ಬನ್ನೇರುಘಟ್ಟ ರಸ್ತೆ । ಕಮ್ಮನಹಳ್ಳಿ । ಮಲ್ಲೇಶ್ವರಂ । ಹೆಚ್‌ಎಸ್‌ಆರ್ ಲೇಔಟ್ ಬನಶಂಕರಿ । ಯಲಹಂಕ । ಫೋರಮ್ ಸೌತ್ ಬೆಂಗಳೂರು । ಆರ್‌ಆರ್ ನಗರ । ಫೀನಿಕ್ಸ್ ಮಾಲ್ ಆಫ್ ಏಷ್ಯಾ, ಹೆಬ್ಬಾಳ । ವೈಟ್‌ಫೀಲ್ಡ್ । ಸರ್ಜಾಪುರ ರಸ್ತೆ । ಹೆಸರಘಟ್ಟ ಮುಖ್ಯ ರಸ್ತೆ । ಹೆಣ್ಣೂರು ಮುಖ್ಯ ರಸ್ತೆ । ನಾಗರಭಾವಿ । ಮೈಸೂರು ಮಂಡ್ಯ । ಹಾಸನ । ಚಿಕ್ಕಮಗಳೂರು । ಮಂಗಳೂರು । ಉಡುಪಿ । ಬೆಳಗಾವಿ । ಹುಬ್ಬಳ್ಳಿ । ಧಾರವಾಡ । ವಿಜಯಪುರ । ಕಲಬುರಗಿ । ಬೀದರ್ । ಬಳ್ಳಾರಿ । ದಾವಣಗೆರೆ । ಶಿವಮೊಗ್ಗ । ತುಮಕೂರು । ರಾಯಚೂರು । ಕೋಲಾರ । ಹೊಸಪೇಟೆ ಚಿತ್ರದುರ್ಗ । ಬಾಗಲಕೋಟೆ

09562 916 916

BUY ONLINE AT: malabargoldanddiamonds.com

OVER 400 SHOWROOMS ACROSS 13 COUNTRIES

Follow us on @malabargoldanddiamonds

ಆನ್‌ಲೈನ್ ಟ್ರೇಡಿಂಗ್: ₹5 ಲಕ್ಷ ವಂಚನೆ

ತುಮಕೂರು: ಆನ್‌ಲೈನ್ ಟ್ರೇಡಿಂಗ್‌ನಲ್ಲಿ ಹಣ ಹೂಡಿಕೆ ಮಾಡಿ, ಲಾಭ ಗಳಿಸಬಹುದು ಎಂಬ ಆಮಿಷಕ್ಕೆ ಒಳಗಾಗಿ ಉಪ್ಪಾರಹಳ್ಳಿಯ ಎಂ.ಡಿ.ಖಾಜಾ ಮೋಹಿಯುದ್ದೀನ್ ₹5.87 ಲಕ್ಷ ಕಳೆದುಕೊಂಡಿದ್ದಾರೆ. ಎಚ್‌ಎಂಎಸ್ ಐಟಿಐ ಕಾಲೇಜಿನಲ್ಲಿ ಪ್ರಯೋಗಾಲಯ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಆರೋಪಿಗಳು ವಾಟ್ಸ್ ಆ್ಯಪ್ ಮುಖಾಂತರ ಮೆಸೇಜ್ ಮಾಡಿ, ಟ್ರೇಡಿಂಗ್ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. ನಂತರ ಅವರು ಕಳುಹಿಸಿದ ಲಿಂಕ್ ಕ್ಲಿಕ್ಕಿಸಿ ಆ್ಯಪ್ ಡೌನ್‌ಲೋಡ್ ಮಾಡಿ.ವಿವಿಧ ಬ್ಯಾಂಕ್ ಖಾತೆಗಳಿಗೆ ₹6.06 ಲಕ್ಷ ವರ್ಗಾಯಿಸಿದ್ದಾರೆ.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್ ರವರ ಕಚೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಚೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ಇ-ಮೇಲ್: eemidklr@rediffmail.com, eemigwddkolar@gmail.com ದೂರವಾಣಿ ಸಂಖ್ಯೆ: 08152–200049

ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/1039/2025–26/ ದಿನಾಂಕ:19.08.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 08/2025–26/ ದಿನಾಂಕ: 19.08.2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಕೆಡಬ್ಲ್ಯೂ–1&2 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ ಎಸ್.ಸಿ.ಪಿ & ಟಿ.ಎಸ್.ಪಿ ಯೋಜನೆಯಡಿಯಲ್ಲಿ 34 ಕೊಳವೆಬಾವಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಮೊತ್ತ ರೂ. 34.93 ಹಾಗೂ ಕನಿಷ್ಠ ಮೊತ್ತ ರೂ. 4.99 ಲಕ್ಷ. ನಿಗದಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ **www.kppp.karnataka.gov.in ದಿನಾಂಕ: 21.08.2025 ರವರೆಗೆ ಬೆಳಗ್ಗೆ 11:30 ಗಂಟೆಯಿಂದ ಪಡೆಯಬಹುದು** (Download). ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ **(Upload) ದಿನಾಂಕ: 01.09.2025 ಬೆಳಗ್ಗೆ 11:30 ಗಂಟೆಯವರೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 02.09.2025ರ ಬೆಳಗ್ಗೆ 11:31 ಗಂಟೆಯ ನಂತರ.** ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ **www.kppp.karnataka.gov.in** ಅಂತರ್ಜಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:241/ಕೆಎಸ್‌ಎಂಸಿಎ/2025–26

ಮಕ್ಕಳನ್ನು ಕಾಡಲಾರಂಭಿಸಿದೆ ದೃಷ್ಟಿದೋಷ

ಲಕ್ಷಕ್ಕೂ ಅಧಿಕ ಮಕ್ಕಳಲ್ಲಿ ಸಮಸ್ಯೆ
ಡಿಜಿಟಲ್ ಸಾಧನ ಅತಿ ಬಳಕೆಯಿಂದ ಹಾನಿ

• ವರುಣ ಹೆಗಡೆ



ಬೆಂಗಳೂರು: ಡಿಜಿಟಲ್ ಸಾಧನಗಳ ಅತಿಯಾದ ಬಳಕೆ ಸೇರಿ ವಿವಿಧ ಕಾರಣಗಳಿಂದ ದೃಷ್ಟಿದೋಷ ಸಮಸ್ಯೆಗೆ ಒಳಪಡುವ ಮಕ್ಕಳ ಸಂಖ್ಯೆ ರಾಜ್ಯದಲ್ಲಿ ಹೆಚ್ಚುತ್ತಿದ್ದು, ಆರೋಗ್ಯ ಇಲಾಖೆಯ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ (ಆರ್‌ಬಿಎಸ್‌ಕೆ) ನಡೆಸಿದ ತಪಾಸಣೆಯಲ್ಲಿ ಕಳೆದ ಒಂದು ವರ್ಷದಲ್ಲಿ 1.72 ಲಕ್ಷ ಮಕ್ಕಳಲ್ಲಿ ದೃಷ್ಟಿ ಸಮಸ್ಯೆ ಪತ್ತೆಯಾಗಿದೆ.

ಆರಂಭಿಕ ಹಂತದಲ್ಲಿಯೇ ವಿವಿಧ ಅನಾರೋಗ್ಯ ಸಮಸ್ಯೆಗಳನ್ನು ಪತ್ತೆ ಹಚ್ಚಿ, ಚಿಕಿತ್ಸೆ ಒದಗಿಸುವ ಸಂಬಂಧ ಅಂಗನವಾಡಿ ಹಾಗೂ ಶಾಲಾ ಹಂತದಲ್ಲಿಯೇ ಈ ಕಾರ್ಯಕ್ರಮದಡಿ 18 ವರ್ಷದೊಳಗಿನವರಿಗೆ ತಪಾಸಣೆ ನಡೆಸಲಾಗುತ್ತಿದೆ. ಹುಟ್ಟಿನ ದೋಷಗಳು, ರೋಗಗಳು, ನ್ಯೂನತೆ ಮತ್ತು ಬೆಳವಣಿಗೆ ಕುಂಠಿತವನ್ನು ಗುರುತಿಸುವುದು ಹಾಗೂ ಉಚಿತವಾಗಿ ಚಿಕಿತ್ಸೆ ಒದಗಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. 2024-25ನೇ ಸಾಲಿನಲ್ಲಿ 1.23 ಕೋಟಿ ಮಕ್ಕಳನ್ನು ಆರ್‌ಬಿಎಸ್‌ಕೆ ತಂಡ ತಪಾಸಣೆ ನಡೆಸಿದೆ. ಈ ಮಕ್ಕಳಿಗೆ ನೇತ್ರ ತಪಾಸಣೆಯನ್ನೂ ನಡೆಸಿದ್ದು, ಹೆಚ್ಚಿನ ಮಕ್ಕಳಲ್ಲಿ ದೃಷ್ಟಿದೋಷ ಸಮಸ್ಯೆ ಪತ್ತೆಯಾಗಿದೆ. ಕೋವಿಡ್ ಬಳಿಕ ಡಿಜಿಟಲ್ ಸಾಧನಗಳ ಅತಿಯಾದ ಬಳಕೆಯೇ ಈ ಸಮಸ್ಯೆ ಹೆಚ್ಚಳಕ್ಕೆ ಕಾರಣವೆಂದು ನೇತ್ರ ತಜ್ಞರು ವಿಶ್ಲೇಷಿಸಿದ್ದಾರೆ. 2022–23ರಲ್ಲಿ ಈ ಕಾರ್ಯಕ್ರಮದಡಿ ನಡೆಸಲಾದ ತಪಾಸಣೆಯಲ್ಲಿ 98 ಸಾವಿರ ಮಕ್ಕಳಲ್ಲಿ ದೃಷ್ಟಿದೋಷ ಪತ್ತೆಯಾಗಿತ್ತು. ಬಳಿಕ, ಮಕ್ಕಳಲ್ಲಿನ ದೃಷ್ಟಿದೋಷ ಪ್ರಕರಣಗಳ ಸಂಖ್ಯೆ ಲಕ್ಷದ ಗಡಿ ದಾಟಿದ್ದು, 2023–24ರಲ್ಲಿ 1.21 ಲಕ್ಷ ಮಕ್ಕಳು ಕಣ್ಣಿನ ಸಮಸ್ಯೆ ಎದುರಿಸುತ್ತಿರುವುದು ತಪಾಸಣೆಯಿಂದ ದೃಢಪಟ್ಟಿದೆ. ಸಮಸ್ಯೆ ಪತ್ತೆಯಾದ ಮಕ್ಕಳಿಗೆ ಹೆಚ್ಚಿನ ನೇತ್ರ ತಪಾಸಣೆ ನಡೆಸಿ, ಕನ್ನಡಕಗಳನ್ನೂ ವಿತರಿಸಲಾಗುತ್ತಿದೆ.

ಕಲಿಕೆಗೆ ತೊಡಕು: ನೇತ್ರ ಸಮಸ್ಯೆಯು ಮಕ್ಕಳ ಕಲಿಕೆಗೆ ತೊಡಕಾಗುತ್ತಿದೆ ಎಂಬ ಕಾರಣಕ್ಕೆ ಈ ಕಾರ್ಯಕ್ರಮದಡಿ ಆರಂಭಿಕ ಹಂತದಲ್ಲಿಯೇ ಸಮಸ್ಯೆಯನ್ನು ಪತ್ತೆ ಮಾಡಲಾಗುತ್ತಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಈ ತಪಾಸಣೆ ನಡೆಸುತ್ತಿದ್ದು, ಸಮಸ್ಯೆ ಪತ್ತೆಯಾದವರಿಗೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅಡಿ ನೋಂದಾಯಿತ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ.

‘ಇತ್ತೀಚಿನ ದಿನಗಳಲ್ಲಿ ಮಕ್ಕಳಲ್ಲಿ ಸಮೀಪ ದೃಷ್ಟಿ ಸಮಸ್ಯೆ ಹೆಚ್ಚುತ್ತಿದೆ. ಡಿಜಿಟಲ್ ಉಪಕರಣಗಳ ಅತಿಯಾದ ಬಳಕೆ, ಹೊರಾಂಗಣ ಚಟುವಟಿಕೆ ಕಡಿಮೆ ಆಗಿರುವುದು ಸಮಸ್ಯೆಗೆ ಪ್ರಮುಖ ಕಾರಣ. ಈ ಸಮಸ್ಯೆಯನ್ನು ಆರಂಭದಲ್ಲಿಯೇ ಗುರುತಿಸಿ, ಚಿಕಿತ್ಸೆ ಕೊಡಿಸದಿದ್ದರೆ ಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಬೆಳವಣಿಗೆ ಕುಂಠಿತವಾಗುತ್ತದೆ’ ಎಂದು ನೇತ್ರತಜ್ಞರು ತಿಳಿಸಿದರು.

ಅತಿಯಾದ ಮೊಬೈಲ್ ಅವಲಂಬನೆ

ಮಕ್ಕಳಲ್ಲಿ ಸ್ಮಾರ್ಟ್‌ಫೋನ್ ವ್ಯಸನ ಹೆಚ್ಚುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ನೇತ್ರ ತಜ್ಞರು ‘ಸುದೀರ್ಘ ಅವಧಿ ಡಿಜಿಟಲ್ ಪರದೆಯನ್ನು ನೋಡುವುದರಿಂದ ಕಣ್ಣಿನ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಡಿಜಿಟಲ್ ಪರದೆಯಿಂದ ಹೊರಹೊಮ್ಮುವ ಬೆಳಕು ಕಣ್ಣಿನ ಮೇಲೆ ನೇರ ಪರಿಣಾಮ ಬೀರುತ್ತದೆ. ಕಣ್ಣಿನಲ್ಲಿ ನೋವು, ಉರಿ, ತುರಿಕೆ, ನೀರು ಹರಿಯುವುದು, ಕೆಂಪಾಗುವುದು ಸೇರಿ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಶಾಲೆಗಳಲ್ಲಿಯೂ ಪಠ್ಯವನ್ನು ಪಿಡಿಎಫ್ ರೂಪದಲ್ಲಿ ಒದಗಿಸುತ್ತಿರುವುದರಿಂದ ಡಿಜಿಟಲ್ ಸಾಧನಗಳ ಮೇಲಿನ ಮಕ್ಕಳ ಅವಲಂಬನೆ ಹೆಚ್ಚುತ್ತಿದೆ’ ಎಂದು ಹೇಳಿದರು.

ಇತರ ಪ್ರಮುಖ ಕಾರಣಗಳು

ಆನುವಂಶಿಕವಾಗಿ, ಪೋಷಕಾಂಶ ಕೊರತೆ, ಕಣ್ಣಿನ ಸೋಂಕು, ಗಾಯಗಳಿಂದಲೂ ದೃಷ್ಟಿ ಸಂಬಂಧಿ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ

ಕಣ್ಣಿನ ಸಮಸ್ಯೆಯಿಂದ ಬರುವ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. ಡಿಜಿಟಲ್ ಸಾಧನಗಳ ಬಳಕೆ ಕಡಿಮೆ ಮಾಡಿ, ಹೊರಾಂಗಣ ಚಟುವಟಿಕೆಗಳಿಗೆ ಆದ್ಯತೆ ನೀಡಬೇಕು

ಡಾ. ರೋಹಿತ್ ಶೆಟ್ಟಿ, ನಾರಾಯಣ ನೇತ್ರಾಲಯದ ಅಧ್ಯಕ್ಷ



ಕೋವಿಡ್ ನಂತರ ಡಿಜಿಟಲ್ ಸಾಧನಗಳ ಮೇಲಿನ ಅವಲಂಬನೆಯು ಮಕ್ಕಳಲ್ಲೂ ಹೆಚ್ಚಾಗಿದೆ. ಇದರಿಂದ ಚಿಕ್ಕ ವಯಸ್ಸಿನಲ್ಲೇ ನೇತ್ರ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ

ಡಾ. ನಾಗರಾಜು ಜಿ., ಮಿಂಟೊ ಕಣ್ಣಿನ ಆಸ್ಪತ್ರೆ ನಿಕಟಪೂರ್ವ ನಿರ್ದೇಶಕ

ಡೆಂಗಿ: 2 ಸಾವಿರ ದಾಟಿದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆ ಪ್ರಕಾರ, ಬಿಬಿಎಂಪಿ ವ್ಯಾಪ್ತಿಯಲ್ಲಿ ಕಳೆದ ಒಂದು ತಿಂಗಳ ಅವಧಿಯಲ್ಲಿ ನಾಲ್ಕು ನೂರಕ್ಕೂ ಅಧಿಕ ಡೆಂಗಿ ಪ್ರಕರಣಗಳು ವರದಿಯಾಗಿದ್ದು, ಈ ವರ್ಷ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ ಎರಡು ಸಾವಿರದ ಗಡಿ (2,055) ದಾಟಿದೆ.

ಹಗಲಿನಲ್ಲಿ ಕಚ್ಚುವ ಈಡೀಸ್ ಈಜಿಪ್ಟಿ ಸೊಳ್ಳೆಗಳಿಂದ ಡೆಂಗಿ ಜ್ವರ ಹರಡುತ್ತದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 8,281 ಡೆಂಗಿ ಶಂಕಿತರನ್ನು ಈವರೆಗೆ ಗುರುತಿಸಲಾಗಿದ್ದು, ಅವರಲ್ಲಿ 5,958 ಮಂದಿಯ ರಕ್ತದ ಮಾದರಿಯನ್ನು ಪರೀಕ್ಷೆ ಮಾಡಲಾಗಿದೆ. ಬಿಬಿಎಂಪಿ ಹೊರತುಪಡಿಸಿ, ರಾಜ್ಯದ ಎಲ್ಲ ಜಿಲ್ಲೆಗಳಿಂದ 1,866 ಡೆಂಗಿ ಪ್ರಕರಣಗಳು ವರದಿಯಾಗಿವೆ.

ಕಳೆದ ವರ್ಷ ರಾಜ್ಯದಲ್ಲಿ 32 ಸಾವಿರಕ್ಕೂ ಅಧಿಕ ಡೆಂಗಿ ಪ್ರಕರಣಗಳು ವರದಿಯಾಗಿದ್ದವು. ಈ ಪ್ರಕರಣಗಳಲ್ಲಿ ಅರ್ಧದಷ್ಟು (15,282) ಬಿಬಿಎಂಪಿ ವ್ಯಾಪ್ತಿಯಲ್ಲಿಯೇ ಪತ್ತೆಯಾಗಿದ್ದವು. ಡೆಂಗಿ ಜ್ವರದ ತೀವ್ರತೆಗೆ ಮೂವರು ಮೃತಪಟ್ಟಿದ್ದರು. ಈ ವರ್ಷ ಈವರೆಗೆ ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ.

ಬಿಐಸಿಯಲ್ಲಿ ಪೂಜಾ ಕುಣಿತ ಪ್ರದರ್ಶನ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರವು (ಬಿಐಸಿ) ಇದೇ ಶನಿವಾರ (ಆ.23) ಬೆಳಿಗ್ಗೆ 11 ಗಂಟೆಗೆ ಪೂಜಾ ಕುಣಿತ ಪ್ರದರ್ಶನ ಹಮ್ಮಿಕೊಂಡಿದೆ.

ಪೂಜಾ ಕುಣಿತ

ಮಂಡ್ಯದ ಶ್ರೀ ವಿನಾಯಕ ಯುವಕರ ಕಲಾ ಬಳಗ ಈ ಜಾನಪದ ನೃತ್ಯ ಪ್ರದರ್ಶಿಸಲಿದೆ. ಇದು ‘ಬಿಐಸಿ ಜಾನಪದ’ ಸರಣಿಯ ನಾಲ್ಕನೆ ಕಾರ್ಯಕ್ರಮವಾಗಿದ್ದು, ‘ತ್ವರಿತ ಆರ್ಟ್ಸ್ ಕಲೆಕ್ಟಿವ್ ಇಂಡಿಯಾ’ದ ಸಹಯೋಗವಿದೆ. ಜಾನಪದ ಕಲಾವಿದ ಕೆ.ಬಿ. ಸ್ವಾಮಿ ನೇತೃತ್ವದಲ್ಲಿ ಕಲಾವಿದರ ತಂಡವು ಪೂಜಾ ಕುಣಿತವನ್ನು ಪ್ರಸ್ತುತಪಡಿಸಲಿದೆ.

ಈ ಜಾನಪದ ಕಲಾ ಪ್ರಕಾರವು ಭಕ್ತಿ ಮತ್ತು ಧಾರ್ಮಿಕ ಆಚರಣೆಗಳ ಸಂಗಮವಾಗಿದೆ. ಈ ನೃತ್ಯದಲ್ಲಿ ಭಕ್ತಿಯ ಜತೆಗೆ ಉತ್ಸಾಹವನ್ನೂ ಕಾಣಬಹುದು. ಪ್ರದರ್ಶಕರು ತಲೆಯ ಮೇಲೆ ದೇವರ ವಿಗ್ರಹಗಳನ್ನು ಹೊತ್ತು, ತಮಟೆ, ನಗಾರಿ, ಹರೆಗಳ ನಾದಕ್ಕೆ ತಕ್ಕಂತೆ ಕುಣಿಯುತ್ತಾರೆ. 60 ನಿಮಿಷಗಳ ಈ ಪ್ರದರ್ಶನವು ಪ್ರೇಕ್ಷಕರಿಗೆ ವಿಶಿಷ್ಟ ಅನುಭವ ಒದಗಿಸಲಿದೆ. ಪ್ರವೇಶ ಉಚಿತ ಇರಲಿದ್ದು, ಮೊದಲು ಬಂದವರಿಗೆ ಆಸನಗಳು ಲಭ್ಯ ಎಂದು ಪ್ರಕಟಣೆ ತಿಳಿಸಿದೆ.

ಮಣಿಪಾಲ್ ಆಸ್ಪತ್ರೆ: ಉಚಿತ ಶಸ್ತ್ರಚಿಕಿತ್ಸೆ

ಬೆಂಗಳೂರು: ಕನಕಪುರ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಯು ‘ನಮ್ಮ ಕೇರ್ ನಿಮ್ಮ ಮಣಿಪಾಲ್’ ಸಮುದಾಯ ಆರೋಗ್ಯ ಕಾರ್ಯಕ್ರಮದಡಿ ಹಮ್ಮಿಕೊಂಡಿರುವ ಉಚಿತ ಶಸ್ತ್ರಚಿಕಿತ್ಸೆಗೆ ಬುಧವಾರ ಚಾಲನೆ ನೀಡಲಾಯಿತು.

ಮಣಿಪಾಲ್ ಫೌಂಡೇಷನ್ ಸಹಯೋಗದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸುತ್ತಮುತ್ತಲಿನ 30 ಅಪಾರ್ಟ್‌ಮೆಂಟ್‌ಗಳ ಸಂಘದ ಅಧ್ಯಕ್ಷರು ಈ ಕಾರ್ಯಕ್ರಮಕ್ಕೆ ಕೈ ಜೋಡಿಸಿದ್ದು, ಇವರು ಶಿಫಾರಸು ಮಾಡುವ ಹತ್ತು ಬಡ ಸಿಬ್ಬಂದಿಗೆ ಉಚಿತ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ. ‘ಸಮುದಾಯದ ನಂಬಿಕೆಯನ್ನು ಗೌರವಿಸುವುದು ನಮ್ಮ ಧ್ಯೇಯವಾಗಿದೆ’ ಎಂದು ಮಣಿಪಾಲ್ ಆಸ್ಪತ್ರೆಗಳ ಸಮೂಹದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಕಾರ್ತಿಕ್ ರಾಜಗೋಪಾಲ್ ತಿಳಿಸಿದರು.

ವಿಧಾನಸಭೆ ಕಲಾಪ ವೀಕ್ಷಿಸಲು ಬಂದಿದ್ದ ‘ದಿ ಆಶ್ರಮ ಶಾಲೆ’ ಮಕ್ಕಳ ಜತೆ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ

‘ದಿ ಆಶ್ರಮ ಶಾಲೆ’ ಮಕ್ಕಳ ಜ್ಞಾನಕ್ಕೆ ತಲೆದೂಗಿದ ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಧಿವೇಶನ ವೀಕ್ಷಿಸಲು ಬಂದಿದ್ದ ‘ದಿ ಆಶ್ರಮ ಶಾಲೆಯ’ ಮಕ್ಕಳ ಜತೆ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಗುರುವಾರ ಸಂವಾದ ನಡೆಸಿದರು.

‘ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್’ ಪತ್ರಿಕೆಗಳ ಸ್ಥಾಪಕರಾದ ಕೆ.ಎನ್. ಗುರುಸ್ವಾಮಿ ಅವರು ಸ್ಥಾಪಿಸಿದ ‘ದಿ ಆಶ್ರಮ ಶಾಲೆ’ಯ ಮಕ್ಕಳ ಜ್ಞಾನಾಸಕ್ತಿ, ಕುತೂಹಲ, ಶಿಕ್ಷಣದ ಭವಿಷ್ಯದ ಕುರಿತು ಉತ್ತಮ ಚಿಂತನೆಯನ್ನು ಮಕ್ಕಳು ಹೊಂದಿದ್ದಾರೆ. ಅವರ ಪ್ರಶ್ನಿಸುವ ಮನೋಭಾವ ಇಷ್ಟವಾಯಿತು ಎಂದು ಮಧು ಬಂಗಾರಪ್ಪ ಹೇಳಿದರು.

‘ಶಿಕ್ಷಣ ಕ್ಷೇತ್ರದ ಸುಧಾರಣೆ, ಶಾಲಾ ಶಿಕ್ಷಣ ಇಲಾಖೆಯು ಎಸ್‌ಎಸ್‌ಎಲ್‌ಸಿ, ಪಿಯುಗೆ ರೂಪಿಸಿದ ಮೂರು ಪರೀಕ್ಷಾ ಪದ್ಧತಿ ಸೇರಿದಂತೆ ಹಲವು ಶೈಕ್ಷಣಿಕ ವಿಚಾರಗಳನ್ನು ಮಕ್ಕಳ ಜತೆ ಹಂಚಿಕೊಳ್ಳಲಾಯಿತು.

ಭವಿಷ್ಯದ ಶಿಕ್ಷಣ ಕ್ಷೇತ್ರದ ಪ್ರಗತಿಯಲ್ಲಿ ಸಹಭಾಗಿಗಳಾಗುವಂತೆ ಅವರನ್ನು ಪ್ರೋತ್ಸಾಹಿಸಲಾಯಿತು’ ಎಂದು ಮಧು ಬಂಗಾರಪ್ಪ ಹೇಳಿದರು.

ಒಳಮೀಸಲಾತಿ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರ ಕಟೌಟ್ ಗೆ ಹೆಚ್.ಆಂಜನೇಯ ಅವರ ನೇತೃತ್ವದಲ್ಲಿ ಮಾದಿಗ ಸಮುದಾಯದಿಂದ ಹೂವಿನ ಹಾರ ಹಾಗೂ ಹಾಲಿನ ಅಭಿಷೇಕ ಮಾಡಲಾಯಿತು

ಟರ್ಫ್ ಕ್ಲಬ್ : ಐವರು ಅಬಕಾರಿ ಅಧಿಕಾರಿಗಳ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್‌ನ ಸಿಎಲ್–4 ಪರವಾನಗಿಗೆ ಅನುಮೋದನೆ ನೀಡುವಲ್ಲಿ ಅನಗತ್ಯ ವಿಳಂಬ ಮಾಡಿದ್ದ ಅಬಕಾರಿ ಇಲಾಖೆಯ ಐವರು ಅಧಿಕಾರಿಗಳನ್ನು ಆರ್ಥಿಕ ಇಲಾಖೆ ಅಮಾನತು ಮಾಡಿದೆ.

ಬೆಂಗಳೂರು ಟರ್ಫ್ ಕ್ಲಬ್, ಕ್ಲಬ್‌ನ ವಿನ್ಯಾಸ ಮತ್ತು ಸವಲತ್ತುಗಳಲ್ಲಿ ಮಾರ್ಪಾಡು ಮಾಡಿ ನೀಲನಕ್ಷೆಯ ಅನುಮೋದನೆಗಾಗಿ ಅರ್ಜಿ ಸಲ್ಲಿಸಿತ್ತು. ಆದರೆ ಸಂಬಂಧಿತ ಅಧಿಕಾರಿಗಳು ಸಕಾರಣವನ್ನು ನೀಡದೆ ಅನುಮೋದನೆಯನ್ನು ತಡೆ ಹಿಡಿದಿದ್ದರು. ಕಚೇರಿಗೆ ಹಲವು ಬಾರಿ ತೆರಳಿದ್ದರೂ, ಯಾವುದೇ ಪ್ರಗತಿ ಆಗಿರಲಿಲ್ಲ ಎಂದು ಮೂಲಗಳು ಖಚಿತಪಡಿಸಿವೆ.

ಈ ಸಂಬಂಧ ಅಬಕಾರಿ ಇಲಾಖೆಯ ಆಯುಕ್ತರಿಗೆ ದೂರು ನೀಡಲಾಗಿತ್ತು. ಇಲಾಖೆಯು ನಡೆಸಿದ ಆಂತರಿಕ ತನಿಖೆಯಲ್ಲಿ, ಈ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ವಿಳಂಬ ಮಾಡಿದ್ದಾರೆ ಎಂಬುದು ಗೊತ್ತಾಗಿತ್ತು. ಅವರನ್ನು ಅಮಾನತು ಮಾಡುವಂತೆ ಆಯುಕ್ತರು, ಆರ್ಥಿಕ ಇಲಾಖೆಗೆ ವರದಿ ಸಲ್ಲಿಸಿದ್ದರು. ಅದರಂತೆ ಬುಧವಾರ ಐವರು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.

ಬೆಂಗಳೂರು ನಗರ ಉಪವಿಭಾಗ–4ರ ಉಪ ಆಯುಕ್ತ ಶಿವಲಿಂಗಪ್ಪ ಬನಹಟ್ಟಿ, ಅಬಕಾರಿ ಸೂಪರಿಂಟೆಂಡೆಂಟ್ ಸೈಯದ್ ಶಹಾಬುದ್ದೀನ್ ಬೊಕಾರಿ, ಬೆಂಗಳೂರು ಉಪವಿಭಾಗ–7ರ ಡೆಪ್ಯುಟಿ ಸೂಪರಿಂಟೆಂಡೆಂಟ್ ಅಬೂಬಕರ್ ಮುಜಾವರ್, ಸಂಪಂಗಿರಾಮನಗರ ವಲಯದ ಅಬಕಾರಿ ಇನ್‌ಸ್ಪೆಕ್ಟರ್ ಎಲ್. ಮಧುಸೂದನ್ ಮತ್ತು ಉಪ ಆಯುಕ್ತರ ಕಚೇರಿಯ ಪ್ರಥಮ ದರ್ಜೆ ಸಹಾಯಕಿ ಸಿ.ಶೀತಲ್ ಅವರನ್ನು ಅಮಾನತು ಮಾಡಲಾಗಿದೆ.

ಸರ್ಕಾರಿ ಶಾಲೆ ಉಳಿವಿಗೆ 50 ಲಕ್ಷ ಸಹಿ

ಶಿಕ್ಷಕರ ಹಾಗೂ ಮೂಲಸೌಕರ್ಯ ಕೊರತೆ ನೀಗಿಸಿ: ಮುರಿಗೆಪ್ಪ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳನ್ನು ಮುಚ್ಚಿ ಖಾಸಗಿ ಶಾಲೆಗಳಿಗೆ ಮಣೆ ಹಾಕುವ ಮೂಲಕ ಬಡಮಕ್ಕಳ ಭವಿಷ್ಯವನ್ನು ಹಾಳುಗೆಡವುತ್ತಿರುವ ಸರ್ಕಾರವು, ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಎ.ಮುರಿಗೆಪ್ಪ ಆರೋಪಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಸರ್ಕಾರಿ ಶಾಲೆಗಳನ್ನು ರಕ್ಷಿಸಿ, ಬಲಪಡಿಸಲು ಆಗ್ರಹಿಸಿ ಎಐಡಿಎಸ್‌ಒ ನೇತೃತ್ವದಲ್ಲಿ ನಡೆದ 50 ಲಕ್ಷ ಸಹಿ ಸಂಗ್ರಹ ಅಭಿಯಾನದ ಸಮಾರೋಪದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆ ಎಂಬ ನೆಪದಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚಿದರೆ, ಸಾಮಾನ್ಯ ಜನರು ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಸಾಧ್ಯವಿಲ್ಲ. ಶಾಲೆಗಳನ್ನು ಮುಚ್ಚದೇ, ಸರ್ಕಾರಿ ಶಾಲೆಗಳು ಎದುರಿಸುತ್ತಿರುವ ಶಿಕ್ಷಕರ ಹಾಗೂ ಮೂಲಸೌಕರ್ಯಗಳ ಕೊರತೆ ನೀಗಿಸಿ, ದಾಖಲಾತಿ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಎಐಡಿಎಸ್‌ಒ ರಾಜ್ಯ ಘಟಕದ ಕಾರ್ಯದರ್ಶಿ ಅಜಯ್ ಕಾಮತ್ ಮಾತನಾಡಿ, 'ದೇಶದ ಎಲ್ಲ ಮಕ್ಕಳಿಗೂ ಶಿಕ್ಷಣ ದೊರಕಬೇಕೆಂದು ಶ್ರಮಿಸಿದ ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಫುಲೆ, ಕುದ್ಮುಲ್ ರಂಗರಾವ್ ಹಾಗೂ ಈಶ್ವರ ಚಂದ್ರ ವಿದ್ಯಾಸಾಗರ ಅವರ ಚಿಂತನೆಗಳೇ ಈ ಹೋರಾಟದ ಪ್ರೇರಣೆ ಮತ್ತು ಶಕ್ತಿ. ಸರ್ಕಾರಿ ಶಾಲೆಗಳನ್ನು ಬಲಪಡಿಸುವ ಹೋರಾಟಕ್ಕೆ ವಿದ್ಯಾರ್ಥಿ ಸಮೂಹ ಮುಂದಾಗಬೇಕು' ಎಂದು ಕರೆ ನೀಡಿದರು.

ಎಐಡಿಎಸ್‌ಒ ರಾಜ್ಯ ಘಟಕದ ಅಧ್ಯಕ್ಷೆ ಕೆ.ಎಸ್. ಅಶ್ವಿನಿ ಮಾತನಾಡಿ, 'ಹಬ್ ಅಂಡ್ ಸ್ಪೋಕ್' ಹೆಸರಿನಲ್ಲಿ ಶಾಲೆಗಳನ್ನು ವಿಲೀನಗೊಳಿಸುವ ಆದೇಶವನ್ನು ಅಧಿಕೃತವಾಗಿ ವಾಪಸು ಪಡೆಯಬೇಕೆಂದು ಸರ್ಕಾರವನ್ನು ಆಗ್ರಹಿಸಿದರು.

ಕೇಂದ್ರ ಕೌನ್ಸಿಲ್ ಕಾರ್ಯದರ್ಶಿ ಶಿಬಾಶಿಶ್ ಪ್ರಹರಾಜ್ ಮಾತನಾಡಿ, 'ದೇಶದಾದ್ಯಂತ ಕನಿಷ್ಠ ಮೂಲಸೌಕರ್ಯ ಹಾಗೂ ಶಿಕ್ಷಕರ ಕೊರತೆಯಿಂದಾಗಿ ಸಾವಿರಾರು ಸರ್ಕಾರಿ ಶಿಕ್ಷಣ ಸಂಸ್ಥೆಗಳು ನಲುಗುತ್ತಿವೆ' ಎಂದರು.

ಎಐಡಿಎಸ್‌ಒ ತಮಿಳುನಾಡು ರಾಜ್ಯ ಘಟಕದ ಅಧ್ಯಕ್ಷ ಸೆಬಾಸ್ಟಿಯನ್ ಮಾತನಾಡಿ, 'ಶಿಕ್ಷಣದಲ್ಲಿ ವೈಜ್ಞಾನಿಕ ಚಿಂತನೆಯನ್ನು ಕುಂಠಿತಗೊಳಿಸಿ, ವಿದ್ಯಾರ್ಥಿಗಳಲ್ಲಿ ಪ್ರಶ್ನೆ ಮಾಡುವ ಮನೋಭಾವ ಇಲ್ಲದಂತೆ ಮಾಡಲಾಗುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶಿಕ್ಷಣ ಇಲಾಖೆಯ ನಿರ್ದೇಶಕಿ (ಪ್ರಾಥಮಿಕ ಶಿಕ್ಷಣ) ಅನಿತಾ ನಜಾರೆ ಅವರಿಗೆ ಮನವಿ ಸಲ್ಲಿಸಲಾಯಿತು. ರಾಜ್ಯದ 50 ಲಕ್ಷ ಜನರ ಸಹಿ ಸಂಗ್ರಹದ ಮನವಿಯನ್ನು ಅವರು ಸ್ವೀಕರಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ ಸದಸ್ಯರು ಮತ್ತು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು

ಪ್ರಜಾವಾಣಿ ಚಿತ್ರ

ಮೀಸಲಾತಿ ಪ್ರತಿಭಟನೆ

ಪ್ರಜಾವಾಣಿ ಚಿತ್ರ

ಪರಿಶಿಷ್ಟ ಜಾತಿಯ 59 ಸೂಕ್ಷ್ಮ, ಅತಿ ಸೂಕ್ಷ್ಮ ಅಲೆಮಾರಿ ಸಮುದಾಯಗಳ ಒಳಮೀಸಲಾತಿ ವಂಚಿತ ಹೋರಾಟ ಸಮಿತಿ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು

22ರವರೆಗೆ ಪುಸ್ತಕ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಗ್ರಂಥಾಲಯ ಇಲಾಖೆಯ ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಮತ್ತು ಆಯ್ಕೆಯಾಗದ 2022ರ ಪುಸ್ತಕಗಳ ಪ್ರದರ್ಶನವನ್ನು ವಿಜಯನಗರದ ಎಂ.ಸಿ. ಬಡಾವಣೆಯ ಡಾ. ವಿಷ್ಣುವರ್ಧನ ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನ ಕೇಂದ್ರದಲ್ಲಿ ಇದೇ 22ವರೆಗೆ ಹಮ್ಮಿಕೊಂಡಿದೆ.

ಈ ಪ್ರದರ್ಶನಕ್ಕೆ ಬುಧವಾರ ಚಾಲನೆ ದೊರೆತಿದ್ದು, ಗುರುವಾರ ಹಾಗೂ ಶುಕ್ರವಾರವೂ ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ಪ್ರದರ್ಶನ ನಡೆಯಲಿದೆ.

ಆಯ್ಕೆಗಾಗಿ ಪುಸ್ತಕ ಸಲ್ಲಿಸಿದ್ದ ಲೇಖಕರು, ಪ್ರಕಾಶಕರು ಮತ್ತು ಮಾರಾಟಗಾರರು ಆಕ್ಷೇಪಗಳಿದ್ದಲ್ಲಿ ಇದೇ 30ರ ಸಂಜೆ 5.30ರೊಳಗೆ ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯಗೋಪುರ, 4ನೇ ಮಹಡಿ, ಅಂಬೇಡ್ಕರ್ ವೀಧಿ, ಬೆಂಗಳೂರು-560001 ಈ ವಿಳಾಸಕ್ಕೆ ಲಿಖಿತ ಮನವಿ ಸಲ್ಲಿಸಬಹುದು. ನಂತರ ಬಂದ ಮನವಿಗಳನ್ನು ಪರಿಗಣಿಸುವುದಿಲ್ಲ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಫಿಟ್ ಫ್ಯೂಷನ್ ಫೆಸ್ಟ್‌ನಲ್ಲಿ ಭಾಗಿ

ಬೆಂಗಳೂರು: ನಗರದ ಫಿನಿಕ್ಸ್ ಮಾಲ್ ಆಫ್ ಏಷ್ಯಾದಲ್ಲಿ ನಡೆದ ಫಿಟ್ ಫ್ಯೂಷನ್ ಫೆಸ್ಟ್ ಆ್ಯಂಡ್ ಕಾಫಿ ಉತ್ಸವದಲ್ಲಿ ಸುಮಾರು ಎರಡು ಸಾವಿರ ಮಂದಿ ಉತ್ಸಾಹದಿಂದ ಭಾಗವಹಿಸಿದ್ದರು.

ಉತ್ಸವವು 3ಕೆ ಮತ್ತು 5ಕೆ ಓಟಗಳೊಂದಿಗೆ ಪ್ರಾರಂಭವಾಯಿತು. ಇದಾದ ಬಳಿಕ ನಡೆದ ಫಿಟ್‌ನೆಸ್‌ಗೆ ಸಂಬಂಧಿಸಿದ ಸ್ಪರ್ಧೆಗಳಲ್ಲಿ ಯುವಕರು ಅಧಿಕ ಸಂಖ್ಯೆಯಲ್ಲಿ ಭಾಗಿಯಾಗಿದ್ದರು.

ಕಾರ್ಯಕ್ರಮವು ಫಿಟ್‌ನೆಸ್ ಮತ್ತು ಕಾಫಿ ಸಂಸ್ಕೃತಿಯ ಸಮ್ಮಿಲನವನ್ನು ಸೃಷ್ಟಿಸಿತು. ಅಲ್ಲದೆ ನಗರದ ಯುವ ಸಮುದಾಯದ ಜೀವನಶೈಲಿ ಹೇಗಿರುತ್ತದೆ ಎಂಬುದನ್ನು ಉತ್ಸವದಲ್ಲಿ ಬಿಂಬಿಸಲಾಯಿತು.

ಫಿಟ್‌ನೆಸ್, ಕಾಫಿ ಮತ್ತು ಸಂಗೀತದ ಸಮ್ಮಿಲನದೊಂದಿಗೆ ಯುವಕರನ್ನು ಒಟ್ಟುಗೂಡಿಸಿದ ಈ ಉತ್ಸವ, ಅವರಲ್ಲಿ ಹೊಸ ಚೈತನ್ಯ ತುಂಬಿತು. ಇದೊಂದು ಅರ್ಥಪೂರ್ಣ ಕಾರ್ಯಕ್ರಮವಾಗಿದ್ದು ಯುವಕರು ಕೇಂದ್ರ ಬಿಂದುವಾಗಿದ್ದರು.

ವಿಎಸ್‌ಎಸ್‌ಎನ್ ವ್ಯವಸ್ಥಾಪಕ ಆತ್ಮಹತ್ಯೆ

ಆನೇಕಲ್: ತಾಲ್ಲೂಕಿನ ಜಿಗಣಿ ಪೊಲೀಸ್ ಠಾಣೆ ವ್ಯಾಪ್ತಿಯ ಹಾರಗದ್ದೆ ವಿಎಸ್‌ಎಸ್‌ಎನ್ ಬ್ಯಾಂಕ್‌ನ ವ್ಯವಸ್ಥಾಪಕರೊಬ್ಬರು ಬುಧವಾರ ಮರಣಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೃತಪಟ್ಟ ವ್ಯಕ್ತಿಯನ್ನು ಪ್ರಕಾಶ್ ಎಂದು ಗುರುತಿಸಲಾಗಿದೆ. ಹಾರಗದ್ದೆ ವಿಎಸ್‌ಎಸ್‌ಎನ್‌ನಲ್ಲಿ ಪ್ರಕಾಶ್ ಹಲವು ವರ್ಷಗಳಿಂದ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಬ್ಯಾಂಕ್‌ನ ಸದಸ್ಯರು ಸೇರಿದಂತೆ ಕೆಲ ಪ್ರಭಾವಿಗಳು ಬೆದರಿಸಿ ಹಣ ಪಡೆದಿದ್ದ ಕಾರಣಕ್ಕೆ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ.

ಪ್ರಕಾಶ್, ತಮ್ಮಿಂದ ಹಣ ಪಡೆದಿರುವವರ ವಿವರ ಮತ್ತು ಮೊತ್ತವನ್ನು ಮರಣಪತ್ರದಲ್ಲಿ ಬರೆದಿದ್ದಾರೆ ಎನ್ನಲಾಗಿದೆ. ಬುಧವಾರ ಮಧ್ಯಾಹ್ನ ಮನೆಯಲ್ಲಿ ಯಾರೂ ಇಲ್ಲದಿದ್ದಾಗ ಪ್ರಕಾಶ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

PUBLIC NOTICE

Our clients are desirous of purchasing all that piece and parcel of agricultural land bearing Survey Nos.46/15 situated at Sanna Ammanikere Village, Kasaba Hobli, Devanahalli Taluk, Bangalore Rural District, morefully described in the Schedule hereunder ("Schedule Property"), from its present owner whose nameis set out against their respective item("Owner").

Any person or persons asserting any right, title, interest or claim in the Schedule Property or any part thereof, in any manner whatsoever or having any claim against the Schedule Property or the documents thereof or against the Owner or objecting to such transaction with our clients, should write to the undersigned within fifteen(15) days from the date of issuance of this notice with all documentary proof on which they are basing and asserting their rights with regard to Schedule Property or any part thereof, after which period our clients shall proceed on the basis that there are no claims of whatsoever nature with regard to the Schedule Property.

Further, D.V.Venkatesh also known as D.V.Venkateshappa,son of late ChikkaVenkataswamy, aged about 55 years, residing at House No.265, "AbhayNivas", Devasandra, Krishnarajapura, Bengaluru-560036 has represented that he has lost / misplaced five Original Documents of title with regard to all that piece and parcel of agricultural land bearing Survey No.69/1A (earlier being portion of Survey No.69/1), situated at Sanne Amanikere Village, Kasaba Hobli, Devanahalli Taluk, Bangalore Rural District, measuring in all about 27 Guntas, there being no kharab, listed in table below. In this regard complaints have been lodged with Bangalore Rural Police Unit, on 15.01.2025 & 17.01.2025, intimating the loss of said documents and seeking for return of the same. In the event of same being traced.

Particulars of lost / misplaced documents:

Sl. Nos	Description of the Lost/Misplaced Original Documents
1	Sale Deed dated 18.07.1968 executed by VenkataSubbaiah son of late Nanjundaiah (for self and as father and natural guardian of his minor children Padmavathi, Shailaja, and Venkatesh) and V.Vishwanathson of N.VenkataSubbaiah in favour of Pillappa and Muthinappa, both sons of Konnappa (registered as Document No.1392/68-69 in Book-I, Volume 1011 at pages 53 to 56 in office of the Sub-Registrar, Devanahalli) with regard to portion of Survey No.69 measuring 01 Acre 29 Guntas (from an out of 03 Acres 24 Guntas);
2	Memorandum Recollecting Panchayat Settlement dated 23.03.1973, effected amongst Pillappa and Muthinappa both sons of Konnappa with regard to portions of Survey No.69 measuring in all about 01 Acre 29 Guntas;
3	Will and Last Testament dated 18.10.1989 executed by Pillappa son of late Konnappa (registered on 27.10.1989 as Document No.54/1989-90 in Book-III, Volume 32 at pages 55 to 62, in office of the Sub-Registrar, Devanahalli) with regard to portion of Survey No.69 measuring about 27 Guntas along with other lands;
4	Death Certificate of Pillappa son of Konnappa, issued by the concerned medical officer;
5	Sale Deed dated 17.08.2005 executed by P.Chinnappa son of late Pillappa, Bhagyamma first wife of Chinnappa, Murali Mohan son of P.Chinnappa and Gowramma second wife of Chinnappa in favour of D.V.Venkateshappa son of late Venkataswamy (registered on 18.08.2005 as Document No. DNH-1-02332/2005-06 in Book-I, stored in CD No.DNHD57 in office of the Sub-Registrar, Devanahalli) with regard to Survey No.69/1A measuring about 27 Guntas;

If any person/s is/are in possession of these documents either with or without any right over the properties covered by the said documents should deposit the said documents or copies with the undersigned within 15 days from the date of issuance of this notice with necessary documentary proof for asserting their rights, failing which our clients shall consider that there are no claims whatsoever.

SCHEDULE

All that piece and parcel of agricultural land, situated at Sanna Ammanikere Village, Kasaba Hobli, Devanahalli Taluk, Bangalore Rural Districtmeasuring about 07 Guntas detailed in the manner set out in the table herein below: -

Item No.	Survey No.	Name of the Owner	Actual Extent		Kharab		Boundaries			
			A	G	A	G	East	West	North	South
1.	46/15	Anjan Kumar. M s/o Muniraja H.A and M.N. Radha wife of Venkateshappa K.SO	0	7	0	0	Sy No. 48/3	Sy No. 46/7	Sy No. 46/16	Kaluve

Approved by 1) Anjan Kumar

(Sunitha.R) Advocate
CMS Indus Law, #101, 1st Floor,Embassy Classic,
#11, Vittal Mallya Road, Bangalore-560 001 Phone: 91-80-4072 6600

AUTHORISED DEALERSHIPS: BANGALORE: Koramangala: ORION SUZUKI, Ph: 080-25524747, 9535081055, **JP NAGAR:** ORION SUZUKI, Ph: 96060 37441.**Rajaji Nagar:** SAPTAGIRI SUZUKI, Ph: 7066016611/ 9916886525, **Mathikere:** SAPTAGIRI SUZUKI, Ph: 9113238844, **Basaweshwara Nagar:** SAPTAGIRI SUZUKI, Ph: 8722037107, **Sheshadripuram:** SAPTAGIRI SUZUKI, Ph: 9741921526, **Kottigepalya:** SAPTAGIRI SUZUKI, Ph: 7899739267, **Peenya, Tumkur Road:** SAPTAGIRI SUZUKI, Ph: 9986466659, **Nelamangala:** SAPTAGIRI SUZUKI, Ph: 9591892296, **Vasanthnagar:** VALUE SUZUKI, Ph: 9845906084/ 9108258679, **Yelhanka:** HONNASIRI SUZUKI, Ph: 9945004047, **Basavanagudi:** ADVAITH SUZUKI, Ph: 9880741841, **Kathriguppe:** APPLE SUZUKI, Ph: 080-26697070/ 8080, 8884446504/08/02, **BTM Layout:** APPLE SUZUKI, Ph: 8884446512, **Kanakapura Road:** APPLE SUZUKI, Ph: 8884446503, **RR Nagar:** APPLE SUZUKI, Ph: 8884446502, **Old Airport Road (Domlur):** ARYAN SUZUKI, Ph: 9739969996, **Whitefield:** ARYAN SUZUKI, Ph: 9739969995, **K. R. Puram:** ARYAN SUZUKI,Ph: 9739949998, **Mahadevpura:** ARYAN SUZUKI, Ph: 9739929996, **Hoodi:**ARYAN SUZUKI – Bike Zone, Ph: 08047470000/8073783992, **KH Road:** AVANISH SUZUKI -9591931113, **KH Road:** AVANISH SUZUKI BIKEZONE-9900879000, **Vijaynagar:** AVANISH SUZUKI, Ph: 8971900111, 8197800222, **Kengeri:** AVANISH SUZUKI, Ph: 8197900111, 9108945333, **Nagarbhavi:** AVANISH SUZUKI, Ph: 9606988444/ 9148233644, **Banaswadi:** BHOJANNA SUZUKI, Ph: 9148656565, **Bellary Road:** MEGHAVATH SUZUKI, Ph: 9632899459, **M G Road:** MEGHDOOTH SUZUKI, Ph: 9513533384, **HBR Layout:** MEGHDOOTH SUZUKI: Ph: 9513533374., **Hosur Road:** NINESTAR SUZUKI, Ph: 9019023333, **HSR Layout:** NINESTAR SUZUKI, Ph: 9019023333, **Bannerghatta Road:** NINESTAR SUZUKI, Ph: 9019023333, **HOSAKOTE:** DAIVIK SUZUKI, 9449046049, 7899366585

ಬಿಗ್‌ಬಾಸ್ ವಿಜೇತ ನಟ ಶೈನ್ ಶೆಟ್ಟಿ ಹಾಗೂ ‘ಇಬ್ಬನಿ ತಬ್ಬಿದ ಇಳೆಯಲಿ’ ಖ್ಯಾತಿಯ ನಟಿ ಅಂಕಿತಾ ಅಮರ್ ನಟನೆಯ ‘ಜಸ್ಟ್ ಮ್ಯಾರಿಡ್’ ಇಂದು (ಆ.22) ತೆರೆಕಂಡಿದೆ. ನಾಯಕ ನಟನಾಗಿ ಚೊಚ್ಚಲ ಹೆಜ್ಜೆ ಇಡುತ್ತಿರುವ ಶೈನ್ ಶೆಟ್ಟಿ ಹಲವು ಕನಸುಗಳನ್ನು ಕಟ್ಟಿಕೊಂಡವರು. ಸಿನಿಮಾ ಕ್ಷೇತ್ರದಲ್ಲೇ ತಮ್ಮ ಮುಂದಿನ ಪಯಣವನ್ನು ಮುಂದುವರಿಸಲು ನಿರ್ಧರಿಸಿರುವ ಅವರೊಂದಿಗೆ ಮಾತಿಗಿಳಿದಾಗ...

ಜಸ್ಟ್ ಮ್ಯಾರಿಡ್
ಅಂಕಿತಾ ಅಮರ್
ಶೈನ್ ಶೆಟ್ಟಿ

ಸಿನಿಮಾದಲ್ಲೇ ಶೈನ್ ಆಗುವೆ...

• ಅಭಿಲಾಷ್ ಪಿ.ಎಸ್.

• ಬಿಗ್‌ಬಾಸ್‌ನಿಂದ ಇಲ್ಲಿಯವರೆಗಿನ ಪಯಣ ಹೇಗಿತ್ತು?

ಕನ್ನಡ ಸಿನಿಮಾದಲ್ಲಿ ನಾಯಕನಾಗಿ ಇದು ನನ್ನ ಮೊದಲ ಹೆಜ್ಜೆ. ಬಿಗ್‌ಬಾಸ್ ವಿಜೇತನಾದ ಬೆನ್ನಲ್ಲೇ ಎರಡು ಒಳ್ಳೆಯ ಸಿನಿಮಾಗಳು ಬಂದಿದ್ದವು. ಆದರೆ ದುರದೃಷ್ಟವಶಾತ್ ಕೋವಿಡ್ ಬಂದು ಅವುಗಳು ಸೆಟ್ಟೇರಲೇ ಇಲ್ಲ. ಬಿಗ್‌ಬಾಸ್‌ನಿಂದ ಹೊರಬಂದಾಕ್ಷಣ ಒಂದಿಷ್ಟು ಸಿನಿಮಾಗಳ ಅವಕಾಶ ಸಿಗುವುದು ಸಾಮಾನ್ಯ. ನನಗೂ ಹೀಗೆ ಆಗಿತ್ತು. ಆದರೆ ಯಾವ ಪಾತ್ರಗಳೂ ನನ್ನನ್ನು ಸೆಳೆಯಲಿಲ್ಲ. ಬಿಗ್‌ಬಾಸ್‌ನಲ್ಲಿದ್ದ ಸಂದರ್ಭದಲ್ಲಿ ಸುದೀಪ್ ಅವರು ಹೇಳಿದ ಮಾತೊಂದನ್ನು ನೆನಪಿಸಿಕೊಳ್ಳುತ್ತೇನೆ. ‘ಬಿಗ್‌ಬಾಸ್ ಗೆಲುವು ಒಂದು ಬೆಟ್ಟ ಹತ್ತಿದಂತೆ’ ಎಂದು ಅವರು ಹೇಳಿದ್ದರು. ಒಂದು ಶಿಖರ ಹತ್ತುವುದು ಒಂದು ಸಾಧನೆ ಮಾಡಿದಂತೆ.

ಈಗಾಗಲೇ ಏರಿದ ಬೆಟ್ಟದಿಂದ ನೇರವಾಗಿ ಇನ್ನೊಂದು ಬೆಟ್ಟಕ್ಕೆ ಹಾರಲು ಸಾಧ್ಯವಿಲ್ಲವಲ್ಲ. ಒಂದು ಬೆಟ್ಟವನ್ನು ಇಳಿದು ಮತ್ತೊಂದು ಬೆಟ್ಟಕ್ಕೆ ಏರಲು ಪ್ರತಿಯೊಬ್ಬರೂ ಅವರದೇ ಆದ ಸಮಯ ತೆಗೆದುಕೊಳ್ಳುತ್ತಾರೆ. ನಾನು ಇದೀಗ ಸಿನಿಮಾವೆಂಬ ಇನ್ನೊಂದು ಬೆಟ್ಟ ಹತ್ತಲು ಮೊದಲ ಹೆಜ್ಜೆ ಇಟ್ಟಿದ್ದೇನೆ. ಹಲವು ಸಿನಿಮಾಗಳಲ್ಲಿ ಸಣ್ಣ ಪಾತ್ರಗಳಲ್ಲಿ ನಟಿಸಿದೆ. ‘ಕಾಂತಾರ’ದ ಪಾತ್ರ ಈ ನಿಟ್ಟಿನಲ್ಲಿ ನನಗೆ ಹೊಸ ತಿರುವು ನೀಡಿತು. ನನಗೆ ಆ ಸಿನಿಮಾದಲ್ಲಿ ಸಿಕ್ಕ ಪಾತ್ರದ ತೆರೆ ಅವಧಿ ಚಿಕ್ಕದಾಗಿದ್ದರೂ ಅದನ್ನು ನನ್ನ ನಟನೆಯ ಸಾಮರ್ಥ್ಯವನ್ನು ಪ್ರದರ್ಶಿಸಲು ಸಮರ್ಥವಾಗಿ ಬಳಸಿಕೊಂಡೆ.

ಈ ಎರಡನೇ ಬೆಟ್ಟ ಏರುವಾಗಲೂ ಹಲವು ಅಡೆತಡೆಗಳು ಎದುರಾಗಿವೆ. ಇವುಗಳನ್ನು ಎದುರಿಸಿ ಮುನ್ನಡೆಯಲು ಕೊಂಚ ಸಮಯ ಹಿಡಿಯಿತು. ಸಿನಿಮಾದಲ್ಲಿ ಇಲ್ಲಿಯವರೆಗೆ ಸಿಕ್ಕ ಅವಕಾಶಗಳೆಲ್ಲವೂ ಚೆನ್ನಾಗಿದ್ದವು. ನಿಧಾನವಾದರೂ ಅಚ್ಚುಕಟ್ಟಾಗಿ ನನ್ನ ಸಿನಿಪಯಣ ಸಾಗಿದೆ.

ಶೈನ್ ಮುಂದಿನ ಸಿನಿಮಾಗಳು..

ಮುಂದಿನ ಸೆ.12ಕ್ಕೆ ‘ನಿದ್ರಾದೇವಿ ನೆಕ್ಸ್ಟ್ ಡೋರ್’ ರಿಲೀಸ್ ಆಗುತ್ತಿದೆ. ಜೊತೆಗೆ ಮತ್ತೊಂದು ಕನ್ನಡ ಸಿನಿಮಾದ ಮಾತುಕತೆ ನಡೆಯುತ್ತಿದೆ. ಇದು ಶೀಘ್ರದಲ್ಲೇ ಘೋಷಣೆಯಾಗಲಿದೆ.

• ಉದ್ಯಮಿಯಾಗಿದ್ದವರು ‘ಗಲ್ಲಿ ಕಿಚನ್’ ಬಿಟ್ಟಿದ್ದು ಏಕೆ?

ಅದು ನನ್ನ ಆರು ವರ್ಷದ ಕೂಸಾಗಿತ್ತು. ಹೋಟೆಲ್ ಉದ್ಯಮ ಎನ್ನುವುದು ಸೇವಾಕ್ಷೇತ್ರ. ಸಿನಿಮಾದಲ್ಲೇ ಮುಂದಿನ ಹೆಜ್ಜೆಗಳನ್ನು ಇಡಲು ಇದು ಸೂಕ್ತ ಸಮಯ ಎಂದು ನನಗೆ ಅನಿಸಿತು. ಇಲ್ಲಿಗೆ ಹೆಜ್ಜೆ ಇಟ್ಟ ಮೇಲೆ ಜವಾಬ್ದಾರಿಯೂ ಹೆಚ್ಚುತ್ತದೆ. ಇದೀಗ ‘ಜಸ್ಟ್ ಮ್ಯಾರಿಡ್’ ಬಿಡುಗಡೆಯಾಗುತ್ತಿದೆ. ಸೆ.12ಕ್ಕೆ ‘ನಿದ್ರಾದೇವಿ ನೆಕ್ಸ್ಟ್ ಡೋರ್’ ತೆರೆಗೆ ಬರಲಿದೆ. ಹೀಗೆ ಸಿನಿಮಾದಲ್ಲೇ ಮುಂದುವರಿಯಲು ನಿರ್ಧರಿಸಿದ ಕಾರಣ ಗಲ್ಲಿ ಕಿಚನ್ ಮಾರಿದೆ. ನನ್ನಂತೆಯೇ ಆಸಕ್ತಿಯಿಂದ ಈ ಉದ್ಯಮವನ್ನು ನಡೆಸುವವರ ಕೈಗೆ ಅದನ್ನು ಕೊಟ್ಟಿದ್ದೇನೆ.

• ‘ಜಸ್ಟ್ ಮ್ಯಾರಿಡ್’ ಹೇಗೆ ಮೂಡಿಬಂದಿದೆ?

ಇಡೀ ಚಿತ್ರ ಬಹಳ ರಿಚ್ ಆಗಿ ಬಂದಿದೆ. ಟ್ರೇಲರ್‌ನಲ್ಲೇ ಇದಕ್ಕೆ ನಿಮಗೆ ಸಾಕ್ಷಿಯಿದೆ. ನಿರ್ದೇಶಕರಾದ ಬಾಬಿ ಅವರಿಗೆ ಅವರದ್ದೇ ಆದ ಯೋಚನೆಯಿತ್ತು. ಸಿನಿಮಾದೊಳಗೆ ಕುಟುಂಬವನ್ನು ಈ ರೀತಿಯೇ ರಿಚ್ ಆಗಿ ತೋರಿಸಬೇಕು ಎನ್ನುವ ಆಸೆ ಅವರಿಗಿತ್ತು. ಇದಕ್ಕೆ ತಕ್ಕ ಹಾಗೆ ಸಿನಿಮಾ ನಿರ್ಮಾಣಗೊಂಡಿದೆ. ಅಜನೀಶ್ ಅವರು ಸಂಗೀತದ ಕೆಲಸಗಳಲ್ಲಿ ತಲ್ಲೀನರಾಗಿದ್ದರು. ಹೀಗಾಗಿ ಬಾಬಿ ಅವರೇ ಇಡೀ ಸಿನಿಮಾವನ್ನು ಮುನ್ನಡೆಸಿದರು. ನಿರ್ಮಾಪಕನಾಗಿ ಸಿನಿಮಾಗೆ ಬೇಕಾದ ಎಲ್ಲವನ್ನೂ ಅಜನೀಶ್ ನೀಡಿದ್ದಾರೆ.

• ನಿಮ್ಮ ಪಾತ್ರದ ಬಗ್ಗೆ..

ನಾನು ‘ಸೂರ್ಯ’ ಎಂಬ ಪಾತ್ರದಲ್ಲಿ ನಟಿಸಿದ್ದು, ಅಂಕಿತಾ ‘ಸಹನ’ ಎಂಬ ಪಾತ್ರದಲ್ಲಿದ್ದಾರೆ. ಒಂದು ದೊಡ್ಡ ಕುಟುಂಬದಲ್ಲಿ ಒಬ್ಬನೇ ಮಗ ಇದ್ದಾಗ ಆತನಿಗೆ ಸಿಗುವ ಪ್ರೀತಿ ಬೆಟ್ಟದಷ್ಟಿರುತ್ತದೆ. ಇಂತಹ ಮಕ್ಕಳಿಗೆ ಜವಾಬ್ದಾರಿ ಕಮ್ಮಿ ಇರುತ್ತದೆ. ಬಹಳ ಸ್ವಾತಂತ್ರ್ಯ ಇವರಿಗೆ ದೊರಕಿರುತ್ತದೆ. ದುಡ್ಡಿಗೆ ಏನೂ ಬರವಿಲ್ಲ. ಈ ರೀತಿ ಇರುವ ಮಗನಾಗಿ ನಾನು ಕಾಣಿಸಿಕೊಂಡಿದ್ದೇನೆ. ಅವನ ಜೀವನದಲ್ಲೂ ಮದುವೆ ಎನ್ನುವುದು ಬಂದಾಗ ಆಗುವ ಬದಲಾವಣೆಗಳು ಏನೇನು? ಆತನಿಗೆ ಜವಾಬ್ದಾರಿ ಬರುತ್ತಾ? ಇಂತಹ ಪ್ರಶ್ನೆಗಳಿಗೆ ಉತ್ತರ ಕೊಡುವ ಪಾತ್ರ ನನ್ನದು.

• ಖ್ಯಾತ ಕಲಾವಿದರ ಜೊತೆ ನಟಿಸಿದ ಅನುಭವ...

ಸಿನಿಮಾ ಕ್ಷೇತ್ರಕ್ಕೆ ಹೆಜ್ಜೆ ಇಟ್ಟಾಗ ಹಲವು ಖ್ಯಾತ ಕಲಾವಿದರ ಜೊತೆ ಕೆಲಸ ಮಾಡಬೇಕು ಎನ್ನುವ ಆಸೆ ಎಲ್ಲರಿಗೂ ಇರುತ್ತದೆ. ಅದೃಷ್ಟವಶಾತ್ ನನಗೆ ಮೊದಲ ಸಿನಿಮಾದಲ್ಲೇ ದೇವರಾಜ್, ಅಚ್ಯುತ್ ಕುಮಾರ್, ಮಾಳವಿಕ ಅವಿನಾಶ್, ಅನೂಪ್ ಭಂಡಾರಿ, ಶೃತಿ ಹರಿಹರನ್, ಶ್ರುತಿ, ರವಿಶಂಕರ್ ಗೌಡ ಹೀಗೆ ಸಾಲು ಸಾಲು ಅದ್ಭುತ ಕಲಾವಿದರ ಜೊತೆ ನಟಿಸುವ ಅವಕಾಶ ದೊರೆಯಿತು. ಜೊತೆಗೆ ಅಪ್ಪಟ ಕನ್ನಡತಿ ಅಂಕಿತಾ ಅಮರ್ ಜೊತೆಗೆ ತೆರೆ ಹಂಚಿಕೊಂಡಿದ್ದು ಇನ್ನೊಂದು ಖುಷಿ ವಿಚಾರ. ನಟನೆ ಎನ್ನುವುದು ಎದುರಿಗೆ ಇರುವ ವ್ಯಕ್ತಿಯ ನಟನೆಗೆ ಪ್ರತಿಕ್ರಿಯೆ ನೀಡುವುದು. ಈ ವಿಚಾರದಲ್ಲಿ ಅಂಕಿತಾ ಅಮರ್ ಪ್ರತಿಭಾನ್ವಿತ ನಟಿ. ಕನ್ನಡ ಚಿತ್ರರಂಗದಲ್ಲಿ ಬಹಳ ಸರಳವಾಗಿರುವ, ಚೆಂದದ ನಟನೆ ಮಾಡುವ ನಟಿ ಇವರು.

• ಶೈನ್ ಶೆಟ್ಟಿ ಕನಸುಗಳೇನು?

ಒಳ್ಳೊಳ್ಳೆಯ ಕಥೆ, ಚಿತ್ರತಂಡ, ನಿರ್ದೇಶಕರನ್ನು ಆಯ್ಕೆ ಮಾಡಿಕೊಂಡು ಸಿನಿಮಾಗಳನ್ನು ಮಾಡಲಿದ್ದೇನೆ. ಭಾರತೀಯ ಚಿತ್ರರಂಗಕ್ಕೆ ಕನ್ನಡದ ಸಿನಿಮಾ ಮೂಲಕ ಕೊಡುಗೆ ನೀಡಬೇಕು ಎನ್ನುವ ಕನಸಿದೆ. ಬರುವ ಎಲ್ಲಾ ಅವಕಾಶವನ್ನು ನಾನು ಕೇವಲ ಪಾತ್ರದ ದೃಷ್ಟಿಯಿಂದ ನೋಡುತ್ತೇನೆ. ನಾಯಕನ ಪಾತ್ರಕ್ಕೆ ಎಷ್ಟು ಪ್ರಾಮುಖ್ಯತೆ ಕೊಡುತ್ತೇನೋ ಅಷ್ಟೇ ಪ್ರಾಮುಖ್ಯತೆಯನ್ನು ಒಂದು ಸಣ್ಣ ಪಾತ್ರವನ್ನು ನಿಭಾಯಿಸುವಾಗಲೂ ನೀಡುತ್ತೇನೆ.



ಶೈನ್ ಶೆಟ್ಟಿ

ಆ.29ಕ್ಕೆ ತೆರೆಗೆ ‘ಉಸಿರು’

ಪ್ರಿಯಾ, ತಿಲಕ್

ತಿಲಕ್ ಶೇಖರ್ ಹಾಗೂ ಪ್ರಿಯಾ ನಟಿಸಿರುವ, ಪನೇಮ್ ಪ್ರಭಾಕರ್ ನಿರ್ದೇಶನದ ‘ಉಸಿರು’ ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದ್ದು, ಚಿತ್ರ ಆ.29ರಂದು ತೆರೆಗೆ ಬರಲಿದೆ.

‘ಕೇಳಿದ್ದು ಸುಳ್ಳಾಗಬಹುದು, ನೋಡಿದ್ದು ಸುಳ್ಳಾಗಬಹುದು, ನಿಧಾನಿಸಿ ಯೋಚಿಸಿದಾಗ ನಿಜವು ತಿಳಿಯುವುದು’ ಎಂಬ ಪರಿಕಲ್ಪನೆ ಮೇಲೆ ಈ ಸಿನಿಮಾ ತಯಾರಾಗಿದೆ ಎಂದಿದೆ ಚಿತ್ರತಂಡ. ಆರ್.ಎಸ್.ಪಿ. ಪ್ರೊಡಕ್ಷನ್ ಮೂಲಕ ಲಕ್ಷ್ಮಿ ಹರೀಶ್ ನಿರ್ಮಿಸಿರುವ, ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಒಳಗೊಂಡ ಚಿತ್ರ ಇದಾಗಿದೆ. ಚಿತ್ರಕ್ಕೆ ಪನೇಮ್ ಪ್ರಭಾಕರ್ ಅವರೇ ಕಥೆ, ಚಿತ್ರಕಥೆ ಬರೆದಿದ್ದಾರೆ.

ಅನಾಮಧೇಯ ವ್ಯಕ್ತಿಯಿಂದ ಹೆಂಡತಿಯ ಪ್ರಾಣಕ್ಕೆ ಆಪತ್ತು ಬಂದಾಗ ಪೊಲೀಸ್ ಅಧಿಕಾರಿಯೊಬ್ಬ ತನ್ನ ಪತ್ನಿಯನ್ನು ಹೇಗೆ ಕಾಪಾಡಿಕೊಳ್ಳುತ್ತಾನೆ ಎಂಬುವುದೇ ಚಿತ್ರದ ಕಥೆ. ಬೆಂಗಳೂರು, ಮಡಿಕೇರಿ, ಚಿಕ್ಕಮಗಳೂರು, ಮೂಡಿಗೆರೆ ಸುತ್ತಮುತ್ತ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ‘ನನ್ನ ನಿರ್ದೇಶನದ ಚೊಚ್ಚಲ ಸಿನಿಮಾವಿದು. ಚಿತ್ರದ ಕಥೆಯೇ ಸಿನಿಮಾದ ಹೀರೊ. ಒಂದು ಭಾವನಾತ್ಮಕ ಕಥೆಯೂ ಸಿನಿಮಾದಲ್ಲಿದ್ದು, ಪ್ರತಿಯೊಂದು ಪಾತ್ರಕ್ಕೂ ಕಥೆಯಲ್ಲಿ ಪ್ರಾಮುಖ್ಯತೆ ನೀಡಲಾಗಿದೆ’ ಎಂದರು ಪ್ರಭಾಕರ್.

‘ನಾನು ಒಬ್ಬ ಇನ್ವೆಸ್ಟಿಗೇಶನ್ ಆಫೀಸರ್ ಆಗಿ ನಟಿಸಿದ್ದೇನೆ’ ಎಂದು ಮಾತು ಆರಂಭಿಸಿದ ತಿಲಕ್, ‘ಈ ರೀತಿಯ ಕಾನ್ಸೆಪ್ಟ್ ನಾನು ಎಲ್ಲೂ ಕೇಳಿಲ್ಲ. ಇದು ಬರೀ ಮರ್ಡರ್ ಮಿಸ್ಟ್ರಿಯಲ್ಲ. ಹಲವು ಪದರಗಳು ಕಥೆಯೊಳಗಿದೆ. ಚಿತ್ರದಲ್ಲಿ ಬಹಳ ಕುತೂಹಲಕಾರಿ ಅಂಶಗಳು ಇವೆ’ ಎಂದರು. ಚಿತ್ರಕ್ಕೆ ಆರ್.ಎಸ್. ಗಣೇಶ್ ನಾರಾಯಣನ್ ಸಂಗೀತ ನಿರ್ದೇಶನವಿದೆ. ಸಂತೋಷ್ ನಂದಿವಾಡ, ಅಪೂರ್ವ ನಾಗರಾಜು, ಅರುಣ್ ತಾರಾಬಳಗದಲ್ಲಿದ್ದಾರೆ.

ಆ.24ಕ್ಕೆ ‘ದಿ ಡೆವಿಲ್’ ಹಾಡು



ದರ್ಶನ್

ನಟ ದರ್ಶನ್ ನಟನೆಯ ‘ದಿ ಡೆವಿಲ್’ ಚಿತ್ರದ ಮೊದಲ ಹಾಡು ‘ಇದ್ರೇ ನೆಮ್ಮದಿಯಾಗ್ ಇರ್ಬೇಕ್’ ಆ.24ರಂದು ಬಿಡುಗಡೆಯಾಗಲಿದೆ.

ಕಳೆದ ಆ.15ರಂದೇ ಈ ಹಾಡು ಬಿಡುಗಡೆಯಾಗಬೇಕಿತ್ತು. ಆದರೆ ದರ್ಶನ್ ಬಂಧನದ ಕಾರಣದಿಂದ ಹಾಡು ಬಿಡುಗಡೆ ಮುಂದೂಡಿಕೆಯಾಗಿತ್ತು. ಸದ್ಯ ದರ್ಶನ್ ಸಾಮಾಜಿಕ ಮಾಧ್ಯಮಗಳನ್ನು ಅವರ ಪತ್ನಿ ವಿಜಯಲಕ್ಷ್ಮಿ ಅವರೇ ನಿಭಾಯಿಸುತ್ತಿದ್ದು, ‘ದಿ ಡೆವಿಲ್’ ಸಿನಿಮಾ ಬಗ್ಗೆ ಅಪ್‌ಡೇಟ್‌ಗಳನ್ನು ಪೋಸ್ಟ್ ಮಾಡುತ್ತಿದ್ದಾರೆ.

‘ಪ್ರಸಕ್ತ ವಿದ್ಯಮಾನ ಏನೇ ಇದ್ದರೂ, ನನ್ನ ನಂಬಿ ಕನಸು ಕಂಡಿರುವ ನಿರ್ದೇಶಕರ ಹಾಗೂ ನನ್ನ ಮೇಲೆ ಕೋಟ್ಯಂತರ ರೂಪಾಯಿ ಹಣ ಹೂಡಿರುವ ನಿರ್ಮಾಪಕರ ಬೆಂಬಲವಾಗಿ ನಿಲ್ಲಬೇಕಾದದ್ದು ನನ್ನ ಆದ್ಯ ಕರ್ತವ್ಯ. ಸಿನಿಮಾ ಒಂದು ಮನರಂಜನೆಯ ಮಾಧ್ಯಮ. ಅದನ್ನು ಮನರಂಜನೆಯ ದೃಷ್ಟಿಯಿಂದ ಮಾತ್ರ ನೋಡಬೇಕು’ ಎಂಬ ದರ್ಶನ್ ಸಂದೇಶವನ್ನು ಇತ್ತೀಚೆಗೆ ವಿಜಯಲಕ್ಷ್ಮಿ ಪೋಸ್ಟ್ ಮಾಡಿದ್ದರು.

ಡಿ.25ಕ್ಕೆ 45 ರಿಲೀಸ್



ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಆ್ಯಕ್ಷನ್ ಕಟ್ ಹೇಳುತ್ತಿರುವ, ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಜೊತೆಯಾಗಿ ಕಾಣಿಸಿಕೊಳ್ಳಲಿರುವ ‘45’ ಸಿನಿಮಾ ಡಿ.25ರಂದು ತೆರೆಕಾಣಲಿದೆ.

ಈ ಹಿಂದೆ ಆ.15ರಂದು ಸಿನಿಮಾ ತೆರೆಕಾಣಲಿದೆ ಎಂದು ಚಿತ್ರತಂಡ ತಿಳಿಸಿತ್ತು. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅರ್ಜುನ್ ಜನ್ಯ, ‘ಚಿತ್ರದಲ್ಲಿ ವಿಎಫ್‌ಎಕ್ಸ್ ಹೆಚ್ಚು ಇದೆ. ಇದರ ಕೆಲಸಗಳು ಶೇ 70ರಷ್ಟು ಪೂರ್ಣಗೊಂಡಿದ್ದು, ಈ ಕೆಲಸಗಳು ಪೂರ್ಣಗೊಳ್ಳಲು ಇನ್ನೂ ಎರಡು ತಿಂಗಳು ಬೇಕು. ಹೆಚ್ಚಿನ ವಿಎಫ್‌ಎಕ್ಸ್ ಕೆಲಸವನ್ನು ಕೆನಡಾದ ‘ಮಾರ್ಜ್’ ಕಂಪನಿಗೆ ನೀಡಲಾಗಿದೆ. ಡಿ.25ಕ್ಕೆ ಖಂಡಿತವಾಗಿಯೂ ಬರುತ್ತೇವೆ. ಈ ಸಿನಿಮಾಗೆ ಶಿವರಾಜ್‌ಕುಮಾರ್ ಶಕ್ತಿಯಾಗಿ ನಿಂತಿದ್ದಾರೆ’ ಎಂದರು. ‘ಭಾರತದಲ್ಲೇ ಅತೀ ಹೆಚ್ಚು ಸಿಜಿ ಅಳವಡಿಸಲಾಗುತ್ತಿರುವ ಮೊದಲ ಚಿತ್ರ ಇದಾಗಿದೆ’ ಎಂದು ಚಿತ್ರತಂಡ ತಿಳಿಸಿದೆ.

‘ಡ್ಯಾಡ್’ನಲ್ಲಿ ಡಾಕ್ಟರ್ ಶಿವರಾಜ್‌ಕುಮಾರ್!



ಚಿತ್ರೀಕರಣಕ್ಕೆ ಚಾಲನೆ ನೀಡಿದ ಗೀತಾ ಶಿವರಾಜ್‌ಕುಮಾರ್

ಶಿವರಾಜ್‌ಕುಮಾರ್

ಸಿನಿಪಯಣದಲ್ಲಿ 40 ವರ್ಷ ಪೂರೈಸಿ ಹೆಜ್ಜೆ ಇಡುತ್ತಿರುವ ನಟ ಶಿವರಾಜ್‌ಕುಮಾರ್ ಅವರ ಸಿನಿಬ್ಯಾಂಕ್ ಹಿಗ್ಗುತ್ತಲೇ ಇದೆ. ಸದ್ಯ ಅರ್ಜುನ್ ಜನ್ಯ ನಟನೆಯ ‘45’ ಸಿನಿಮಾದ ಬಿಡುಗಡೆಗೆ ಎದುರು ನೋಡುತ್ತಿರುವ ಅವರು, ‘666 ಆಪರೇಷನ್ ಡ್ರೀಮ್ ಥಿಯೇಟರ್’, ‘ಎ ಫಾರ್ ಆನಂದ್’, ‘#131’, ‘ಜೈಲರ್ 2’, ‘ಪೆದ್ದಿ’ ಸಿನಿಮಾಗಳಲ್ಲೂ ನಟಿಸಿದ್ದಾರೆ. ಇದೀಗ ತೆಲುಗಿನ ನಿರ್ದೇಶಕ ಅನಿಲ್ ಕನ್ನೆಗಂಟಿ ನಿರ್ದೇಶನದ ‘ಡ್ಯಾಡ್’ನಲ್ಲಿ ವೈದ್ಯನಾಗಿ ಶಿವರಾಜ್‌ಕುಮಾರ್ ಕಾಣಿಸಿಕೊಳ್ಳಲಿದ್ದಾರೆ.

ಈ ಚಿತ್ರದ ಮುಹೂರ್ತ ಇತ್ತೀಚೆಗೆ ಮೈಸೂರಿನ ಚಾಮುಂಡಿ ಬೆಟ್ಟದಲ್ಲಿರುವ ನಂದಿ ವಿಗ್ರಹದ ಎದುರು ನಡೆಯಿತು. ನಿರ್ಮಾಪಕಿ ಗೀತಾ ಶಿವರಾಜ್‌ಕುಮಾರ್ ಅವರು ಚಿತ್ರದ ಮೊದಲ ದೃಶ್ಯಕ್ಕೆ ಕ್ಲ್ಯಾಪ್ ಮಾಡಿದರು. ಸುಮಾರು 32 ವರ್ಷಗಳ ಹಿಂದೆ ‘ಜಗ ಮೆಚ್ಚಿದ ಹುಡುಗ’ ಚಿತ್ರವೂ ಇದೇ ನಂದಿ ವಿಗ್ರಹದ ಎದುರು ಶುರುವಾಗಿತ್ತು.

‘ಭಗವಂತ್ ಕೇಸರಿ’, ‘ಉಗ್ರಂ’, ‘ಟಕ್ ಜಗದೀಶ್’ ಮುಂತಾದ ತೆಲುಗು ಚಿತ್ರಗಳನ್ನು ನಿರ್ಮಿಸಿದ್ದ ಹರೀಶ್ ಪೆದ್ದಿ ಈ ಚಿತ್ರವನ್ನು ಮೈರಾ ಕ್ರಿಯೇಷನ್ಸ್ ಲಾಂಛನದಡಿ ನಿರ್ಮಿಸುತ್ತಿದ್ದಾರೆ. ತೆಲುಗಿನಲ್ಲಿ ‘ಅಸಾಧ್ಯುಡು’, ‘ಮಿಸ್ಟರ್ ನೂಕಯ್ಯ’ ಮತ್ತು ‘ಹಿಡಿಂಬ’ ಚಿತ್ರಗಳನ್ನು ನಿರ್ದೇಶಿಸಿರುವ ಅನಿಲ್ ಕನ್ನೆಗಂಟಿ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ನಿರ್ಮಾಪಕ ಹಾಗೂ ನಿರ್ದೇಶಕರಿಗೆ ಇದು ಕನ್ನಡದ ಚೊಚ್ಚಲ ಸಿನಿಮಾ.

ತಂದೆ–ಮಗಳ ಭಾವನಾತ್ಮಕ ಚಿತ್ರ ಇದಾಗಿದ್ದು, ಥ್ರಿಲ್ಲಿಂಗ್ ಅಂಶಗಳೂ ಇವೆ ಎಂದು ಚಿತ್ರತಂಡ ತಿಳಿಸಿದೆ. ಈ ಹಿಂದೆ ‘ಗಡಿಬಿಡಿ ಕೃಷ್ಣ’ ಚಿತ್ರದಲ್ಲಿ ವೈದ್ಯನಾಗಿ ಕಾಣಿಸಿಕೊಂಡಿದ್ದ ಶಿವರಾಜ್‌ಕುಮಾರ್ ಸುಮಾರು 27 ವರ್ಷಗಳ ನಂತರ ವೈದ್ಯನಾಗಿ ಅಭಿನಯಿಸುತ್ತಿದ್ದಾರೆ. ಬೆಂಗಳೂರು ಮತ್ತು ಮೈಸೂರಿನಲ್ಲಿ ಸುಮಾರು 50 ದಿನ ಈ ಸಿನಿಮಾದ ಚಿತ್ರೀಕರಣ ನಡೆಯಲಿದೆ. ಚಿತ್ರದಲ್ಲಿ ಶರ್ಮಿಳಾ ಮಾಂಡ್ರೆ, ಬೇಬಿ ನಕ್ಷತ್ರ, ಬಾಬು, ಮಲಯಾಳ ನಟ ಸುರಾಜ್ ವೆಂಜಾರಮೂಡು ಮುಂತಾದವರು ನಟಿಸುತ್ತಿದ್ದಾರೆ. ಕನ್ನಡ, ತೆಲುಗು ಮತ್ತು ಮಲಯಾಳದಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ನಿರ್ದೇಶನವಿದೆ. ತೆಲುಗಿನ ‘ಆರೆಂಜ್’, ‘ಆರ್ಯ 2’ ಮುಂತಾದ ಚಿತ್ರಗಳಿಗೆ ಛಾಯಾಚಿತ್ರಗ್ರಾಹಕರಾಗಿ ಕೆಲಸ ಮಾಡಿದ್ದ ಬಿ.ರಾಜಶೇಖರ್ ಇಲ್ಲಿ ಕ್ಯಾಮೆರಾ ಹಿಡಿದಿದ್ದಾರೆ.

ಮಲಯಾಳದಲ್ಲೂ ‘S/O ಮುತ್ತಣ್ಣ’ನಿಗೆ ಬೇಡಿಕೆ

ನಟ ದೇವರಾಜ್ ಅವರ ಕಿರಿಯ ಪುತ್ರ ಪ್ರಣಂ ದೇವರಾಜ್ ನಟನೆಯ ‘ಸನ್ ಆಫ್ ಮುತ್ತಣ್ಣ’ ಸಿನಿಮಾ ರಿಲೀಸ್‌ಗೆ ಸಜ್ಜಾಗುತ್ತಿದೆ. ಶ್ರೀಕಾಂತ್ ಹುಣಸೂರು ನಿರ್ದೇಶನದ ಈ ಸಿನಿಮಾಗೆ ಮಲಯಾಳದಿಂದಲೂ ಬೇಡಿಕೆ ಬಂದಿದೆ.

‘ಸು ಫ್ರಮ್ ಸೋ’ ಯಶಸ್ಸಿನ ಬಳಿಕ ಕೇರಳದಲ್ಲಿ ಕನ್ನಡ ಭಾಷೆಯ ಚಿತ್ರಗಳಿಗೆ ಬೇಡಿಕೆ ಹೆಚ್ಚಾಗಿದೆ. ಈ ಕಾರಣದಿಂದ ಆಗಸ್ಟ್ 22ರಂದು ಬಿಡುಗಡೆಯಾಗಬೇಕಿದ್ದ ಈ ಸಿನಿಮಾವನ್ನು ಸೆಪ್ಟೆಂಬರ್ 12ರಂದು ಬಿಡುಗಡೆ ಮಾಡಲು ಚಿತ್ರತಂಡ ನಿರ್ಧರಿಸಿದೆ. ಕನ್ನಡ, ತೆಲುಗು ಹಾಗೂ ಮಲಯಾಳದಲ್ಲಿ ಏಕಕಾಲಕ್ಕೆ ಚಿತ್ರ ಬಿಡುಗಡೆಯಾಗಲಿದೆ.

ಈ ಸಿನಿಮಾದಲ್ಲಿ ಪ್ರಣಂಗೆ ಜೋಡಿಯಾಗಿ ‘ದಿಯಾ’ ಖ್ಯಾತಿಯ ಖುಷಿ ರವಿ ‘ವೈದ್ಯೆ’ಯಾಗಿ ನಟಿಸಿದ್ದಾರೆ. ಈ ಚಿತ್ರ ಅಪ್ಪ-ಮಗನ ಬಾಂಧವ್ಯದ ಕುರಿತಾದ ಕಥಾಹಂದರ ಹೊಂದಿದ್ದು, ರಂಗಾಯಣ ರಘು ಹಾಗೂ ಪ್ರಣಂ ದೇವರಾಜ್ ಅಪ್ಪ–ಮಗನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸುಚೇಂದ್ರ ಪ್ರಸಾದ್, ಗಿರೀಶ್ ಶಿವಣ್ಣ, ತಬಲ ನಾಣಿ, ಶ್ರೀನಿವಾಸ್ ಪ್ರಭು, ಸುಧಾ ಬೆಳವಾಡಿ, ಅರುಣ್ ಚಕ್ರವರ್ತಿ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಪ್ರಣಂ, ಖುಷಿ ರವಿ

‘ಆಪರೇಷನ್...’ ಆರಂಭಿಸಿದ ಡಾಲಿ-ಶಿವಣ್ಣ

ಧನಂಜಯ

‘ಕವಲುದಾರಿ’, ‘ಸಪ್ತಸಾಗರದಾಚೆ ಎಲ್ಲೋ’ ಸಿನಿಮಾ ನಿರ್ದೇಶಕ ಹೇಮಂತ್ ಎಂ.ರಾವ್ ನಿರ್ದೇಶನದ ‘666 ಆಪರೇಷನ್ ಡ್ರೀಮ್ ಥಿಯೇಟರ್’ ಸಿನಿಮಾದ ಶೂಟಿಂಗ್ ಆರಂಭವಾಗಿದೆ.

ಬೆಂಗಳೂರಿನ ಕಂಠೀರವ ಸ್ಟುಡಿಯೊದಲ್ಲಿ ಅದ್ದೂರಿಯಾದ ಸೆಟ್ ಹಾಕಿ ಚಿತ್ರದ ಚಿತ್ರೀಕರಣ ನಡೆಯುತ್ತಿದ್ದು, ನಟ ಶಿವರಾಜ್‌ಕುಮಾರ್ ಹಾಗೂ ಡಾಲಿ ಧನಂಜಯ ಭಾಗಿಯಾಗಿದ್ದಾರೆ. ಆ.23 ಧನಂಜಯ ಅವರ ಜನ್ಮದಿನವಾಗಿದ್ದು ಈ ಹಿನ್ನೆಲೆಯಲ್ಲಿ ಚಿತ್ರತಂಡ ಅವರ ಪಾತ್ರದ ಹೊಸ ಫೋಟೊ ಬಿಡುಗಡೆ ಮಾಡಿದೆ. ರೆಟ್ರೋ ಗೆಟಪ್‌ನಲ್ಲಿ ಧನಂಜಯ ಕಾಣಿಸಿಕೊಂಡಿದ್ದು, ಕೈಯಲ್ಲಿ ಗನ್ ಹಿಡಿದು ಕಾರಿನಲ್ಲಿ ಕನಸು ಕಾಣುತ್ತಾ ಸ್ಟೈಲಿಶ್ ಆಗಿ ಕ್ಯಾಮೆರಾಗೆ ಪೋಸ್ ಕೊಟ್ಟಿದ್ದಾರೆ.

ಧನಂಜಯ ಹಾಗೂ ಶಿವರಾಜ್‌ಕುಮಾರ್ ಅವರು ಈ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಡಾ. ವೈಶಾಖ್ ಜೆ. ಗೌಡ ಅವರ ‘ವೈಶಾಖ್ ಜೆ. ಫಿಲ್ಮ್ಸ್’ ಬ್ಯಾನರ್ ಅಡಿಯಲ್ಲಿ ಈ ಸಿನಿಮಾ ನಿರ್ಮಾಣವಾಗುತ್ತಿದೆ. ಚರಣ್ ರಾಜ್ ಸಂಗೀತ ನಿರ್ದೇಶನ, ಅದ್ವೈತ ಗುರುಮೂರ್ತಿ ಛಾಯಾಚಿತ್ರಗ್ರಹಣ ಈ ಸಿನಿಮಾಗಿದೆ. ವಿಶ್ವಾಸ್ ಕಶ್ಯಪ್ ಕಲಾ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ.

ನಾಲ್ಕು ಸಿನಿಮಾಗಳು ತೆರೆಗೆ

ಸೋನಲ್

ರಜನಿಕಾಂತ್ ನಟನೆಯ ‘ಕೂಲಿ’ ಹಾಗೂ ಹೃತಿಕ್ ರೋಷನ್–ಜೂನಿಯರ್ ಎನ್‌ಟಿಆರ್ ನಟನೆಯ ‘ವಾರ್–2’ ಸಿನಿಮಾ ಬಿಡುಗಡೆ ಹಿನ್ನೆಲೆಯಲ್ಲಿ ಕಳೆದ ಶುಕ್ರವಾರ ಕನ್ನಡ ಸಿನಿಮಾಗಳೇ ತೆರೆಕಂಡಿರಲಿಲ್ಲ. ಇಂದು (ಆ.22) ನಾಲ್ಕು ಕನ್ನಡ ಸಿನಿಮಾಗಳು ಬಿಡುಗಡೆಯಾಗಿವೆ.

ಜಸ್ಟ್ ಮ್ಯಾರಿಡ್

ನಟ ಶೈನ್ ಶೆಟ್ಟಿ ಹಾಗೂ ನಟಿ ಅಂಕಿತಾ ಅಮರ್ ಈ ಚಿತ್ರದಲ್ಲಿ ನಟಿಸಿದ್ದಾರೆ. ಈ ಸಿನಿಮಾವನ್ನು ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಹಾಗೂ ಸಿ.ಆರ್.ಬಾಬಿ ಅವರು ಎಬಿಬಿಎಸ್ ಸ್ಟುಡಿಯೊಸ್ ಲಾಂಛನದಲ್ಲಿ ನಿರ್ಮಾಣ ಮಾಡಿದ್ದು, ಸಿ.ಆರ್ ಬಾಬಿ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ದೇವರಾಜ್, ಅಚ್ಯುತ್ ಕುಮಾರ್, ಮಾಳವಿಕ ಅವಿನಾಶ್, ಅನೂಪ್ ಭಂಡಾರಿ, ಶೃತಿ ಹರಿಹರನ್, ಶ್ರುತಿ ಕೃಷ್ಣ, ಸಾಕ್ಷಿ ಅಗರ್‌ವಾಲ್, ಶ್ರೀಮಾನ್, ರವಿಶಂಕರ್ ಗೌಡ, ರವಿ ಭಟ್, ವಾಣಿ ಹರಿಕೃಷ್ಣ, ಸಂಗೀತ, ಅನಿಲ್, ವೇದಿಕಾ ಕಾರ್ಕಳ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ರಘು ನಿಡುವಳ್ಳಿ ಸಂಭಾಷಣೆ ಚಿತ್ರಕ್ಕಿದೆ.

ಲವ್ ಮ್ಯಾಟ್ರು

ವಿರಾಟ್ ಬಿಲ್ವ ನಟಿಸಿ, ನಿರ್ದೇಶಿಸಿರುವ ಸಿನಿಮಾವಿದು. ಹಲವು ಖ್ಯಾತ ನಿರ್ದೇಶಕರ ಜೊತೆ ಕೆಲಸ ಮಾಡಿದ ಅನುಭವವಿರುವ ವಿರಾಟ್ ನಿರ್ದೇಶನದ ಚೊಚ್ಚಲ ಸಿನಿಮಾ ಇದಾಗಿದೆ. ಭಿನ್ನವಾದ ಪ್ರೇಮಕಥೆಯನ್ನು ಹೊಂದಿರುವ ಈ ಸಿನಿಮಾ ಕಳೆದ ಆ.1ರಂದೇ ತೆರೆಕಾಣಬೇಕಿತ್ತು. ಚಿತ್ರಮಂದಿರಗಳ ಕೊರತೆ ಕಾರಣದಿಂದ ಸಿನಿಮಾ ಮುಂದೂಡಲಾಗಿತ್ತು. ವಂದನಾ ಪ್ರಿಯ ಈ ಸಿನಿಮಾ ನಿರ್ಮಾಣ ಮಾಡಿದ್ದು, ನಟಿ ಸೋನಲ್ ಮೊಂತೆರೋ ನಾಯಕಿಯಾಗಿದ್ದಾರೆ. ಎರಡು ಕಾಲಘಟ್ಟಗಳ ಪಯಣ ಇರುವ ಚಿತ್ರ ಇದಾಗಿದ್ದು, ಅಚ್ಯುತ್ ಕುಮಾರ್, ಅನಿತಾ ಭಟ್, ಸುಮನ್ ರಂಗನಾಥ್ ಮುಂತಾದವರು ಚಿತ್ರದಲ್ಲಿದ್ದಾರೆ. ಸೋಲಮಾನ್ ಸಂಗೀತ, ಪರಮ್ ಛಾಯಾಚಿತ್ರಗ್ರಹಣ ಈ ಸಿನಿಮಾಗಿದೆ.

ಕಮರೊ2

‘ಕಮರೊಟ್ಟು ಚೆಕ್‌ಪೋಸ್ಟ್’ ನಿರ್ದೇಶಿಸಿದ್ದ ಪರಮೇಶ್ ನಿರ್ದೇಶನದ ಚಿತ್ರವಿದು. ಕನ್ನಡದಲ್ಲಿ ತೀರ ಅಪರೂಪ ಎನ್ನಬಹುದಾದ ಪ್ಯಾರಾ ನಾರ್ಮಲ್ ಜಾನರ್‌ನ ‘ಕಮರೊ2’ ಹಾರಾರ್ ಕಥಾಹಂದರ ಹೊಂದಿದೆ. ಪವನ್ ಗೌಡ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಮೊದಲ ಬಾರಿಗೆ ವಿಭಿನ್ನ ಪಾತ್ರದಲ್ಲಿ ಪ್ರಿಯಾಂಕ ಉಪೇಂದ್ರ ಈ ಸಿನಿಮಾದಲ್ಲಿ ಕಾಣಿಸಿಕೊಂಡಿದ್ದು, ಧಾರಾವಾಹಿಗಳಲ್ಲಿ ನಟಿಸಿರುವ ಅನಂತಸ್ವಾಮಿ, ರಜನಿ ಭಾರದ್ವಾಜ್ ಮುಖ್ಯ ಭೂಮಿಕೆಯಲ್ಲಿದ್ದಾರೆ. ನೀನಾಸಂ ಅಶ್ವಥ್, ನಾಗೇಂದ್ರ ಅರಸ್, ಮಹೇಶ್ ರಾಜ್, ಬೇಬಿ ಖುಷಿ ತಾರಾಬಳಗದಲ್ಲಿದ್ದಾರೆ. ವಿಶೇಷ ಪಾತ್ರದಲ್ಲಿ ರಾಘವೇಂದ್ರ ರಾಜ್‌ಕುಮಾರ್ ಬಣ್ಣಹಚ್ಚಿದ್ದಾರೆ.

ಪ್ರಿಯಾಂಕ ಉಪೇಂದ್ರ

ಹಚ್ಚೆ

ಅಶ್ವ ಫಿಲಂಸ್ ಲಾಂಛನದಲ್ಲಿ ಯಶೋಧರ ಅವರು ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಈ ಚಿತ್ರ ನಿರ್ದೇಶಿಸಿದ್ದಾರೆ. ಮೈಸೂರಿನ ರಂಗಭೂಮಿ ನಟ ಅಭಿಮನ್ಯು ಈ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಹೆಜ್ಜೆ ಇಡುತ್ತಿದ್ದಾರೆ. ನಾಯಕಿಯಾಗಿ ಆದ್ಯಾ ಪ್ರಿಯಾ ನಟಿಸಿದ್ದಾರೆ. ಅನುಪ್ರೇಮ, ಗುರುರಾಜ್ ಹೊಸಕೋಟೆ, ದುಷ್ಯಂತ್, ಶ್ರೀಮಂತ್ ಸುರೇಶ್, ಚಂದ್ರು ಬಂಡೆ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರವನ್ನು ಈ ಸಿನಿಮಾ ಹೊಂದಿದೆ. ವಿವೇಕ್ ಚಕ್ರವರ್ತಿ ಸಂಗೀತ ನಿರ್ದೇಶನ, ಸುರೇಶ್ ಆರ್ಮುಗಂ ಸಂಕಲನ ಹಾಗೂ ಯಾಸಿನ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಪೊಲೀಸರಿಂದ ಮಾಹಿತಿ ಸಂಗ್ರಹ

ಜಿಗಣಿ ಸಮೀಪದ ಹುಲ್ಲಹಳ್ಳಿಯ ಸಮೀರ್ ಬಾಡಿಗೆ ಮನೆಯಲ್ಲಿ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನೇಕಲ್ ತಾಲ್ಲೂಕಿನ ಜಿಗಣಿ ಸಮೀಪದ ಹುಲ್ಲಹಳ್ಳಿಯ ಬಾಡಿಗೆ ಮನೆಯೊಂದರಲ್ಲಿ ಯೂಟ್ಯೂಬ್ ಚಾನಲ್‌ನ ಸಮೀರ್ ಎಂ.ಡಿ. ಅವರು ನೆಲಸಿದ್ದಾರೆ ಎಂಬ ಮಾಹಿತಿ ಮೇರೆಗೆ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ಗುರುವಾರ ಬೆಳಿಗ್ಗೆ ಭೇಟಿ ನೀಡಿ ಪರಿಶೀಲಿಸಿದರು.

ಆರು ಮಂದಿ ಒಳಗೊಂಡ ಪೊಲೀಸ್ ತಂಡವು ಬೆಳಿಗ್ಗೆ 8.30ರ ಸುಮಾರಿಗೆ ಜಿಗಣಿಗೆ ಭೇಟಿ ನೀಡಿತ್ತು. ಸಮೀರ್ ಅವರು ವಾಸ ಮಾಡುತ್ತಿದ್ದರು ಎನ್ನಲಾದ ಬಾಡಿಗೆ ಮನೆಗೆ ಬೀಗ ಹಾಕಲಾಗಿತ್ತು. ಮಧ್ಯಾಹ್ನದವಗೂ ಅದೇ ಗ್ರಾಮದ ನಿವಾಸಿಗಳಿಂದ ಪೊಲೀಸರು ಮಾಹಿತಿ ಕಲೆ ಹಾಕಿ ತೆರಳಿದರು ಎಂದು ಗೊತ್ತಾಗಿದೆ.

ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮೀರ್ ಅವರು ವಿಡಿಯೊವೊಂದನ್ನು ಮಾಡಿ, ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಿದ್ದರು. ಆ ವಿಡಿಯೊಗೆ ಸಂಬಂಧಿಸಿದಂತೆ ಮಾಹಿತಿ ಕಲೆ ಹಾಕಲು, ದಾಖಲೆ ಸಂಗ್ರಹಿಸಲು ವಿಶೇಷ ತನಿಖಾ ತಂಡದ (ಎಸ್‌ಐಟಿ) ಸೂಚನೆ ಮೇರೆಗೆ ಪೊಲೀಸ್ ತಂಡವು ಜಿಗಣಿಗೆ ಭೇಟಿ ನೀಡಿತ್ತು ಎಂದು ಗೊತ್ತಾಗಿದೆ.

‘ಸಮೀರ್ ಅವರ ಪರಿಚಯ ಇಲ್ಲ. ಅವರು ಹೊರಗೆ ಕಾಣಿಸಿಕೊಳ್ಳುತ್ತಿರಲಿಲ್ಲ. ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಆಗಿದ್ದ ವಿಡಿಯೊವೊಂದರಲ್ಲಿ ಅವರನ್ನು ನೋಡಿದ್ದೇವೆ ಎಂಬುದಾಗಿ ಅಕ್ಕಪಕ್ಕದ ನಿವಾಸಿಗಳು ಪೊಲೀಸ್ ತಂಡಕ್ಕೆ ಮಾಹಿತಿ ನೀಡಿದ್ದಾರೆ’ ಎಂದು ಮೂಲಗಳು ಹೇಳಿವೆ.

ಪಿತೂರಿಯ ಹಿಂದೆ ನಾನಿಲ್ಲ: ಸೆಂಥಿಲ್

ನವದೆಹಲಿ: ಧರ್ಮಸ್ಥಳಕ್ಕೆ ಕಳಂಕ ತರುವ ಪಿತೂರಿಯ ಹಿಂದೆ ತಮ್ಮ ಕೈವಾಡವಿದೆ ಎಂಬ ಆರೋಪ ಆಧಾರರಹಿತ ಎಂದು ಸಂಸದ ಸಸಿಕಾಂತ ಸೆಂಥಿಲ್ ಸ್ಪಷ್ಟಪಡಿಸಿದರು.

ಕರ್ನಾಟಕ ಕೇಡರ್ ಮಾಜಿ ಐಎಎಸ್ ಅಧಿಕಾರಿಯಾಗಿರುವ ಅವರು, ‘ಸುಳ್ಳು ಆರೋಪಗಳನ್ನು ಹೊರಿಸುವುದನ್ನು ಮುಂದುವರಿಸಿದರೆ ಬಿಜೆಪಿ ಶಾಸಕ ಗಾಲಿ ಜನಾರ್ದನ ರೆಡ್ಡಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ’ ಎಂದು ಎಚ್ಚರಿಸಿದರು.

‘ಧರ್ಮಸ್ಥಳದಲ್ಲಿನ ಬೆಳವಣಿಗೆಗಳ ಬಗ್ಗೆ ನನಗೆ ಸಂಪೂರ್ಣವಾಗಿ ತಿಳಿದಿಲ್ಲ. ನಾನು ವರ್ಷಗಳ ಹಿಂದೆಯೇ ಕರ್ನಾಟಕ ತೊರೆದಿದ್ದೇನೆ. ಈ ಪ್ರಕರಣದಲ್ಲಿ ನನ್ನ ಹೆಸರನ್ನು ಎಳೆದು ತರುವುದು ಮಾನನಷ್ಟದ ಕೃತ್ಯ. ಪ್ರಚಾರ ಪಡೆಯುವುದಕ್ಕಾಗಿ ರೆಡ್ಡಿ ಈ ಆರೋಪ ಮಾಡಿರಬಹುದು’ ಎಂದು ಅವರು ಹೇಳಿದರು.

ಧರ್ಮಸ್ಥಳ ಮತ್ತು ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರ ಕುರಿತು ಅವಹೇಳನಕಾರಿಯಾಗಿ ಬಿಂಬಿಸುತ್ತಿರುವುದನ್ನು ಖಂಡಿಸಿ ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿ ತಾಲ್ಲೂಕಿನಲ್ಲಿ ಪ್ರತಿಭಟನಾ ಮೆರವಣಿಗೆ ನಡೆಯಿತು

‘ದುಡ್ಡಿನ ಆಮಿಷದಿಂದ ಅಪಪ್ರಚಾರ’

ನಾಗಮಂಗಲ (ಮಂಡ್ಯ ಜಿಲ್ಲೆ): ‘ಆತ ಒಳ್ಳೆಯವನಲ್ಲ, ನನಗೂ ನನ್ನ ಮಕ್ಕಳಿಗೂ ಹಿಂಸೆ ಕೊಡುತ್ತಿದ್ದ. ಆತ ಧರ್ಮಸ್ಥಳದ ವಿಚಾರವಾಗಿ ಅಪಪ್ರಚಾರ ಮಾಡುತ್ತಿರುವುದು ಸತ್ಯವಲ್ಲ. ದುಡ್ಡಿನ ಆಮಿಷಕ್ಕೆ ಹೀಗೆ ಮಾಡುತ್ತಿರಬಹುದು’ ಎಂದು ಧರ್ಮಸ್ಥಳ ಪ್ರಕರಣದ ಸಾಕ್ಷಿ ದೂರುದಾರನ ಮೊದಲ ಪತ್ನಿ ಎಂದು ಹೇಳಿಕೊಂಡಿರುವ ಮಹಿಳೆ ದೂರಿದ್ದಾರೆ.

ಪಟ್ಟಣದಲ್ಲಿ ಗುರುವಾರ ಮಾಧ್ಯಮದವರೊಂದಿಗೆ ಮಾತನಾಡಿ, ‘ಆತನನ್ನು 1999ರಲ್ಲಿ ಮದುವೆಯಾಗಿದ್ದೆ. 7 ವರ್ಷ ಜೊತೆಗಿದ್ದೆವು. ನನಗೆ ಹೊಡೆದು ಹಿಂಸಿಸುತ್ತಿದ್ದ. ನಮಗೆ ಮಗ ಮತ್ತು ಮಗಳಿದ್ದಾಳೆ. ಧರ್ಮಸ್ಥಳದಲ್ಲಿ ಕಸ ಗುಡಿಸುತ್ತಿದ್ದ, ಶೌಚಾಲಯ ತೊಳೆಯುತ್ತಿದ್ದ’ ಎಂದಿದ್ದಾರೆ.

‘ಜೀವನಾಂಶ ಕೊಡಬೇಕಾಗುತ್ತದೆ ಎಂದು, ವಿವಾಹ ವಿಚ್ಛೇದನದ ವೇಳೆ ತನಗೆ ಉದ್ಯೋಗವಿಲ್ಲವೆಂದು ನ್ಯಾಯಾಲಯಕ್ಕೆ ಸುಳ್ಳು ಹೇಳಿದ್ದ. ಅಲ್ಲಿಯೂ ನನಗೆ ನ್ಯಾಯ ಸಿಗದಂತೆ ಮೋಸ ಮಾಡಿದ. ನನ್ನ ತಾಯಿಯೇ ನನ್ನ ಮಕ್ಕಳನ್ನು ಸಾಕಿದ್ದಾರೆ’ ಎಂದು ಹೇಳಿದ್ದಾರೆ.

‘ಧರ್ಮಸ್ಥಳ ಎಂದರೆ ನಮ್ಮ ಮನೆಯವರಿಗೆಲ್ಲಾ ಬಹಳ ಪ್ರೀತಿ. ಅಲ್ಲಿ ಅತ್ಯಾಚಾರ, ಕೊಲೆಯಾದ ಶವಗಳನ್ನು ಹೂತಿರುವ ಬಗ್ಗೆ ಯಾವತ್ತೂ ನನಗೆ ಹೇಳಿಲ್ಲ. ಅಹಂಕಾರಿಯಾದ ಆತ ತನ್ನ ಅಣ್ಣ ತಮ್ಮಂದಿರನ್ನು ಬಾಯಿಗೆ ಬಂದಂತೆ ಬೈಯ್ಯುತ್ತಿದ್ದ. ಅವನನ್ನು ಬಿಟ್ಟು ಬಂದದ್ದು ಒಳ್ಳೆಯದಾಯಿತು. ಆತ ಸತ್ತರೂ ನಾವು ಮುಖ ನೋಡಲು ಹೋಗುವುದಿಲ್ಲ’ ಎಂದರು.

ಕಡಿವಾಣ ಹಾಕಿ

ಬೆಂಗಳೂರು: ಧರ್ಮಸ್ಥಳ ವ್ಯಾಪ್ತಿಯಲ್ಲಿ ನಾಪತ್ತೆ ಆಗಿರುವ ಮಹಿಳೆಯರು, ವಿದ್ಯಾರ್ಥಿನಿಯರು, ಅಸ್ವಾಭಾವಿಕ ಸಾವು, ಕೊಲೆ ಹಾಗೂ ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಎಸ್‌ಐಟಿ ತನಿಖೆ ಮುಂದುವರಿಸಬೇಕು. ಈ ಬಗ್ಗೆ ಸಚಿವರು ಹಾಗೂ ಕಾಂಗ್ರೆಸ್ ಪಕ್ಷದ ಶಾಸಕರು ನೀಡುತ್ತಿರುವ ಹೇಳಿಕೆಗಳಿಗೆ ಕಡಿವಾಣ ಹಾಕಬೇಕು ಎಂದು ‘ನಾವೆದ್ದು ನಿಲ್ಲದಿದ್ದರೆ-ಕರ್ನಾಟಕ’ ಸಂಘಟನೆ ಆಗ್ರಹಿಸಿದೆ.

‘ಗೃಹ ಸಚಿವ ಜಿ. ಪರಮೇಶ್ವರ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಮಹಿಳಾ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ನೀಡಿದ ಹೇಳಿಕೆಗಳನ್ನು ಕೂಡಲೇ ಹಿಂಪಡೆಯಬೇಕು. ಈ ಬಗ್ಗೆ ರಾಜ್ಯ ಸರ್ಕಾರ ನಿಷ್ಪಕ್ಷಪಾತ ತನಿಖೆ ನಡೆಸಲು ಎಸ್‌ಐಟಿಗೆ ಸ್ವಾತಂತ್ರ್ಯ ನೀಡಬೇಕು’ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಪದಾಧಿಕಾರಿಗಳಾದ ಕೆ.ಎಸ್. ವಿಮಲಾ, ಮಮತಾ ಯಜಮಾನ್, ಸನಾ, ಪೂರ್ಣಾ ರವಿಶಂಕರ್, ಗಾಂಧಿಮದಿ ಒತ್ತಾಯಿಸಿದರು.

‘ಎಸ್‌ಐಟಿ ತನಿಖೆಗೆ ಯಾವುದೇ ಅಡೆತಡೆ ಇಲ್ಲದೇ ಮುಂದುವರಿಸಬೇಕು. ಉತ್ಖನನಗಳು, ವಿಧಿ ವಿಜ್ಞಾನ ವಿಶ್ಲೇಷಣೆ ಮತ್ತು ಸಾಕ್ಷಿಗಳ ರಕ್ಷಣೆಗೆ ಆದ್ಯತೆ ನೀಡಬೇಕು. ಧರ್ಮಸ್ಥಳ ವ್ಯಾಪ್ತಿಯಲ್ಲಿ ನಡೆದಿರುವ ಕೊಲೆ, ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವ ಸಾಕ್ಷಿದಾರರಿಗೆ ಪೊಲೀಸರು ರಕ್ಷಣೆ ಒದಗಿಸಬೇಕು. ಅವರ ಹೇಳಿಕೆಗಳನ್ನು ದಾಖಲಿಸಿಕೊಂಡು, ಗೋಪ್ಯತೆಯನ್ನು ಕಾಪಾಡಬೇಕು’ ಎಂದು ಹೇಳಿದರು.

‘ಧಾರ್ಮಿಕ ಸ್ಥಳಗಳು ಸೇರಿದಂತೆ ಎಲ್ಲ ಸಾರ್ವಜನಿಕ ಪ್ರದೇಶಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಬೇಕು. ಧಾರ್ಮಿಕ ಶ್ರದ್ಧಾ ಕೇಂದ್ರಗಳಲ್ಲಿ ಭದ್ರತಾ ವ್ಯವಸ್ಥೆ, ಸಿಸಿಟಿವಿ ಕಣ್ಗಾವಲು, ಮಹಿಳೆಯರಿಗಾಗಿ ಸಹಾಯ ಕೇಂದ್ರಗಳನ್ನು ಆರಂಭಿಸಬೇಕು’ ಎಂದು ಹೇಳಿದರು.

‘ಪ್ರಕರಣಗಳ ಮರು ತನಿಖೆಗೆ ಎಸ್‌ಐಟಿ ರಚಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳದ ವ್ಯಾಪ್ತಿಯಲ್ಲಿ ನಡೆದಿರುವ ವೇದವಲ್ಲಿ, ಪದ್ಮಲತಾ, ನಾರಾಯಣ, ಯಮುನಾ ಹಾಗೂ ಸೌಜನ್ಯ ಪ್ರಕರಣಗಳ ಕುರಿತು ಮರು ತನಿಖೆ ನಡೆಸಲು ಇನ್ನೊಂದು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಬೇಕು ಎಂದು ಎಡ ಪಕ್ಷಗಳು ಆಗ್ರಹಿಸಿವೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಪಿಎಂ ಕಾರ್ಯದರ್ಶಿ ಕೆ.ಪ್ರಕಾಶ್, ಸಿಪಿಐ ಕಾರ್ಯದರ್ಶಿ ಸಾತಿ ಸುಂದರೇಶ್, ಸಿಪಿಐ–ಎಂಎಲ್‌ನ ಸದಸ್ಯೆ ಲೇಖಾ, ‘ಈ ಎಲ್ಲ ಪ್ರಕರಣಗಳ ಕುರಿತು ಸರಿಯಾಗಿ ತನಿಖೆ ನಡೆಸದೇ ಮುಚ್ಚಿ ಹಾಕಲಾಗಿದೆ. ಸೌಜನ್ಯ ಪ್ರಕರಣವನ್ನು ಮರು ತನಿಖೆ ನಡೆಸುವಂತೆ ಸಿಬಿಐ ನ್ಯಾಯಾಲಯವೇ ಹೇಳಿದೆ. ಆದ್ದರಿಂದ ಈ ಬಗ್ಗೆ ಮರು ತನಿಖೆ ನಡೆಸಲು ಪ್ರಣವ್ ಮೊಹಾಂತಿ ನೇತೃತ್ವದ ಎಸ್‌ಐಟಿಗೆ ವಹಿಸಬೇಕು. ಇಲ್ಲದಿದ್ದರೆ ಮತ್ತೊಂದು ಎಸ್‌ಐಟಿ ರಚಿಸಿ ತನಿಖೆ ನಡೆಸಬೇಕು’ ಎಂದು ಒತ್ತಾಯಿಸಿದರು.

‘ಧರ್ಮಸ್ಥಳದ ವ್ಯಾಪ್ತಿಯಲ್ಲಿ ನಡೆದಿರುವ ಅಸಹಜ ಸಾವುಗಳು, ಅತ್ಯಾಚಾರಗಳು, ಕೊಲೆ ಪ್ರಕರಣಗಳಿಗೆ ಭೂ ಕಬಳಿಕೆಯ ನಂಟು ಇದೆ. ಇಲ್ಲಿ ನಡೆದಿರುವ ಭೂ ಕಬಳಿಕೆ, ಅಕ್ರಮ ಒಕ್ಕಲೆಬ್ಬಿಸುವಿಕೆ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಹೆಸರಿನಲ್ಲಿ ನಡೆಯುತ್ತಿರುವ ಕಿರುಕುಳ, ದೌರ್ಜನ್ಯ ಮತ್ತು ಆತ್ಮಹತ್ಯೆ ಪ್ರಕರಣಗಳ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು.

‘ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಹೆಸರಿನಲ್ಲಿ ಜನರ ಧಾರ್ಮಿಕ ನಂಬಿಕೆಗಳನ್ನು ಹಣಕಾಸಿನ ಲಾಭಕ್ಕಾಗಿ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಅನುಮತಿ ಇಲ್ಲದೇ ಅಗಾಧ ಪ್ರಮಾಣದ ಹಣಕಾಸಿನ ವ್ಯವಹಾರ ನಡೆಸಲಾಗುತ್ತಿದೆ. ದೇವರ ಹೆಸರಿನಲ್ಲಿ ಬಡ್ಡಿ ವ್ಯವಹಾರ ಮಾಡುತ್ತಿರುವುದು ಖಂಡನೀಯ. ಇದಕ್ಕೆ ಸರ್ಕಾರ ಕಡಿವಾಣ ಹಾಕಿ, ಸಮಗ್ರ ತನಿಖೆ ನಡೆಸಬೇಕು’ ಎಂದರು.

‘ಧರ್ಮ ಯುದ್ಧ’ ಹೋರಾಟ ಇಂದಿನಿಂದ

ಬೆಂಗಳೂರು: ‘ಧರ್ಮಸ್ಥಳ ವಿಚಾರದಲ್ಲಿ ರಾಜ್ಯ ಸರ್ಕಾರದ ಧೋರಣೆ ಖಂಡಿಸಿ, ‘ಧರ್ಮದ ಉಳಿವಿಗಾಗಿ ಧರ್ಮಯುದ್ಧ’ ಹೆಸರಿನಲ್ಲಿ ಶುಕ್ರವಾರದಿಂದ ಒಂದು ವಾರ ರಾಜ್ಯದ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಕಂದಾಯ ಇಲಾಖೆ
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560001
ದೂರವಾಣಿ ಸಂಖ್ಯೆ: 080–29565353, 29566556, 29604556 ಇ–ಮೇಲ್: splocaima21@gmail.com

ಸಂ. SPLOCA/ADM/30/2024-25 ದಿನಾಂಕ: 21–08–2025

ಪ್ರಕಟಣೆ

ವಿಷಯ: ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಮತ್ತು ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ರವರ ಕಛೇರಿಗೆ ಮಾನವ ಸಂಪನ್ಮೂಲ ಸೇವೆ ಪಡೆಯಲು ಅರ್ಜಿಗಳನ್ನು / ಪ್ರಸ್ತಾವನೆಗಳನ್ನು ಆಹ್ವಾನಿಸುತ್ತಿರುವ ಬಗ್ಗೆ.

ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಮತ್ತು ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ರವರ ಕಛೇರಿಗಳಲ್ಲಿ ಮಾನ್ಯ ಸರ್ಕಾರದಿಂದ ಮಂಜೂರಾಗಿ ಖಾಲಿ ಇರುವ ಈ ಕೆಳಕಂಡ ವಿವಿಧ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇರೆಗೆ ಭರ್ತಿ ಮಾಡಿಕೊಳ್ಳಲು ಆಸಕ್ತ ವೈಯಕ್ತಿಕ ವ್ಯಕ್ತಿಗಳಿಂದ Resume ಅನ್ನು ಆಹ್ವಾನಿಸಲಾಗಿದ್ದು, ಸದರಿ ಪ್ರಸ್ತಾವನೆಯನ್ನು ವಿಶೇಷಾಧಿಕಾರಿ ಮತ್ತು ಸಕ್ಷಮಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ರವರ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದೆ.

Last date of submission of Resume: 28-08-2025, 5.00. pm.
e-mail id: splocaima21@gmail.com

ಹುದ್ದೆಗಳ ವಿವರ:

Sl. No.	Post / Designation	Qualification		Relevant Experience		No. of Post	Contract Wage Per Month
		Basic	Preference	Basic	Preference		
1	Law Officer [To work in the offices of the CAs in Regional commissioner's office. Bangalore.]	LLB, LLM Registered at Bar council of Karnataka	LLM	Minimum 5 years experience in High court	10 years experience in High court & other courts	1	75,000/- to 85,000/- depending on experience

Sl. No.	Post / Designation	Qualification & Relevant Experience		No. of Post	Contract Wage Per Month
		Basic	Preference		
1	Stenographer	Graduate with Certificate in English & Kannada Steno, Typing & Shorthand. 1 Years in legal firm / Court	LLB with Certificate in English and Kannada Steno, Typing & Shorthand 3 Years in legal firm / Court	1	Rs. 30,000/- (Actual shall depend upon qualification & Experience)

Sl. No.	Post / Designation	Qualification	No. of Post	Contract Wage Per Month
		Basic		
1	Legal Typist	LLB, Registered at Bar Council of Karnataka, typing speed 40 WPM both English & Kannada Ability to communicate in both Kannada & English	1	22,000/- to 24,000/- including OT charges and Sitting fees as per Government norms (on an outsource basis)

The Position to be filled is a post created by the Revenue Department Government of Karnataka vide different Government Orders and is renewable year on year. It is a post on contract, renewable on satisfactory performance with periodic enhancement of salary scales, **not a permanent government service.**

ಸಹಿ/–
ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು
ಐ.ಎಂ.ಎ. ಮತ್ತು ಇತರ ವಂಚನೆ ಪ್ರಕರಣಗಳು,
ಕಂದಾಯ ಇಲಾಖೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/2435/ಅಡ್ವರ್ಟೋ2025–26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No: 08372-238782 Fax No. 08372-237268
E.Mail : eepwdgad@gmail.com
ನಂ:ಕಾನಿಇಂಗಃಲೋಇ:ಪಿಬಿ–1 :ವಿವಿಧ: 2025–26/2007
ದಿನಾಂಕ : 20–08–2025

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **1071.51** ಲಕ್ಷ ಮೊತ್ತದಲ್ಲಿ ಒಟು 20 ಕಾಮಗಾರಿಗೆ (ಕನಿಷ್ಟ ಮೊತ್ತ ರೂ: **2.00** ಲಕ್ಷ ಹಾಗೂ ಗರಿಷ್ಟ ಮೊತ್ತ ರೂ: **700.00** ಲಕ್ಷ) ಕೆಪಿಪಿಪಿ (kppp) ನಲ್ಲಿ ನೋಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟ್ಯಾಂಡರ್ಡ್ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ–1, 2, 3 ಹಾಗೂ 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.kppp.karnataka.gov.in/ ದಲ್ಲಿ ನೋಡಿಕೊಳ್ಳಬಹುದು.

Work Indent No:- Part-1) : 24286, 24138-Category-I, 22509, 24479, 22514-Category 2A, 23175-ST, 22892, 22672-SC, 24525 Category-2A, 22737-SC, 22736-SC, 22716-SC, 23527, 23223, 22718-Category 2A and 22807.

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **22–09–2025** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **25–09–2025** ಮಧ್ಯಾಹ್ನ 4.00 ಘಂಟೆಯ ವರೆಗೆ, ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ : **26–09–2025**

Work Indent No:- Part-2) : 22544, 20180 2ನೇ ಕರೆ ಕೆಟಗರಿ–1 ಹಾಗೂ **21562**–2ನೇಕರೆ

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **01–09–2025** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **06–09–2025** ಮಧ್ಯಾಹ್ನ 4.00 ಘಂಟೆಯ ವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **08–09–2025** ಆರ್ಥಿಕ ಬಿಡ್ ತೆರೆಯುವ ದಿನಾಂಕ : **09–09–2025**

Work Indent No:- Part-3) :
SE0176 Consultancy service(KC-7)

ಕಾಮಗಾರಿಯ ಟೆಂಡರ ವಿವರ ಪೂರ್ವಭಾವಿ ಹಾಗೂ ಪ್ರಶ್ನೋತ್ತರ ದಿನಾಂಕ : **26–08–2025** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **29–08–2025** ಮಧ್ಯಾಹ್ನ 4.00 ಘಂಟೆಯ ವರೆಗೆ, ತಾಂತ್ರಿಕ/ ಆರ್ಥಿಕ ಬಿಡ್ ತೆರೆಯುವ ದಿನಾಂಕ : **30–08–2025**

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ–1 ಹಾಗೂ ಕೆಟಗರಿ–2 ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/252/2025–26

ಮೆಸ್ಕಾಂ MESCOM
ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಕಛೇರಿ, ಮೆಸ್ಕಾಂ ಭವನ, ಬಿಜೈ, ಮಂಗಳೂರು–575004
ದೂರವಾಣಿ: 0824-2885795, CIN: U40109 KA 2002 SGC 030425
ಸಂಖ್ಯೆ:ಮ.ವಿ.ಸ.ಕಂ./ಅ.ಇಂ(ಖ)/ಕಾನಿಇಂ(ಕಾ)/ಸಕಾನಿಇಂ/364/2025 ದಿನಾಂಕ: 19.08.2025

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಮಾದರಿಯಲ್ಲಿ ಮಾತ್ರ)

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯು ಮಂಗಳೂರು ವೃತ್ತ ವ್ಯಾಪ್ತಿಯ ಪುತ್ತೂರು ವಿಭಾಗದ ವ್ಯಾಪ್ತಿಯಲ್ಲಿನ ಪ್ರಸ್ತಾವಿತ 33/11ಕೆವಿ ಕೊಯಿಲಾ ಉಪಕೇಂದ್ರದಿಂದ ಹಾಲಿ ಚಾಲ್ತಿಯಲ್ಲಿರುವ 33ಕೆವಿ ಪುತ್ತೂರು–ನೆಲ್ಯಾಡಿ ಮಾರ್ಗಕ್ಕೆ ಅಲಂಕಾರ್ ಜಂಕ್ಷನ್ ವರೆಗೆ ಸುಮಾರು 7.4 ಕಿ.ಮೀ. ಉದ್ದದ 33ಕೆವಿ ಮಾರ್ಗವನ್ನು ಪೂರ್ಣ ಗುತ್ತಿಗೆ ಆಧಾರದಲ್ಲಿ ನಿರ್ಮಾಣ ಮಾಡುವ ಕಾಮಗಾರಿಯನ್ನು ಬಿಡ್ ವಿಚಾರಣಾ ಸಂಖ್ಯೆ: MESCOM/2025-26/EL/WORK_INDENT356 ರಲ್ಲಿ ಟೆಂಡರ್ ಅನ್ನು ಆಹ್ವಾನಿಸುತ್ತಿದೆ.

ಆಸಕ್ತಿಯುಳ್ಳ ಅರ್ಹ ಬಿಡ್‌ದಾರರು ವೆಬ್‌ಸೈಟ್ https://kppp.karnataka.gov.in ಗೆ ದಿನಾಂಕ **22.08.2025** ರಂದು ಅಥವಾ ನಂತರ ಲಾಗ್ ಆನ್ ಮಾಡಬಹುದು.

ಸಹಿ/– ಅಧೀಕ್ಷಕ ಇಂಜಿನಿಯರ್(ವಿ) (ಖರೀದಿ)
DIPR/MNG/665/MPL/25-26
ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ : 1912ಕ್ಕೆ ಕರೆ ಮಾಡಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಎತ್ತಿನಹೊಳೆ ಯೋಜನಾ ವಿಭಾಗ,
ನಂ:4 ಮಧುಗಿರಿ, ತುಮಕೂರು ಜಿಲ್ಲೆ.–572132,
ದೂ ಸಂಖ್ಯೆ: 08137–282112 Email:eeyetmadhugiri4@gmail.com
ಕ್ರ.ಸಂ:ಕಾಇಂ:ವಿಜನಿನಿ/ಎಹೊಯೋ/ಮ/ವಿ.04/ಟೆ.ಅ–04/2025–26
ದಿನಾಂಕ: 12.08.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವರವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ CONSTRUCTION OF EARTHEN DAM ACROSS GHANTALAMALLAMMA KANIVE IN PATHAKOTE VILLAGE, PATHAPALYA HOBLI OF BAGEPALLI TALUK, CHIKKABALLAPUR DISTRICT. ಕಾಮಗಾರಿಗೆ ಎರಡು ಟೆಂಡರ್ ದಾಖಲೆಗಳ ಪದ್ಧತಿಯ ಮೂಲಕ ರೂ. 14155.55 ಲಕ್ಷಗಳಿಗೆ ಅರ್ಹ ಗುತ್ತಿಗೆದಾರ ರಿಂದ ಶೇಕಡಾವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕೆ.ಪಿ.ಪಿ–ಪೋರ್ಟಲ್ ನ http://www.kppp.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ: 14.08.2025 ರಿಂದ ದಿನಾಂಕ: 15.09.2025 ರ ಸಂಜೆ 5.00 ಗಂಟೆಯ ವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ, ನಿಗದಿಪಡಿಸಿದ ಇ.ಎಂ.ಡಿ ಮೊತ್ತ, ಗುತ್ತಿಗೆದಾರರ ದರ್ಜೆ, ಟೆಂಡರ್ ನಿಯಮ, ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳನ್ನು http://www.kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿ ಸಮಯದಲ್ಲಿ ದಿನಾಂಕ: 01.09.2025 ರ ಸಂಜೆ 3:00 ಗಂಟೆಯ ವರೆಗೆ ಸಂಪರ್ಕಿಸಬಹುದು, ಈ ಕಾಮಗಾರಿಯ ಪ್ರೀ–ಬಿಡ್ ಸಭೆಯನ್ನು ದಿನಾಂಕ: 01.09.2025 ರಂದು ಬೆಳಗ್ಗೆ 11.00 ಗಂಟೆಗೆ ವ್ಯವಸ್ಥಾಪಕ ನಿರ್ದೇಶಕರು, ವಿಜನಿನಿ, ಬೆಂಗಳೂರು ಇವರ ಕಛೇರಿಯಲ್ಲಿ ಅಯೋಜಿಸಲಾಗಿರುತ್ತದೆ. ಸ್ವೀಕೃತ ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ: 17.09.2025 ರಂದು ಬೆಳಿಗ್ಗೆ 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.04 ಮಧುಗಿರಿ ರವರ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಕೆಳ ಸಹಿದಾರರು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಎತ್ತಿನಹೊಳೆ ಯೋಜನಾ ವಿಭಾಗ ನಂ.4, ವಿಜನಿನಿ, ಮಧುಗಿರಿ
DIPR/TUM/255/KSMCA/2025-26

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
HASSAN INSTITUTE OF MEDICAL SCIENCES, HASSAN (An Autonomous Institute under the Dept of Medical Education, Government of Karnataka) SRI CHAMARAJENDRA HOSPITAL CAMPUS, HASSAN
Website: https://himshassan.karnataka.gov.in/
Phone/Fax No.08172-231699, 231599,
Email:directorhims@yahoo.com
ಸಂಖ್ಯೆ:ಹಿಮ್ಸ್/ಸಿ/(1)/15/2024–25 ದಿನಾಂಕ:19.08.2025

ನೇರ ಸಂದರ್ಶನ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರು–10 ಹುದ್ದೆ, ಹಿರಿಯ ಸ್ಥಾನೀಯ ವೈದ್ಯರು – 16, ಬಹುವಿಭಾಗೀಯ ಸಂಶೋಧನಾ ಘಟಕ(ಎಂ.ಆರ್.ಯು) ನ Lab -Technician / Research assistant - 02, ಮಿಣಿ ಜೀವಶಾಸ್ತ್ರ ವಿಭಾಗ (VRDL) ನ Data Entry Operator-01 ಹಾಗೂ Multi Tasking Staff-01 ಹುದ್ದೆಗಳನ್ನು 06 ತಿಂಗಳ ಅವಧಿಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ದಿನಾಂಕ:29.08.2025ರಂದು 9.30 AM ರಿಂದ 5.30 PM ರವರೆಗೆ ನೇರ ಸಂದರ್ಶನ ನಿಗದಿಪಡಿಸಿದ್ದು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ. ನೇರ ಸಂದರ್ಶನಕ್ಕೆ ಅಭ್ಯರ್ಥಿಗಳು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಹಾಗೂ ಮೂಲ ದಾಖಲಾತಿಗಳೊಂದಿಗೆ ಹಾಜರಾಗಲು ಸೂಚಿಸಿದೆ. ಅರ್ಜಿ ನಮೂನೆ, ವಿದ್ಯಾರ್ಹತೆ, ಮೀಸಲಾತಿ, ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಇತರೆ ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಅಂತರ್ಜಾಲ www.himshassan.karnataka.gov.in ಇಲ್ಲಿ ಪರಿಶೀಲಿಸಿಕೊಳ್ಳಬಹುದು.

ಸಹಿ/–ಮುಖ್ಯ ಆಡಳಿತಾಧಿಕಾರಿಗಳು, ಹಾಸನ
ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
ವಾಸಾಸಂಇ/ಹಿಸನಿ/ಹಾಸನ/468/ಕೆಎಸ್‌ಎಂಸಿಎ/2025–26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ – ಟ್ರಾಫಿಕ್ ಇಂಜಿನಿಯರಿಂಗ್ ಸೆಲ್–1 ವಿಭಾಗ, ಎನ್.ಆರ್. ಚೌಕ, ಬೆಂಗಳೂರು – 560002.
ಸಂಖ್ಯೆ: ಕಾಅ/ರಮೂಸೌ/ಟಿಇಸಿ–1/ಟೆಂಡರ್/01/2025–26 ದಿನಾಂಕ: 21–08–2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ – ಟ್ರಾಫಿಕ್ ಇಂಜಿನಿಯರಿಂಗ್ ಸೆಲ್–1 ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಜೆಟ್ ಪ್ಯಾಚರ್ ಬಳಸಿ ಗುಂಡಿಗಳನ್ನು ತುಂಬುವ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 210.00, ಇ.ಎಂ.ಡಿ. ಮೊತ್ತ (ರೂ. ಲಕ್ಷಗಳಲ್ಲಿ): 3.25 (ರೂ. 1.00 ಲಕ್ಷ ಇ–ಪಾವತಿ ಮೂಲಕ ಮತ್ತು ಬಾಕಿ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಿರ್ದಿಷ್ಟಪಡಿಸಿದಂತೆ).**
2	ಬಿಬಿಎಂಪಿ ಬ್ಯಾಚ್ ಮಿಕ್ಸ್ ಪ್ಲಾಂಟ್‌ನಲ್ಲಿ ಒಟ್ಟು ಶೇಖರಣಾ ಶೆಡ್‌ಗೆ ರ್‍ಯಾಂಪ್ ಮತ್ತು ಕಾಂಕ್ರೀಟ್ ನೆಲಹಾಸು ಒದಗಿಸುವುದು, ಬ್ಯಾಚ್ ಮಿಕ್ಸ್ ಪ್ಲಾಂಟ್‌ಗೆ ದುರಸ್ತಿ ಹಾಗೂ ಬೌಂಡರಿ ವಾಲ್‌ಗೆ ಶೀಟಿಂಗ್ ಒದಗಿಸುವ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 52.00, ಇ.ಎಂ.ಡಿ. ಮೊತ್ತ (ರೂ. ಲಕ್ಷಗಳಲ್ಲಿ): 1.05**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **25–08–2025 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ವಿಚಾರಣೆಗಳಿಗೆ ಕೊನೆಯ ದಿನಾಂಕ: **28–08–2025 ರಂದು ಮಧ್ಯಾಹ್ನ 3.00 ಗಂಟೆವರೆಗೆ.** 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: **28–08–2025 ರಂದು ಸಂಜೆ 4.30 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, 4ನೇ ಮಹಡಿ, ಅನೆಕ್ಸ್–3 ಕಟ್ಟಡ, ಎನ್.ಆರ್. ಚೌಕ, ಬಿಬಿಎಂಪಿ, ಬೆಂಗಳೂರು – 560002** ಇಲ್ಲಿ ನಡೆಯುವುದು. 4) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **02–09–2025 ರಂದು ಸಂಜೆ 4.00 ಗಂಟೆವರೆಗೆ.** 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **03–09–2025 ರಂದು ಸಂಜೆ 4.30 ಗಂಟೆಯ ನಂತರ.** 6) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **ಅರ್ಹ ಟೆಂಡರ್‌ದಾರರಿಗೆ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ರಸ್ತೆ ಮೂಲ ಸೌಕರ್ಯ – ಟ್ರಾಫಿಕ್ ಇಂಜಿನಿಯರಿಂಗ್ ಸೆಲ್–1, ಬಿಬಿಎಂಪಿ.

ಪಂಚಾಯತ್ ರಾಜ್ ಇಂಜನೀಯರಿಂಗ್ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ,
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ,ವಿಜಯಪುರ
ದೂರವಾಣಿ ಸಂ:08352–277816, ಫ್ಯಾಕ್ಸ್:08352–277817
ಇ–ಮೇಲ್:zpebjp9@yahoo.co.in
ಸಂಖ್ಯೆ:ಕಾಇಂ/ಪಂ.ರಾ.ಇಂ.ವಿ/ವಿಜ/ಇಪ್ರಾ/ಟೆಂಡರ್/2025–26/1519
ದಿನಾಂಕ:19.08.2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ದ್ವಿ ಲಕೋಟಿ ಪದ್ದತಿ)

ಕಾರ್ಯನಿರ್ವಾಹಕ ಇಂಜನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2024–25 ನೇ ಸಾಲಿನ ವಿವಿಧ ಅನುದಾನ ಯೋಜನೆಯಡಿಯಲ್ಲಿ **ಸಾಮಾನ್ಯ ಗುತ್ತಿಗೆದಾರರ** 6 ಕಾಮಗಾರಿ (ಇಂಡೆಂಟ ನಂ. RDPR/2025-26/RD/WORK_INDENT17639, 17717, 17640, 17512, 17802 & 17737) **ಪರಿಶಿಷ್ಟ ಜಾತಿ ಗುತ್ತಿಗೆದಾರರ** 1 ಕಾಮಗಾರಿ (ಇಂಡೆಂಟ ನಂ. RDPR/2025-26/BD/WORK_INDENT17075/CALL-2) **ಪ್ರವರ್ಗ–2(ಎ) ಗುತ್ತಿಗೆದಾರರ** 2 ಕಾಮಗಾರಿ (ಇಂಡೆಂಟ ನಂ. RDPR/2025-26/BD/WORK_INDENT17736 &17204/Call-2) ಪರಿಶಿಷ್ಟ ಪಂಗಡ ಗುತ್ತಿಗೆದಾರರ 1 ಕಾಮಗಾರಿ (ಇಂಡೆಂಟ ನಂ. RDPR/2025-26/BD/WORK_INDENT15446) ಹೀಗೆ ಒಟ್ಟು 10 ಕಾಮಗಾರಿಗಳಿಗೆ 5.20 ಲಕ್ಷದಿಂದ 220.00 ಲಕ್ಷದವರೆಗೆ ಕೆ.ಡಬ್ಲೂ–1, 2, 3 ಮತ್ತು 4 ರ ಪ್ರಕಾರ ಈ ಕಚೇರಿಯ ಟೆಂಡರ್ ಪ್ರಕಟಣೆ **ಸಂಖ್ಯೆ: 1519 ದಿನಾಂಕ: 19.08.2025** ರಂತೆ ಕಾಮಗಾರಿಗಳನ್ನು ಇ–ಟೆಂಡರ್‌ನ್ನು ಆಹ್ವಾನಿಸಿದ್ದು, ಕೆ.ಪಿ.ಪಿ ಪ್ರೋಟಲ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 08.09.2025 ಸಾಯಂಕಾಲ 5.30 ಗಂಟೆಯವರೆಗೆ ಮಾತ್ರ ನಿಗದಿಪಡಿಸಿರುತ್ತದೆ.

ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.kppp.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ. ವಿಭಾಗ, ವಿಜಯಪುರ.
ವಾಸಾಸಂಇ/ವಿಜಯಪುರ/274/ಕೆಎಸ್‌ಎಂಸಿಎ/2025–26

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನಂ.16ಡಿ. 5ನೇ ಮಹಡಿ ದೇವರಾಜ ಅರಸು ಭವನ, ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052.
ಸಂಖ್ಯೆ: ಕ.ವಿ.ಅ.ನಿ/ಟೆಂ/ಪಂಮೋ/ಸಿ.ಆರ್–439/2025–26 ದಿನಾಂಕ: 21–08–2025

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಕೊಳವೆ ಬಾವಿಗಳಿಗೆ ಪಂಪು ಮೋಟಾರು ಹಾಗೂ ಇತರೆ ಪೂರಕ ಸಾಮಗ್ರಿಗಳನ್ನು ಸರಬರಾಜು ಮಾಡಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಒಳಪಡುವ 1)ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, 2)ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ 3)ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ, 4)ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ, 5)ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮ, 6)ಕರ್ನಾಟಕ ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮ, 7)ಕರ್ನಾಟಕ ಒಕ್ಕಲಿಗ ಅಭಿವೃದ್ಧಿ ನಿಗಮ. 8)ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ, 9)ಕರ್ನಾಟಕ ಮರಾಠ ಸಮುಯದಾಯಗಳ ಅಭಿವೃದ್ಧಿ ಹಾಗೂ 10)ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ, 11)ಕಾಡುಗೊಲ್ಲ ಅಭಿವೃದ್ಧಿ ನಿಗಮಗಳಿಂದ ಅನುಷ್ಠಾನ ಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಕೊಳವೆ ಬಾವಿಗಳಿಗೆ ಪಂಪು ಮೋಟಾರು ಹಾಗೂ ಇತರೆ ಪೂರಕ ಸಾಮಗ್ರಿಗಳನ್ನು ಸರಬರಾಜು ಮಾಡಲು ಎರಡು ಲಕೋಟೆಯ, ತಾಂತ್ರಿಕ ಬಿಡ್ ಹಾಗೂ ಆರ್ಥಿಕ ಬಿಡ್ ಡಾಕ್ಯೂಮೆಂಟ್ ವಿಧಾನದಲ್ಲಿ 17 ಪ್ಯಾಕೇಜ್‌ಗಳಂತೆ ಪ್ರತ್ಯೇಕವಾಗಿ ಟೆಂಡರ್ ಆಹ್ವಾನಿಸಿ ಪ್ರಕಟಣೆಯನ್ನು ಹೊರಡಿಸಲಾಗಿದ್ದು ಟೆಂಡರ್‌ನಲ್ಲಿ ಭಾಗವಹಿಸಲು ಬೇಕಾದ ಅರ್ಹತೆ, ಟೆಂಡರ್ ಸಲ್ಲಿಸುವ ವಿಧಾನ, ನಿಬಂಧನೆಗಳು, ಇ.ಎಂ.ಡಿ ಮೊತ್ತ, ಕೊರೆಯಬೇಕಾದ ಕೊಳವೆ ಬಾವಿಗಳ ಸಂಖ್ಯೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಅಂತರ್ಜಾಲ ತಾಣ https://kppp.karnataka.gov.in ನಲ್ಲಿ ಅಥವಾ ಕಛೇರಿ ವೇಳೆಯಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.(ದೂರವಾಣಿ ಸಂಖ್ಯೆ:8151827193)

1) ಪ್ರಿ–ಬಿಡ್ ಪ್ರಶ್ನೆಗಳನ್ನು (Querries) ಸಲ್ಲಿಸಲು ನಿಗಧಿ ಪಡಿಸಿದ ಕೊನೆಯ ದಿನಾಂಕ: 02/09/2025ರ 5:30 pm ಗಂಟೆಯವರೆಗೆ. 2) ಪ್ರಿ–ಬಿಡ್ ಸಭೆಯ ದಿನಾಂಕ: 03/09/2025 ಬೆಳಗ್ಗೆ 11:00 am 3) ಇ–ಪೋರ್ಟಲ್ ಮುಖಾಂತರ ಬಿಡ್ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕ: 22/09/2025 ರ 5:00 pm ಗಂಟೆಯವರೆಗೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23/09/2025 ರ 5:15 pm ಗಂಟೆಗೆ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ: 26/09/2025 10:30 am ಗಂಟೆಗೆ.

ಸದರಿ ಟೆಂಡರ್ ಅನ್ನು ಪ್ರಕಟಣೆಯನ್ನು ತಿರಸ್ಕರಿಸುವ/ರದ್ದುಪಡಿಸುವ ಪೂರ್ಣ ಅಧಿಕಾರವನ್ನು ಟೆಂಡರ್ ಅಂಗೀಕಾರ ಪ್ರಾಧಿಕಾರವು ಹೊಂದಿರುತ್ತದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು,
ಕೆವಿಸಿಡಿಸಿ.
ವಾ.ಸಾ.ಸಂ.ಇ/ವಾಪ್ರ/2417/ಆಕಾರ್/2025–26

ಪಿ.ಜಿ.ಕೋರ್ಸ್‌ಗಳಿಗೆ ಪ್ರತ್ಯೇಕ ಬ್ಲಾಕ್

ನೃಪತುಂಗ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಕೋರ್ಸ್

• ಎ.ಎಂ.ಸುರೇಶ

ಬೆಂಗಳೂರು: ಐದು ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದಿರುವ ನೃಪತುಂಗ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಕೋರ್ಸ್‌ಗಳಿಗಾಗಿಯೇ ಸುಸಜ್ಜಿತವಾದ ಪ್ರತ್ಯೇಕ ಬ್ಲಾಕ್ ನಿರ್ಮಿಸಲಾಗಿದೆ.

ರಾಷ್ಟ್ರೀಯ ಉಚ್ಚತರ ಶಿಕ್ಷಾ ಅಭಿಯಾನದಡಿ (ರೂಸಾ) ವಿಶ್ವ-ವಿದ್ಯಾಲಯಕ್ಕೆ ₹55 ಕೋಟಿ ಅನುದಾನ ದೊರೆತಿದ್ದು, ಇದರಲ್ಲಿ ₹52.08 ಕೋಟಿ ಖರ್ಚು ಮಾಡಿ ಹೊಸ ಕಟ್ಟಡ ಕಟ್ಟಲಾಗಿದೆ. ಇದರಲ್ಲಿ 28 ಬೋಧನಾ ಕೊಠಡಿಗಳಿದ್ದು, ಸ್ನಾತಕೋತ್ತರ ಕೋರ್ಸ್‌ಗಳಿಗೆ ಇದನ್ನು ಮೀಸಲಿಡಲಾಗಿದೆ. 2021ರಲ್ಲಿ ವಿಶ್ವವಿ-ದ್ಯಾಲಯ ಅಸ್ತಿತ್ವಕ್ಕೆ ಬಂದಿದ್ದು, ಇದಾದ ನಂತರ ಹಂತ ಹಂತವಾಗಿ ರೂಸಾ ಅಡಿ ಹಣ ಬಿಡುಗಡೆಯಾಗಿದೆ. ಇದರಲ್ಲಿ ಶೇ 60ರಷ್ಟನ್ನು ಕೇಂದ್ರ ಸರ್ಕಾರ ಹಾಗೂ ಶೇ 40ರಷ್ಟನ್ನು ರಾಜ್ಯ ಸರ್ಕಾರ ನೀಡಿವೆ. ನೆಲ ಮಹಡಿ ಬಿಟ್ಟು, ಒಟ್ಟು ಐದು ಮಹಡಿಗಳನ್ನು ನಿರ್ಮಿಸಲಾಗಿದೆ ಎಂದು ಕುಲಸಚಿವೆ ಪ್ರೊ.ಎ.ಸಿ.ಮಂಜುಳಾ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ನೂತನ ಬ್ಲಾಕ್‌ನಲ್ಲಿ 6 ಮತ್ತು 7ನೇ ಮಹಡಿಗಳಿಗೆ ಹೊರ ಭಾಗದ ಗೋಡೆಗಳನ್ನು ಮಾತ್ರ ನಿರ್ಮಿಸಲಾಗಿದೆ. ಒಳಭಾಗದ ಕೆಲಸಗಳಿಗೆ ಸುಮಾರು ₹5 ಕೋಟಿ ಅನುದಾನ ಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ಸರ್ಕಾರ ಅನುದಾನ ನೀಡಿದರೆ, ಉಳಿದ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಅವರು ವಿವರಿಸಿದರು.

ವಿವಿಧ ಪ್ರಯೋಗಾಲಯಗಳಿಗೆ ₹2.18 ಕೋಟಿ ವೆಚ್ಚದಲ್ಲಿ ನೂತನ ಉಪಕರಣಗಳನ್ನು ಖರೀದಿಸಲು ನಿರ್ಧರಿಸಲಾಗಿದೆ. ಹೊಸ ಬ್ಲಾಕ್ ಉದ್ಘಾಟನೆಯಾದ ಬಳಿಕ ಈ ಪ್ರಕ್ರಿಯೆ ಶುರುವಾಗಲಿದೆ. ಸುಮಾರು ಎರಡು ಸಾವಿರ ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದು, ಅವರಿಗೆ ಅತ್ಯಾಧುನಿಕ-ವಾದ ಸೌಲಭ್ಯಗಳನ್ನು ಕಲ್ಪಿಸಲು ಉದ್ದೇ-ಶಿಸಲಾಗಿದೆ. ಈ ವರ್ಷ ಹೊಸದಾಗಿ ಎಂಸಿಎ ಆರಂಭಿಸಲಾಗಿದೆ. ಬಿಸಿಎ, ಬಿಬಿಎಗೆ ಹೆಚ್ಚು ಬೇಡಿಕೆ ಇದೆ. ಬಿ.ಎಸ್ಸಿ ಬಿ.ಇಡಿ ಪ್ರವೇಶಕ್ಕೆ 50 ಸೀಟುಗಳು ಇವೆ. ಆದರೆ, 500 ಅರ್ಜಿಗಳು ಬಂದಿವೆ. ಮುಂದಿನ ವರ್ಷದಿಂದ ಕೃತಕ ಬುದ್ಧಿಮತ್ತೆ ಸೇರಿದಂತೆ ಹೊಸ ಕೋರ್ಸ್‌ಗಳನ್ನು ಆರಂಭಿಸುವ ಉದ್ದೇಶವಿದೆ ಎಂದು ಹಂಗಾಮಿ ಕುಲಪತಿ ಪ್ರೊ.ಫಜೀಹಾ ಸುಲ್ತಾನ ತಿಳಿಸಿದರು.

ಹಾಸ್ಟೆಲ್ ಆರಂಭಿಸುವ ಅಗತ್ಯವಿದೆ. ಆದರೆ, ಇದಕ್ಕೆ ಜಾಗದ ಕೊರತೆ ಇದೆ. ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಲಾಗಿದೆ. ಅಲ್ಲದೆ ಅಭಿವೃದ್ಧಿ ಕಾರ್ಯಗಳಿಗೆ ವಿಶೇಷ ಅನುದಾನ ನೀಡುವಂತೆ ಕೇಳಿದ್ದೇವೆ.
ಪ್ರೊ.ಫಜೀಹಾ ಸುಲ್ತಾನ, ಹಂಗಾಮಿ ಕುಲಪತಿ

ಅಂಕಿ ಅಂಶಗಳು

100 ಮಂಜೂರಾದ ಬೋಧಕ ಹುದ್ದೆಗಳು

65 ವಿಶ್ವವಿದ್ಯಾಲಯದಲ್ಲಿ ಇರುವ ಕಾಯಂ ಬೋಧಕರು

75 ಅತಿಥಿ ಉಪನ್ಯಾಸಕರು

ನೂತನ ಬ್ಲಾಕ್

'ಇನ್ನೂ ಪರಿನಿಯಮಾವಳಿ ಆಗಿಲ್ಲ'

ವಿಶ್ವವಿದ್ಯಾಲಯದಲ್ಲಿ ಈಗ ಇರುವ ಸಿಬ್ಬಂದಿ ತಾಂತ್ರಿಕವಾಗಿ ಈಗಲೂ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲೇ ಇದ್ದಾರೆ. ನಿಯೋಜನೆ ಮೇಲೆ ವಿ.ವಿ.ಗೆ ಬಂದವರು ಎಂದು ದಾಖಲೆಗಳಲ್ಲಿ ತೋರಿಸಲಾಗಿದೆ. ಇದಕ್ಕೆ ಕಾರಣ, ವಿಶ್ವವಿ-ದ್ಯಾಲಯ ಅಸ್ತಿತ್ವಕ್ಕೆ ಬಂದು ಐದು ವರ್ಷವಾದರೂ ಪರಿನಿಯ-ಮಾವಳಿಗಳ ರಚನೆ ಆಗದೆ ಇರುವುದು.

ಒಮ್ಮೆ ಪರಿನಿಯಮಾವಳಿ ರಚನೆಯಾದರೆ, ಈಗಿರುವ ಸಿಬ್ಬಂದಿ ಪೈಕಿ ವಿಶ್ವವಿದ್ಯಾಲಯದಲ್ಲಿ ಉಳಿಯುವವರು ಯಾರು? ಇಲ್ಲಿಂದ ಹೊರಗೆ ಹೋಗುವವರು ಯಾರು? ಎಂಬುದು ನಿರ್ಧಾರವಾಗಲಿದೆ. ಅಲ್ಲದೆ ಹೊಸ ನೇಮಕಾತಿಗೂ ಅನುಕೂಲವಾಗಲಿದೆ. ಸರ್ಕಾರ ಆದಷ್ಟು ಬೇಗ ಪರಿನಿಯಮಾವಳಿಗಳ ರಚನೆ ಮಾಡಬೇಕು ಎಂಬುದು ಇಲ್ಲಿ ಕಾರ್ಯನಿರ್ವಹಿಸುವ ಬೋಧಕರ ಬೇಡಿಕೆ.

ವಿಶ್ವವಿದ್ಯಾಲಯದಲ್ಲೇ ಉಳಿದರೆ ಹಳೆಯ ಪಿಂಚಣಿ ಸೌಲಭ್ಯ ಸಿಗುವುದಿಲ್ಲ. ಹೊರಗೆ ಹೋದರೆ (ಕಾಲೇಜು ಶಿಕ್ಷಣ ಇಲಾಖೆ ಆಯ್ಕೆ ಮಾಡಿಕೊಂಡರೆ) ಪಿಂಚಣಿ ಸಿಗಲಿದೆ. ಹೀಗಾಗಿ 2006ಕ್ಕೂ ಮುನ್ನ ನೇಮಕವಾಗಿರುವ ಸಿಬ್ಬಂದಿ ಹೊರಗೆ ಹೋಗಲು ಬಯಸುತ್ತಾರೆ. ಈ ಬಗ್ಗೆ ಗೊಂದಲಗಳಿದ್ದು, ಸರ್ಕಾರವೇ ಇದನ್ನು ಬಗೆಹರಿಸಬೇಕು ಎಂದು ಪ್ರಾಧ್ಯಾಪಕ-ರೊಬ್ಬರು ತಿಳಿಸಿದರು.

ಚಟಾಕಿ ಸುದ್ದಿ

ಗಣಿ ಸಚಿವರು ಯಾರು?

ಬೆಂಗಳೂರು: 'ರಾಜ್ಯದಲ್ಲಿ ಗಣಿ ಸಚಿವರು ಯಾರು ಎಂದು ಗೊತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಗಣಿಗಾರಿಕೆಗಳಿಂದ ಲೂಟಿಯಾಗುತ್ತಿದೆ. ಸರ್ಕಾರಕ್ಕೆ ರಾಜಸ್ವ ನಷ್ಟವಾಗುತ್ತಿದೆ' ಎಂದು ಬಿಜೆಪಿ ಉಚ್ಚಾಟಿತ ಸದಸ್ಯ ಎಸ್.ಟಿ. ಸೋಮಶೇಖರ್ ಪ್ರಶ್ನಿಸಿದರು.

ಅಕ್ರಮ ಗಣಿಗಾರಿಕೆಯಿಂದ ಗಳಿಸಿದ ಸ್ವತ್ತಿನ ಜಪ್ತಿಗಾಗಿ ವಸೂಲಿ ಆಯುಕ್ತರನ್ನು ನೇಮಿಸುವ ಉದ್ದೇಶದಿಂದ ರೂಪಿಸಿದ ಮಸೂದೆಯನ್ನು ಗಣಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಪರ ಕಾನೂನು ಸಚಿವ ಎಚ್. ಕೆ . ಪಾಟೀಲ ಮಂಡಿಸಿದರು.

ಆಗ ಮಾತನಾಡಿದ ಸೋಮಶೇಖರ್, 'ಈ ಬಗ್ಗೆ ಕಳೆದ ಅಧಿವೇಶನದಲ್ಲೂ ಪ್ರಸ್ತಾಪ ಮಾಡಿದ್ದೆ. ತನಿಖೆ ಮಾಡುತ್ತೇವೆ, ಕ್ರಮ ಕೈಗೊಳ್ಳುತ್ತೇವೆ ಎಂದು ಸರ್ಕಾರ ಭರವಸೆ ನೀಡಿತ್ತು. ಅದ್ಯಾವುದೂ ಆಗಿಲ್ಲ. ಈ ರೀತಿಯ ಲೂಟಿಗಳನ್ನು ಮೊದಲು ನಿಲ್ಲಿಸಿ. ಹೊಸ ಕಾಯ್ದೆ, ಕಾನೂನುಗಳು ಬರೀ ಬೋಗಸ್' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆಸ್ತಿ ತೆರಿಗೆ ನೋಟಿಸ್: 4 ಸಾವಿರ ಮಾಲೀಕರ ಆಕ್ಷೇಪ

ಬೆಂಗಳೂರು: ಆಸ್ತಿ ತೆರಿಗೆಗೆ ಸಂಬಂಧಿಸಿದಂತೆ ಬಿಬಿಎಂಪಿ ನೀಡಿದ್ದ ನೋಟಿಸ್‌ಗೆ ಒಟ್ಟು 4,068 ಆಸ್ತಿ ಮಾಲೀಕರು ಆಕ್ಷೇಪಣೆ ಸಲ್ಲಿಸಿದ್ದಾರೆ.

ಆಸ್ತಿ ತೆರಿಗೆಯನ್ನು ಕಡಿಮೆ ಘೋಷಿಸಿದ್ದಾಗಿ ನೋಟಿಸ್ ನೀಡಲಾಗಿತ್ತು. ಪಾಲಿಕೆ ನೀಡಿದ ಒಟ್ಟು ನೋಟಿಸ್‌ಗಳಲ್ಲಿ ಶೇಕಡ 13ರಷ್ಟು ಮಂದಿ ಆಕ್ಷೇಪಣೆ ಸಲ್ಲಿಸಿದ್ದಾರೆ.

ಬೊಮ್ಮನಹಳ್ಳಿ, ಮಹದೇವಪುರ ಮತ್ತು ಪೂರ್ವ ವಲಯಗಳಿಂದ ತಲಾ 700ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ದಕ್ಷಿಣ, ಯಲಹಂಕ ಮತ್ತು ರಾಜರಾಜೇಶ್ವರಿ ನಗರ ವಲಯಗಳಲ್ಲಿ ತಲಾ 400 ಆಕ್ಷೇಪಣೆಗಳು ಸಲ್ಲಿಕೆಯಾಗಿವೆ. ಈ ಎಲ್ಲ ಅರ್ಜಿಗಳನ್ನು ಬಿಬಿಎಂಪಿಯ ಹೊಸದಾಗಿ ಅಭಿವೃದ್ಧಿಪ-ಡಿಸಿದ 'ಇ-ನ್ಯಾಯ' ವೆಬ್ ಪೋರ್ಟಲ್ ಮೂಲಕ ಸಲ್ಲಿಸಲಾಗಿದೆ. ಇದರ ಮೂಲಕ ಪ್ರಕರಣಗಳನ್ನು ಪರಿಹರಿಸುವ ವ್ಯವಸ್ಥೆ ರೂಪಿಸಲಾಗಿದೆ.

ಜುಲೈ ಅಂತ್ಯದಿಂದ ಆಗಸ್ಟ್ ಆರಂಭದವರೆಗೆ, ಸುಮಾರು 31 ಸಾವಿರ ಆಸ್ತಿ ಮಾಲೀಕರಿಗೆ ನೋಟಿಸ್ ನೀಡಲಾಗಿದ್ದು, ಇದರಲ್ಲಿ ಬಹುತೇಕರು ಫ್ಲ್ಯಾಟ್ ಮಾಲೀಕರು.

ಒಳಮೀಸಲಾತಿ: 'ಕೋಲಂಬೊ'ಗೆ ಅನ್ಯಾಯ'

ಬೆಂಗಳೂರು: ಒಳಮೀಸಲಾತಿ ಯಲ್ಲಿ ಬಂಜಾರ ಸಮಾಜಕ್ಕೆ ಮಾಡಿದ ಅನ್ಯಾಯವನ್ನು ವಿರೋಧಿಸಿ ಬಂಜಾರ(ಲಂಬಾಣಿ) ಸೇವಾ ಸಂಘದ ನೇತೃತ್ವದಲ್ಲಿ ಆ.22ರಂದು ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸ-ಲಾಗುವುದು ಎಂದು ಸಂಘದ ಅಧ್ಯಕ್ಷ ಎನ್.ಆರ್.ನಾಯಕ್, ಕಾರ್ಯದರ್ಶಿ ಎಚ್.ಪಿ. ಸಿದ್ಯಾನಾಯಕ್ ತಿಳಿಸಿದ್ದಾರೆ.

ಕೋಲಂಬೊ (ಕೊರಮ, ಕೊರಚ, ಲಂಬಾಣಿ, ಭೋವಿ) ಸಮಾಜಕ್ಕೆ ಒಳಮೀಸಲಾತಿಯಲ್ಲಿ ಶೇ 7ರಷ್ಟು ಮೀಸಲಿಡಬೇಕು ಎಂದು ಆಗ್ರಹಿಸಿದ್ದಾರೆ.

ನ್ಯಾಯಮೂರ್ತಿ ನಾಗಮೋಹನದಾಸ್ ವರದಿಯ ಪ್ರಕಾರ ಕೋಲಂಬೊ ಜನಸಂಖ್ಯೆಯು ಬಲಗೈ, ಎಡಗೈ ಸಮುದಾಯಗಳ ಜನಸಂಖ್ಯೆಗಿಂತ ಹೆಚ್ಚಿದೆ. ಈ ಗುಂಪಿನ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನಿಗದಿಪಡಿ-ಸಬೇಕು ಎಂದು ಒತ್ತಾಯಿಸಿದ್ದಾರೆ.

ತಪ್ಪು ಮಾಹಿತಿ ನೀಡದಂತೆ ಮನವಿ

ಬೆಂಗಳೂರು: ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸಲಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಿಂದ ಒಕ್ಕಲಿಗ ಸಮುದಾಯದ ಯಾರೂ ತಪ್ಪಿ ಹೋಗದ ಹಾಗೆ, ತಪ್ಪು ಮಾಹಿತಿ ದಾಖಲಾದಂತೆ ಎಚ್ಚರ ವಹಿಸಲು ಒಕ್ಕಲಿಗ ಸಂಘದ ನಿರ್ದೇಶಕರಿಗೆ, ಜಿಲ್ಲಾ, ತಾಲ್ಲೂಕು ಮಟ್ಟದ ಪದಾಧಿ-ಕಾರಿಗಳಿಗೆ ರಾಜ್ಯ ಒಕ್ಕಲಿಗ ಸಂಘವು ಗುರುವಾರ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿತು.

ಜಾತಿ ಕಲಂನಲ್ಲಿ ಒಕ್ಕಲಿಗ ಎಂದು ಬರೆಸಬೇಕು. ಕುಂಚಿಟಿಗ, ಹಳ್ಳಿಕಾರ್ ಸೇರಿದಂತೆ ಉಪ ಪಂಗಡಗಳನ್ನು ಉಪ ಜಾತಿ ಕಲಂನಲ್ಲಿ ದಾಖಲಿಸಬೇಕು. ಜಾತಿ ಕಲಂನಲ್ಲಿ ಯಾರೂ ಉಪ ಜಾತಿ ನಮೂದಿಸದಂತೆ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಲಾಯಿತು.

ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಬಿ. ಕೆಂಚಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಆದಿಚುಂಚನಗಿರಿ ಮಠದ ನಿರ್ಮಲಾ-ನಂದನಾಥ ಸ್ವಾಮೀಜಿ, ಸ್ಪಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ನಿಶ್ಚಲಾನಂದನಾಥ ಸ್ವಾಮೀಜಿ, ಪ್ರಸನ್ನನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಡಿ. ಹನುಮಂತಯ್ಯ, ಯಲುವಳ್ಳಿ ಎನ್. ರಮೇಶ್, ಎಲ್. ಶ್ರೀನಿವಾಸ್ ಮತ್ತಿತರರು ಇದ್ದರು.

ಸುದ್ದಿ 2 ನಿಮಿಷ

ಎಲ್ಲರ ಸಹಕಾರವಿದ್ದರೆ 'ಬ್ಲೂ-ಗ್ರೀನ್' ವಾರ್ಡ್ ನಿರ್ಮಾಣ

ಬೆಂಗಳೂರು: ಹವಾಮಾನ ಪ್ರತಿರೋಧಕ 'ಬ್ಲೂ-ಗ್ರೀನ್' ವಾರ್ಡ್‌ಗಳ ನಿರ್ಮಾಣಕ್ಕೆ ಎಲ್ಲ ಇಲಾಖೆಗಳ ಸಹಕಾರ ಅಗತ್ಯ ಎಂದು ಬಿಬಿಎಂಪಿ ವಿಶೇಷ ಆಯುಕ್ತೆ ಪ್ರೀತಿ ಗೆಹಲೋತ್ ತಿಳಿಸಿದರು.

ಬಿಬಿಎಂಪಿ ಹಾಗೂ ವರ್ಲ್ಡ್ ರಿಸೋರ್ಸಸ್ ಇನ್‌ಸ್ಟಿಟ್ಯೂಟ್ ಇಂಡಿಯಾ ಗುರುವಾರ ಆಯೋಜಿಸಿದ್ದ 'ಬ್ಲೂ-ಗ್ರೀನ್ ವಾರ್ಡ್‌ಗಳ ನಿರ್ಮಾಣದತ್ತ ಕ್ಲಸ್ಟರ್ ಆಧಾರಿತ ದೃಷ್ಟಿಕೋನ' ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ಪ್ರಾರಂಭದಲ್ಲಿ ಹತ್ತು ಕ್ಲಸ್ಟರ್‌ಗಳನ್ನು ಆಯ್ಕೆ ಮಾಡಿ ಅವುಗಳನ್ನು ಮಾದರಿ ಕ್ಲಸ್ಟರ್‌ಗಳಾಗಿ ರೂಪಿಸಲಾಗುವುದು. ಅವುಗಳ ಮೂಲಕ ಪರಿಸರ ಸ್ನೇಹಿ ವಾರ್ಡ್‌ಗಳನ್ನು ಪರಿಣಾಮಕಾರಿಯಾಗಿ ನಿರ್ಮಿಸಲಾಗುವುದು' ಎಂದು ಮಾಹಿತಿ ನೀಡಿದರು.

ಹವಾಮಾನ ಸ್ನೇಹಿ ರಸ್ತೆಯ ವಿನ್ಯಾಸ, ಅನುಕೂಲಕರ ಪಾದಚಾರಿ ಮಾರ್ಗ ಒಳಗೊಂಡ ಸುರಕ್ಷಿತ ಮತ್ತು ವಾಸಯೋಗ್ಯ ನಗರವನ್ನು ನಿರ್ಮಿಸುವ ಬಗ್ಗೆ ಕಾರ್ಯಾಗಾರದಲ್ಲಿ ಚರ್ಚೆ ನಡೆಯಿತು.

ಜಮೀನು ಹಸ್ತಾಂತರದ ವಿಳಂಬ, ಆರ್ಥಿಕ ಸಂಪನ್ಮೂಲಗಳ ಕೊರತೆ, ಯೋಜನೆ ಗುರುತಿಸುವಿಕೆ, ಹಣಕಾಸು ಮಾದರಿಗಳು ಮತ್ತು ದೀರ್ಘಕಾಲಿಕ ನಿರ್ವಹಣೆ ಕುರಿತು ಸಭೆಯಲ್ಲಿದ್ದ-ವರು ಗಮನ ಸೆಳೆದರು.

ವಿವಿಧ ಇಲಾಖೆಗಳ ಕಾರ್ಯಪಾಲಕ ಎಂಜಿನಿಯರ್‌ಗಳು, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ತಜ್ಞರು ಹಾಗೂ ಬಿಬಿಎಂಪಿ ಅಧಿಕಾರಿಗಳು ಉಪಸ್ಥಿತರಿದ್ದರು.

ಪರಿಸರ ಸ್ನೇಹಿ ಮೂರ್ತಿಗಳಿಗೆ ಮಾತ್ರ ಅವಕಾಶ: ಸ್ನೇಹಲ್

ಬೆಂಗಳೂರು: ಹಲಸೂರು ಕೆರೆಯ ಕಲ್ಯಾಣಿಯಲ್ಲಿ ಪರಿಸರ ಸ್ನೇಹಿ ಗಣೇಶ ಮೂರ್ತಿಗಳ ವಿಸರ್ಜನೆಗೆ ಮಾತ್ರ ಅವಕಾಶ ನೀಡಲಾಗುವುದು ಎಂದು ಬಿಬಿಎಂಪಿ ಪೂರ್ವ ವಲಯದ ಆಯುಕ್ತೆ ಸ್ನೇಹಲ್ ತಿಳಿಸಿದ್ದಾರೆ.

ಆಗಸ್ಟ್ 27ರಿಂದ ಸೆಪ್ಟೆಂಬರ್ 30ರವರೆಗೆ ಕಲ್ಯಾಣಿಯಲ್ಲಿ ಮೂರ್ತಿಗಳ ವಿಸರ್ಜನೆಗೆ ಅವಕಾಶ ನೀಡಲಾಗಿದೆ. ಸೆ. 1, 2 ಮತ್ತು ಸೆ.8, 9ರಂದು ಹೂಳೆತ್ತುವ ಕಾರ್ಯವನ್ನು ಹಮ್ಮಿಕೊಂಡಿರುವುದರಿಂದ ಆ ದಿನಗಳಲ್ಲಿ ಮೂರ್ತಿ ವಿಸರ್ಜನೆಗೆ ಅವಕಾಶ ಇರುವುದಿಲ್ಲ ಎಂದು ಮಾಹಿತಿ ನೀಡಿದ್ದಾರೆ.

ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ), ಥರ್ಮಾಕೋಲ್ ಹಾಗೂ ರಾಸಾಯನಿಕ ಬಣ್ಣಗಳನ್ನು ಬಳಸಿದ ಗಣೇಶ ಮೂರ್ತಿಗಳ ತಯಾರಿಕೆ, ಮಾರಾಟ ಹಾಗೂ ವಿಸರ್ಜನೆಯನ್ನು ಸಂಪೂರ್ಣವಾಗಿ ನಿರ್ಬಂಧಿಸ-ಲಾಗಿದೆ ಎಂದು ಹೇಳಿದ್ದಾರೆ.

ತಾವರೆಕೆರೆ: ಜೆಡಿಎಸ್ ಸಮಾವೇಶ ಸೆ.7ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೆಡಿಎಸ್ ಪಕ್ಷದ ಸಂಘಟನೆಯ ಉದ್ದೇಶದಿಂದ ಸೆ.7ರಂದು ತಾವರೆಕೆರೆಯಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗುವುದು' ಎಂದು ವಿಧಾನ ಪರಿಷತ್ ಸದಸ್ಯ ಟಿ.ಎನ್. ಜವರಾಯಿಗೌಡ ತಿಳಿಸಿದರು

ತಾವರೆಕೆರೆಯಲ್ಲಿ ಆಯೋಜಿಸಿದ್ದ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

'ಜೆಡಿಎಸ್ ಯುವ ಘಟಕದ ರಾಜ್ಯ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ರಾಜ್ಯದಾದ್ಯಂತ ನಡೆಯುತ್ತಿರುವ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಉತ್ತಮ ಸ್ಪಂದನೆ ದೊರೆಯುತ್ತಿದೆ. ಜೆಡಿಎಸ್ ಭದ್ರಕೋಟೆ ಆಗಿರುವ ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ನಾಲ್ಕು ಸ್ಥಳಗಳಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗುವುದು' ಎಂದು ಹೇಳಿದರು.

'ವಿಧಾನಸಭಾ ಚುನಾವಣೆಯಲ್ಲಿ ನಾಲ್ಕು ಬಾರಿ ನಾನು ಪರಾಭವಗೊಂಡರೂ, ಪಕ್ಷದ ನಿಷ್ಠಾವಂತ ಕಾರ್ಯಕರ್ತರ ಬೆಂಬಲದಿಂದ ಕ್ಷೇತ್ರದಲ್ಲಿ ಬಲವಾಗಿ ಬೇರೂರಿದ್ದೇನೆ. ಪಕ್ಷದ ಬಲವರ್ಧನೆಗೆ ಮುಖಂಡರು, ಕಾರ್ಯಕರ್ತರು ಶಕ್ತಿ ಮೀರಿ ಶ್ರಮಿಸಿ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಕೈ ಬಲಪಡಿಸಬೇಕು' ಎಂದು ಕರೆ ನೀಡಿದರು.

ಜೆಡಿಎಸ್ ಯುವ ಮುಖಂಡ ಸಂತೋಷ್ ಜವರಾಯಿಗೌಡ, ತಾವರೆಕೆರೆ ಹೋಬಳಿ ಜೆಡಿಎಸ್ ಅಧ್ಯಕ್ಷ ಶಂಕರೇಗೌಡ, ಕೆಂಗೇರಿ–ತಾವರೆಕೆರೆ ಹೋಬಳಿ ಘಟಕದ ಅಧ್ಯಕ್ಷ ಕೇಶವಮೂರ್ತಿ, ತಾವರೆಕೆರೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮನೋಹರ್, ಮುಖಂಡರಾದ ಮಂಜುನಾಥ್, ಚೇತನ್ ಗೌಡ, ಮಾರೇಗೌಡ, ತಾರಾ ಲೋಕೇಶ್, ಕೋಟಿ ರಾಜಣ್ಣ ಉಪಸ್ಥಿತರಿದ್ದರು.

ತಾವರೆಕೆರೆಯಲ್ಲಿ ನಡೆದ ಜನರೊಂದಿಗೆ ಜನತಾದಳ ಸದಸ್ಯತ್ವ ಅಭಿಯಾನ ಸಭೆಯನ್ನು ಜವರಾಯಿಗೌಡ ಉದ್ಘಾಟಿಸಿದರು

ಸಣ್ಣ ರೈತರ ಸಾಲ ಮನ್ನಾಕ್ಕೆ ಆಗ್ರಹ

ಬೆಂಗಳೂರು: ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರತ್ನ ಭಾರತ ರೈತ ಸಮಾಜದಿಂದ ಎಪಿಎಂಸಿ ಸಚಿವ ಶಿವಾನಂದ ಪಾಟೀಲ ಅವರಿಗೆ ಬುಧವಾರ ಮನವಿ ಸಲ್ಲಿಸಲಾಯಿತು.

ರೈತರ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿ ಪಡಿಸಬೇಕು ಎಂದು ಆಗ್ರಹಿಸಿದರು.

ರತ್ನ ಭಾರತ ರೈತ ಸಮಾಜದ ರಾಜ್ಯ ಘಟಕದ ಅಧ್ಯಕ್ಷ ಎಲ್.ಲಕ್ಷ್ಮಣ್ ಅವರು ಸಚಿವರಿಗೆ ಮನವಿ ಸಲ್ಲಿಸಿದರು.

'ಕೃಷ್ಣಾ ಮೇಲ್ದಂಡೆ: ₹2 ಲಕ್ಷ ಕೋಟಿ ಅಗತ್ಯ'

ಬೆಂಗಳೂರು: 'ಕೃಷ್ಣಾ ಮೇಲ್ದಂಡೆ ಯೋಜನೆ ಪೂರ್ಣಗೊಳಿಸಲು ಭೂಸ್ವಾಧೀನಕ್ಕೆ ನ್ಯಾಯಾಲಯಗಳು ನೀಡಿರುವ ಆದೇಶದ ಅನುಸಾರ ಹೆಚ್ಚುವರಿ ಪರಿಹಾರದ ಸರಾಸರಿಯಂತೆ ₹2.01 ಲಕ್ಷ ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಪಿ.ಎಚ್. ಪೂಜಾರ್ ಅವರ ಪ್ರಶ್ನೆಗೆ ಉತ್ತರಿಸಿದ ಶಿವಕುಮಾರ್, ಈಗಾಗಲೇ ಭೂಸ್ವಾಧೀನಪಡಿಸಿಕೊಂಡ 29,566 ಎಕರೆಗೆ ₹66,563 ಕೋಟಿ ಹೆಚ್ಚುವರಿ ಪರಿಹಾರಧನ ಪಾವತಿಸ-ಬೇಕಾಗುತ್ತದೆ. ಒಟ್ಟಾರೆ 1,33,867 ಎಕರೆ ಭೂಮಿ ಸ್ವಾಧೀನವಾಗಬೇಕಿದೆ' ಎಂದರು.

ಚಾಲನೆ

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಬೆಂಗಳೂರಿನಲ್ಲಿ ಕಿರಿಯ ಫುಟ್‌ಬಾಲ್ ಆಟಗಾರರಿಗಾಗಿ ಸೌತ್ ಯುನೈಟೆಡ್ ಫುಟ್‌ಬಾಲ್ ಕ್ಲಬ್ (ಎಸ್‌ಯುಎಫ್‌ಸಿ) ಗುರುವಾರ ಆರಂಭಿಸಿದ ವಸತಿಯುತ ಅಕಾಡೆಮಿಯ ಉದ್ಘಾಟನೆ ಸಂದರ್ಭದಲ್ಲಿ ಶಾಸಕ ರಿಜ್ವಾನ್ ಅರ್ಷದ್ ಮಕ್ಕಳ ಜೊತೆ ಆಡಿದರು. ಕ್ಲಬ್‌ನ ನಿರ್ದೇಶಕ ಶರಣ್ ಪಾರಿಖ್ ಇದ್ದರು

ಆರ್.ವಿ. ರಸ್ತೆ ಮೆಟ್ರೊ ನಿಲ್ದಾಣದಲ್ಲಿ ಬ್ಯಾರಿಕೇಡ್ ಅಳವಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗದ ಆರ್.ವಿ. ರಸ್ತೆ ನಿಲ್ದಾಣದಲ್ಲಿ ಸ್ಟೀಲ್ ಬ್ಯಾರಿಕೇಡ್‌ಗಳನ್ನು ಬಿಎಂಆರ್‌ಸಿಎಲ್ ಅಳವಡಿಸಿದೆ.

ಆರ್.ವಿ. ರಸ್ತೆ ಇಂಟರ್‌ಚೇಂಜ್ ನಿಲ್ದಾಣವಾಗಿದ್ದು, ಹಳದಿ ಮಾರ್ಗ ಮತ್ತು ಹಸಿರು ಮಾರ್ಗ ಇಲ್ಲಿ ಸಂಪರ್ಕಿಸುತ್ತವೆ. ಜನದಟ್ಟಣೆ ವಿಪರೀತ ಆಗಿರುವುದರಿಂದ ಅಪಾಯ ಎದುರಾಗುವ ಸಾಧ್ಯತೆ ಬಗ್ಗೆ 'ಪ್ರಜಾವಾಣಿ' ಗಮನ ಸೆಳೆದಿತ್ತು.

'ಆರ್.ವಿ. ರಸ್ತೆ ನಿಲ್ದಾಣದಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸ-ಲಾಗುತ್ತಿದ್ದು, ಅಂತಿಮ ಹಂತಕ್ಕೆ ಬಂದಿದೆ. ಇದೇ ರೀತಿ ಹಳದಿ ಮಾರ್ಗದ ನಿಲ್ದಾಣಗಳಲ್ಲಿ ಎಲ್ಲೆಲ್ಲಿ ಅಗತ್ಯವಿದೆ ಎಂದು ನೋಡಿಕೊಂಡು ಸ್ಟೀಲ್ ಬ್ಯಾರಿಕೇಡ್ ಅಳವಡಿಸಲಾ-ಗುವುದು' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದರು.

ಆರ್.ವಿ. ರಸ್ತೆ–ಡೆಲ್ಟಾ ಎಲೆ-ಕ್ಟ್ರಾನಿಕ್ಸ್ ಬೊಮ್ಮಸಂದ್ರ ನಡುವಿನ 19.15 ಕಿ.ಮೀ. ಮಾರ್ಗದಲ್ಲಿ ನಮ್ಮ ಮೆಟ್ರೊ ಸಂಚಾರಕ್ಕೆ ಆ.10ರಂದು ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದ್ದರು. ಆ.11ರಿಂದ ವಾಣಿಜ್ಯ ಸಂಚಾರ ಆರಂಭವಾಗಿತ್ತು. 25 ನಿಮಿಷಕ್ಕೊಂದು ಮೆಟ್ರೊ ಸಂಚರಿ-ಸುತ್ತಿರುವುದರಿಂದ ಆರ್.ವಿ. ರಸ್ತೆ ಮೆಟ್ರೊ ನಿಲ್ದಾಣದಲ್ಲಿ ವಿಪರೀತ ಜನದಟ್ಟಣೆ ಉಂಟಾಗಿದೆ.

'ಪ್ಲಾಟ್‌ಫಾರ್ಮ್ ಸ್ಕ್ರೀನಿಂಗ್ ಡೋರ್ (ಪಿಎಸ್‌ಡಿ) ಇಲ್ಲವೇ ಬ್ಯಾರಿಕೇಡ್ ಅಳವಡಿಸದೇ ಇದ್ದರೆ ಸಮಸ್ಯೆ ಉಂಟಾಗಲಿದೆ' ಎಂದು ಸಾರ್ವಜನಿಕರು ಆಗ್ರಹಿಸಿದ್ದರು. ಕುಳಿತುಕೊಳ್ಳಲು ಆಸನದ ವ್ಯವಸ್ಥೆ ಇಲ್ಲ ಎಂಬುದರ ಬಗ್ಗೆಯೂ ಗಮನ ಸೆಳೆದಿದ್ದರು.

'ಆಸನಗಳ ವ್ಯವಸ್ಥೆ ಶೀಘ್ರದಲ್ಲಿ ಮಾಡಲಾಗುವುದು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಟೀಲ್ ಬ್ಯಾರಿಕೇಡ್ ಅಳವಡಿಸಿರುವುದು

ನಗರದಲ್ಲಿ ಇಂದು

ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ವಾತಂತ್ರ್ಯ ಸಂಭ್ರಮ ಹಾಗೂ ಪ್ರಶಸ್ತಿ ಪ್ರದಾನ: ಶಿವರಾಜ ತಂಗಡಗಿ, ಪ್ರಶಸ್ತಿ ಪುರಸ್ಕೃತರು: ಮೇದಿನಿ ಉದಯ್ ಗರುಡಾಚಾರ್, ಅನಿಲ್ ಭಾಸಗಿ, ಅತಿಥಿಗಳು: ಎಸ್.ಡಿ.ಟಿ. ಪ್ರಸಾದ್, ಟಿ.ವಿ. ಬಾಬು, ಗೋನಾ ಸ್ವಾಮಿ, ಮಹೇಂದ್ರ ಮುನ್ನೋತ್ ಜೈನ್, ಆಯೋಜನೆ: ಕಲಾದರ್ಪಣ ಆರ್ಟ್ ರಿಫ್ಲೆಕ್ಟ್ಸ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 8.30ರಿಂದ

'ಅಡ್ವಾನ್ಸಿಂಗ್ ಟೆಕ್ನಾಲಜಿ– ಕನ್ವರ್ಟಿಂಗ್ ವಿಷನರಿ ಐಡಿಯಾಸ್ ಇಂಟು ರಿಯಲ್ ವರ್ಲ್ಡ್ ಸಲ್ಯೂಷನ್ಸ್' ರಾಷ್ಟ್ರೀಯ ವಿಚಾರಸಂಕಿರಣ: ಅತಿಥಿಗಳು: ಹರ್ಜಿಂದರ್ ಸಿಂಗ್ ಭಾಟಿಯಾ, ಚೆನ್‌ರಾಜ್ ರಾಯ್‌ಚಂದ್, ಜಿತೇಂದ್ರ ಕುಮಾರ್ ಮಿಶ್ರಾ, ದಿನೇಶ್ ನೀಲಕಂಠ, ಆಯೋಜನೆ ಮತ್ತು ಸ್ಥಳ: ಜೈನ್ ವಿಶ್ವವಿದ್ಯಾಲಯ, ಲಾಲ್‌ಬಾಗ್ ರಸ್ತೆ, ಸುಧಾಮ ನಗರ, ಬೆಳಿಗ್ಗೆ 9.30ರಿಂದ

ವಾಗ್ದೇವಿ ಕಲಾ ಉತ್ಸವ: ಉದ್ಘಾಟನೆ: ಎ.ಎಸ್. ಕಿರಣ್ ಕುಮಾರ್, ಆಯೋಜನೆ ಮತ್ತು ಸ್ಥಳ: ವಾಗ್ದೇವಿ ವಿಲಾಸ ಶಿಕ್ಷಣ ಸಂಸ್ಥೆ, ಮಾರತ್‌ಹಳ್ಳಿ, ಬೆಳಿಗ್ಗೆ 9.30

ವಚನ ಶ್ರಾವಣ: ವಚನ ಗಾಯನ: ಟಿ.ಎಂ. ಜಾನಕಿ, ವಚನ ಚಿಂತನ: ಎಸ್. ಪಿನಾಕಪಾಣಿ, ಅತಿಥಿ: ರಾಜಾ ಗುರುಪ್ರಸಾದ್, ಅಧ್ಯಕ್ಷತೆ: ಸುರೇಶ್ ಸೂಡಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಎಸ್.ಎಸ್. ಪಬ್ಲಿಕ್ ಶಾಲೆ, ವಿಶ್ವೇಶ್ವರನಗರ, ಬೆಳಿಗ್ಗೆ 9.30

'ಶರ್ಮಿಷ್ಠೆ' ಏಕವ್ಯಕ್ತಿ ನಾಟಕ ಪ್ರದರ್ಶನ: ಉಮಾಶ್ರೀ, ನಾಟಕ ರಚನೆ: ಬೇಲೂರು ರಘುನಂದನ್, ನಿರ್ದೇಶನ: ಚಿದಂಬರ ರಾವ್ ಜಂಬೆ, ಆಯೋಜನೆ: ರಂಗಸಂಪದ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಇನ್‌ಸ್ಟಿಟ್ಯೂಟ್ ಪಬ್ಲಿಕ್ ಹೆಲ್ತ್‌ನ 20ನೇ ವಾರ್ಷಿಕೋತ್ಸವ: ಅತಿಥಿಗಳು: ದಿನೇಶ್ ಗುಂಡೂರಾವ್, ಯು.ಟಿ. ಖಾದರ್, ಉಪನ್ಯಾಸ: ಉಮಾ ಮಹಾದೇವನ್, ಪ್ರಧಾನ ಭಾಷಣ: ಡಾ.ಕೆ. ಶ್ರೀನಾಥ್ ರೆಡ್ಡಿ, ನಿರ್ಮಲಾ ನಾಯರ್, ಎಚ್. ಸುದರ್ಶನ್, ವಿಕ್ರಂ ಪಟೇಲ್, ಆಯೋಜನೆ: ಇನ್‌ಸ್ಟಿಟ್ಯೂಟ್ ಪಬ್ಲಿಕ್ ಹೆಲ್ತ್, ಸ್ಥಳ: ಎ.ವಿ. ರಾಮರಾವ್ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ), ಬೆಳಿಗ್ಗೆ 10ರಿಂದ

ಸೌಹಾರ್ದ ಸಹಕಾರಿ ಕಾಯ್ದೆ, ಸೌಹಾರ್ದ ಸಹಕಾರಿ ಚಳವಳಿ ರಜತ ಮಹೋತ್ಸವ: ಉದ್ಘಾಟನೆ: ಎಚ್.ಕೆ. ಪಾಟೀಲ, ಸ್ಮರಣ ಸಂಚಿಕೆ ಬಿಡುಗಡೆ: ಪ್ರಹ್ಲಾದ್ ಜೋಶಿ, ಅತಿಥಿಗಳು: ಡಿ. ಸುಧಾಕರ್, ಬಿ.ಆರ್. ಪಾಟೀಲ, ಕೆ.ಎನ್. ರಾಜಣ್ಣ, ಆರಗ ಜ್ಞಾನೇಂದ್ರ, ಅಧ್ಯಕ್ಷತೆ: ಜಿ. ನಂಜನಗೌಡ, ಆಯೋಜನೆ: ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಸ್ಥಳ: ಗಾಯತ್ರಿ ಗ್ರ್ಯಾಂಡ್, ಗೇಟ್ ಸಂಖ್ಯೆ–04, ಅರಮನೆ ಮೈದಾನ, ಬಳ್ಳಾರಿ ರಸ್ತೆ, ಮಧ್ಯಾಹ್ನ 3ರಿಂದ

ಸುನೀತಾ ಅರವಿಂದ್ ಶಿಷ್ಯರಿಂದ ಸಾಮೂಹಿಕ ಭರತನಾಟ್ಯ ಪ್ರದರ್ಶನ: ಅತಿಥಿಗಳು: ಎ. ಚಿತ್ರಾ, ವೈ.ಕೆ. ಸಂಧ್ಯಾ ಶರ್ಮಾ, ಆಯೋಜನೆ: ಕಲಾಂತರಿಕ್ಷಂ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ, ಸಂಜೆ 4

ತಿಂಗಳ ಉಪನ್ಯಾಸ ಕಾರ್ಯಕ್ರಮ: 'ತತ್ವಶಾಸ್ತ್ರ ಗ್ರಂಥಗಳ ಅನುವಾದ ಒಂದು ಅನುಭವ' ಉಪನ್ಯಾಸ: ಜಿ. ರಾಮಕೃಷ್ಣ, ಪ್ರಾಸ್ತಾವಿಕ ನುಡಿ: ನಾರಾಯಣ ಘಟ್ಟ, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಚೇರಿ ಆವರಣ, ಮಲ್ಲತ್ತಹಳ್ಳಿ, ಕಲಾಗ್ರಾಮ, ಸಂಜೆ 5

'ಪೂತನಿ' ಏಕವ್ಯಕ್ತಿ ಮೂಡಲಪಾಯ ಯಕ್ಷಗಾನ ಪ್ರದರ್ಶನ: ಆಶಾ ರಘು, ಭಾಗವಹಿಸುವವರು: ತಲ್ಲೂರು ಶಿವರಾಮ ಶೆಟ್ಟಿ, ಪುರುಷೋತ್ತಮ ಬಿಳಿಮಲೆ, ಚಂದ್ರು ಕಾಳೇನಹಳ್ಳಿ, ರಂಗ ಪುರಸ್ಕಾರ: ಮೇರಿ ಪಿಂಟೋ, ಆಯೋಜನೆ: ರಂಗಮಂಡಲ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6.30

'ಸಂಗಮಮ್' ಸಂಗೀತ ಕಛೇರಿ: ಪಿಟೀಲು: ಜ್ಯೋತ್ಸ್ನಾ ಶ್ರೀಕಾಂತ್, ಓಡ್ ವಾದನ: ಸ್ಕಾಜ್, ತಬಲಾ: ಗುರುಮೂರ್ತಿ ವೈದ್ಯ, ಆಯೋಜನೆ: ಸಂಗಮಮ್, ಸ್ಥಳ: ಮಿಂಡ್‌ಮಿಲ್ಸ್ ಕ್ರಾಫ್ಟ್‌ವರ್ಕ್ಸ್, ವೈಟ್‌ಫೀಲ್ಡ್, ರಾತ್ರಿ 9ರಿಂದ

ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಇ-ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ರಸ್ತೆಯಲ್ಲಿ ಚರಂಡಿ ನೀರು: ಸಂಚಾರಕ್ಕೆ ಅಡ್ಡಿ

ದಾಬಸ್‌ಪೇಟೆ: ಸೋಂಪುರ ಹೋಬಳಿ ಹೊನ್ನೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದೇವಗಾನಹಳ್ಳಿ ರಸ್ತೆಯಲ್ಲಿ ಚರಂಡಿ ನೀರು ಹರಿಯುತ್ತಿದ್ದು, ಸಾರ್ವ-ಜನಿಕರಿಗೆ ತೊಂದರೆ ಉಂಟಾಗಿದೆ.

ದಾಬಸ್‌ಪೇಟೆ-ಶಿವಗಂಗೆ ರಸ್ತೆಯಿಂದ ಬರಗೇನಹಳ್ಳಿ ಗ್ರಾಮದ ಪಕ್ಕ ಸಾಗುವ ರಸ್ತೆಯಲ್ಲಿ ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಗಲೀಜು ನೀರು ರಸ್ತೆ ಮೇಲೆ ಹರಿಯುತ್ತಿದೆ. ರಸ್ತೆಯಲ್ಲಿ ಗುಂಡಿ ಬಿದ್ದಿದ್ದು, ನೀರು ನಿಂತು ವಾಹನ ಸಂಚಾರಕ್ಕೆ ಅಡ್ಡಿಯಾಗಿದೆ. ಮೂರು ಗ್ರಾಮಗಳ ಜನರಿಗೆ ಇದೇ ಪ್ರಮುಖ ಮಾರ್ಗ. ಸಂಬಂಧಪಟ್ಟ ಅಧಿಕಾರಿಗಳು, ಚರಂಡಿ ನೀರು ರಸ್ತೆಗೆ ಬಾರದಂತೆ ತಡೆದು ಸುಗಮ ಓಡಾಟಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ನಿವಾಸಿ ಮಂಜುನಾಥ್ ಆಗ್ರಹಿಸಿದ್ದಾರೆ.

ಶಿಥಿಲ ಗೇಟು ಬದಲಿಸಿ ಹೊಸ ಗೇಟು ಅಳವಡಿಕೆ ಪೂರ್ಣ

ಕೆಆರ್‌ಎಸ್ ಅಣೆಕಟ್ಟೆಗೆ 'ಸ್ಕಾಡಾ'

• ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜಸಾಗರ ಅಣೆಕಟ್ಟೆಯಲ್ಲಿ ಶಿಥಿಲವಾಗಿದ್ದ ಗೇಟುಗಳನ್ನು ಬದಲಿಸಿ, ಹೊಸ ಗೇಟುಗಳನ್ನು ಅಳವಡಿಸುವ ಕಾರ್ಯ ಬಹುತೇಕ ಪೂರ್ಣಗೊಂಡಿದೆ. ಗೇಟುಗಳ ನಿರ್ವಹಣೆಗೆ ಆಧುನಿಕವಾದ 'ಸ್ಕಾಡಾ ತಂತ್ರಜ್ಞಾನ' ಅಳವಡಿಸಿಕೊಳ್ಳಲಾಗಿದೆ.

ಸ್ಕಾಡಾ (SCADA) ಅಂದರೆ ಅಣೆಕಟ್ಟೆ ಮೇಲ್ವಿಚಾರಣೆ ಮತ್ತು ದತ್ತಾಂಶ ಸಂಗ್ರಹ ವ್ಯವಸ್ಥೆ. ರಿಮೋಟ್ ತಂತ್ರಜ್ಞಾನದ ಮೂಲಕ ನೀರು ಪೋಲಾಗುವುದನ್ನು ತಡೆಗಟ್ಟುವುದು ಮತ್ತು ವೈಜ್ಞಾನಿಕವಾಗಿ ನೀರಿನ ಹಂಚಿಕೆಯೇ ಪ್ರಮುಖ ಉದ್ದೇಶ.

'ಮೊದಲು ಪ್ರತಿ ಗೇಟನ್ನೂ ಸಿಬ್ಬಂದಿಯೇ ನಿರ್ವಹಿಸಬೇಕಿತ್ತು. ಹೊಸ ತಂತ್ರಜ್ಞಾನದಿಂದ ನಿಯಂತ್ರಣ ಕೊಠಡಿಯಲ್ಲೇ ಕುಳಿತು ಎಲ್ಲ ಗೇಟುಗಳನ್ನು ಸ್ವಯಂಚಾಲಿತವಾಗಿ ಏರಿಳಿಸಬಹುದು. ಪ್ರವಾಹದ ಸಂದರ್ಭದಲ್ಲಿ ಗೇಟುಗಳನ್ನು ತುರ್ತಾಗಿ ತೆರೆಯಬಹುದು' ಎನ್ನುತ್ತಾರೆ ಕಾವೇರಿ ನೀರಾವರಿ ನಿಗಮದ ಎಂಜಿನಿಯರ್‌ಗಳು.

ತಂತ್ರಜ್ಞಾನಕ್ಕೆ ಸಂಬಂಧಿಸಿದ ಯಂತ್ರೋಪಕರಣಗಳ ಅಳವಡಿಕೆ ಪೂರ್ಣಗೊಂಡಿದ್ದು, ಯಶಸ್ವಿಯಾಗಿ ಚಾಲನೆ ಮಾಡಲಾಗುತ್ತಿದೆ. 'ಕಂಟ್ರೋಲ್ ರೂಂ' ನಿರ್ಮಾಣ ಕಾರ್ಯ ಇನ್ನು 2–3 ತಿಂಗಳಲ್ಲಿ ಪೂರ್ಣಗೊಳ್ಳಬಹುದು ಎಂದು ಅಂದಾಜಿಸಲಾಗಿದೆ.

ಗೇಟುಗಳ ಆಧುನೀಕರಣ: 1932ರಲ್ಲಿ ನಿರ್ಮಾಣವಾದ ಅಣೆಕಟ್ಟೆಯು ಶತಮಾನದ ಹೊಸ್ತಿಲಲ್ಲಿದ್ದು, ಗೇಟುಗಳು 80 ವರ್ಷಗಳಷ್ಟು ಹಳೆಯದಾದ್ದರಿಂದ, ಶಿಥಿಲಗೊಂಡು ನೀರು ಸೋರಿಕೆಯಾಗುತ್ತಿತ್ತು. ಹೀಗಾಗಿ ಆಧುನೀಕರಣ ಕಾಮಗಾರಿಯನ್ನು ಕೈಗೊಳ್ಳಲಾಗಿತ್ತು.

2011ರಲ್ಲಿ +80 ಅಡಿ ಮಟ್ಟದ 16 ಹೊಸ ಗೇಟುಗಳನ್ನು ₹8.50 ಕೋಟಿ ವೆಚ್ಚದಲ್ಲಿ ಅಳವಡಿಸಲಾಗಿತ್ತು. 2013–14ರಲ್ಲಿ ನೀರಾವರಿಗೆ ಸಂಬಂಧಿಸಿದ ವಿಶ್ವೇಶ್ವರಯ್ಯ ಕಾಲುವೆಗಳ +60 ಅಡಿ ಮಟ್ಟದ 3 ಗೇಟು, +50 ಅಡಿ ಮಟ್ಟದ 3 ಗೇಟುಗಳನ್ನು ₹2.70 ಕೋಟಿ ವೆಚ್ಚದಲ್ಲಿ ಬದಲಿಸಲಾಗಿತ್ತು.

ಪ್ರವಾಹ ಬಂದಾಗ ಉಪಯೋಗಿಸುವಂತಹ +103 ಅಡಿ ಮಟ್ಟದ 48 ಗೇಟುಗಳು, +106 ಅಡಿ ಮಟ್ಟದ 40 ಗೇಟುಗಳು ಹಾಗೂ +114 ಅಡಿ ಮಟ್ಟದ 48 ಗೇಟುಗಳನ್ನು ₹65.60 ಕೋಟಿ ವೆಚ್ಚದಲ್ಲಿ ಹೊಸದಾಗಿ ಅಳವಡಿಸಲು 2019ರಲ್ಲಿ ಆಧುನೀಕರಣ ಕಾಮಗಾರಿ ಆರಂಭವಾಗಿ, ಇತ್ತೀಚೆಗೆ ಪೂರ್ಣಗೊಂಡಿದೆ.

ಶಾಶ್ವತವಾಗಿ ಮುಚ್ಚಿದ ಗೇಟು: 'ನಾಲ್ಕು ಟರ್ಬೈನ್ ಗೇಟುಗಳು +53 ಅಡಿ ಎತ್ತರದಲ್ಲಿದ್ದು, ವಿದ್ಯುತ್ ಉತ್ಪಾದನೆ ಸಾಧ್ಯವಿಲ್ಲವೆಂಬುದನ್ನು ಪರಿಗಣಿಸಿ, ನಿರ್ಮಾಣ ಕಾಲದಲ್ಲೇ ಶಾಶ್ವತವಾಗಿ ಮುಚ್ಚಲಾಗಿದೆ. ಹೂಳು ತೆಗೆಯಲು ನಿರ್ಮಿಸಿದ್ದ +12 ಅಡಿ ಮಟ್ಟದ 8 ಗೇಟುಗಳನ್ನೂ ತಾಂತ್ರಿಕ ಕಾರಣದಿಂದ ಮುಚ್ಚಲಾಗಿದೆ.

ಶಿಥಿಲವಾಗಿದ್ದ ಹಳೆಯ ಗೇಟು

ಹೊಸ ಗೇಟ್ ಅಳವಡಿಸಿರುವುದು

₹10 ಕೋಟಿಗೆ ಬೇಡಿಕೆ

'ಆರ್‌ಬಿಎಲ್‌ಎಲ್ ಕಾಲುವೆ ಗೇಟುಗಳನ್ನು ಆಧುನೀಕರಣಗೊಳಿಸಲು ಅಗತ್ಯವಿರುವ ₹2.50 ಕೋಟಿ ಅನುದಾನಕ್ಕೆ ಬೇಡಿಕೆ ಸಲ್ಲಿಸಿದ್ದೇವೆ. ಇದರಿಂದ 50 ಕ್ಯೂಸೆಕ್ ಸೋರಿಕೆಯ ನೀರನ್ನು ತಡೆಯಬಹುದಾಗಿದೆ. ಕೆಆರ್‌ಎಸ್ ಡ್ಯಾಂ ಗೇಟುಗಳ ಅಕ್ಕಪಕ್ಕದಲ್ಲಿರುವ ಕಂಬಗಳನ್ನು ಬಲಪಡಿಸುವ ಕಾಮಗಾರಿ ಕೈಗೊಳ್ಳಲು ₹10 ಕೋಟಿ ಅನುದಾನಕ್ಕೆ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲಾಗಿದೆ' ಎಂದು ನಿಗಮದ ಎಂಜಿನಿಯರ್ ತಿಳಿಸಿದರು.

ಹೊಸ ಗೇಟುಗಳನ್ನು ಅಳವಡಿಸುವ ಮೂಲಕ ಕೆಆರ್‌ಎಸ್ ಅಣೆಕಟ್ಟೆಯನ್ನು ಬಲಪಡಿಸಿದ್ದೇವೆ. ಅನುದಾನ ಲಭ್ಯತೆ ಆಧಾರದಲ್ಲಿ ಪ್ರತಿ ವರ್ಷ ಅಗತ್ಯ ನಿರ್ವಹಣಾ ಕಾಮಗಾರಿ ನಡೆಸುತ್ತಿದ್ದೇವೆ
ವಿ.ಜಯಂತ್, ಕಾರ್ಯಪಾಲಕ ಎಂಜಿನಿಯರ್, ಕಾವೇರಿ ನೀರಾವರಿ ನಿಗಮ

ಅಡಿಕೆ ಕ್ಯಾನ್ಸರ್ ಕಾರಕವೇ: ಶೀಘ್ರ ವರದಿಗೆ ಚೌಹಾಣ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಡಿಕೆ ಕ್ಯಾನ್ಸರ್‌ಗೆ ಕಾರಣವಾಗುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಪತ್ತೆ ಹಚ್ಚಲು ಶೀಘ್ರದಲ್ಲಿ ಸಂಶೋಧನೆ ಪೂರ್ಣಗೊಳಿಸಿ ವರದಿ ಸಲ್ಲಿಸುವಂತೆ ಐಸಿಎಆರ್‌ಗೆ ಕೇಂದ್ರ ಕೃಷಿ ಸಚಿವ ಶಿವರಾಜ ಸಿಂಗ್ ಚೌಹಾಣ್ ನಿರ್ದೇಶನ ನೀಡಿದರು.

ಕರ್ನಾಟಕದ ಸಂಸದರ ನಿಯೋಗ ಮತ್ತು ಕೇಂದ್ರ ಸಚಿವರ ಜತೆಗೆ ಗುರುವಾರ ಉನ್ನತ ಮಟ್ಟದ ಸಭೆ ನಡೆಸಿದ ಅವರು, ಅಡಿಕೆ ಬೆಳೆಗಾರರ ಸಮಸ್ಯೆಗಳಿಗೆ ಪರಿಹಾ-ರಗಳನ್ನು ಕಂಡುಹಿಡಿಯಲು ಶೀಘ್ರದಲ್ಲೇ ಬೆಂಗಳೂರಿಗೆ ಬರುವುದಾಗಿ ಭರವಸೆ ನೀಡಿದರು.

ಕೇಂದ್ರ ಭಾರಿ ಕೈಗಾರಿಕೆ ಸಚಿವ ಎಚ್. ಡಿ.ಕುಮಾರಸ್ವಾಮಿ ಮಾತನಾಡಿ, 'ನಾನಾ ಕಾರಣಗಳಿಂದ ಅಡಿಕೆ ಬೆಳೆಗಾರರು ತೀವ್ರ ಸಂಕಷ್ಟದಲ್ಲಿದ್ದು, ಈ ಬಗ್ಗೆ ಸಚಿವರ ಗಮನ ಸೆಳೆಯಲಾಯಿತು. ಬೆಳೆಗಾರರ ಸಮಸ್ಯೆಗಳನ್ನು ಕಾಲಾವಧಿಯಲ್ಲಿ ಬಗೆ-ಹರಿಸಲಾಗುವುದು ಎಂದು ಸಚಿವರು ಭರವಸೆ ನೀಡಿದ್ದಾರೆ' ಎಂದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, 'ಅಡಿಕೆ ಬೆಳೆಗಾರರ ಸಮಸ್ಯೆಗಳ ಬಗ್ಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಶಿವರಾಜ ಸಿಂಗ್ ಚೌಹಾಣ್ ಗಮನ ಸೆಳೆಯಲಾಗಿದೆ. ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದರು.

'ಅಡಿಕೆಗೆ ಎಲೆ ಚುಕ್ಕಿ ರೋಗ ಬಂದರೆ ಮತ್ತೆ ಅಲ್ಲಿ ಅಡಿಕೆ ಕೃಷಿ ನಡೆಸಲು ಸಾಧ್ಯವಿಲ್ಲ. ಇದಕ್ಕೆ ಪರಿಹಾರ ಕಂಡುಹಿಡಿಯುವಂತೆ ಮನವಿ ಮಾಡಿದ್ದೇವೆ. ಈ ಬಗ್ಗೆ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸಚಿವರು ಸೂಚಿಸಿದ್ದಾರೆ' ಎಂದರು.

'ಅಡಿಕೆ ಕೊಯಿಲಿಗೆ ಕಾರ್ಮಿಕರು ಸಿಗುತ್ತಿಲ್ಲ. ಫೈಬರ್ ದೋಟಿ ಬಳಸಿ ಅಡಿಕೆ ಕಟಾವು ಮಾಡಬಹುದು. ಆದರೆ, ಈ ದೋಟಿಗೆ ಶೇ 48 ಕಸ್ಟಮ್ಸ್ ಸುಂಕ ವಿಧಿಸಲಾಗುತ್ತಿದೆ. ಇದನ್ನು ಕಡಿಮೆ ಮಾಡುವಂತೆ ಕೋರಿದ್ದೇವೆ. ಅಡಿಕೆ ಹಾಳೆ ಬಗ್ಗೆ ಅನಗತ್ಯ ಗೊಂದಲ ಸೃಷ್ಟಿ-ಯಾಗುತ್ತಿದೆ. ಈ ಬಗ್ಗೆ ಸರ್ಕಾರವು ಜಾಗೃತಿ ಮೂಡಿಸಬೇಕು' ಎಂದು ಅವರು ಒತ್ತಾಯಿಸಿದರು.

ಬಳ್ಳಾರಿ: ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಪ್ರಕರಣ

₹61 ಕೋಟಿಯ 'ಲಂಡನ್' ವಿಲ್ಲಾ ಇ.ಡಿ ಸ್ವಾಧೀನಕ್ಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಲಾಭದ ಹಣ ಕಮಿಷನ್ ಹೆಸರಿನಲ್ಲಿ ಮಗಳ ಕಂಪನಿಗೆ ವರ್ಗಾವಣೆ
- ಲಂಡನ್‌ನಲ್ಲಿನ ವಿಲ್ಲಾ ಸ್ವಾಧೀನಕ್ಕೆ ತೆಗೆದುಕೊಂಡ ಇ.ಡಿ
- ವಿಲ್ಲಾ ಮಾರಾಟ ಮಾಡದಂತೆ ಕ್ರಮ

ಬೆಂಗಳೂರು: ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆ ನಡೆಸುತ್ತಿರುವ ಶಾಂತೇಶ್ ಗುರೆಡ್ಡಿ ಕುಟುಂಬದ ಶ್ರೀ ಕುಮಾರಸ್ವಾಮಿ ಮಿನರಲ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ನಿಯಮಬಾಹಿರವಾಗಿ ವಿದೇಶಗಳಿಗೆ ಹಣ ರವಾನೆ ಮಾಡಿದ ಪ್ರಕರಣದಲ್ಲಿ ಲಂಡನ್‌ನ ₹61.73 ಕೋಟಿ ಮೌಲ್ಯದ ಸ್ವತ್ತನ್ನು ಜಾರಿ ನಿರ್ದೇಶನಾಲಯ(ಇ.ಡಿ) ಸ್ವಾಧೀನಪಡಿಸಿಕೊಂಡಿದೆ.

ಭಾರತೀಯ ಖನಿಜ ಕೈಗಾರಿಕೆಗಳ ಒಕ್ಕೂಟದ ಅಧ್ಯಕ್ಷರೂ ಆಗಿರುವ ಶಾಂತೇಶ್ ಗುರೆಡ್ಡಿ ಅವರು ಶ್ರೀ ಕುಮಾರಸ್ವಾಮಿ ಮಿನರಲ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್‌ನ ನಿರ್ದೇಶಕರಾಗಿದ್ದಾರೆ. ಕಂಪನಿಯು ಆದಾಯ ತೆರಿಗೆ ವಂಚಿಸಿರುವ ಆರೋಪದಲ್ಲಿ ಆದಾಯ ತೆರಿಗೆ ಇಲಾಖೆಯು ಪ್ರಕರಣ ದಾಖಲಿಸಿಕೊಂಡಿತ್ತು. ಅದರ ಆಧಾರದಲ್ಲೇ ಇ.ಡಿ ಸಹ ಪ್ರಕರಣ ದಾಖಲಿಸಿಕೊಂಡಿತ್ತು.

'ಈ ಕಂಪನಿಯು ಕಬ್ಬಿಣದ ಅದಿರು ರಫ್ತು ಮಾಡುವಲ್ಲಿ ವಿದೇಶಿ ವಿನಿಮಯ ನಿಯಂತ್ರಣ ಕಾಯ್ದೆ (ಫೆಮಾ) ಉಲ್ಲಂಘಿಸಿದೆ. ಕಂಪನಿಯು ಭಾರತದಿಂದ ರಫ್ತು ಮಾಡಿದ ಅದಿರಿಗೆ ಪೂರ್ಣ ಪ್ರಮಾಣದ ಹಣವನ್ನು ಪಡೆದಿಲ್ಲ. ಬದಲಿಗೆ ವಿದೇಶಗಳಲ್ಲಿ ಇರುವ ಕೆಲ ಕಂಪನಿಗಳ ಖಾತೆಗೆ 'ಕಮಿಷನ್'ನ ಹೆಸರಿನಲ್ಲಿ ಹಣವನ್ನು ವರ್ಗಾಯಿಸಲಾಗಿದೆ. ಆ ಎಲ್ಲ ಕಂಪನಿಗಳಲ್ಲಿ ಕಂಪನಿಯ ನಿರ್ದೇಶಕರಾದ ಶಾಂತೇಶ್ ಗುರೆಡ್ಡಿ, ಜ್ಯೋತಿ ಗುರೆಡ್ಡಿ ಅವರು ಆಡಳಿತ ಮಂಡಳಿ ಸದಸ್ಯರು ಹಾಗೂ ಷೇರುದಾರರಾಗಿದ್ದಾರೆ' ಎಂದು ಇ.ಡಿ ಹೇಳಿದೆ.

'ಕಂಪನಿ, ಶಾಂತೇಶ್ ಮತ್ತು ಜ್ಯೋತಿ ಅವರ ಹೆಸರಿನಲ್ಲಿ ವಿದೇಶಗಳಲ್ಲಿ ಹತ್ತಾರು ಬ್ಯಾಂಕ್ ಖಾತೆಗಳನ್ನು ತೆರೆಯಲಾಗಿದೆ. ಶಾಂತೇಶ್ ಅವರ ಮಗಳು ನೀತಿ ಗುರೆಡ್ಡಿ ಹೆಸರಿನಲ್ಲಿ ಲಂಡನ್‌ನಲ್ಲಿ ಒಂದು ಕಂಪನಿ ಕಾರ್ಯನಿರ್ವಹಿಸುತ್ತಿದ್ದು, ಆ ಕಂಪನಿಯ ಖಾತೆಗೆ ಹಣ ವರ್ಗಾಯಿಸಲಾಗಿತ್ತು. ಆ ಹಣದಿಂದ ಲಂಡನ್‌ನಲ್ಲಿ ಖರೀದಿಸಲಾಗಿದ್ದ ₹61.73 ಕೋಟಿ ಮೌಲ್ಯದ ವಿಲ್ಲಾವನ್ನು ಸ್ವಾಧೀನಕ್ಕೆ ಪಡೆಯಲಾಗಿದೆ' ಎಂದು ಮಾಹಿತಿ ನೀಡಿದೆ.

ವ್ಹೀಲಿ ನಿಯಂತ್ರಣಕ್ಕೆ 'ವಿಶೇಷ ತಂಡ'

ಸೈಬರ್ ಕ್ರೈಮ್: ಸರ್ಕಾರಕ್ಕೆ ದೊಡ್ಡ ಸವಾಲು
ಗೃಹ ಸಚಿವ ಪರಮೇಶ್ವರ

ಪ್ರಜಾವಾಣಿ ವಾರ್ತೆ

ವಿಧಾನಮಂಡಲ ಅಧಿವೇಶನ

ಬೆಂಗಳೂರು: ನಗರದಲ್ಲಿ ತಡರಾತ್ರಿ ಹಾಗೂ ನಸುಕಿನ ಸಂದರ್ಭದಲ್ಲಿ ವ್ಹೀಲಿ ಹಾವಳಿ ಹೆಚ್ಚಾಗುತ್ತಿದ್ದು, ಅದರ ನಿಯಂತ್ರಣಕ್ಕೆ 'ವಿಶೇಷ ತಂಡ' ರಚಿಸಲಾಗುವುದು ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಕೆ. ಗೋವಿಂದರಾಜ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಬೆಂಗಳೂರಿನಲ್ಲಿ ವ್ಹೀಲಿ ನಡೆಯುವ 35 ರಸ್ತೆಗಳನ್ನು ಗುರುತಿಸಲಾಗಿದೆ. ರಾತ್ರಿ 12ರ ನಂತರ ಹಾಗೂ ನಸುಕಿನ ನಾಲ್ಕು–ಐದರ ಸಮಯದಲ್ಲಿ ವ್ಹೀಲಿ ಹಾವಳಿ ಇದೆ. ಸಾಮಾನ್ಯ ಪೊಲೀಸರ ಪಾಳಿ ಮುಗಿದ ನಂತರ ವ್ಹೀಲಿ ಮಾಡುತ್ತಿದ್ದಾರೆ. ಹೀಗಾಗಿ, ವಿಶೇಷ ತಂಡ ರಚಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಹೇಳಿದರು.

'ಬೆಂಗಳೂರಿನಲ್ಲಿ ಅಷ್ಟೇ ಅಲ್ಲ ರಾಜ್ಯದ ಹಲವು ನಗರಗಳಲ್ಲಿ ವ್ಹೀಲಿ ಒಂದು ಪಿಡುಗಾಗಿದೆ. ವ್ಹೀಲಿ ಪ್ರಕರಣಗಳಲ್ಲಿ ಭಾಗಿಯಾಗುವ ಬೈಕ್ ಸವಾರರ ವಿರುದ್ಧ ಬಿಎನ್‌ಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿ, ಸವಾರರನ್ನು ವಶಕ್ಕೆ ಪಡೆದುಕೊಂಡು, ವಾಹನಗಳ ಪರವಾನಗಿಯನ್ನು ಅಮಾನತುಗೊಳಿಸಲಾಗುತ್ತದೆ. ವ್ಹೀಲಿ ಮಾಡುವ ಬಾಲಕರ ವಿರುದ್ಧ ಮಕ್ಕಳ ರಕ್ಷಣೆ ಮತ್ತು ಆರೈಕೆ ಕಾಯ್ದೆಯಡಿ ಪ್ರಕರಣಗಳನ್ನು ದಾಖಲಿಸಲಾಗುತ್ತದೆ. ಅಂತಹ ಸವಾರರ ಪೋಷಕರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದರು.

'ವ್ಹೀಲಿ ಮಾಡಲು ಬಳಸಿದ ವಾಹನಗಳ ಆರ್.ಸಿ. ಪುಸ್ತಕ ಹಾಗೂ ಬೈಕ್ ಸವಾರರ ಚಾಲನಾ ಪರವಾನಗಿಯನ್ನು (ಡಿಎಲ್) ಅಮಾನತುಗೊಳಿಸಲಾಗಿದೆ. 2024ರಲ್ಲಿ 47 ಡಿಎಲ್, 195 ಆರ್‌ಸಿ, 20025ರಲ್ಲಿ ಈವರೆಗೆ 41 ಡಿಎಲ್ ಮತ್ತು 142 ಆರ್‌ಸಿ ಅಮಾನತು ಮಾಡಲಾಗಿದೆ' ಎಂದು ಸಚಿವರು ಮಾಹಿತಿ ನೀಡಿದರು.

ಸವಾಲು: 'ರಾಜ್ಯದಲ್ಲಿ ಆನ್‌ಲೈನ್ ಮೂಲಕ ವಂಚನೆ ಪ್ರಕರಣಗಳು ಹೆಚ್ಚಾಗುತ್ತಿದ್ದು, ಅವುಗಳನ್ನು ತಡೆಗಟ್ಟುವುದು ದೊಡ್ಡ ಸವಾಲಾಗಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಕಾಂಗ್ರೆಸ್‌ನ ಎಸ್. ರವಿ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, 2023ರಲ್ಲಿ 22,253 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಅದರಲ್ಲಿ 6,007 ಪ್ರಕರಣಗಳನ್ನು ಪತ್ತೆಹಚ್ಚಲಾಗಿದೆ. ಒಟ್ಟು ₹1,287 ಕೋಟಿ ವಂಚನೆಯಾಗಿದೆ. 2024ರಲ್ಲಿ 22,472 ಪ್ರಕರಣಗಳಲ್ಲಿ 2,858 ಪತ್ತೆ ಹಚ್ಚಲಾಗಿದ್ದು ₹2,515 ಕೋಟಿ ವಂಚನೆಯಾಗಿದೆ. 2025ರಲ್ಲಿ ಜುಲೈವರೆಗೆ 8,620 ಪ್ರಕರಣಗಳಲ್ಲಿ 399 ಪತ್ತೆ ಹಚ್ಚಲಾಗಿದ್ದು, ₹861 ಕೋಟಿ ವಂಚನೆಯಾಗಿದೆ ಎಂದು ಅಂಕಿ–ಅಂಶ ನೀಡಿದರು.

'ಸೈಬರ್ ಅಪರಾಧ ಪತ್ತೆಹಚ್ಚುವುದು ಸುಲಭದ ಕೆಲಸವಲ್ಲ. ತಂತ್ರಜ್ಞಾನ ಸೇರಿದಂತೆ ತಜ್ಞರ ಅಗತ್ಯವಿದೆ' ಎಂದು ತಿಳಿಸಿದರು.

ನಿರ್ದಾಕ್ಷಿಣ್ಯ ಕ್ರಮ

'ಮಾದಕ ವಸ್ತುಗಳನ್ನು ನಿಯಂತ್ರಿಸಿ ಡ್ರಗ್ಸ್ ಮುಕ್ತ ರಾಜ್ಯವನ್ನಾಗಿಸಲು ನಿರ್ದಾಕ್ಷಿಣ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ' ಎಂದು ಗೃಹ ಸಚಿವ ಪರಮೇಶ್ವರ ತಿಳಿಸಿದರು.

ಬಿಜೆಪಿಯ ಎನ್. ರವಿಕುಮಾರ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಳ್ಳಲಾಗುತ್ತಿದೆ. ವಿದೇಶಿಯರೂ ಈ ಜಾಲದಲ್ಲಿದ್ದಾರೆ ಎಂದರು.

'ಡ್ರಗ್ಸ್ ದಂಧೆಯನ್ನು ಸಂಪೂರ್ಣ ಮಟ್ಟ ಹಾಕಲು ಮತ್ತು ಪೆಡ್ಲರ್‌ಗಳ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸಲಾಗುತ್ತಿದೆ' ಎಂದು ತಿಳಿಸಿದರು.

'ಪಾಲಿಕೆಗಳ ಚುನಾವಣೆಗೆ ಸಿದ್ಧತೆ'

ಶಿವಕುಮಾರ್

ನಗರ ಪಾಲಿಕೆಗಳ ಚುನಾವಣೆಗೆ ಸಿದ್ಧತೆ ಬಗ್ಗೆ ಚುನಾವಣಾ ಆಯೋಗಕ್ಕೆ ಪತ್ರ ಬರೆಯಲಾಗಿದೆ. ನವೆಂಬರ್ 1ರ ವೇಳೆಗೆ ಐದು ನಗರ ಪಾಲಿಕೆಗಳ ವಾರ್ಡ್ ಮರುವಿಂಗಡಣೆ ಪ್ರಕ್ರಿಯೆ ನಡೆಯಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಟಿ.ಎನ್ ಜವರಾಯಿ ಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2025ರ ಮೇ 15ರಿಂದ ಜಾರಿಯಾಗಿದ್ದು, ಬಿಬಿಎಂಪಿ ಪ್ರದೇಶವನ್ನು ಗ್ರೇಟರ್ ಬೆಂಗಳೂರು ಪ್ರದೇಶ ಎಂದು ಹೆಸರಿಸಲಾಗಿದೆ. ಜುಲೈ 19ರಂದು ಐದು ನಗರ ಪಾಲಿಕೆ ರಚಿಸಲಾಗಿದ್ದು, ಆಕ್ಷೇಪಣೆ ಸಲ್ಲಿಸಲು ಗಡುವು ಮುಗಿದಿದೆ. ಸೆ.2ರಂದು ಅಂತಿಮ ಅಧಿಸೂಚನೆ ಹೊರಡಿಸಿ, ನವೆಂಬರ್ 1ರೊಳಗೆ ವಾರ್ಡ್ ವಿಂಗಡಣೆ ಕಾರ್ಯ ಮಾಡಲಾಗುವುದು. ಇದಕ್ಕಾಗಿ ಪಾಲಿಕೆಯಲ್ಲಿ ಆಯುಕ್ತರ ನೇತೃತ್ವದ ಪ್ರತ್ಯೇಕ ತಂಡ ಇದೆ. ನಾವು ನ್ಯಾಯಾಲಯಕ್ಕೆ ಕಾಲ ಮಿತಿಯಲ್ಲಿ ಪ್ರಮಾಣ ಪತ್ರ ಸಲ್ಲಿಸಿದ್ದೇವೆ' ಎಂದರು.

ಶೇ 25ರಷ್ಟು ಮಾತ್ರ: 'ಕೇಂದ್ರ ಸರ್ಕಾರದ ಆದೇಶದಂತೆ ಘನತ್ಯಾಜ್ಯ ಸೇವಾ ಶುಲ್ಕವನ್ನು ವಿಧಿಸಲಾಗಿದೆ. ಕೇಂದ್ರದ ಮಾರ್ಗಸೂಚಿಯಲ್ಲಿ ಶೇ 25ರಷ್ಟು ಶುಲ್ಕವನ್ನು ಮಾತ್ರ ಬಿಬಿಎಂಪಿ ವ್ಯಾಪ್ತಿಯಲ್ಲಿ ಸಂಗ್ರಹಿಸಲಾಗುತ್ತಿದೆ' ಎಂದು ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಬಿಜೆಪಿಯ ಕೇಶವ ಪ್ರಸಾದ್ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಕಸವನ್ನು ತಾವೇ ವಿಲೇವಾರಿ ಮಾಡಿಕೊಳ್ಳುವುದಾಗಿ 35 ಸಾವಿರ ಜನರು ಸ್ವಯಂ ಘೋಷಣೆ ಮಾಡಿಕೊಂಡಿದ್ದಾರೆ. ಅವರಿಗೆ ಶುಲ್ಕ ಇರುವುದಿಲ್ಲ' ಎಂದರು.

ಹೈಕೋರ್ಟ್‌ನಲ್ಲಿ ಅಫಿಡವಿಟ್ ಸಲ್ಲಿಸಿರುವಂತೆ 33 ಪ್ಯಾಕೇಜ್‌ಗಳಲ್ಲಿ ಘನತ್ಯಾಜ್ಯ ವಿಲೇವಾರಿಗೆ ಟೆಂಡರ್ ಕರೆಯಲಾಗಿದೆ. ನೈಸ್ ಸಂಸ್ಥೆಯಿಂದ ಬಿಡಿಸಿಕೊಂಡಿರುವ ಎರಡು ಜಾಗ ಹಾಗೂ ದೊಡ್ಡಬಳ್ಳಾಪುರದಲ್ಲಿ ತಲಾ 100 ಎಕರೆಯಲ್ಲಿ ಸಮಗ್ರ ತ್ಯಾಜ್ಯ ವಿಲೇವಾರಿ, ಸಂಸ್ಕರಣೆ ಘಟಕಗಳನ್ನು ಸ್ಥಾಪಿಸಲಾಗುವುದು ಎಂದು ತಿಳಿಸಿದರು.

ಅಪಘಾತ: ದ್ವಿಚಕ್ರ ವಾಹನ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿ ರಸ್ತೆಯ ಮೇಕ್ರಿ ವೃತ್ತದ ಬಳಿ ಖಾಸಗಿ ಬಸ್ ಮತ್ತು ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಲೂಯಿಸ್ ಫರ್ನಾಂಡಿಸ್ (23) ಎಂಬುವರು ಮೃತಪಟ್ಟಿದ್ದಾರೆ.

ತಮಿಳುನಾಡಿನ ಅವರು ಥಣಿಸಂದ್ರದಲ್ಲಿ ವಾಸವಾಗಿದ್ದರು. ಹೆಬ್ಬಾಳದ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿದ್ದ ಲೂಯಿಸ್ ಅವರು ಕೆಲಸದ ನಿಮಿತ್ತ ಬೈಕ್‌ನಲ್ಲಿ ಹೋಗುತ್ತಿದ್ದಾಗ ಹಿಂದಿನಿಂದ ಬಸ್ ಡಿಕ್ಕಿ ಹೊಡೆದಿದೆ. ಆಗ ಕೆಳಗೆ ಬಿದ್ದ ಅವರ ತಲೆಯ ಮೇಲೆ ಬಸ್‌ನ ಚಕ್ರ ಹರಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬಸ್ ಚಾಲಕನನ್ನು ಬಂಧಿಸಿ ವಾಹನ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಸದಾಶಿವನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದು ತಿಂಗಳ ಒಳಗೆ ಚೌಕಟ್ಟು ರೂಪಿಸಲು ಸೂಚಿಸಿದ್ದ ಹೈಕೋರ್ಟ್

ಸಂಚಾರ ಆರಂಭಿಸಿದ ಬೈಕ್ ಟ್ಯಾಕ್ಸಿ

ಪ್ರಜಾವಾಣಿ ವಾರ್ತೆ

> ಬೈಕ್ ಟ್ಯಾಕ್ಸಿಗಳು ಸಂಚಾರ ನಡೆಸಿರುವ ಬಗ್ಗೆ ಕಾನೂನು ಅಭಿಪ್ರಾಯ ಪಡೆಯಲಾಗುವುದು. ಬಳಿಕ ಮುಂದಿನ ಕ್ರಮದ ಬಗ್ಗೆ ನಿರ್ಧರಿಸಲಾಗುವುದು.
> **ಎನ್.ವಿ.ಪ್ರಸಾದ್,** ಕಾರ್ಯದರ್ಶಿ, ಸಾರಿಗೆ ಇಲಾಖೆ

ಬೆಂಗಳೂರು: 'ಬೈಕ್ ಟ್ಯಾಕ್ಸಿಗಳಿಗೆ 13 ರಾಜ್ಯಗಳಲ್ಲಿ ನಿಯಮಾವಳಿ ರೂಪಿಸಿರುವಾಗ ನೀವು ಯಾಕೆ ನಿಷೇಧ ಹೇರಿದ್ದೀರಿ' ಎಂದು ಸರ್ಕಾರವನ್ನು ಬುಧವಾರ ವಿಚಾರಣೆ ವೇಳೆ ಹೈಕೋರ್ಟ್ ಪ್ರಶ್ನಿಸಿತ್ತು. ಇದನ್ನೇ ಅನುಮತಿ ಎಂದು ಭಾವಿಸಿದ ಅಗ್ರಿಗೇಟರ್ ಕಂಪನಿಗಳು ಗುರುವಾರ ಬೈಕ್ ಟ್ಯಾಕ್ಸಿಗಳನ್ನು ರಸ್ತೆಗಿಳಿಸಿವೆ.

ಸರ್ಕಾರವು ಬೈಕ್ ಟ್ಯಾಕ್ಸಿಗಳಿಗೆ ಜೂನ್ 16ರಿಂದ ನಿಷೇಧ ಹೇರಿತ್ತು. ಇದನ್ನು 'ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ಓಲಾ)' ಕಂಪನಿ ಪ್ರಶ್ನಿಸಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತ್ತು. ಈಗ ವಿಧಿಸಿರುವ ನಿಷೇಧವನ್ನು ತುಂಬಾ ಸಮಯ ಮುಂದುವರಿಸಲು ಸಾಧ್ಯವಿಲ್ಲ. ನೀತಿ ಚೌಕಟ್ಟು ರೂಪಿಸುವ ಬಗ್ಗೆ ಸರ್ಕಾರದ ನಿಲುವು ಏನು ಎಂಬುದನ್ನು ಸೆ.22ರ ಒಳಗೆ ಸ್ಪಷ್ಟಪಡಿಸಬೇಕು ಎಂದು ತಿಳಿಸಿತ್ತು.

ವಿಚಾರಣೆ ವೇಳೆ ಸರ್ಕಾರವನ್ನು ಪ್ರಶ್ನಿಸಿದ್ದನ್ನೇ ತಪ್ಪಾಗಿ ಅರ್ಥೈಸಿಕೊಂಡು ಅಗ್ರಿಗೇಟರ್‌ಗಳು ಬೈಕ್‌ಟ್ಯಾಕ್ಸಿ ಸಂಚಾರ ಆರಂಭಿಸಿದ್ದವು.

ಸಚಿವರಿಗೆ ಮನವಿ: ಹೈಕೋರ್ಟ್ ನಿಷೇಧವನ್ನು ತೆರವುಗೊಳಿಸಿಲ್ಲ. ಆದರೂ, ಬೈಕ್ ಟ್ಯಾಕ್ಸಿಗಳನ್ನು ಓಡಿಸಿರುವುದು ನ್ಯಾಯಾಂಗ ನಿಂದನೆಯಾಗಿದೆ. ಅಗ್ರಿಗೇಟರ್ ಕಂಪನಿಗಳು ಇಲ್ಲಿನ ಕಾನೂನಿಗೆ ಎಷ್ಟು ಬೆಲೆ ನೀಡುತ್ತವೆ ಎಂಬುದು ಇದರಿಂದ ಗೊತ್ತಾಗುತ್ತದೆ. ಕೂಡಲೇ ಆ ಕಂಪನಿಗಳ ಮೇಲೆ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟವು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಮನವಿ ಸಲ್ಲಿಸಿತು.

'ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಾರಿಗೆ ಇಲಾಖೆಯ ಅಧಿಕಾರಿಗಳಿಗೆ ಸಚಿವರು ಸೂಚನೆ ನೀಡಿದ್ದಾರೆ' ಎಂದು ಒಕ್ಕೂಟದ ಅಧ್ಯಕ್ಷ ನಟರಾಜ ಶರ್ಮ ತಿಳಿಸಿದರು.

ನಿಷೇಧವಿದ್ದರೂ ಸಂಚಾರ ಆರಂಭಿಸಿರುವ ಬೈಕ್ ಟ್ಯಾಕ್ಸಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟವು ನಟರಾಜ ಶರ್ಮ ನೇತೃತ್ವದಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿಗೆ ಮನವಿ ಸಲ್ಲಿಸಿತು

'ಒಂದು ತಿಂಗಳು ಕಾಯಿರಿ'

'ಹೈಕೋರ್ಟ್ ತೀರ್ಪು ನಮ್ಮ ಪರ ಬರಲಿದೆ ಎಂಬ ವಿಶ್ವಾಸ ಇದೆ. ಆತುರದಿಂದ ಬೈಕ್ ಟ್ಯಾಕ್ಸಿಗಳನ್ನು ಓಡಿಸಿ ತೊಂದರೆ ತಂದುಕೊಳ್ಳುವುದು ಬೇಡ. ಒಂದು ತಿಂಗಳು ಕಾಯಬೇಕು' ಎಂದು ಬೈಕ್ ಟ್ಯಾಕ್ಸಿ ಅಸೋಸಿಯೇಶನ್ ಅಧ್ಯಕ್ಷ ಮೊಹಮ್ಮದ್ ಸಲೀಂ ಅವರು ಮನವಿ ಮಾಡಿದ್ದಾರೆ.

ಸರ್ಕಾರವನ್ನು ಹೈಕೋರ್ಟ್ ಪ್ರಶ್ನಿಸಲು ಆರಂಭಿಸಿದೆ. ಇಂಥ ಸಮಯದಲ್ಲಿ ಎಚ್ಚರದಿಂದ ಇರಬೇಕು ಎಂದು ತಿಳಿಸಿದ್ದಾರೆ.

'ಅಗ್ರಿಗೇಟರ್ ಕಂಪನಿಗಳ ಒತ್ತಡಕ್ಕೆ ಮಣಿದು ಕೆಲವು ಬೈಕ್ ಟ್ಯಾಕ್ಸಿ ಚಾಲಕರು ರಸ್ತೆಗೆ ಇಳಿದಿದ್ದಾರೆ. ಕಂಪನಿಗಳಿಗೆ ತೊಂದರೆಯಾಗುವುದಿಲ್ಲ. ಬೈಕ್ ಟ್ಯಾಕ್ಸಿಯವರೇ ಸಮಸ್ಯೆ ಅನುಭವಿಸಬೇಕಾಗುತ್ತದೆ' ಎಂದು ಬೈಕ್ ಟ್ಯಾಕ್ಸಿ ಚಾಲಕರೊಬ್ಬರು ತಿಳಿಸಿದರು.

ವಿದ್ಯಾರ್ಥಿನಿ ಸೇರಿ ನಾಲ್ವರ ಸಾವು

ಪೀಣ್ಯ, ಯಲಹಂಕ, ಕಾಮಾಕ್ಷಿಪಾಳ್ಯ, ಯಶವಂತಪುರದಲ್ಲಿ ಪ್ರತ್ಯೇಕ ಅಪಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೀಣ್ಯ, ಯಲಹಂಕ, ಕಾಮಾಕ್ಷಿಪಾಳ್ಯ, ಯಶವಂತಪುರ ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಬುಧವಾರ ರಾತ್ರಿ ಹಾಗೂ ಗುರುವಾರ ಬೆಳಿಗ್ಗೆ ಸಂಭವಿಸಿದ ನಾಲ್ಕು ಪ್ರತ್ಯೇಕ ಅಪಘಾತಗಳಲ್ಲಿ ವಿದ್ಯಾರ್ಥಿನಿ ಸೇರಿ ನಾಲ್ವರು ಮೃತಪಟ್ಟಿದ್ದಾರೆ.

ಯಲಹಂಕದ ಕೋಗಿಲು ಕ್ರಾಸ್‌ನ ಮಾರುತಿನಗರದ ಸಮೀಪ ಬಿಎಂಟಿಸಿ ಬಸ್‌ನ ಚಕ್ರ ಹರಿದು ವಿದ್ಯಾರ್ಥಿನಿ ತನ್ವಿಕೃಷ್ಣ (10) ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ತನ್ವಿಕೃಷ್ಣ ಐದನೇ ತರಗತಿಯಲ್ಲಿ ಓದುತ್ತಿದ್ದಳು.

ಕೋಗಿಲು ಕ್ರಾಸ್ ನಿವಾಸಿ ಹರ್ಷಿತಾ ಅವರು ಇಬ್ಬರು ಮಕ್ಕಳನ್ನು ಶಾಲೆಗೆ ಬಿಡಲು ಗುರುವಾರ ಬೆಳಿಗ್ಗೆ ಸ್ಕೂಟರ್‌ನಲ್ಲಿ ಹೋಗುತ್ತಿದ್ದರು. ಮಾರುತಿನಗರದ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಬಳಿ ಸ್ಕೂಟರ್ ನಿಯಂತ್ರಣ ಕಳೆದುಕೊಂಡು ಮೂವರು ಕೆಳಕ್ಕೆ ಬಿದ್ದಿದ್ದರು. ಹಿಂದಿನಿಂದ ವೇಗವಾಗಿ ಬಂದ ಬಿಎಂಟಿಸಿ ಬಸ್ ಬಾಲಕಿ ತನ್ವಿಕೃಷ್ಣ ಮೇಲೆ ಹರಿದ ಪರಿಣಾಮ ಆಕೆ ಸ್ಥಳದಲ್ಲೇ ಮೃತಪಟ್ಟಿದ್ದಾಳೆ ಎಂದು ಸಂಚಾರ ಪೊಲೀಸರು ಹೇಳಿದರು.

'ಗುರುವಾರ ಬೆಳಿಗ್ಗೆ 8.20ರ ಸುಮಾರಿಗೆ ಈ ಅಪಘಾತ ಸಂಭವಿಸಿದೆ. ಯಲಹಂಕದಿಂದ ಶಿವಾಜಿನಗರದ ಕಡೆಗೆ ಬಿಎಂಟಿಸಿ ಬಸ್ ಸಂಚರಿಸುತ್ತಿತ್ತು. ದ್ವಿಚಕ್ರ ವಾಹನದ ಹಿಂಬದಿ ಕುಳಿತಿದ್ದ 10 ವರ್ಷದ ಬಾಲಕಿ ಮೃತಪಟ್ಟಿದ್ದು, ಉಳಿದ ಇಬ್ಬರಿಗೆ ಗಾಯವಾಗಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

ಬಸ್‌ನಲ್ಲಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿಗಳ ಪರಿಶೀಲನೆ ನಡೆಸಲಾಗಿದೆ. ಬೆಳಿಗ್ಗೆ 8.18ರ ಸುಮಾರಿಗೆ ದ್ವಿಚಕ್ರ ವಾಹನ ಸವಾರರು, ತನ್ನ ಇಬ್ಬರು ಮಕ್ಕಳೊಂದಿಗೆ ಮುಖ್ಯರಸ್ತೆಗೆ ಪ್ರವೇಶಿಸಿದ್ದರು. ರಸ್ತೆ ಕಾಮಗಾರಿ ನಡೆಯುತ್ತಿದ್ದ ಹಾಗೂ ಮುಂದೆ ಇನ್ನೊಂದು ದ್ವಿಚಕ್ರ ವಾಹನ ನಿಂತಿದ್ದ ಕಾರಣಕ್ಕೆ ಬ್ರೇಕ್ ಹಾಕಿ ನಿಯಂತ್ರಣ ಕಳೆದುಕೊಂಡಿದ್ದರು. ಆಗ ಬಾಲಕಿ, ಬಸ್ ಎಡಭಾಗದ ಹಿಂಬದಿಯ ಚಕ್ರದ ಅಡಿಗೆ ಬಿದ್ದಿದ್ದಳು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬದವರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು. ಯಲಹಂಕ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ವಿವಿಧೆಡೆ ಜುಲೈ 18ರಿಂದ ಆಗಸ್ಟ್ 21ರವರೆಗೆ ಬಿಎಂಟಿಸಿ ಬಸ್‌ಗಳಿಂದ ಸಂಭವಿಸಿದ ಅಪಘಾತಗಳಲ್ಲಿ ಎಂಟು ಮಂದಿ ಮೃತಪಟ್ಟಿದ್ದಾರೆ.

ಮೇಲ್ಸೇತುವೆಯಿಂದ ಕೆಳಕ್ಕೆ ಬಿದ್ದು ಸವಾರ ಸಾವು

ಯಶವಂತಪುರ ಮೇಲ್ಸೇತುವೆಯಿಂದ ಕೆಳಕ್ಕೆ ಬಿದ್ದು ಬೈಕ್ ಸವಾರ, ಚಿತ್ರದುರ್ಗದ ಅಕ್ಷಯ್‌ರಾಮ್(23) ಮೃತಪಟ್ಟಿದ್ದಾರೆ. ಮೃತ ಯುವಕ ಟಿ.ದಾಸರಹಳ್ಳಿಯಲ್ಲಿ ನೆಲಸಿದ್ದರು.

ಅಕ್ಷಯ್‌ರಾಮ್ ಅವರು ಸ್ನೇಹಿತನ ಜತೆಗೆ ಗುರುವಾರ ಮುಂಜಾನೆ ತೆರಳುತ್ತಿದ್ದರು. ಯಶವಂತಪುರ ಮೇಲ್ಸೇತುವೆಯ ತಡೆಗೋಡೆಗೆ ಬೈಕ್ ಡಿಕ್ಕಿ ಹೊಡೆದು ಅವರು ಕೆಳಕ್ಕೆ ಬಿದ್ದು ಮೃತಪಟ್ಟಿದ್ದಾರೆ. ಹಿಂಬದಿಯ ಸವಾರ ಗಾಯಗೊಂಡಿದ್ದಾರೆ.

'ಅಕ್ಷಯ್ ಅವರು ಬೈಕ್ ಚಾಲನೆ ಮಾಡುತ್ತಿದ್ದರು. ನಿಯಂತ್ರಣ ತಪ್ಪಿ ತಡೆಗೋಡೆಗೆ ಡಿಕ್ಕಿ ಹೊಡೆದ ಪರಿಣಾಮ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

ಯಶವಂತಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟಿಪ್ಪರ್ ಡಿಕ್ಕಿ: ಪಾದಚಾರಿ ಸಾವು

ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬುಧವಾರ ರಾತ್ರಿ ವೇಗವಾಗಿ ಬಂದ ಟಿಪ್ಪರ್ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿಯೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕಾರ್ಮಿಕ ಬಿಸೋಜಿತ್ ಫರೀದ್ (37) ಮೃತ ಪಾದಚಾರಿ. ಕಾಮಾಕ್ಷಿಪಾಳ್ಯದಲ್ಲಿ ವಾಸವಾಗಿದ್ದ ಫರೀದ್ ಅವರು ಕೆಲಸದ ನಿಮಿತ್ತ ಹೊರಗೆ ಹೋಗಿ ಮನೆಗೆ ವಾಪಸ್ ಬರುತ್ತಿದ್ದರು. ಮಾಗಡಿ ರಸ್ತೆಯ ಅರ್ಕಾವತಿ ಆಸ್ಪತ್ರೆ ಎದುರು ವೇಗವಾಗಿ ಬಂದ ಟಿಪ್ಪರ್ ವಾಹನ ಬಿಸೋಜಿತ್ ಫರೀದ್ ಅವರಿಗೆ ಡಿಕ್ಕಿ ಹೊಡೆದು ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಚಾಲಕ ಪರಾರಿ: ಅಪಘಾತ ಸಂಭವಿಸುತ್ತಿದ್ದಂತೆ ಟಿಪ್ಪರ್ ಚಾಲಕ ವಾಹನ ನಿಲ್ಲಿಸದೇ ಚಾಲನೆ ಮಾಡಿಕೊಂಡು ಹೋಗಿದ್ದಾನೆ. ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಟಿಪ್ಪರ್ ವಾಹನ ಚಾಲಕನ ಅತೀ ವೇಗವೇ ಅಪಘಾತಕ್ಕೆ ಕಾರಣ ಎಂದು ಸಂಚಾರ ಪೊಲೀಸರು ಹೇಳಿದರು.

ಟ್ರಕ್ ಡಿಕ್ಕಿ: ವೃದ್ಧೆ ಸಾವು

ಜಾಲಹಳ್ಳಿ ಜಂಕ್ಷನ್‌ನಲ್ಲಿ ರಸ್ತೆ ದಾಟುತ್ತಿದ್ದ ವೇಳೆ ಟ್ರಕ್‌ವೊಂದು ಡಿಕ್ಕಿ ಹೊಡೆದ ಪರಿಣಾಮ ಹೆಗ್ಗನಹಳ್ಳಿಯ ನಿವಾಸಿ ಮಂಜುಳಾ (63) ಅವರು ಮೃತಪಟ್ಟಿದ್ದಾರೆ.

ಮಂಜುಳಾ ಅವರು ಕುಣಿಗಲ್‌ಗೆ ಹೋಗಿ ನಗರಕ್ಕೆ ವಾಪಸ್ ಬರುತ್ತಿದ್ದರು. ಆಗ ಅಪಘಾತ ಸಂಭವಿಸಿದೆ. ಬುಧವಾರ ರಾತ್ರಿ 9ರ ಸುಮಾರಿಗೆ ಜಾಲಹಳ್ಳಿ ಕ್ರಾಸ್‌ನಲ್ಲಿ ಬಸ್ ಇಳಿದಿದ್ದರು. ಹೆಗ್ಗನಹಳ್ಳಿ ಕ್ರಾಸ್‌ಗೆ ಹೋಗಲು ಮತ್ತೊಂದು ಬಸ್ ಹತ್ತಲು ರಸ್ತೆ ದಾಟಲು ಮುಂದಾಗಿದ್ದರು. ವೇಗವಾಗಿ ಬಂದ ಟ್ರಕ್, ಮಂಜುಳಾ ಅವರಿಗೆ ಡಿಕ್ಕಿ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದರು ಎಂದು ಸಂಚಾರ ಪೊಲೀಸರು ಹೇಳಿದರು.

ತಕ್ಷಣವೇ ಸ್ಥಳದಲ್ಲಿದ್ದ ಸಂಚಾರ ಪೊಲೀಸರು ಅವರನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆಗೆ ದಾಖಲಿಸಿದ್ದರು. ಗುರುವಾರ ಮುಂಜಾನೆ ಮೃತಪಟ್ಟಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬದವರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು. ಪೀಣ್ಯ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೆ 2 ಠಾಣೆಗಳು ಕಮಿಷನರೇಟ್ ವ್ಯಾಪ್ತಿಗೆ: ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮಾಂತರ ವ್ಯಾಪ್ತಿಯಲ್ಲಿರುವ ಇನ್ನೂ ಎರಡು ಪೊಲೀಸ್ ಠಾಣೆಗಳನ್ನು ನಗರ ಕಮಿಷನರೇಟ್ ವ್ಯಾಪ್ತಿಗೆ ಸೇರ್ಪಡೆ ಮಾಡಲು ಸಿದ್ಧತೆ ನಡೆದಿದೆ.

ಹೊರ ವಲಯದ ರಾಜಾನುಕುಂಟೆ ಹಾಗೂ ಮಾದನಾಯಕನಹಳ್ಳಿ ಪೊಲೀಸ್ ಠಾಣೆಗಳನ್ನು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಗೆ ಸೇರಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರಿಗೆ ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಪ್ರಸ್ತಾವ ಸಲ್ಲಿಸಿದ್ದಾರೆ.

ಗ್ರಾಮಾಂತರ ವ್ಯಾಪ್ತಿಯಲ್ಲಿರುವ ರಾಜಾನುಕುಂಟೆ ಹಾಗೂ ಮಾದನಾಯಕನಹಳ್ಳಿ ಠಾಣಾ ವ್ಯಾಪ್ತಿಗಳ 40 ಹಳ್ಳಿಗಳು ಈಗಾಗಲೇ ಕಮಿಷನರೇಟ್ ವ್ಯಾಪ್ತಿಯಲ್ಲಿ ಇವೆ. ಹೊರವಲಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದು ಹಾಗೂ ಅಪರಾಧಗಳಿಗೆ ಕಡಿವಾಣ ಹಾಕಲು ಈ ಠಾಣೆಗಳನ್ನು ಕಮಿಷನರೇಟ್ ವ್ಯಾಪ್ತಿಗೆ ಸೇರಿಸಬೇಕು ಎಂದು ಪ್ರಸ್ತಾವದಲ್ಲಿ ಉಲ್ಲೇಖಿಸಿದ್ದಾರೆ.

ರಾಜಾನುಕುಂಟೆ ಠಾಣೆ ವ್ಯಾಪ್ತಿಯಲ್ಲಿ ಕಾಲೇಜುಗಳು ಹೆಚ್ಚಿವೆ. ವಿದೇಶಿ ಪ್ರಜೆಗಳು ಹೆಚ್ಚಾಗಿ ವಾಸ ಮಾಡುತ್ತಿದ್ದು, ಮನೆಗಳ್ಳತನ ಮತ್ತು ಡ್ರಗ್ಸ್ ಮಾರಾಟ ದಂಧೆಯೂ ನಡೆಯುತ್ತಿದೆ. ಮಾದನಾಯಕನಹಳ್ಳಿ ಠಾಣಾ ವ್ಯಾಪ್ತಿಯ ಗ್ರಾಮಗಳಲ್ಲಿ ಜನದಟ್ಟಣೆ, ಕೈಗಾರಿಕೆಗಳು ಹಾಗೂ ವಾಣಿಜ್ಯ ಸಂಕೀರ್ಣಗಳಿವೆ. ಈ ಠಾಣೆಯನ್ನು ನಗರ ವ್ಯಾಪ್ತಿಗೆ ಸೇರ್ಪಡೆ ಮಾಡಿದರೆ ತ್ವರಿತವಾಗಿ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಲು ಅನುಕೂಲ ಆಗಲಿದೆ ಎಂದು ಮನವಿ ಮಾಡಲಾಗಿದೆ. ಎರಡೂ ಠಾಣೆಗಳನ್ನು ವಾಯುವ್ಯ (ಪೀಣ್ಯ) ಉಪ ವಿಭಾಗಕ್ಕೆ ಸೇರ್ಪಡೆ ಮಾಡಬೇಕು ಎಂದು ಕೋರಲಾಗಿದೆ.

'ವಿವೇಚನೆ ಬಳಸಿ ಪೆರೋಲ್ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೆರೋಲ್ ನೀಡುವ ಸಂದರ್ಭದಲ್ಲಿ ಅಧಿಕಾರಿಗಳು, ಕರ್ನಾಟಕ ಜೈಲು ಕೈಪಿಡಿಯಲ್ಲಿನ ನಿಯಮಗಳ ಅಡಿಯಲ್ಲಿ ಪ್ರದತ್ತವಾದ ವಿವೇಚನಾಧಿಕಾರವನ್ನು ಸೂಕ್ತವಾಗಿ ಬಳಸಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

'ನನ್ನ ಆರೋಗ್ಯ ಹದಗೆಟ್ಟಿರುವ ಕಾರಣದಿಂದ ನನ್ನ ಮಗ ಸದ್ದಾಂನನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಲು ನಿರ್ದೇಶಿಸಬೇಕು' ಎಂದು ಕೋರಿ ಬೀದರ್ ಜಿಲ್ಲೆ ಬಸವಕಲ್ಯಾಣದ ತಾಜ್ ಕಾಲೋನಿಯ ಚೊಟ್ಟಿ ಬಿ ಕೋಂ ಸೈಯದ್ ರಸೂಲ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಈ ಕುರಿತಂತೆ ವಿವರಿಸಿದೆ.

'ತಪ್ಪಿತಸ್ಥರು ಮತ್ತು ಅಪರಾಧಿಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಜೈಲು ಶಿಕ್ಷೆ ವಿಧಿಸಲಾಗುತ್ತದೆಯೇ ಹೊರತು ಅವರನ್ನು ಸಮಾಜದಿಂದ ದೂರ ಇರಿಸುವ ಉದ್ದೇಶ ಜೈಲು ಶಿಕ್ಷೆಯದ್ದಲ್ಲ. ಆ ರೀತಿ ಆಗಿದ್ದೇ ಆದರೆ ಅದು ಸುಧಾರಣೆ ಎಂಬ ಪರಿಕಲ್ಪನೆಗೆ ಧಕ್ಕೆ ಉಂಟು ಮಾಡುತ್ತದೆ' ಎಂದು ಹೇಳಿರುವ ನ್ಯಾಯಪೀಠ ಸದ್ದಾಂಗೆ 60 ದಿನಗಳ ಪೆರೋಲ್ ಮಂಜೂರು ಮಾಡಲು ಜೈಲು ಅಧಿಕಾರಿಗಳಿಗೆ ಆದೇಶಿಸಿದೆ.

'ಕರ್ನಾಟಕ ಜೈಲು ಕೈಪಿಡಿಯಲ್ಲಿನ ಪೆರೋಲ್ ನಿಯಮಗಳ ಕುರಿತಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತರಬೇತಿ ನೀಡಲು ಕ್ರಮ ಕೈಗೊಳ್ಳಬೇಕು' ಎಂದೂ ಇದೇ ವೇಳೆ ನ್ಯಾಯಪೀಠ ಪೊಲೀಸ್ ಮಹಾನಿರ್ದೇಶಕರಿಗೆ ನಿರ್ದೇಶಿಸಿದೆ. ಸದ್ದಾಂ ಕೊಲೆ ಪ್ರಕರಣದಲ್ಲಿ 2017ರಲ್ಲಿ ಶಿಕ್ಷೆಗೆ ಗುರಿಯಾಗಿದ್ದಾರೆ.

ಐಮಂಗಲ ಪೊಲೀಸ್ ತರಬೇತಿ ಶಾಲೆ: ಸಂಗೀತಮಯ ಕವಾಯತು ಕಮಾಂಡ್

ಪರೇಡ್: ಕನ್ನಡ ರಾಗ, ಲಯ, ತಾಳ

• ಎಂ.ಎನ್.ಯೋಗೇಶ್

ಚಿತ್ರದುರ್ಗ: ಹಿರಿಯೂರು ತಾಲ್ಲೂಕು ಐಮಂಗಲ ಗ್ರಾಮದ ಪೊಲೀಸ್ ತರಬೇತಿ ಶಾಲೆಯಲ್ಲಿ ನಿತ್ಯ ನಡೆಯುವ ಪರೇಡ್‌ನಲ್ಲಿ ಶಿಸ್ತು, ಸಂಯಮ ಅಷ್ಟೇ ಇರುವುದಿಲ್ಲ. ಕನ್ನಡ ಕಮಾಂಡ್ ಜೊತೆಗೆ ಸ್ವರ, ರಾಗ, ಲಯ, ತಾಳಗಳೂ ಸಮ್ಮಿಳಿತವಾಗಿರುತ್ತವೆ.

ರಾಜ್ಯದ ವಿವಿಧೆಡೆಯಿಂದ ಬಂದಿರುವ 448 ಪ್ರಶಿಕ್ಷಣಾರ್ಥಿಗಳು ಇಲ್ಲಿ ಪೊಲೀಸ್ ತರಬೇತಿ ಪಡೆಯುತ್ತಿದ್ದಾರೆ. ಸಾಮಾನ್ಯವಾಗಿ ಪರೇಡ್‌ನಲ್ಲಿ ಸೂಚನೆಗಳು (ಕಮಾಂಡ್) ಹಿಂದಿ ಹಾಗೂ ಇಂಗ್ಲಿಷ್‌ನಲ್ಲಿರುತ್ತವೆ. ಆದರೆ ಇಲ್ಲಿ ಸಂಪೂರ್ಣವಾಗಿ ಕನ್ನಡಮಯವಾಗಿವೆ.

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಸಿಬ್ಬಂದಿ ಕನ್ನಡ ಭಾಷೆ, ಸಂಸ್ಕೃತಿ, ಇತಿಹಾಸ ಬಿಂಬಿಸುವ ಹಾಡುಗಳಿಗೆ ಪರೇಡ್ ಸಂಯೋಜನೆ ಮಾಡಿದ್ದಾರೆ. ದುರ್ಗದ ಇತಿಹಾಸ ಸಾರುವ 'ನಾಗರ ಹಾವು' ಚಿತ್ರದ 'ಕನ್ನಡ ನಾಡಿನ ವೀರರಮಣಿಯ' ಗೀತೆಗೆ ಪರೇಡ್ ಸಂಯೋಜಿಸಿದ್ದಾರೆ. ತಾಳ, ಲಯದೊಂದಿಗೆ ಸಂಯೋಜನೆಗೊಂಡಿ ರುವ ಹೆಜ್ಜೆಗಳು ಆನಂದ ಸೃಷ್ಟಿಸುತ್ತವೆ.

ಅಂಬರೀಷ್ ಅಭಿನಯದ 'ತಿರುಗು ಬಾಣ' ಚಿತ್ರದ 'ಇದೇ ನಾಡು ಇದೇ ಭಾಷೆ ಎಂದೆಂದೂ ನನ್ನದಾಗಿರಲಿ' ಗೀತೆಯನ್ನೂ ಪೊಲೀಸ್ ಕವಾಯತಿಗೆ ಅಳವಡಿಸಲಾಗಿದೆ. ಸಿಬ್ಬಂದಿಯ ವೇಗದ ಹೆಜ್ಜೆಯ ಲಯ, ಗತಿ ಗಮನ ಸೆಳೆಯುತ್ತದೆ.

'ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ' ಗೀತೆಗೂ ಪರೇಡ್ ಸಂಯೋಜಿಸಲಾಗಿದೆ. ಸಿಬ್ಬಂದಿಯ ನಿಧಾನಗತಿಯ ಹೆಜ್ಜೆಗಳು 'ನಿತ್ಯೋತ್ಸವ' ಗೀತೆಯ ಭಾವವನ್ನು ತೆರೆದಿಡುತ್ತವೆ. ತದೇಕಚಿತ್ತರಾಗಿ ಹೆಜ್ಜೆ ಹಾಕುವ ಸಿಬ್ಬಂದಿ, ಒಮ್ಮೆ ಸಿಪಾಯಿಗಳಂತೆ ಕಂಡರೆ ಮತ್ತೊಮ್ಮೆ ಕಲಾವಿದರಂತೆ ಭಾಸವಾಗುತ್ತಾರೆ.

ಸಿಬ್ಬಂದಿಯನ್ನು ವಿವಿಧ ತುಕಡಿಗಳಾಗಿ ವಿಂಗಡಿಸಲಾಗಿದ್ದು, ಎಲ್ಲರೂ ಕನ್ನಡ ಸೂಚನೆಗಳನ್ನು ಪಾಲಿಸುತ್ತಾರೆ. ಇಬ್ಬರಿಂದ ಮೂವರು ಸಿಬ್ಬಂದಿ ಹಾಡುತ್ತಾ ಹೆಜ್ಜೆ ಹಾಕುತ್ತಾರೆ. ಅದಕ್ಕನುಗುಣವಾಗಿ ಉಳಿದವರು ಮುನ್ನಡೆಯುತ್ತಾರೆ. ಮತ್ತಷ್ಟು ಗೀತೆಗಳ ಪರೇಡ್ ಸಂಯೋಜನೆ ಮುಂದುವರಿದಿದ್ದು, ವಿಷ್ಣುವರ್ಧನ್ ಅಭಿನಯದ 'ಮೋಜುಗಾರ ಸೊಗಸುಗಾರ' ಚಿತ್ರದ 'ಕನ್ನಡವೇ ನಮ್ಮಮ್ಮ ಅವಳಿಗೆ ಕೈಮುಗಿಯಮ್ಮ' ಗೀತೆಗೆ ಪರೇಡ್ ಸಿದ್ಧಗೊಳ್ಳುತ್ತಿದೆ.

'10 ತಿಂಗಳ ಪೊಲೀಸ್ ತರಬೇತಿ ಚಿರಕಾಲ ಉಳಿಯಬೇಕು, ಸ್ಮರಣೀಯವಾಗಿರಬೇಕು ಎಂಬುದು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರಾದ ಅಲೋಕ್ ಕುಮಾರ್ ಅವರ ಆಶಯ. ಈಚೆಗೆ ಚಿತ್ರದುರ್ಗದ ಕಲ್ಲಿನಕೋಟೆಗೆ ಭೇಟಿ ನೀಡಿದ್ದೆವು. ಆಗ ಮನಸ್ಸಿನೊಳಗೆ ಮೂಡಿದ ಚಿಂತನೆಗೆ ರೂಪ ಕೊಟ್ಟಾಗ ಸಂಗೀತಮಯ ಪರೇಡ್ ರೂಪುಗೊಂಡಿತು' ಎಂದು ತರಬೇತಿ ಶಾಲೆಯ ಪ್ರಾಂಶುಪಾಲ ಎನ್.ಶ್ರೀನಿವಾಸ್ 'ಪ್ರಜಾವಾಣಿ'ಗೆ ತಿಳಿಸಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ



ಕೋಟೆಯೊಳಗೆ ಅರಳಿದ ಶಾಲೆ

ಪೊಲೀಸ್ ತರಬೇತಿ ಶಾಲೆ ನಡೆಯುತ್ತಿರುವ ಜಾಗ ಚಿತ್ರದುರ್ಗದ ಅರಸರ ಕಾಲದಲ್ಲಿ ಧಾನ್ಯ ಸಂಗ್ರಹಿಸುವ ತಾಣವಾಗಿತ್ತು. ಸುತ್ತಲೂ ಇರುವ ಕೋಟೆ ಈಗಲೂ ಸುಸ್ಥಿತಿಯಲ್ಲಿದೆ. ಇಲ್ಲಿಯ 58 ಎಕರೆ ಜಾಗದಲ್ಲಿ ಪೊಲೀಸ್ ತರಬೇತಿ ಶಾಲೆ ಇರುವುದರಿಂದ ಸ್ಮಾರಕವೂ ಸಂರಕ್ಷಣೆಯಾಗಿದೆ.

ಅಲ್ಲಿ ವಿವಿಧ ಪ್ರಬೇಧದ 6,000ಕ್ಕೂ ಅಧಿಕ ಗಿಡ–ಮರಗಳಿದ್ದು, ಪ್ರಕೃತಿಯ ಮಡಿಲಲ್ಲಿ ಪೊಲೀಸ್ ತರಬೇತಿ ನಡೆಯುತ್ತದೆ. ಪೊಲೀಸ್ ಪರೇಡ್ ಸಂಗೀತಮಯ ಗೊಳ್ಳಲು ಇದೂ ಒಂದು ಕಾರಣ ಎಂದು ಪ್ರಶಿಕ್ಷಣಾರ್ಥಿಗಳು ಹೇಳುತ್ತಾರೆ.

ಸಂಚಾರ ನಿಯಮ ಉಲ್ಲಂಘನೆ ದಂಡದಲ್ಲಿ ಶೇ 50 ರಿಯಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಶೇ 50ರಷ್ಟು ರಿಯಾಯಿತಿ ಅಡಿ ದಂಡ ಪಾವತಿಸಲು ವಾಹನಗಳ ಮಾಲೀಕರಿಗೆ ರಾಜ್ಯ ಸರ್ಕಾರವು ಮತ್ತೊಮ್ಮೆ ಅವಕಾಶ ಕಲ್ಪಿಸಿದೆ.

ಪೊಲೀಸ್ ಇಲಾಖೆಯ ಸಂಚಾರ ಇ-ಚಲನ್‌ನಲ್ಲಿ ದಾಖಲಾದ ಪ್ರಕರಣಗಳಿಗೆ ಅನ್ವಯ ಆಗುವಂತೆ ರಿಯಾಯಿತಿ ಘೋಷಿಸಲಾಗಿದೆ. ಈ ರಿಯಾಯಿತಿಯು ಆಗಸ್ಟ್ 23ರಿಂದ ಸೆಪ್ಟೆಂಬರ್ 12ರವರೆಗೆ ಇತ್ಯರ್ಥಗೊಳ್ಳುವ ಪ್ರಕರಣಗಳಿಗೆ ಮಾತ್ರ ಅನ್ವಯ ಆಗಲಿದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಕಾನೂನು ಸೇವೆಗಳ ಪ್ರಾಧಿಕಾರ ಸಲ್ಲಿಸಿದ್ದ ಪ್ರಸ್ತಾವ ಒಪ್ಪಿದ್ದ ಸರ್ಕಾರವು, ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಕಳೆದ ಜುಲೈ 5ರಿಂದ 11ರವರೆಗೆ ಈ ಹಿಂದೆ ಅವಕಾಶ ಕಲ್ಪಿಸಿತ್ತು. ಅವಧಿ ಮುಕ್ತಾಯ ಆಗಿದ್ದರಿಂದ ಮತ್ತೊಮ್ಮೆ ಕಾಲಾವಕಾಶ ನೀಡಲಾಗಿದೆ. ಪೊಲೀಸ್ ಇಲಾಖೆಯ ಸಂಚಾರ ಇ–ಚಲನ್‌ನಲ್ಲಿ 2023ರ ಫೆಬ್ರುವರಿ 11ರವರೆಗೆ ದಾಖಲಾದ ಪ್ರಕರಣಗಳಿಗೆ ಮಾತ್ರ ದಂಡದ ಮೊತ್ತದಲ್ಲಿ ಶೇ 50ರಷ್ಟು ರಿಯಾಯಿತಿ ಕಲ್ಪಿಸಲಾಗಿದೆ.

ಸಾರಿಗೆ ಇಲಾಖೆಯಲ್ಲಿ 2018–19ಕ್ಕೂ ಪೂರ್ವದಲ್ಲಿ ದಾಖಲಾಗಿರುವ ಪ್ರಕರಣಗಳಿಗೂ ರಿಯಾಯಿತಿ ಕಲ್ಪಿಸುವಂತೆ ಕೋರಲಾಗಿತ್ತು. ಅದಕ್ಕೆ ಅನುಮತಿ ಸಿಕ್ಕಿಲ್ಲ ಎಂದು ಮೂಲಗಳು ತಿಳಿಸಿವೆ.

ಅಸ್ತ್ರಂ ಆ್ಯಪ್, ಕೆಎಸ್‌ಪಿಎಸ್ ಆ್ಯಪ್, ಕರ್ನಾಟಕ ಒನ್ ಕೇಂದ್ರಗಳೂ ಸೇರಿದಂತೆ ಸಂಬಂಧಪಟ್ಟ ವೇದಿಕೆಗಳಲ್ಲಿ ದಂಡವನ್ನು ಮಾಲೀಕರು ಪಾವತಿ ಮಾಡಬಹುದು ಎಂದು ಮೂಲಗಳು ತಿಳಿಸಿವೆ.

ಭ್ರಷ್ಟಾಚಾರ ಆರೋಪ: ತನಿಖೆಗೆ ಆಗ್ರಹ

ಬೆಂಗಳೂರು: ಅಟಲ್ ಭೂ– ಜಲ ಯೋಜನೆಯಲ್ಲಿ ಭ್ರಷ್ಟಾಚಾರ ನಡೆದಿದ್ದು, ತನಿಖೆ ನಡೆಸುವಂತೆ ಆಗ್ರಹಿಸಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ (ಪ್ರೊ.ನಂಜುಂಡಸ್ವಾಮಿ ಸ್ಥಾಪಿತ) ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕು ಘಟಕದ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು.

'ರಾಜ್ಯದ 14 ಜಿಲ್ಲೆಗಳ, 41 ತಾಲ್ಲೂಕಿನ 1,199 ಗ್ರಾಮಗಳಲ್ಲಿ ಈ ಯೋಜನೆ ಅನುಷ್ಠಾನಗೊಂಡಿದೆ. ಗ್ರಾಮಸಭೆಗಳನ್ನು ನಡೆಸದೆ ನಕಲಿ ದಾಖಲಾತಿಗಳನ್ನು ಸೃಷ್ಟಿಸಿ ಭ್ರಷ್ಟಾಚಾರ ನಡೆಸಲಾಗಿದೆ' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ವಿಶ್ವ ಬ್ಯಾಂಕ್ ಹಾಗೂ ಕೇಂದ್ರ ಸರ್ಕಾರದ ಅನುದಾನದೊಂದಿಗೆ ದೇಶದ ವಿವಿಧ ರಾಜ್ಯಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗಿತ್ತು. ರಾಜ್ಯದಲ್ಲೂ ಈ ಯೋಜನೆ ಜಾರಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ

ನಂ.16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560 052.

ಸಂ: ಕರಾಹಿಂವಆ/ಸಕೋ/ಸಿಆರ್–23/2025–26 ದಿನಾಂಕ: 19.08.2025

ಸರ್ಕಾರದ ಆದೇಶ ಸಂಖ್ಯೆ ಹಿಂವಕ 289 ಬಿಸಿಎ 2025 ದಿನಾಂಕ 13.08.2025 ರಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಕೈಗೊಳ್ಳಲು ಆದೇಶಿಸಲಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ಜಾತಿಗಳಿಗೆ (ಹಿಂದುಳಿದ ವರ್ಗಗಳು, ಇತರೆ ಜಾತಿಗಳು ಅನುಸೂಚಿತ ಜಾತಿ/ಪಂಗಡಗಳು ಸೇರಿದಂತೆ) ಎಲ್ಲಾ ಕುಟುಂಬಗಳ ಸಮಗ್ರ ಸಮೀಕ್ಷೆ ನಡೆಸಲು ಉದ್ದೇಶಿಸಲಾಗಿರುತ್ತದೆ. ಸಮೀಕ್ಷೆ ವೇಳೆಯಲ್ಲಿ ಕುಟುಂಬದ 6 ವರ್ಷಕ್ಕೆ ಮೇಲ್ಪಟ್ಟ ಎಲ್ಲಾ ಸದಸ್ಯರುಗಳ ಆಧಾರ್ ನಂಬರ್ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ಆದಕಾರಣ, ಆಧಾರ್ ನಂಬರ್ ಪಡೆಯದೆ ಇರುವವರು ಅರ್ಜಿ ಸಲ್ಲಿಸಿ, ಆಧಾರ್ ನೋಂದಣಿ ಸಂಖ್ಯೆಯನ್ನು (Aadhar Enrolment Number) ನೀಡಬೇಕಾಗುತ್ತದೆ.

ಕರ್ನಾಟಕದಲ್ಲಿರುವ ಈ ಕೆಳಕಂಡ ಜಾತಿ ಮತ್ತು ಉಪಜಾತಿಗಳನ್ನು (ಆಂಗ್ಲ ವರ್ಣಮಾಲೆ ಪ್ರಕಾರ) ಪಟ್ಟಿ ಮಾಡಲಾಗಿದ್ದು, ಸಾರ್ವಜನಿಕರ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ. (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹೊರತುಪಡಿಸಿ) ಪ್ರಕಟಿತ ಪಟ್ಟಿಯಲ್ಲಿ ಯಾವುದೇ ಜಾತಿಗಳು ಬಿಟ್ಟು ಹೋಗಿರುವುದು, ತಪ್ಪಾಗಿ ನಮೂದಾಗಿರುವುದು ಇತ್ಯಾದಿ ಅಂಶಗಳ ಬಗ್ಗೆ ಯಾವುದೇ ಸಲಹೆ, ಸೂಚನೆಗಳು ಇದ್ದಲ್ಲಿ ಸಾರ್ವಜನಿಕರು/ ಸಂಘಸಂಸ್ಥೆಗಳು ಈ ಪ್ರಕಟಣೆಯಾದ 07 ದಿನಗಳೊಳಗಾಗಿ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ, ನಂ.16, 2ನೇ ಮಹಡಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052 ಇಲ್ಲಿಗೆ ಪತ್ರ ಮುಖೇನ ಅಥವಾ kscbcb@gmail.com ಇಲ್ಲಿಗೆ ಇ–ಮೇಲ್ ಮುಖಾಂತರ ತಲುಪಿಸಲು ಕೋರಲಾಗಿದೆ.

ಈ ಜಾತಿ ಮತ್ತು ಉಪಜಾತಿಗಳನ್ನು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಉದ್ದೇಶಕ್ಕಾಗಿ ಮಾತ್ರ ಮಾರ್ಗಸೂಚಿಯಾಗಿ ಬಳಸಲಾಗುತ್ತದೆ.

Sl. No.	Name of the Caste	ಜಾತಿಯ ಹೆಸರು
1	ACHARI	ಆಚಾರಿ
2	ADAVI GOLLA	ಅಡವಿಗೊಲ್ಲ
3	ADI ANDHARA CHRISTIAN	ಆದಿ ಆಂಧ್ರ ಕ್ರಿಶ್ಚಿಯನ್
4	ADI BANAJIGA LINGAYATH	ಆದಿ ಬಣಜಿಗ ಲಿಂಗಾಯತ್
5	ADI DRAVIDA CHRISTIAN	ಆದಿ ದ್ರಾವಿಡ ಕ್ರಿಶ್ಚಿಯನ್
6	ADI KARNATAKA CHRISTIAN	ಆದಿ ಕರ್ನಾಟಕ ಕ್ರಿಶ್ಚಿಯನ್
7	ADI VEERASHAIVA LINGAYATH	ಆದಿ ವೀರಶೈವ ಲಿಂಗಾಯತ್
8	ADI BANAJIGA	ಆದಿ ಬಣಜಿಗ
9	AGAMUDI	ಅಗಮುಡಿ
10	AGASA	ಅಗಸ
11	AGASA LINGAYATH	ಅಗಸ ಲಿಂಗಾಯತ್
12	AGHORI	ಅಘೋರಿ
13	AGNANI	ಅಜ್ಞಾನಿ
14	AGNIKULA KSHATRIYA	ಅಗ್ನಿಕುಲ ಕ್ಷತ್ರಿಯ
15	AGNIVAMSHA KSHATRIYA	ಅಗ್ನಿವಂಶ ಕ್ಷತ್ರಿಯ
16	AGNIVANNI	ಅಗ್ನಿವನ್ನಿ
17	AKKASALE	ಅಕ್ಕಸಾಲಿ
18	AKKASALE LINGAYATH	ಅಕ್ಕಸಾಲಿ ಲಿಂಗಾಯತ್
19	AKKASALIGA CHRISTIAN	ಅಕ್ಕಸಾಲಿಗ ಕ್ರಿಶ್ಚಿಯನ್
20	AKSALI	ಅಕ್ಸಾಲಿ
21	ALEWEA	ಅಲೆವಿಯಾ
22	ALPE KUNCHITIGA	ಅಲ್ಪೆ ಕುಂಚಿಟಿಗ
23	AMBALAKARAN	ಅಂಬಲಕಾರನ್
24	AMBALAKARMA	ಅಂಬಲಕರ್ಮ
25	AMBALAVASI	ಅಂಬಲವಾಸಿ
26	AMBATTAN	ಅಂಬಟ್ಟನ್
27	AMBI	ಅಂಬಿ
28	AMBIGA / AMBIG	ಅಂಬಿಗ / ಅಂಬಿಗ್
29	AMBIGA LINGAYATH	ಅಂಬಿಗ ಲಿಂಗಾಯತ್
30	AMMA KODAVA	ಅಮ್ಮ ಕೊಡವ
31	ANAPPAN	ಅನಪ್ಪನ್
32	ANDHRAS / TELUGUS	ಆಂಧ್ರಾರು / ತೆಲುಗರು
33	ANDI	ಆಂಡಿ
34	ANDIPANDARAM	ಆಂಡಿ ಪಂಡಾರಂ
35	ANDURAN	ಅಂಡೂರನ್
36	ANGLO-INDIAN	ಆಂಗ್ಲೋ ಇಂಡಿಯನ್
37	ANSARI	ಅನ್ಸಾರಿ
38	ANUBARU	ಅನುಬರು
39	ARADHYA	ಆರಾಧ್ಯ
40	ARADHYA LINGAYATH	ಆರಾಧ್ಯ ಲಿಂಗಾಯತ್
41	ARAMANEPALERA	ಅರಮನೆ ಪಾಳೇರ
42	ARASU / ARAS	ಅರಸು / ಅರಸ
43	ARASU KUNCHITIGA	ಅರಸು ಕುಂಚಿಟಿಗ
44	ARASU VANNIYAR	ಅರಸು ವಣ್ಣಿಯಾರ್
45	ARAY	ಅರೇಯ್
46	ARE – KASAI	ಅರೆ ಕಸಾಯ್
47	ARE KSHATRI	ಅರೆ ಕ್ಷತ್ರಿ
48	ARE MARATHA	ಅರೆ ಮರಾಠ
49	ARERA	ಆರೇರ
50	ARI KATIKELU	ಅರಿ ಕಾಟಿಕೇಲು
51	ARIKAR VOKKALIGA	ಅರಿಕಾರ್ ಒಕ್ಕಲಿಗ
52	ARJUN /ARJUNA	ಅರ್ಜುನ್/ಅರ್ಜುನಾ
53	ARUVELLU BRAHAMAN	ಅರುವೆಲ್ಲು ಬ್ರಾಹ್ಮಣ
54	ARYA	ಆರ್ಯ
55	ARYA MARATHA	ಆರ್ಯ ಮರಾಠ
SC Works Indent No's:	18038, 16402, 17848, 13168, 13584, 16857, 16853, 17139, 16409, 16396, 17484, 16412, 15813, 17735,
ST Works Indent No's:	16389, 17660,
Category 1 Works Indent No's:	17850, 17843,
Category 2A Works Indent No's:	16153, 14887, 17142, 17658,

RDPR/2024-25/IND8882, 2nd Call	RDPR/2024-25/IND5281, 9th Call	RDPR/2024-25/IND5282, 10th Call
RDPR/2024-25/IND9755, 3rd Call	RDPR/2024-25/IND4896, 10th Call	RDPR/2024-25/IND4899, 11th Call

ಕಾಮಗಾರಿಗಳ ವಿವರ, ಷರತ್ತು ನಿಬಂಧನೆಗಳಿಗಾಗಿ ಈ ಕಚೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ್ https://kppp.karnataka.gov.in/ ಸಂಪರ್ಕಿಸಬಹುದಾಗಿದೆ:

ಸಹಿ/– ಕಾರ್ಯನಿರ್ವಾಹಕ ಅಭಿಯಂತರು
ಪಂ.ರಾಜ್.ಇಂ.ವಿಭಾಗ ಚಿಕ್ಕೋಡಿ.

DIPR/GBM/RO NO. 860/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಓದು ದೊಡ್ಡದು ಸರಿ. ಆದರೆ, ಮನುಷ್ಯ ಓದಿ ಕಲಿಯುವುದಕ್ಕಿಂತ ಹೆಚ್ಚು ಸಂಗತಿಗಳನ್ನು ತಾನೇ ಬದುಕಿ ಕಲಿಯುತ್ತಾನೆ.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

ಸಂಪಾದಕೀಯ

ಸಂವಿಧಾನ ತಿದ್ದುಪಡಿ ಮಸೂದೆ ಒಕ್ಕೂಟ ವ್ಯವಸ್ಥೆಗೆ ಒಳಪೆಟ್ಟು

ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಬುಧವಾರ ಮಂಡಿಸಿರುವ ಸಂವಿಧಾನದ 130ನೇ ತಿದ್ದುಪಡಿ ಮಸೂದೆ ಹಾಗೂ ಅದಕ್ಕೆ ಸಂಬಂಧಿಸಿದ ಇತರ ಮಸೂದೆಗಳು ಸಂವಿಧಾನದ ಮೂಲ ಸ್ವರೂಪವನ್ನು ಉಲ್ಲಂಘಿಸುತ್ತವೆ. ಅಲ್ಲದೆ, ಪ್ರಜಾತಾಂತ್ರಿಕ ರಾಜಕೀಯ ವ್ಯವಸ್ಥೆಯನ್ನು ರೂಪಿಸಿರುವ ಮೂಲ ಪರಿಕಲ್ಪನೆಗಳಿಗೆ ಕೂಡ ಇವು ವಿರುದ್ಧವಾಗಿವೆ. ಈ ಮಸೂದೆಗಳನ್ನು ಬಹಳ ತಪ್ಪು ಗ್ರಹಿಕೆಯಿಂದ ರೂಪಿಸಲಾಗಿದೆ, ಮಸೂದೆಗಳ ಹಿಂದಿನ ಆಶಯವು ತಪ್ಪಾಗಿದೆ ಹಾಗೂ ಇವು ಕಾನೂನಿನ ರೂಪ ಪಡೆದು ಜಾರಿಗೆ ಬಂದಲ್ಲಿ ಅನುಷ್ಠಾನದಲ್ಲಿ ಅನ್ಯಾಯ ಆಗುವ ಸಾಧ್ಯತೆ ಇದೆ. ಪ್ರಧಾನಿ, ಮುಖ್ಯಮಂತ್ರಿ ಹಾಗೂ ಸಚಿವರು ಕನಿಷ್ಠ ಐದು ವರ್ಷಗಳ ಜೈಲುಶಿಕ್ಷೆಗೆ ಗುರಿಯಾಗುವ ಅಪರಾಧ ಎಸಗಿದ ಆರೋಪದ ಅಡಿಯಲ್ಲಿ ಬಂಧಿತರಾಗಿ, ಸತತ 30 ದಿನಗಳವರೆಗೆ ಜೈಲಿನಲ್ಲಿ ಇದ್ದರೆ ಅವರು ತಮ್ಮ ಹುದ್ದೆಯನ್ನು ಕಳೆದುಕೊಳ್ಳುತ್ತಾರೆ ಎಂದು ಹೇಳುವ ಈ ಮಸೂದೆಗಳು, ಅವರ ವಿರುದ್ಧದ ಆರೋಪಗಳು ಸಾಬೀತಾಗುವ ಮುನ್ನವೇ ಅವರನ್ನು ಶಿಕ್ಷೆಗೆ ಗುರಿಪಡಿಸಲು ಅವಕಾಶ ಮಾಡಿಕೊಡುತ್ತವೆ. ಮಸೂದೆಗಳನ್ನು ಈಗ ಸಂಸತ್ತಿನ ಜಂಟಿ ಸಮಿತಿಯ ಪರಾಮರ್ಶೆಗೆ ರವಾನಿಸಲಾಗಿದೆ. ಮಸೂದೆಗಳನ್ನು ಆದಷ್ಟು ಬೇಗ ಕಾನೂನಿನ ರೂಪದಲ್ಲಿ ಜಾರಿಗೆ ತರುವ ಉದ್ದೇಶದಿಂದ, ಸಂಸತ್ತಿನ ಮುಂದಿನ ಅಧಿವೇಶನಕ್ಕೆ ಮೊದಲು ಮಸೂದೆಯ ಬಗ್ಗೆ ಅಭಿಪ್ರಾಯ ನೀಡಬೇಕು ಎಂದು ಸಮಿತಿಗೆ ತಿಳಿಸಲಾಗಿದೆ.

ಭ್ರಷ್ಟ ರಾಜಕಾರಣಿಗಳು ಅಧಿಕಾರದಲ್ಲಿ ಮುಂದುವರಿಯುವುದನ್ನು ಯಾರೂ ಬಯಸುವುದಿಲ್ಲ. ಆದರೆ, ಕಾನೂನಿನ ಪ್ರಕ್ರಿಯೆಗಳನ್ನು ಸರಿಯಾಗಿ ಪಾಲಿಸದೆ ಯಾವುದೇ ವ್ಯಕ್ತಿಯ ವಿರುದ್ಧ ಕ್ರಮ ಜರುಗಿಸುವುದನ್ನು ಯಾರೂ ಬೆಂಬಲಿಸಬಾರದು. ಈ ಮಸೂದೆಗಳು ಕಾನೂನಿನ ರೂಪದಲ್ಲಿ ಜಾರಿಗೆ ಬಂದಲ್ಲಿ, ರಾಜಕೀಯವಾಗಿ ವಿರೋಧಿಸುವ ಪಕ್ಷಗಳನ್ನು ಹಾಗೂ ಆ ಪಕ್ಷಗಳ ಸಚಿವರನ್ನು ಕಿರುಕುಳಕ್ಕೆ ಗುರಿಪಡಿಸಲು ಕೇಂದ್ರ ಸರ್ಕಾರಕ್ಕೆ ಒಂದು ಅಸ್ತ್ರವಾಗಿ ಒದಗಿಬರಲಿವೆ. ಸಿಬಿಐ ಹಾಗೂ ಜಾರಿ ನಿರ್ದೇಶನಾಲಯ (ಇ.ಡಿ) ಸೇರಿದಂತೆ ಕೇಂದ್ರದ ವಿವಿಧ ತನಿಖಾ ಸಂಸ್ಥೆಗಳನ್ನು, ಬಿಜೆಪಿಯನ್ನು ರಾಜಕೀಯವಾಗಿ ವಿರೋಧಿಸುವ ಪಕ್ಷಗಳ ನಾಯಕರಿಗೆ ಕಿರುಕುಳ ನೀಡಲು ಈಗ ಬಳಕೆ ಮಾಡಲಾಗುತ್ತಿದೆ. ಈಗಿರುವ ಕಾನೂನುಗಳು ಹಾಗೂ ಅವುಗಳ ಅಡಿಯಲ್ಲಿ ವಿವರಿಸಿರುವ ಪ್ರಕ್ರಿಯೆಗಳು ಈ ರಾಜಕೀಯ ನಾಯಕರಿಗೆ ಒಂದಿಷ್ಟು ರಕ್ಷಣೆಗಳನ್ನು ಒದಗಿಸಿವೆ. ಆದರೆ, ಪ್ರಸ್ತಾವಿತ ಕಾನೂನುಗಳು ಎಲ್ಲ ಬಗೆಯ ರಕ್ಷಣೆಗಳನ್ನು ಇಲ್ಲವಾಗಿಸುತ್ತವೆ. ಕೇಂದ್ರ ಸರ್ಕಾರದ ಮನಸ್ಥಿತಿಯ ನಡೆಗಳು ಹಾಗೂ ದ್ವೇಷದ ಕ್ರಮಗಳಿಂದ ರಕ್ಷಣೆ ಇಲ್ಲದಂತಾಗುತ್ತದೆ. ಈ ಕಾನೂನುಗಳು, ಸಂವಿಧಾನದ 356ನೇ ವಿಧಿಯ ಹೊಸ ರೂಪದಂತೆ ಆಗಲಿವೆ: ಈ ಕಾನೂನುಗಳನ್ನು ಬಳಸಿಕೊಂಡು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳನ್ನು ಅಸ್ಥಿರಗೊಳಿಸಲು ಸಾಧ್ಯವಾಗುತ್ತದೆ. ಈ ಕಾನೂನುಗಳು ಸಂಸದೀಯ ಪ್ರಜಾತಂತ್ರದ ಆಶಯ ನಿಯಮಗಳಿಗೆ ಅನುಗುಣವಾಗಿ ಇಲ್ಲ. ಅಲ್ಲದೆ, ಇವು ಸಾಂವಿಧಾನಿಕ ಒಕ್ಕೂಟ ವ್ಯವಸ್ಥೆಗೆ ಪೆಟ್ಟುಕೊಡುವಂತೆ ಇವೆ. ಸಂವಿಧಾನದ ವಿವಿಧ ಅಂಗಗಳ ಅಧಿಕಾರ ವ್ಯಾಪ್ತಿಗೆ ಈ ಕಾನೂನುಗಳು ಸವಾಲೊಡ್ಡುವಂತೆ ಇವೆ, ಚುನಾಯಿತ ಸರ್ಕಾರಗಳನ್ನು ವಜಾಗೊಳಿಸಲು ಕಾರ್ಯಾಂಗದ ಸಂಸ್ಥೆಗಳಿಗೆ ಅವಕಾಶ ಮಾಡಿಕೊಡುತ್ತವೆ.

ಸಂಸತ್ತಿನ ಮುಂದೆ ಮಂಡನೆಗೊಂಡಿರುವ ಹೊಸ ಮಸೂದೆಗಳು ಪ್ರಜಾಪ್ರಭುತ್ವದ ಮೂಲ ಆಶಯಗಳು ಹಾಗೂ ಸಾಂವಿಧಾನಿಕ ತತ್ವಗಳಿಗೆ ವಿರುದ್ಧವಾಗಿವೆ.

ಹೊಸ ಮಸೂದೆಗಳನ್ನು ಕೇಂದ್ರ ಸರ್ಕಾರವು ಸಮರ್ಥಿಸಿಕೊಂಡಿದೆ. ಈ ಮಸೂದೆಗಳಲ್ಲಿ ಸಾರ್ವಜನಿಕ ಹಿತ ಅಡಗಿದೆ; ಚುನಾಯಿತ ಪ್ರತಿನಿಧಿಗಳು ಪ್ರಾಮಾಣಿಕರಾಗಿ ಹಾಗೂ ಅನುಮಾನಗಳಿಗೆ ಅತೀತರಾಗಿ ಇರಬೇಕಾಗುವುದರ ಅಗತ್ಯ ಇದೆ ಎಂದು ಹೇಳಿದೆ. ಆದರೆ, ನರೇಂದ್ರ ಮೋದಿ ನೇತೃತ್ವದ ಸರ್ಕಾರದ ನಡೆಗಳನ್ನು ಗಮನಿಸಿ ಹೇಳುವುದಾದರೆ, ನೈತಿಕ ನೆಲೆಗಟ್ಟಿನ ಈ ವಾದಗಳು ರಾಜಕೀಯ ವಿರೋಧಿಗಳ ವಿರುದ್ಧ ಕ್ರಮ ಜರುಗಿಸುವುದಕ್ಕೆ ಒಂದು ನೆಪವಾಗಿ ಬರುತ್ತವೆ, ಅಷ್ಟೇ. ಕಾನೂನು ಪ್ರಕ್ರಿಯೆಗಳ ನಿಧಾನಗತಿ ಹಾಗೂ ಶಿಕ್ಷೆಯ ಪ್ರಮಾಣ ಕಡಿಮೆ ಇರುವುದನ್ನು ಗಮನಿಸಿ ಕೇಂದ್ರ ಸರ್ಕಾರವು ತನ್ನ ವಿರೋಧಿಗಳ ವಿರುದ್ಧ ತ್ವರಿತವಾಗಿ ಕ್ರಮ ಜರುಗಿಸುವುದಕ್ಕೆ ಈ ಹೆಜ್ಜೆ ಇರಿಸಿರಬಹುದು. ಈ ಮಸೂದೆಗಳು ಭ್ರಷ್ಟಾಚಾರವನ್ನು ಕೊನೆಗೊಳಿಸುವುದಿಲ್ಲ. ಇವು ವಿರೋಧ ಪಕ್ಷಗಳನ್ನು ದುರ್ಬಲಗೊಳಿಸುತ್ತವೆ. ಮಸೂದೆಗಳಿಗೆ ಸಂಸತ್ತಿನ ಅಂಗೀಕಾರ ದೊರೆತರೂ ನ್ಯಾಯಾಂಗದ ಪರಿಶೀಲನೆಯ ಸಂದರ್ಭದಲ್ಲಿ ಅವು ಬಿದ್ದುಹೋಗುವ ಸಾಧ್ಯತೆ ಹೆಚ್ಚಿದೆ. ಏಕೆಂದರೆ, 'ತಪ್ಪಿತಸ್ಥ ಎಂದು ಸಾಬೀತಾಗುವವರೆಗೆ ಯಾರೂ ದೋಷಿ ಅಲ್ಲ' ಎಂಬ ಮೂಲ ತತ್ವಕ್ಕೆ ಮಸೂದೆಗಳು ವಿರುದ್ಧವಾಗಿವೆ. ಆರೋಪಗಳನ್ನು ಎದುರಿಸುತ್ತಿರುವ ವ್ಯಕ್ತಿಯು ತನ್ನ ಹುದ್ದೆಗೆ ರಾಜೀನಾಮೆ ಸಲ್ಲಿಸಬೇಕು ಎಂಬುದು ಆತ, ಆತನ ಪಕ್ಷ ಹಾಗೂ ಜನರಿಗೆ ಸಂಬಂಧಿಸಿದ ವಿಚಾರ. ಆರೋಪಿಯು ತಪ್ಪಿತಸ್ಥ ಎಂಬುದು ಸಾಬೀತಾಗುವವರೆಗೂ ಅಲ್ಲಿ ಕಾನೂನಿಗೆ ಯಾವುದೇ ಪಾತ್ರ ಇರಬಾರದು.

ಜಾಲತಾಣ

ಗೆಲುವಿಗೂ ತೆರ!

'ಸತ್ತರೆ ಸ್ವರ್ಗ, ಗೆದ್ದರೆ ರಾಜ್ಯ ಪದವಿ; ಜಯಾಪಜಯಗಳನ್ನು ಸಮನಾಗಿ ಸ್ವೀಕರಿಸು' ಎಂದು ಉಪದೇಶ ಮಾಡಿದ ಕೃಷ್ಣನೂ ಪಾಂಡವರನ್ನು (ತಥಾಕಥಿತ ಧರ್ಮವನ್ನು) ಗೆಲ್ಲಿಸಲು ಏನೇನು ಸರ್ಕಸ್ ಮಾಡಬೇಕಾಯಿತು ಎನ್ನುವುದನ್ನು ಓದುವಾಗ, ಗೆಲುವಿಗೆ ತೆರಬೇಕಾದ ತೆರದ ಸ್ವರೂಪ ಸ್ವಲ್ಪಮಟ್ಟಿಗಾದರೂ ಅರ್ಥ ಆಗುತ್ತದೆ.

ಪ್ರಕಾಶ್ ನಾಯಕ್, ಕಥೆಗಾರ, ಫೇಸ್‌ಬುಕ್‌ನಿಂದ

ಕಿಡಿನುಡಿ

ಉಪರಾಷ್ಟ್ರಪತಿ ಸ್ಥಾನಕ್ಕೆ 'ಇಂಡಿಯಾ' ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ನ್ಯಾಯಮೂರ್ತಿ ಸುದರ್ಶನ್ ರೆಡ್ಡಿ ಅವರನ್ನು, ಮನೋಹರ್ ಪರಿಕ್ಕರ್ ಅವರ 'ಜೀ ಹುಜೂರ್ ಮನುಷ್ಯ' ಎಂದು ಈ ಹಿಂದೆ ಟೀಕಿಸಿದ್ದ ಕಾಂಗ್ರೆಸ್ ಪಕ್ಷಕ್ಕೆ ಈಗ ಅವರೇ ಸೈದ್ಧಾಂತಿಕ ಯೋಧರಾಗಿ ಬದಲಾದದ್ದು ಹೇಗೆ?

ಲಹರ್ ಸಿಂಗ್ ಸಿರೋಯಾ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಮಂಗಳವಾರ, 22-8-2000

● **ಜಪಾನ್ ಪ್ರಧಾನಿಗೆ 'ಸಿಲಿಕಾನ್ ಸಿಟಿ' ಸ್ವಾಗತ**

ಬೆಂಗಳೂರು, ಆಗಸ್ಟ್ 21– ಎರಡು ದಿನಗಳ ಅಧಿಕೃತ ಭೇಟಿಗಾಗಿ ಇಂದು ರಾತ್ರಿ ನಗರಕ್ಕೆ ಆಗಮಿಸಿದ ಜಪಾನ್ ಪ್ರಧಾನಿ ಯೊಶಿರೊ ಮೋರಿ ಅವರಿಗೆ ಭವ್ಯ ಸ್ವಾಗತ ನೀಡಲಾಯಿತು.

ಪಾಕಿಸ್ತಾನದಿಂದ ನೇರವಾಗಿ ನಗರದ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಯೊಶಿರೊ ಅವರನ್ನು, ರಾಜ್ಯಪಾಲರಾದ ವಿ.ಎಸ್. ರಮಾದೇವಿ ಹಾಗೂ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು, ಕೆಂಪುಹಾಸಿನ ಹಾರ್ದಿಕ ಸ್ವಾಗತ ನೀಡಿದರು.

● **ಎಕ್ಸ್‌ಪ್ರೆಸ್ ಹೆದ್ದಾರಿ: ಇನ್ನು ಸಾರ್ವಜನಿಕ ಅಹವಾಲು ಇಲ್ಲ**

ಬೆಂಗಳೂರು, ಆಗಸ್ಟ್ 21– 'ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಕಾರಿಡಾರ್ ಯೋಜನೆಗೆ ಸಂಬಂಧಿಸಿ ಸಾರ್ವಜನಿಕ ಅಹವಾಲು ಈಗಾಗಲೇ ಮುಗಿದಿದೆ. ಇನ್ನೇನಿದ್ದರೂ ಯೋಜನೆಯನ್ನು ಶೀಘ್ರವಾಗಿ ಜಾರಿಗೊಳಿಸುವುದಕ್ಕೆ ಆದ್ಯತೆ' ಎಂದು ಕೈಗಾರಿಕಾ ಸಚಿವ ಆರ್.ವಿ. ದೇಶಪಾಂಡೆ ಹೇಳಿದರು.

75 ವರ್ಷಗಳ ಹಿಂದೆ

ಮಂಗಳವಾರ, 22-8-1950

● **ಗೋದಾವರಿ ಜಿಲ್ಲೆಯಲ್ಲಿ ಹಸಿವಿನ ಹಾವಳಿ**

ಕಾಕಿನಾಡ, ಆಗಸ್ಟ್ 21– ಗೋದಾವರಿ ಜಿಲ್ಲೆಯ ಪೀಠಾಪುರಂ ತಾಲ್ಲೂಕಿನ ತೀರ ಪ್ರದೇಶದ ಅನೇಕ ಗ್ರಾಮಗಳಲ್ಲಿ ಜನ ಹೊಟ್ಟೆಗಿಲ್ಲದೆ ನರಳುತ್ತಿದ್ದಾರೆ ಎಂಬುದಾಗಿ ಮದರಾಸ್ ಶಾಸನಸಭೆಯ ಕಾಂಗ್ರೆಸ್ ಸದಸ್ಯ ಮೂರ್ತಿ ಅವರು ತಿಳಿಸಿದರು.

'ಹೊಟ್ಟೆಗಿಲ್ಲದೆ ಬಳಲಿ ಬೆಂಡಾಗಿ ತುತ್ತು ಅನ್ನಕ್ಕಾಗಿ ಹೆಂಗಸರು, ಮಕ್ಕಳು, ಗಂಡಸರು ಕೈಯೆತ್ತಿ ಬೇಡುವ ಹಾಗೂ ಅಧಿಕಾರಿ ವರ್ಗದವರು ಹಸಿದವರಿಗೆ ಆಹಾರ ಒದಗಿಸಬೇಕಾದ್ದು ತಮ್ಮ ಕರ್ತವ್ಯವೆಂದು ತಿಳಿಯದೆ ನಿರ್ಲಕ್ಷ್ಯ ತೋರಿಸುವ ದೃಶ್ಯ ಕಂಡು ಸಿಡಿಲು ಬಡಿದಂತಾಯಿತು' ಎಂದು ತಮ್ಮ ಅನುಭವವನ್ನು ವಿವರಿಸಿದರು.

ಕಾಣೆಯಾದವರ ಹುಡುಕುತ್ತ...

ವಿಶ್ಲೇಷಣೆ

ಕವಿತ ಬಿ.ಟಿ.

> ಪ್ರತಿ ವ್ಯಕ್ತಿಯ ಕಣ್ಮರೆಯ ಹಿಂದೆಯೂ ಒಂದು ಕಥೆ ಹಾಗೂ ಕುಟುಂಬದ ದುಗುಡ ಇರುತ್ತದೆ. ಕಾಣೆ ಆದವರನ್ನು ಪತ್ತೆ ಮಾಡುವ ವಿಧಾನವೂ ಭಿನ್ನವಾಗಿರುತ್ತದೆ. ಕಣ್ಮರೆ ಪ್ರಸಂಗಗಳು, ಸಮಾಜದ ಚಲನೆ ಯಾವ ದಿಕ್ಕಿನಲ್ಲಿದೆ ಎನ್ನುವುದರ ಸಂಕೇತ ಆಗಿರುವಂತೆಯೇ, ಜನಸಾಮಾನ್ಯರ ಬದುಕಿನ ತವಕ ತಲ್ಲಣಗಳನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಒಳ್ಳೆಯ ಆಕರಗಳೂ ಹೌದು.

ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟ ಪ್ರಸಿದ್ಧ ಧಾರ್ಮಿಕ ಕ್ಷೇತ್ರ. ರಾಮನಗರ ಜಿಲ್ಲೆಯ ಹಳ್ಳಿಯೊಂದರ ಮಹಿಳೆಯೊಬ್ಬರು ತಾಯಿಯೊಂದಿಗೆ ಜಗಳವಾಡಿಕೊಂಡು, ತನ್ನ ಎರಡು ವರ್ಷ ಆರು ತಿಂಗಳ ಹೆಣ್ಣು ಮಗುವಿನೊಂದಿಗೆ ಬೆಟ್ಟಕ್ಕೆ ಬಂದರು. ಹೆಚ್ಚು ಬುದ್ಧಿವಂತಳಲ್ಲದ ಆಕೆಯಿಂದ ಮಗುವನ್ನು ಪಡೆದು ಭಿಕ್ಷೆ ಬೇಡಲು ಮತ್ತೊಬ್ಬ ಮಹಿಳೆ ಪ್ರಯತ್ನಿಸಿದ್ದಳು. ಅದಕ್ಕೆ ಮಗುವಿನ ತಾಯಿ ಒಪ್ಪಲಿಲ್ಲ. ಒಂದೆರಡು ದಿನ ತಾಯಿ–ಮಗುವಿನೊಂದಿಗೆ ಕಳೆದ ಆ ಚಾಲಾಕಿ ಮಹಿಳೆ, ಅವರನ್ನು ಮನವೊಲಿಸಿ ಚಾಮರಾಜನಗರಕ್ಕೆ ಕರೆತಂದಳು. ತಾಯಿಯನ್ನು ಬಸ್ ನಿಲ್ದಾಣದಲ್ಲಿ ಕೂರಿಸಿ, ಮಗುವಿನೊಂದಿಗೆ ಪರಾರಿಯಾದಳು. ಎಷ್ಟು ಹೊತ್ತಾದರೂ ಆಕೆ ಬಾರದ ಕಾರಣ, ಮಗುವನ್ನು ಕಳೆದುಕೊಂಡ ತಾಯಿಯು ಪೊಲೀಸ್ ಠಾಣೆಗೆ ಬಂದು ದೂರು ನೀಡಿದರು.

ಪೊಲೀಸರು ತನಿಖೆ ಪ್ರಾರಂಭಿಸಿದಾಗ, ಬಸ್ ನಿಲ್ದಾಣದಲ್ಲಿನ ಅಂಗಡಿಯೊಂದರಲ್ಲಿ ಮಗುವನ್ನು ಎತ್ತಿಕೊಂಡು ಭಿಕ್ಷೆ ಬೇಡುತ್ತಿದ್ದ ಮಹಿಳೆ ಸಿ.ಸಿ ಕ್ಯಾಮೆರಾವೊಂದರಲ್ಲಿ ಸೆರೆಯಾಗಿದ್ದಳು. ನಂತರದ ಪರಿಶೀಲನೆಯಲ್ಲಿ, ಆಕೆಯನ್ನು ರೈಲ್ವೆ ನಿಲ್ದಾಣದ ಬಳಿಗೆ ಬಿಟ್ಟಿರುವುದಾಗಿ ಹಾಗೂ ಆಕೆ ವಿಪರೀತ ಮದ್ಯಪಾನ ಮಾಡಿದ್ದುದಾಗಿ ಆಟೊ ಡ್ರೈವರ್‌ವೊಬ್ಬರು ತಿಳಿಸಿದರು. ಇಷ್ಟು ಹೊರತುಪಡಿಸಿದರೆ ಬೇರಾವುದೇ ಮಾಹಿತಿ ಇರಲಿಲ್ಲ. ಮಗುವನ್ನು ಕರೆದೊಯ್ದ ಮಹಿಳೆಯ ಹೆಸರು, ವಿಳಾಸ ಯಾವುದೂ ಇರಲಿಲ್ಲ. ಆಕೆ ಮೊಬೈಲ್ ಕೂಡ ಬಳಸುತ್ತಿರಲಿಲ್ಲ. ಕುಡಿತದ ಅಭ್ಯಾಸವಿರುವ ಆಕೆ, ಕುಡಿದ ಮತ್ತಿನಲ್ಲಿ ಮಗುವನ್ನು ಎಲ್ಲಾದರೂ ಬಿಟ್ಟು ಅದರ ಜೀವಕ್ಕೆ ತೊಂದರೆ ಆಗಬಹುದೆನ್ನುವ ಆತಂಕ ನಮ್ಮನ್ನು ಕಾಡುತ್ತಿತ್ತು.

ಮಗುವಿನ ಪತ್ತೆಗಾಗಿ ಮೂರು ತಂಡಗಳನ್ನು ರಚಿಸಲಾಯಿತು. ಆಕೆ ರೈಲ್ವೆ ನಿಲ್ದಾಣಕ್ಕೆ ಹೋದಾಗಿನಿಂದ ಹೊರಟ ರೈಲುಗಳ ಮಾಹಿತಿ ಪಡೆದು ಎಲ್ಲಾ ಕಡೆಯೂ ತಂಡ ತೆರಳಿ, ಸಿ.ಸಿ ಕ್ಯಾಮೆರಾದಿಂದ ಸಿಕ್ಕ ಫೋಟೊವನ್ನು ತೋರಿಸಿ ಪತ್ತೆಹಚ್ಚಲು ಪ್ರಯತ್ನಿಸಲಾಯಿತು. ಈ ವಿಚಾರಣೆಯಲ್ಲಿ ಆಕೆ ಮಂಡ್ಯ ನಗರದವಳು ಎಂಬ ಮಾಹಿತಿ ಗೊತ್ತಾಯಿತು. ಆದರೆ, ಅಲೆಮಾರಿಯಾದ ಆಕೆ ಎಲ್ಲಿರುತ್ತಾಳೆ, ಯಾವಾಗ ಬರುತ್ತಾಳೆಂಬ ಮಾಹಿತಿ ಯಾರಿಗೂ ಇರಲಿಲ್ಲ. ಸತತ ಪ್ರಯತ್ನದ ನಂತರ ನಾಲ್ಕನೇ ದಿನ ಮಗು ಹಾಗೂ ಆರೋಪಿಯನ್ನು ಪತ್ತೆ ಹಚ್ಚಿ, ಮಗುವನ್ನು ತಾಯಿ ಮಡಿಲಿಗೆ ಸೇರಿಸಲಾಯಿತು.

ಪ್ರೀತಿ, ಪ್ರೇಮ, ಸಂತೋಷ, ಸಹಬಾಳ್ವೆ, ಹೊಂದಾಣಿಕೆ ತುಂಬಿದ ಮನೆಯಲ್ಲಿ ಕುಟುಂಬದ ಸದಸ್ಯರೊಬ್ಬರು ನಾಪತ್ತೆಯಾಗುವುದು ಆಘಾತಕಾರಿ ಸಂಗತಿ. ಕಾಣೆಯಾದವರ ಪತ್ತೆ ಮಾಡಿ ಕೊಡಿ ಎಂದು ಕೋರಿ ಪೊಲೀಸ್ ಠಾಣೆಗೆ ಸಲ್ಲಿಸುವ ದೂರುಗಳು ತೀರಾ ಸಾಮಾನ್ಯ. ಸ್ವಇಚ್ಛೆಯಿಂದ ಮನೆಯಿಂದ ತೆರಳುವ ಪ್ರಕರಣಗಳೇ ಹೆಚ್ಚಾಗಿದ್ದರೂ, ಕೆಲವೊಮ್ಮೆ ವ್ಯಕ್ತಿಯ ಇಚ್ಛೆಗೆ ವಿರುದ್ಧವಾಗಿ ಅಪಹರಣ ಮಾಡುವ ಪ್ರಕರಣಗಳು ದಾಖಲಾಗುತ್ತವೆ.

ಯಾವುದೇ ವ್ಯಕ್ತಿ ಕಾಣೆಯಾದ ಬಗ್ಗೆ ವರದಿಯನ್ನು ಪೊಲೀಸ್ ಠಾಣೆಗಳಲ್ಲಿ ಸ್ವೀಕರಿಸಿದಾಗ ಪೊಲೀಸರು, 'ಮನುಷ್ಯ ಕಾಣೆ' (ಮಿಸ್ಸಿಂಗ್) ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳುತ್ತಾರೆ. ಕಾಣೆಯಾಗಿರುವುದು 18 ವರ್ಷ ಒಳಗಿನವರಾಗಿದ್ದರೆ, ಹೆಣ್ಣಾಗಲೀ ಗಂಡಾಗಲೀ, ಆ ಪ್ರಕರಣ ಕಡ್ಡಾಯವಾಗಿ 'ಅಪಹರಣ' ಕಲಂ ಅಡಿಯಲ್ಲಿ ದಾಖಲಾಗುತ್ತದೆ. ಕಾಣೆಯಾದವರ ಬಗೆಗೆ ಸಂಬಂಧಿಕರು, ಸರ್ಕಾರೇತರ ಸಂಘ ಸಂಸ್ಥೆಗಳು, ಸ್ವಯಂ ಸೇವಕರು ಅಥವಾ ಸಾರ್ವಜನಿಕರು ಯಾರಾದರೂ ದೂರು ನೀಡಬಹುದಾಗಿರುತ್ತದೆ.

ಪ್ರತಿ ವ್ಯಕ್ತಿಯ ಸನ್ನಿವೇಶ, ಹಿನ್ನೆಲೆ, ಕಾರಣಗಳು ವಿಭಿನ್ನವಾಗಿಯೇ ಇರುವುದರಿಂದ, ಕಾಣೆಯಾದ ವ್ಯಕ್ತಿಯ ಸಂಪೂರ್ಣ ವಿವರಗಳು ಅವರನ್ನು ಪತ್ತೆ ಹಚ್ಚಲು ಅಗತ್ಯ. ಹಾಗಾಗಿಯೇ ಕಾಣೆಯಾದವರ ಬಗ್ಗೆ ದೂರು ನೀಡುವಾಗ ಲಭ್ಯವಿರುವ ಸಂಪೂರ್ಣ ವಿವರಗಳನ್ನು ಪೊಲೀಸರೊಂದಿಗೆ ಹಂಚಿಕೊಳ್ಳಬೇಕು.

ಕಾಣೆಯಾಗುವುದಕ್ಕೆ ಸಾಮಾನ್ಯ ಹಾಗೂ ಮುಖ್ಯ ಕಾರಣಗಳಲ್ಲಿ ಪ್ರೇಮವೂ ಒಂದು. ಹದಿಹರೆಯದ ಪ್ರೇಮ ಪ್ರಕರಣಗಳಲ್ಲಿ ಕಾಣೆಯಾದವರು ಶೀಘ್ರವಾಗಿ ಪತ್ತೆಯಾಗುತ್ತಾರೆ. ಇವು ಪ್ರೇಮ ವಿವಾಹ ಅಥವಾ ಪೋಕ್ಸೊ ಪ್ರಕರಣಗಳಲ್ಲಿ ಕೊನೆಗೊಳ್ಳುತ್ತವೆ. ಕೆಲವೊಂದು ಸಂದರ್ಭಗಳಲ್ಲಿ ಅನ್ಯ ಜಾತಿಯ, ಅನ್ಯ ಕೋಮಿನ ಯುವಕ–ಯುವತಿಯರನ್ನು ಪ್ರೀತಿಸಿದ ಕಾರಣಕ್ಕಾಗಿ ಅಥವಾ ವಿವಾಹವಾದ ಕಾರಣಕ್ಕಾಗಿ ಮರ್ಯಾದೆಗೇಡು ಹತ್ಯೆಗಳು ನಡೆಯುತ್ತವೆ. ಆ ಹತ್ಯೆಗಳನ್ನು ಕಾಣೆಯಾದ ಪ್ರಕರಣವೆಂದು ದಾಖಲಿಸಿ, ಮುಚ್ಚಿ ಹಾಕಲು ಪ್ರಯತ್ನಿಸುವುದುಂಟು. ಆದರೆ, ಪೊಲೀಸರು ನಡೆಸುವ ವಿವಿಧ ಆಯಾಮದ ತನಿಖೆಯಿಂದ ಅಪರಾಧ ಗುಟ್ಟಾಗಿ ಉಳಿಯದೇ ರಟ್ಟಾಗುತ್ತದೆ. ಪ್ರೀತಿ, ಪ್ರೇಮದ ವಿಚಾರದಲ್ಲಿ ಕಾಣೆ ಯಾಗುತ್ತಿದ್ದವರಲ್ಲಿ ಈ ಮೊದಲು ಅವಿವಾಹಿತರೇ ಹೆಚ್ಚಿರುತ್ತಿದ್ದರು. ಬದಲಾದ ಕಾಲಘಟ್ಟದಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆ ಹಾಗೂ ಪ್ರಭಾವದಿಂದಾಗಿ ವಿವಾಹಿತರು, ಮಕ್ಕಳನ್ನು ಹೊಂದಿರುವವರು ಕಾಣೆಯಾಗುತ್ತಿರುವುದು ಹೆಚ್ಚುತ್ತಿದೆ; ಇದು ಮತ್ತೊಂದು ಸಾಮಾಜಿಕ ಸಮಸ್ಯೆಯಾಗಿ ರೂಪುಗೊಳ್ಳುತ್ತಿದೆ.

ಕಾಣೆಯಾಗುವುದಕ್ಕೆ ಮತ್ತೊಂದು ಪ್ರಮುಖ ಕಾರಣ ಆರ್ಥಿಕ ವಿಚಾರಗಳು. ಕೌಟುಂಬಿಕ ಆರ್ಥಿಕ ಕಲಹಗಳು, ಆಸ್ತಿ ವಿವಾದಗಳು ಮತ್ತು ಆರ್ಥಿಕ ಶಿಸ್ತಿಲ್ಲದೆ ಮಾಡಿಕೊಂಡ ವಿಪರೀತ ಸಾಲಗಳಿಂದಾಗಿ ಮನೆ ತೊರೆದು ಹೋಗುವುದು ಕಂಡುಬರುತ್ತದೆ. ಇಂತಹ ಸಂದರ್ಭದಲ್ಲಿ ವ್ಯಕ್ತಿ ಕಾಣೆಯಾಗುವುದರಿಂದ ಯಾರಿಗೆ ಆರ್ಥಿಕ ಹಾಗೂ ಆಸ್ತಿಯ ಲಾಭವಾಗುತ್ತದೆ ಎಂಬುದನ್ನು ತನಿಖೆಯಲ್ಲಿ ಗಮನಿಸಲಾಗುತ್ತದೆ. ಇಂಥ ಸಂದರ್ಭಗಳಲ್ಲಿ, ಕಾಣೆ ಪ್ರಕರಣವು ಕೊಲೆಯಲ್ಲಿ ಅಂತ್ಯವಾಗಿರುವ ಉದಾಹರಣೆಗಳು ಸಾಕಷ್ಟಿವೆ.

ಮಾನವ ಕಳ್ಳ ಸಾಗಾಣಿಕೆಯ ಆಯಾಮವು ಕಾಣೆಯಾದ ಪ್ರಕರಣಗಳಲ್ಲಿ ಮತ್ತೊಂದು ಪ್ರಮುಖ ಅಂಶ. ಕೆಲಸ ದೊರಕಿಸಿ ಕೊಡುವ, ನಟನೆಯ ಅವಕಾಶಗಳನ್ನು ಒದಗಿಸುವ, ವಿದೇಶಗಳಲ್ಲಿ ಉದ್ಯೋಗ ಒದಗಿಸುವ, ಇತ್ಯಾದಿ ಆಮಿಷಗಳನ್ನು ಒಡ್ಡಿ ವ್ಯಕ್ತಿಗಳನ್ನು ಹೊರ ರಾಜ್ಯ, ಹೊರ ದೇಶಗಳಿಗೆ ಸಾಗಾಣಿಕೆ ಮಾಡುವುದೇ ಮಾನವ ಕಳ್ಳ ಸಾಗಾಣಿಕೆ. ಇಂಥ ಪ್ರಕರಣಗಳಲ್ಲಿ ಹೆಣ್ಣುಮಕ್ಕಳನ್ನು ವೇಶ್ಯಾವಾಟಿಕೆಗೆ ದೂಡುವುದು, ಪುರುಷರನ್ನು ಬಲವಂತದ ದುಡಿಮೆಗೆ ಹಚ್ಚುವುದು, ಮಕ್ಕಳನ್ನು ಭಿಕ್ಷಾಟನೆಗೆ ಇಲ್ಲವೇ ಕಾರ್ಖಾನೆಗಳ ಕೆಲಸಕ್ಕೆ ತೊಡಗಿಸುವುದು, ಅಂಗಾಂಗ ವ್ಯಾಪಾರಕ್ಕೆ, ಅಶ್ಲೀಲ ಫೋಟೊ ಮತ್ತು ವಿಡಿಯೊ ಚಿತ್ರೀಕರಣಕ್ಕೆ ಬಳಸಿಕೊಳ್ಳುವಂತಹ ಕಾನೂನುಬಾಹಿರ ಚಟುವಟಿಕೆಗಳಿಗೆ ದೂಡುವುದು ನಡೆಯುತ್ತದೆ. ಈ ಎಲ್ಲ ಸಾಧ್ಯತೆಗಳನ್ನು ಗಮನದಲ್ಲಿರಿಸಿಕೊಂಡು ಕಾಣೆಯಾದವರ ಪತ್ತೆಗೆ ವಿಶೇಷ ತಂಡಗಳನ್ನು ರಚಿಸಲಾಗುತ್ತದೆ. ಮಹಿಳೆಯರು ಮತ್ತು ಹುಡುಗಿಯರ ಕಾಣೆ ಪ್ರಕರಣಗಳಲ್ಲಿ ತನಿಖಾ ತಂಡದಲ್ಲಿ ಮಹಿಳಾ ಪೊಲೀಸರನ್ನು ಕಡ್ಡಾಯವಾಗಿ ನೇಮಿಸಲಾಗುತ್ತದೆ.

ಕಾಣೆಯಾದ ವ್ಯಕ್ತಿಯ ವಿವರ, ಚಹರೆ, ಕಾಣೆಯಾದಾಗ ಧರಿಸಿದ ಬಟ್ಟೆಗಳು, ವಿಶೇಷ ಗುರುತುಗಳು ಹಾಗೂ ಭಾವಚಿತ್ರದೊಂದಿಗೆ 'ಲುಕ್‌ಔಟ್ ನೋಟಿಸ್' ಅನ್ನು ರಾಜ್ಯದಾದ್ಯಂತ ಪೊಲೀಸ್ ಠಾಣೆಗಳಿಗೆ ರವಾನಿಸಲಾಗುತ್ತದೆ. ಮಹಿಳೆಯರ ಹಾಗೂ ಅಪ್ರಾಪ್ತ ವಯಸ್ಕ ಮಕ್ಕಳ ಭಾವಚಿತ್ರವನ್ನು ಪ್ರಕಟಿಸುವಾಗ ಅವರ ತಂದೆ ತಾಯಿಯವರ ಅಥವಾ ಪೋಷಕರ ಲಿಖಿತ ಅನುಮತಿ ಪಡೆದುಕೊಳ್ಳಲಾಗುತ್ತದೆ.

ಮಕ್ಕಳು ಕಾಣೆಯಾದ ಪ್ರಕರಣಗಳಲ್ಲಿ ವಿವರಗಳನ್ನು ಭಾವಚಿತ್ರದೊಂದಿಗೆ www.trackthemissingchild.gov.in ಜಾಲತಾಣದಲ್ಲಿ ತಕ್ಷಣ ಪ್ರಕಟಿಸಲಾಗುತ್ತದೆ. ಮಕ್ಕಳ ರಕ್ಷಣೆಗಾಗಿ ಇರುವ ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ವಿಶೇಷ ಪೊಲೀಸ್ ಘಟಕ, ಮಾನವ ಕಳ್ಳಸಾಗಣೆ ವಿರೋಧಿ ಘಟಕ, ರಾಜ್ಯ ಅಪರಾಧ ದಾಖಲೆ ವಿಭಾಗ, ರಾಷ್ಟ್ರೀಯ ಅಪರಾಧ ದಾಖಲೆ ವಿಭಾಗ, ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಗೆ ಮಾಹಿತಿ ಕಳುಹಿಸಿಕೊಡಲಾಗುತ್ತದೆ. ಹಾಗೆಯೇ ಸಮಗ್ರ ಮಕ್ಕಳ ಯೋಜನೆ ಪೋರ್ಟಲ್‌ನಲ್ಲಿ ಕಾಣೆಯಾದ ಮಕ್ಕಳ ವಿವರವನ್ನು 'ಫಾರ್ಮ್–ಎ'ನಲ್ಲಿ, ಪತ್ತೆಯಾದ ಮಕ್ಕಳ ವಿವರವನ್ನು 'ಫಾರ್ಮ್–ಆರ್'ನಲ್ಲಿ ಭರ್ತಿ ಮಾಡುವುದು ಕಡ್ಡಾಯವಾಗಿದ್ದು, ದೇಶದಾದ್ಯಂತ ತಪ್ಪಿಸಿಕೊಂಡ ಮಕ್ಕಳ ಪತ್ತೆಗೆ ಇದು ಸಹಾಯ ಒದಗಿಸುತ್ತದೆ.

ವೃದ್ಧರ ಕಾಣೆ ಪ್ರಕರಣಗಳು ಮರೆವಿನ ಕಾಯಿಲೆ, ಕುಟುಂಬದವರ ಉದಾಸೀನ, ಮಾನಸಿಕ ಅಸ್ವಸ್ಥತೆ, ಆರೋಗ್ಯ ಸಮಸ್ಯೆಗಳ ಕಾರಣಗಳಿಂದ ಸಂಭವಿಸುತ್ತವೆ. ಆರೋಗ್ಯ ಸಮಸ್ಯೆಯಿಂದಾಗಿ ಕುಟುಂಬದವರಿಗೆ ಭಾರವಾಗಬಾರದೆಂದು ವೃದ್ಧರು ಎಲ್ಲಿಗಾದರೂ ಹೊರಟು ಹೋಗುವುದರಿಂದ ಹಿಡಿದು, ಕುಟುಂಬ ಸದಸ್ಯರು ವೃದ್ಧರ ಆರೈಕೆಯ ಜವಾಬ್ದಾರಿ ಹೊರಲಾರದೆ ಎಲ್ಲೋ ಗೊತ್ತಿಲ್ಲದ ಸ್ಥಳದಲ್ಲಿ ಬಿಟ್ಟು ಬಂದು ಕಾಣೆ ಪ್ರಕರಣಗಳನ್ನು ದಾಖಲಿಸುವುದೂ ಉಂಟು.

ಜೀವನದಲ್ಲಿ ವೈರಾಗ್ಯ ಹೊಂದಿಯೋ, ಅಪರಾಧ ಕೃತ್ಯಗಳಲ್ಲಿ ಪಾಲ್ಗೊಂಡು ಸಿಕ್ಕಿ ಹಾಕಿಕೊಳ್ಳುವ ಭಯದಿಂದಲೋ ಕೆಲವರು ಕಾಣೆಯಾಗುವುದು ಕಂಡುಬರುತ್ತದೆ. ಕಾಣೆಯಾದವರನ್ನು ಹುಡುಕುವ ಪ್ರಕ್ರಿಯೆಯಲ್ಲಿ ತಂದೆ, ತಾಯಿ, ಪೋಷಕರು, ಸಂಬಂಧಿಕರು, ಸ್ನೇಹಿತರು, ಸಹೋದ್ಯೋಗಿಗಳು, ಸಹಪಾಠಿಗಳು, ನೆರೆಹೊರೆಯವರು ನೀಡುವ ಮಾಹಿತಿಯನ್ನು ಆಧರಿಸಿ ಕಾಣೆಯಾದ ಕಾರಣಗಳನ್ನು ಪಟ್ಟಿ ಮಾಡಿ ತನಿಖೆ ಮಾಡಲಾಗುತ್ತದೆ.

ತಂತ್ರಜ್ಞಾನದ ಕೊಡುಗೆ ಪತ್ತೆ ಕಾರ್ಯದಲ್ಲಿ ಅಪಾರವಾಗಿದೆ. ಸಿ.ಸಿ ಕ್ಯಾಮೆರಾ, ಸಾಮಾಜಿಕ ಮಾಧ್ಯಮ, ಮೊಬೈಲ್ ಫೋನ್‌ಗಳು, ಉಪಯುಕ್ತ ಮಾಹಿತಿ ಒದಗಿಸಿ ಶೀಘ್ರ ಪತ್ತೆ ಹಚ್ಚಲು ನೆರವಾಗುತ್ತಿವೆ. ಕಾಣೆಯಾದ ವ್ಯಕ್ತಿಗಳ ಪತ್ತೆ ಕಾರ್ಯದಲ್ಲಿ ಸರ್ಕಾರ ಹಾಗೂ ನ್ಯಾಯಾಲಯಗಳು ಅತೀವ ಕಾಳಜಿಯನ್ನು ವಹಿಸಿವೆ. ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ಅತಿ ಮಹತ್ವ ನೀಡಿ ಈ ಪ್ರಕರಣಗಳನ್ನು ಬಗೆಹರಿಸುತ್ತಿದೆ. ಅಧಿಕಾರಿಗಳ ಬದ್ಧತೆಯಿಂದ ಪತ್ತೆ ಕಾರ್ಯ ಪರಿಣಾಮಕಾರಿ ಆಗುತ್ತಿದ್ದು, ಕುಟುಂಬದಿಂದ ಬೇರೆಯಾದವರನ್ನು ಒಂದುಗೂಡಿಸುವ ಕಾರ್ಯವು ಯಶಸ್ವಿಯಾಗಿ ನಡೆಯುತ್ತಿದೆ.

(ಲೇಖಕಿ: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಚಾಮರಾಜನಗರ ಜಿಲ್ಲೆ)

ವಾಚಕರ ವಾಣಿ

ಷೇರು ಹೂಡಿಕೆ ಹಣಕಾಸಿನ ಸಾಕ್ಷರತೆಯೆ?

ಗ್ರಾಮ ಪಂಚಾಯಿತಿ ಸದಸ್ಯರಿಗೆ ಷೇರು ಹೂಡಿಕೆಯ ತರಬೇತಿ ಕೊಡುವ (ಪ್ರ.ವಾ., ಆಗಸ್ಟ್ 21) ಪಂಚಾಯತ್‌ರಾಜ್ ಸಚಿವಾಲಯದ ಉದ್ದೇಶ ಸರಿಯಾದುದಲ್ಲ. ಸದಸ್ಯರನ್ನು ಆಯ್ಕೆ ಮಾಡಿರುವುದು, ಗ್ರಾಮೀಣ ಭಾಗಗಳಲ್ಲಿ ಸಾಮಾಜಿಕ ಆಸ್ತಿ ಸೃಷ್ಟಿಸಲು. ಆದರೆ, ಕೇಂದ್ರ ಸರ್ಕಾರ ಅವರನ್ನು ಬಂಡವಾಳಶಾಹಿ ವ್ಯವಸ್ಥೆಗೆ ಸಿಲುಕಿಸಲು ಹೊರಟಿದೆ. ಷೇರುಪೇಟೆ ಹೂಡಿಕೆಯು ಹಣಕಾಸಿನ ಸಾಕ್ಷರತೆ ಆಗಲು ಹೇಗೆ ಸಾಧ್ಯ?

ಪ್ರಶಾಂತ್ ಕೆ.ಸಿ., ಚಾಮರಾಜನಗರ

ಒಳಮೀಸಲು ಅರ್ಹರಿಗಷ್ಟೇ ಸಿಗಲಿ

ಎಚ್.ಎನ್. ನಾಗಮೋಹನದಾಸ್ ವರದಿಯನ್ನು ಪರಿಷ್ಕರಿಸಿ ಜಾರಿಗೊಳಿಸುವ ಸರ್ಕಾರದ ತೀರ್ಮಾನ ಸ್ವಾಗತಾರ್ಹ. ಈ ತೀರ್ಮಾನದಿಂದ, ಒಳಮೀಸಲಾತಿ ಅನ್ವಯ ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗುತ್ತದೆ ಎಂದು ಕಾದಿರುವ ನಿರುದ್ಯೋಗಿಗಳು ನಿಟ್ಟುಸಿರು ಬಿಡುವಂತಾಗಿದೆ. ಪ್ರಕಟಗೊಂಡ ಒಳಮೀಸಲಾತಿಯ ಸೌಲಭ್ಯ ಅರ್ಹರಿಗೆ ಸಿಗುವಂತಾಗಲಿ.

ಪಿ.ಸಿ. ಕಂಗಾಣಿಸೋಮು, ಕ್ಯಾತಮಾರನಹಳ್ಳಿ

ಶರಾವತಿ: ಕಣ್ಣಾಮುಚ್ಚಾಲೆ ಯಾಕೆ?

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯಡಿ ಎರಡು ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಲಾಗಿದೆ. ಪಶ್ಚಿಮಘಟ್ಟದ ದಟ್ಟಕಾನನವು ಸಿಂಹಬಾಲದ ಸಿಂಗಳೀಕ, ದೊಡ್ಡ ಮಂಗಟ್ಟೆ ಮುಂತಾದ ಅಪರೂಪದ ಜೀವಸಂಕುಲ ಇರುವ ಅಭಯಾರಣ್ಯ. ಸಾರ್ವಜನಿಕ ಅಹವಾಲು ಸಭೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ದಿನ ನಿಗದಿಪಡಿಸಿದೆ. ಆದರೆ, ಯೋಜನೆಯಿಂದ ಎಷ್ಟು ಮರಗಳು ಕಡಿತಲೆಗೊಳಗಾಗಲಿವೆ, ವಿದ್ಯುತ್ ಸಾಗಾಟಕ್ಕೆ ಮತ್ತೆಷ್ಟು ಜಾಗ ಬೇಕು ಇತ್ಯಾದಿ ವಿವರ ಒಳಗೊಂಡಿರುವ ವಿಸ್ತೃತ ಯೋಜನಾ ವರದಿಯು ಇನ್ನೂ ಸಾರ್ವಜನಿಕರ ಕೈಸೇರಿಲ್ಲ. ಅದು ಇಲ್ಲದೆ ಅಹವಾಲು ಸಭೆಯಲ್ಲಿ ಸಾರ್ವಜನಿಕರು ಯೋಜನೆಯು ಸಿಂಧುವೋ ಅಲ್ಲವೋ ಎಂಬುದನ್ನು ನಿರ್ಧರಿಸುವುದು ಕಷ್ಟ. ಜನರಿಗೆ ಡಿಪಿಆರ್ ಒದಗಿಸಿದ ಬಳಿಕ ಸಭೆ ನಡೆಸಲಿ.

ಸರೋಜಾ ಪ್ರಕಾಶ, ಮಂಗಳೂರು

ಅಂತಃಕರಣ ಸತ್ತು ಹೋಗಿದೆಯೇ?

ಒಳಮೀಸಲಾತಿ ಕುರಿತ 'ಪ್ರಜಾವಾಣಿ' ಸಂಪಾದಕೀಯ (ಆಗಸ್ಟ್ 21) ಅಲೆಮಾರಿ ಸಮುದಾಯಕ್ಕೆ ಆಗಿರುವ ಅನ್ಯಾಯವನ್ನು ಎತ್ತಿಹಿಡಿದಿದೆ. ಅನ್ನ ತಿನ್ನುವ ಕನಿಷ್ಠ ಜ್ಞಾನ ಇರುವ ಯಾರಿಗೇ ಆದರೂ, ಅಲೆಮಾರಿ ಸಮುದಾಯ ಮುಂದುವರಿದ ಸ್ಪೃಶ್ಯ ಜಾತಿಗಳೊಡನೆ ಸ್ಪರ್ಧಿಸಿ ಗೆಲ್ಲುವುದು ಸಾಧ್ಯವಿಲ್ಲವೆಂಬುದು ಅರ್ಥವಾಗುತ್ತದೆ. ಜನಪ್ರತಿನಿಧಿಗಳು ಈ ಕುರಿತು ಪ್ರತಿಕ್ರಿಯೆ ನೀಡದೆ ಇರುವುದನ್ನು ನೋಡಿದಾಗ 'ಅಂತಃಕರಣ' ಸತ್ತು ಹೋಗುತ್ತಿದೆಯೆ ಎಂಬ ಪ್ರಶ್ನೆ ಕಾಡುತ್ತದೆ.

ಪುಟ್ಟದಾಸು, ಮಂಡ್ಯ

ಅಮ್ಮ: ವರ್ಣಿಸಲಾಗದ ಅನುಭೂತಿ

ಕಣ್ಣಿಗೆ ಕಾಣುವ ದೇವರು ಎಂದರೆ, ತಾಯಿ. 102 ವರ್ಷದ ತಾಯಿಯನ್ನು ಹೆಗಲ ಮೇಲೆ ಹೊತ್ತು 220 ಕಿ.ಮೀ. ದೂರ ನಡೆದು ತಾಯಿಗೆ ವಿಠಲನ ದರ್ಶನ ಮಾಡಿಸಿದ ಮಗನ ಪರಿಶ್ರಮದ ಕಾರ್ಯ ಮೆಚ್ಚುವಂತದ್ದು (ಪ್ರ.ವಾ., ಆಗಸ್ಟ್ 20). ವಿಠಲನ ದರ್ಶನ ಮಾಡುವ ತನ್ನ ತಾಯಿಯ ಕೊನೆ ಆಸೆಯನ್ನು ಮಗ ಪೂರೈಸಿದ್ದು, ಆ ಸೇವೆಯಲ್ಲೇ ಭಗವಂತನ ಸಾಕ್ಷಾತ್ಕಾರ ಅಡಗಿದೆ. ಇಂದಿನ ಕಾಲದಲ್ಲಿ ಹೆತ್ತವರನ್ನು ನಿರ್ಲಕ್ಷಿಸುವ ಮಕ್ಕಳಿಗೆ ಇದೊಂದು ಮಾದರಿ ಸನ್ನಡತೆಯಾಗಿದೆ.

ಎಲ್. ಚಿನ್ನಪ್ಪ, ಬೆಂಗಳೂರು

ವಿಧಾನಸಭಾ ಅಧ್ಯಕ್ಷರ ಮಾದರಿ ವ್ಯಕ್ತಿತ್ವ

ನಾನು ವೃತ್ತಿಯಲ್ಲಿ ಶಿಕ್ಷಕ. ಸಮೂಹ ಸಂಪನ್ಮೂಲ ವ್ಯಕ್ತಿಯಾದ ನಾನು ಮಕ್ಕಳ ಮೊಬೈಲ್ ಬಳಕೆಯ ಗೀಳು ಬಿಡಿಸಲು 'ಮೊಬೈಲ್ ಬಿಡಿ ಪುಸ್ತಕ ಹಿಡಿ' ಅಭಿಯಾನ ಆರಂಭಿಸಿದೆ. ನನ್ನ ವ್ಯಾಪ್ತಿಯ ಎಂಟು ಶಾಲೆಗಳ ಮಕ್ಕಳು ಮತ್ತು ಪೋಷಕರಲ್ಲಿ ಇದರ ದುಷ್ಪರಿಣಾಮ ಕುರಿತು ಅರಿವು ಮೂಡಿಸಿದೆ. ಇದರ ವ್ಯಾಪ್ತಿ ವಿಸ್ತರಿಸುವ ಉದ್ದೇಶದಿಂದ ಸಾಮಾಜಿಕ ಮಾಧ್ಯಮಗಳಲ್ಲಿ ಅರಿವು ಕಾರ್ಯಕ್ರಮಗಳ ವಿಡಿಯೊ ತುಣುಕುಗಳನ್ನು ಅಪ್‌ಲೋಡ್ ಮಾಡಿದ್ದರಿಂದ ವ್ಯಾಪಕ ಪ್ರಚಾರ ಸಿಕ್ಕಿತು. ಮುಖ್ಯಮಂತ್ರಿ ಅವರು, ಸ್ವಾತಂತ್ರ್ಯೋತ್ಸವದ ಭಾಷಣದಲ್ಲಿ ಪ್ರಸ್ತಾಪಿಸುವಷ್ಟರ ಮಟ್ಟಿಗೆ ಈ ಕಾರ್ಯಕ್ರಮ ಪ್ರಸಿದ್ಧಿಯಾಯಿತು. ವಿಷಯ ತಿಳಿದ ವಿಧಾನಸಭಾಧ್ಯಕ್ಷರು ತಮ್ಮ ಅಧಿಕೃತ ಕಚೇರಿಗೆ ನನ್ನನ್ನು ಆಹ್ವಾನಿಸಿ ಸನ್ಮಾನಿಸಿದ ರೀತಿ ಮೈನವಿರೇಳಿಸಿತು. ನನ್ನಂತ ಸಾಮಾನ್ಯ ಶಿಕ್ಷಕನನ್ನು ಗೌರವಿಸಿದ ರೀತಿಯಂತೂ ಎಂದಿಗೂ ಮರೆಯಲಾಗದು. ಅವರ ಸರಳ ವ್ಯಕ್ತಿತ್ವವು ಮೂಕವಿಸ್ಮಿತಗೊಳಿಸಿತು.

ಚಿಕ್ಕವೀರಯ್ಯ, ರಾಮನಗರ

ನಟನೆ ಬೇಡ: ಪ್ರಬುದ್ಧತೆ ಬೇಕು

'ನನ್ನ ಮತದಾರರ ರಕ್ಷಣೆಗೆ ಬಂಡೆಯಾಗಿ ಅವರ ಹಿಂದೆ ನಿಲ್ಲುತ್ತೇನೆ', 'ದೇಶದ ತಾಯಂದಿರ, ಅಕ್ಕ-ತಂಗಿಯರ ವಿಡಿಯೊ ದೃಶ್ಯಗಳನ್ನು ಕೊಡಲಾರೆ', 'ದೇಶದ ಕ್ಷಮೆ ಕೇಳಬೇಕು, ಇಲ್ಲದಿದ್ದರೆ...' –ಇವು ಯಾವುದೋ ಸಿನಿಮಾದ ನಾಯಕ ನಟನ ಡೈಲಾಗ್‌ಗಳಲ್ಲ ಅಥವಾ ರಾಜಕೀಯ ನಾಯಕರ ಭಾಷಣದ ತುಣುಕುಗಳಲ್ಲ.

ದೇಶದ ಮುಖ್ಯ ಚುನಾವಣಾಧಿಕಾರಿ ಅವರು ಸುದ್ದಿಗೋಷ್ಠಿಯಲ್ಲಿ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುವಾಗ ಹೇಳಿದ ಸಾಲುಗಳಿವು. ಟಿ.ಎನ್. ಶೇಷನ್ ಅವರು ಅಲಂಕರಿಸಿದ್ದಂತಹ ಸಾಂವಿಧಾನಿಕ ಪೀಠದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮುಖ್ಯ ಚುನಾವಣಾಧಿಕಾರಿ ಅವರಿಂದ ಇನ್ನೂ ಹೆಚ್ಚಿನ ಪ್ರಬುದ್ಧ ನಡವಳಿಕೆಯನ್ನು ದೇಶದ ಜನರು ಎದುರು ನೋಡುತ್ತಿದ್ದಾರೆ. ಈ ಸತ್ಯವನ್ನು ಅವರು ಗ್ರಹಿಸಲಿ.

ಶಾಂತಕುಮಾರ್, ಸರ್ಜಾಪುರ

ಚುರುಮುರಿ

ಮುಖ ಮತ್ತು ಮುಖವಾಡ

● ಬಿ.ಎನ್. ಮಲ್ಲೇಶ್

'ಲೇ ತೆಪರ, ಮೊನ್ನಿ ನಿಮ್ ಟೀವ್ಯಾಗೆ, ನಮ್ಮಲ್ಲೇ ಮೊದಲು ಅಂತ ತೋರಿಸ್ತಿದ್ರೆಲ್ಲ, ಆ ಮಾಸ್ಕ್ ಮ್ಯಾನ್ ತಪ್ಪು ಒಪ್ಕಂಡ ಅಂತ ಇಡೀ ದಿನ ಪುಂಗಿದ್ರೆಪ, ಬರೀ ಸುಳ್ಳು...' ಹರಟೆಕಟ್ಟೆಯಲ್ಲಿ ದುಬ್ಬೀರ ಆಕ್ಷೇಪಿಸಿದ.

'ಅಯ್ಯೋ, ಈ ತೆಪರನ ಕತಿ ನಿಂಗೊತ್ತಿಲ್ಲ. ಅಲ್ಲಿ 15 ವರ್ಷದ ಹಿಂದೆ ಬಾಲಕಿ ಶವ ಹೂತು ಹಾಕಿದ್ರಂತೆ. ಈಗ ಗುಂಡಿ ಅಗೆದ್ರೆ ಹೆಂಗಸಿನ ಶವ ಸಿಕ್ತಂತೆ. ಅದೆಂಗೆ ಅಂದ್ರೆ, 15 ವರ್ಷದಲ್ಲಿ ಬಾಲಕಿ ದೊಡ್ಡೋಳಾಗಿರಲ್ವ ಅಂತಾನೆ?' ಗುಡ್ಡೆ ಜೋರಾಗಿ ನಕ್ಕ.

'ಗುಡ್ಡೆ ಬ್ಯಾಡ ನೋಡು...' ತೆಪರೇಸಿಗೆ ಸಿಟ್ಟು ಬಂತು.

'ಶಾಂತಿ ಶಾಂತಿ, ಮೊದ್ಲೇ ಮುಸುಕಿನ ಗುದ್ದಾಟ ನಡೆಸಿರೋ ಸಿಎಂ, ಡಿಸಿಎಂ ಕೈಗೆ ಮೊನ್ನೆ ಅದ್ಯಾರೋ ಗದೆ ಕೊಟ್ಟಂಗೆ ಆಗಬಾರ್ದು. ಆದ್ರೂ ಟೀವಿ ತುಂಬಾ ಅದೇನ್ ತೋರಿಸ್ತೀರಪ, ತಲೆ ಚಿಟ್ಟಿಡೀತತಿ...' ಎಂದಳು ಮಂಜಮ್ಮ.

'ಆ ಮಾಸ್ಕ್ ಮ್ಯಾನ್‌ಗೆ ಎಷ್ಟು ಪ್ರಚಾರ ಸಿಕ್ಕೇತಿ ಅಂದ್ರೆ, ನಾಳೇನೆ ಎಲೆಕ್ಷನ್‌ಗೆ ನಿಂತ್ರೂ ಗೆದ್ದುಬಿಡ್ತಾನೆ ನೋಡು' ಎಂದ ಕೊಟ್ರ.

'ಲೇ ತಮಾ... ಅವ್ನು ಎಲ್ರಿಗೂ ಕಾಣಂಗೆ ಮುಖವಾಡ ಹಾಕ್ಕಂಡಿದಾನೆ. ನಮ್ ರಾಜಕಾರಣಿಗಳದ್ದು ಮುಖ ಯಾವುದು, ಮುಖವಾಡ ಯಾವುದು ಗೊತ್ತೇ ಆಗಲ್ಲ...' ದುಬ್ಬೀರ ನಕ್ಕ.

'ಈ ತೆಪರ ಅವನ ಟೀವೀಲಿ ಅಂಥೋರ ಮುಖವಾಡ ಕಳಚಲೆ ಅಂದ್ರೆ ಬರೀ ಬುರುಡೆ ಬಿಡ್ತಾನೆ. ಬಿಗ್ ಟ್ವಿಸ್ಟ್ ಅಂತೆ, ಮಹಾ ಎಕ್ಸ್‌ಕ್ಲೂಸಿವ್ ಅಂತೆ... ಮಣ್ಣಾಂಗಟ್ಟಿ...' ಗುಡ್ಡೆಗೂ ಸಿಟ್ಟು ಬಂತು.

'ಲೇ ಗುಡ್ಡೆ, ಜಾಸ್ತಿ ಮಾತಾಡಿದ್ರೆ ಗುಂಡಿ ಅಗೆಯೋವಾಗ ನಿಂದೇ ತಲೆ ಬುರುಡೆ ಸಿಕ್ತು ಅಂತ ಬ್ರೇಕಿಂಗ್ ನ್ಯೂಸ್ ಕೊಟ್ಬಿಡ್ತೀನಿ ನೋಡು...' ತೆಪರೇಸಿ ಎಚ್ಚರಿಸಿದ.

'ಅದನ್ನ ಯಾರೂ ನಂಬಲ್ಲ ಬಿಡು' ಎಂದಳು ಮಂಜಮ್ಮ.

'ನಂಬಲ್ವಾ? ಯಾಕೆ?'

'ಯಾಕಂದ್ರೆ ಗುಡ್ಡೆಗೆ ತಲೆನೇ ಇಲ್ಲ, ಇನ್ನು ಬುರುಡೆ ಹೆಂಗೆ ಸಿಕ್ತತಿ?' ಮಂಜಮ್ಮನ ಜೋಕಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ತಬ್ಬಲಿ ಸಮುದಾಯಗಳಿಗೆ ನ್ಯಾಯ ಬೇಕು

ಒಳಮೀಸಲಿನಲ್ಲಿ ಆಗಿರುವ ಅನ್ಯಾಯ ಸರಿಪಡಿಸದೆ ಹೋದರೆ, ಅಲೆಮಾರಿ ತಬ್ಬಲಿ ಸಮುದಾಯಗಳು 'ನಾಗರಿಕ' ಸಮಾಜವನ್ನು ಎಂದೂ ಕ್ಷಮಿಸಲಾರವು.

● ದಯಾನಂದ

ಹೌದು, ಅಲೆಮಾರಿಗಳಿಗೆ ಅನ್ಯಾಯವಾಗಿದೆ. ಅನ್ಯಾಯ ಆಗುತ್ತಲೇ ಇದೆ, ಅನ್ಯಾಯ ಆಗುತ್ತಲೇ ಇರುತ್ತದೆ.

'ನಾಗರಿಕ' ಸಮಾಜದೊಳಗೆ ಇದ್ದೂ ಇಲ್ಲದಂತಿರುವ ಅಲೆಮಾರಿಗಳನ್ನು ಈಗ 'ಸಾಮಾಜಿಕ ನ್ಯಾಯ'ದ ಹೆಸರಿನ ರಾಜ್ಯ ಸರ್ಕಾರವೂ ಅಂಚಿಗೆ ತಳ್ಳುತ್ತಿದೆ. ದೇವರಾಜ ಅರಸು ಜನ್ಮದಿನದ ಮುನ್ನಾ ದಿನವಾದ ಆಗಸ್ಟ್ 19ರ ರಾತ್ರಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಂಪುಟ ಸಭೆ ತೆಗೆದುಕೊಂಡಿರುವ ಒಳಮೀಸಲಾತಿ ನಿರ್ಣಯವು ಅಲೆಮಾರಿಗಳನ್ನು ಮೂರನೇ ಬುಟ್ಟಿಗೆ ಹಾಕಿ, ಈ ತಬ್ಬಲಿ ಸಮುದಾಯಗಳ ಮೇಲುಚಲನೆಯ ಕಾಲುದಾರಿಗೆ ಗುಡ್ಡಗಟ್ಟಲೆ ಮಣ್ಣು ಸುರಿದಿದೆ.

ಕರ್ನಾಟಕದಲ್ಲಿ ಅಲೆಮಾರಿ ಸಮುದಾಯಗಳ ಬಗ್ಗೆ ಇವತ್ತಿಗೂ ಸಮರ್ಪಕವಾದ ದತ್ತಾಂಶ ಸರ್ಕಾರದ ಬಳಿ ಇಲ್ಲ. ಅಲೆಮಾರಿ ಸಮುದಾಯಗಳಲ್ಲಿ ಆಗಿರುವ ಗತ್ಯಂತರಗಳನ್ನು 'ನಾಗರಿಕ' ಸಮಾಜವೂ ಸರಿಯಾಗಿ ಗ್ರಹಿಸಿಲ್ಲ. ಇವತ್ತಿಗೂ ನೆಲೆಯೂರಲು ಅಂಗೈ ಅಗಲದ ಜಾಗ ಸಿಗದ ಕಾರಣಕ್ಕೆ ಅದೆಷ್ಟೋ ಅಲೆಮಾರಿಗಳು ಮತದಾರರ ಪಟ್ಟಿಯಲ್ಲೂ ಜಾಗ ಪಡೆಯಲಾಗದ ಪರಿಸ್ಥಿತಿ ಇದೆ. 'ಅಪರಾಧ ಎಸಗುವ ಬುಡಕಟ್ಟು' (ಕ್ರಿಮಿನಲ್ ಟ್ರೈಬ್) ಎಂಬ ಹಣೆಪಟ್ಟಿ ಕಟ್ಟಿಸಿಕೊಂಡಿದ್ದ ಅಲೆಮಾರಿ ಸಮುದಾಯಗಳು ಸದ್ದೇ ಇಲ್ಲದಂತೆ ಹೆಸರು ಕಳೆದುಕೊಂಡು 'ಇನ್ನಿಲ್ಲವಾದ ಸಮುದಾಯ'ಗಳಾಗಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿವೆ. ಹೀಗಾಗಿ ಯಾವ ಗುರುತಿನ ಜತೆಗೆ ತಮ್ಮ ಗುರುತನ್ನು ಸೇರಿಸಿಕೊಳ್ಳಬೇಕೆಂಬ ಪ್ರಜ್ಞೆ ಈ ಸಮುದಾಯಗಳಿಗೆ ಇಲ್ಲ. ಇದ್ದಷ್ಟು ದಿನ ಈ ಊರು, ಇಲ್ಲಿ ತಳ ಬಿಟ್ಟ ಮೇಲೆ ಮುಂದಿನ ಊರಿಗೆ ಗುಡಾರ ಎತ್ತುವ ಪರಿಸ್ಥಿತಿಯಲ್ಲಿರುವ ಅಲೆಮಾರಿ ಸಮುದಾಯಗಳಿಗೆ ಈ ಪ್ರಜ್ಞೆ ಸಮುದಾಯದೊಳಗಿಂದಲೇ ಬರಬೇಕೆಂದು ನಿರೀಕ್ಷಿಸುವುದೂ ದೊಡ್ಡ ಕ್ರೌರ್ಯ.

ಅಲೆಮಾರಿ ಸಮುದಾಯಗಳಿಂದ ಬಂದು ನಿಜವಾಗಿಯೂ ಕಷ್ಟಪಟ್ಟು ಶಿಕ್ಷಣ ಪಡೆದು 'ಉನ್ನತ' ಹುದ್ದೆಗಳಲ್ಲಿ ಇರುವ ಬೆರಳೆಣಿಕೆಯಷ್ಟು ಜನಕ್ಕೂ ಸಮುದಾಯಗಳನ್ನು ಎಚ್ಚರಗೊಳಿಸಬೇಕೆಂಬ ಪ್ರಜ್ಞೆ ಇವತ್ತಿಗೂ ಬಂದಿಲ್ಲ. ಇದು 'ಸಂಘಟನೆಯ ದಾರಿಗಿಂತ ಶೈಕ್ಷಣಿಕ ದಾರಿಯೇ ಮುಖ್ಯ' ಎಂದುಕೊಂಡಿದ್ದರ ಪರಿಣಾಮವೋ, ಗೊತ್ತಿಲ್ಲ. ಇದರಿಂದ ಅಲೆಮಾರಿ ಸಮುದಾಯಗಳಿಂದ ಬಂದ ಬೆರಳೆಣಿಕೆಯ ಜನ ಶಿಕ್ಷಣ, ಉನ್ನತ ಹುದ್ದೆಗಳನ್ನು ಪಡೆದು ತಾವು 'ದೊಡ್ಡವ'ರಾಗಿ ಬೆಳೆದರೇ ಹೊರತು ತಮ್ಮ ಸಮುದಾಯಗಳ ಕಡೆಗೆ ಹಿಂದಿರುಗಿ ನೋಡಲಿಲ್ಲ; ತಾವು ಬೆಳೆದ ಮೇಲೆ ತಮ್ಮ ಸಮುದಾಯಗಳ ಹೆಸರಿನ ಜತೆಗೆ ಗುರುತಿಸಿಕೊಳ್ಳಲೂ ಇಲ್ಲ. 'ಆಧುನಿಕ' ಎನಿಸಿಕೊಂಡ ಸಮಾಜದಲ್ಲಿ ತಮ್ಮ ಗುರುತನ್ನು ಹೇಳಿಕೊಳ್ಳಲಾಗದೆ ತಬ್ಬಲಿಗಳಾಗುವ ಸನಾದಿ ಅಪ್ಪಣ್ಣನ ಮಗನ ಸಂಕೀರ್ಣ ಮನಃಸ್ಥಿತಿ ಇದು. ಶಿಕ್ಷಣ ಪಡೆದು, ಉನ್ನತ ಹುದ್ದೆಯಲ್ಲಿದ್ದೂ ಜಾತಿ ಅವಮಾನವನ್ನು ಅನುಭವಿಸುವುದಕ್ಕಿಂತ ಜಾತಿಯನ್ನೇ ಮರೆಮಾಚಿ ಬದುಕುವುದು ಒಳ್ಳೆಯದು ಎಂದು ಈ 'ದೊಡ್ಡಜನ'ಕ್ಕೆ ಅನಿಸಿದ್ದರೆ ತಪ್ಪೇನೂ ಇಲ್ಲ. ಆದರೆ, ತಮ್ಮ ಸಮುದಾಯಗಳಿಂದ ಶಿಕ್ಷಣ ಪಡೆದು ಕೆಲವರಾದರೂ ದೊಡ್ಡವರಾಗಿ ಬೆಳೆದಿದ್ದಾರೆ, ನಾವೂ ಶಿಕ್ಷಣ ಪಡೆದರೆ ಅವರಂತೆ ಬೆಳೆಯಬಹುದು ಎಂಬ ಮಾದರಿಯನ್ನು ರೂಪಿಸಲು ಈ 'ದೊಡ್ಡಜನ' ಸೋತದ್ದು ಅಲೆಮಾರಿ ಸಮುದಾಯಗಳ ಪಾಲಿಗೆ ಆದ ದೊಡ್ಡ ನಷ್ಟ.

ಈಗ ನಿವೃತ್ತಿಯ ದಿನಗಳನ್ನು ಕಳೆಯುತ್ತಿರುವ ಅಲೆಮಾರಿ ಸಮುದಾಯಗಳ 'ದೊಡ್ಡಜನ' ಈಗಲಾದರೂ ತಮ್ಮ ಸಮುದಾಯಗಳ ಕಡೆಗೆ ಹಿಂದಿರುಗಿ ನೋಡುವ ಮನಸ್ಸು ಮಾಡಬೇಕು. ಸಮುದಾಯಗಳನ್ನು ಸಂಘಟಿಸುವ, ಶಿಕ್ಷಣದ ಮಹತ್ವ ತಿಳಿಸುವ ಕಡೆಗೆ ಕಾಳಜಿ ತೋರಬೇಕು. ಶಿಕ್ಷಣದಿಂದ ವಿಮುಖವಾಗಿರುವ ಅಲೆಮಾರಿ ಸಮುದಾಯಗಳ ಮಕ್ಕಳಿಗೆ ಶಿಕ್ಷಣದ ಬೆಳಕು ತೋರಿಸಲು, ಮೀಸಲಾತಿಯ ಮಹತ್ವವನ್ನು ತಿಳಿಸಲು ಗುಲಗಂಜಿಯಷ್ಟಾದರೂ ಕೆಲಸ ಮಾಡಬೇಕು. ತಾವು, ತಮ್ಮ ಕುಟುಂಬ ಚೆನ್ನಾಗಿದ್ದರೆ ಸಾಕು ಎಂದುಕೊಂಡು ಇನ್ನೂ ಈ 'ದೊಡ್ಡಜನ' ನೆಮ್ಮದಿಯಾಗಿದ್ದರೆ, ಅದಕ್ಕಿಂತ ದೊಡ್ಡ ಆತ್ಮವಂಚನೆ ಬೇರೊಂದಿಲ್ಲ. ಇದು ಆದರ್ಶದಂತೆ ಕಂಡರೂ ಇಂಥ ಸಣ್ಣ ಸಣ್ಣ ಪ್ರಯತ್ನಗಳಾದರೂ ಆಗದೇ ಹೋದರೆ ಅಲೆಮಾರಿ ಸಮುದಾಯಗಳ ಪರಿಸ್ಥಿತಿ ಇನ್ನಷ್ಟು ಹೀನಾಯವಾಗಲಿದೆ.

ಕಳೆದ ವಾರವಷ್ಟೇ ದೇಶ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿಕೊಂಡಿದೆ. 'ಮನೆ ಮನೆಯಲ್ಲೂ ತ್ರಿವರ್ಣ' ಎಂಬ ಹಿತವಾದ ಘೋಷಣೆಯ ನೆರಳಲ್ಲಿ ಮನೆಗಳೇ ಇಲ್ಲದ ಅಲೆಮಾರಿ ಸಮುದಾಯಗಳು ಈ ದೇಶದಲ್ಲಿ ತಬ್ಬಲಿಗಳಾಗಿ ಬದುಕು ದೂಡುತ್ತಿವೆ. ಮುಂದುವರಿದ ಪ್ರಿವಿಲೇಜ್ಡ್ ಸಮುದಾಯಗಳು ಹೊರ ದೇಶಗಳಲ್ಲಿ ನಿವೇಶನ, ಮನೆ ಮಾಡಿಕೊಂಡು ನೆಲೆಯೂರುವ ಕನಸಿನೊಂದಿಗೆ ಶಿಕ್ಷಣ ಪಡೆಯುತ್ತಿರುವ ಈ ಹೊತ್ತಲ್ಲಿ ಅಲೆಮಾರಿಗಳು ಇನ್ನೂ 'ವಿಮೋಚನೆ'ಗಾಗಿ ಶಿಕ್ಷಣ ಪಡೆಯಬೇಕಾಗಿರುವುದು ಈ ದೇಶದ ದುರಂತ.

ಶಾಲೆಯ ಮುಖ ನೋಡದ ಅಲೆಮಾರಿ ಸಮುದಾಯಗಳ ಅದೆಷ್ಟೋ ಮಕ್ಕಳು ಹೊಸ ಬಗೆಯ 'ಕ್ರಿಮಿನಲ್ ಟ್ರೈಬ್'ಗಳ ಹಣೆಪಟ್ಟಿ ಕಟ್ಟಿಕೊಂಡಿದ್ದಾರೆ. ನಗರಗಳಲ್ಲಿ ಏನೇ ಅಪರಾಧ ನಡೆದರೂ ಪೊಲೀಸರು ಸ್ಲಮ್‌ಗಳನ್ನೇ ತಡಕಾಡುವಂತೆ, ಗ್ರಾಮೀಣ ಭಾಗದಲ್ಲಿ ಏನೇ ಅಪರಾಧ ನಡೆದರೂ ಪೊಲೀಸರು, ಅಲೆಮಾರಿಗಳ ಗುಡಾರಗಳ ಕಡೆಗೇ ಮುಖ ಮಾಡುವ ಪರಿಸ್ಥಿತಿ ಇದೆ. ಇಂಥ ವಿಷಮ ಸ್ಥಿತಿಯಲ್ಲಿ ಒಳಮೀಸಲಾತಿಯ ಅನ್ಯಾಯ ಸರಿಪಡಿಸದೇ ಇದ್ದರೆ ಅದು ತಬ್ಬಲಿ ಸಮುದಾಯಗಳಿಗೆ ಸರ್ಕಾರ ಮಾಡುವ ವಂಚನೆ; ಸಮಾಜ ತನಗೆ ತಾನೇ ಮಾಡಿಕೊಳ್ಳುವ ಅತಿದೊಡ್ಡ ಆತ್ಮವಂಚನೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೇಣಿ ಬಂದರು ಯೋಜನೆ

ಆತಂಕಕ್ಕೆ ಇಲ್ಲ ಕೊನೆ

• ಗಣಪತಿ ಹೆಗಡೆ

ಪರಿಸರ ಸೂಕ್ಷ್ಮ ಪ್ರದೇಶವಾದ ಉತ್ತರ ಕನ್ನಡದಲ್ಲಿ ಈಗಾಗಲೇ ಒಂದು ವಾಣಿಜ್ಯ ಬಂದರು ಇದೆ. ಇಲ್ಲಿಂದಲೇ ಸರಿಯಾಗಿ ಸರಕು ಸಾಗಣೆ ನಡೆಯುತ್ತಿಲ್ಲ. ಖಾಸಗಿ ಸಹಭಾಗಿತ್ವದಲ್ಲಿ ಹೊನ್ನಾವರದಲ್ಲಿ ಎರಡನೇ ಬಂದರು ನಿರ್ಮಾಣಗೊಳ್ಳುತ್ತಿದೆ. ಆ ಸ್ಥಳದಿಂದ ಕೇವಲ 65 ಕಿ.ಮೀ ದೂರದಲ್ಲಿರುವ ಅಂಕೋಲಾ ತಾಲ್ಲೂಕಿನ ಕೇಣಿಯಲ್ಲಿ ಹೊಸ ಬಂದರು ಸ್ಥಾಪನೆಯ ಅಗತ್ಯ ಏನಿದೆ?

ಇದು ಪರಿಸರವಾದಿಗಳ ಪ್ರಶ್ನೆ. ಇವರದಷ್ಟೇ ಅಲ್ಲ; ಕೇಣಿ ಗ್ರಾಮದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸರ್ವಋತು ಆಳ ಸಮುದ್ರ ಬಂದರಿನಿಂದ ಮೀನುಗಾರಿಕೆ ನೆಲೆ ನಾಶವಾಗುವ ಆತಂಕದಲ್ಲಿರುವ ಸಾಂಪ್ರದಾಯಿಕ ಮೀನುಗಾರರ ಪ್ರಶ್ನೆಯೂ ಹೌದು.

ಪಶ್ಚಿಮ ಘಟ್ಟ, ಅಪರೂಪದ ಸಾಗರ ಜೀವಸಂಕುಲವನ್ನು ಒಳಗೊಂಡ ಕಡಲತೀರಗಳನ್ನು ಹೊಂದಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಯೋಜನೆ ನೆಪದಲ್ಲಿ ಪದೇ ಪದೇ ಪರಿಸರದ ಮೇಲೆ ದಾಳಿ ನಡೆಯುತ್ತಿದೆ ಎಂಬ ದೂರು ಇಲ್ಲಿನ ಜನರದ್ದು. ಭೂಕುಸಿತ ಸಮಸ್ಯೆಗೆ ನಲುಗಿರುವ ಇಲ್ಲಿನ ಜನರಿಗೆ ಬಂದರು ಯೋಜನೆ ಗುಮ್ಮನಂತೆ ಕಾಡುತ್ತಿದೆ. ಕೇಣಿ ಬಂದರು ಯೋಜನೆ ವ್ಯಾಪ್ತಿಯ ಕೇಣಿ, ಭಾವಿಕೇರಿ, ಅಲಗೇರಿ, ಶಿರಕುಳಿ ಗ್ರಾಮದ ನೂರಾರು ಮೀನುಗಾರ ಮತ್ತು ರೈತ ಕುಟುಂಬಗಳು ನೆಲೆ ಕಳೆದುಕೊಳ್ಳುವ ಆತಂಕದಲ್ಲೇ ದಿನ ಕಳೆಯುತ್ತಿವೆ.

'ಕೇಣಿಯಲ್ಲಿ ಖಾಸಗಿ ಕಂಪನಿಯು ಬಂದರು ನಿರ್ಮಿಸುವ ಯೋಜನೆ ಕೈಗೆತ್ತಿಕೊಳ್ಳುತ್ತಿರುವ ವಿಷಯ ತಿಳಿದ ದಿನದಿಂದಲೇ ಹೋರಾಟ ಆರಂಭಿಸಿದ್ದೇವೆ. ಜೀವನಕ್ಕೆ ಆಧಾರವಾಗಿರುವ ಸಮುದ್ರದಿಂದ ನಮ್ಮನ್ನು ದೂರ ಮಾಡುವುದರ ವಿರುದ್ಧ ನಿರಂತರವಾಗಿ ಪ್ರತಿಭಟಿಸುತ್ತಲೇ ಇದ್ದೇವೆ. ಭೂವೈಜ್ಞಾನಿಕ ಸಮೀಕ್ಷೆ ನಡೆಸಲು ಯತ್ನಿಸಿದಾಗ ಸಮುದ್ರಕ್ಕೆ ಜಿಗಿದು ಪ್ರತಿಭಟಿಸಿದೆವು. ಪೊಲೀಸ್ ಬಲದ ಮೂಲಕ ಹತ್ತಿಕ್ಕಲು ಪ್ರಯತ್ನಿಸಿದಾಗ ಸಮುದ್ರದಲ್ಲೇ ನೂರಾರು ದೋಣಿಗಳಲ್ಲಿ ಸಾಗಿ ಪ್ರತಿಭಟಿಸಿದೆವು. ಜನರು ಕೆಲಸ ಬಿಟ್ಟು ಹೋರಾಟ ನಡೆಸುವುದು ಮಾಮೂಲಿನಂತಾಗಿದೆ' ಎಂದು ಕೇಣಿ ಬಂದರು ಯೋಜನೆ ವಿರೋಧಿ ಹೋರಾಟ ಸಮಿತಿಯ ಪ್ರಧಾನ ಕಾರ್ಯದರ್ಶಿ ಸಂಜೀವ ಬಲೆಗಾರ ಹೇಳುತ್ತಾರೆ.

'ಬಂದರು ನಿರ್ಮಿಸಲು ಸಮುದ್ರ ಪ್ರದೇಶವನ್ನಷ್ಟೇ ಬಳಸುತ್ತೇವೆ ಎಂದು ನಮ್ಮನ್ನು ನಂಬಿಸಲು ಮುಂದಾದರು. ನಂತರ ಸರಕು ದಾಸ್ತಾನಿಗೆ ಉಗ್ರಾಣ ನಿರ್ಮಿಸಲು, ಬಂದರಿಗೆ ರಸ್ತೆ, ರೈಲು ಸಂಪರ್ಕಕ್ಕೆ ಮಾತ್ರ ಜಾಗ ಸ್ವಾಧೀನವಾಗುತ್ತದೆ ಎಂದರು. ಯೋಜನೆಯ ಪರಿಸರ ಪರಿಣಾಮ ಮೌಲ್ಯಮಾಪನ ವರದಿಯಲ್ಲಿ 103 ಗ್ರಾಮಗಳು ಯೋಜನೆ ವ್ಯಾಪ್ತಿಗೆ ಒಳಪಡುತ್ತವೆ ಎಂದಿದ್ದಾರೆ. ಹೀಗೆ ಜನರನ್ನು ದಾರಿ ತಪ್ಪಿಸುವ ಕೆಲಸ ನಡೆಯುತ್ತಿದೆ' ಎಂಬ ಅಸಮಾಧಾನ ಅವರದ್ದು.

'ಬಂದರು ಸ್ಥಾಪನೆಯಾದರೆ ಕೇಣಿ, ಬೇಲೆಕೇರಿ, ಬೆಳಂಬಾರ ಭಾಗದಲ್ಲಿ ಮೀನುಗಾರಿಕೆಯನ್ನೇ ಅವಲಂಬಿಸಿ ಜೀವನ ಸಾಗಿಸುವ 2,000ಕ್ಕೂ ಹೆಚ್ಚು ಕುಟುಂಬಗಳು ಬೀದಿಪಾಲಾಗುತ್ತವೆ. ಮೀನುಗಾರಿಕೆ ನಡೆಸುವ ಸಮುದ್ರ ಪ್ರದೇಶದಲ್ಲಿ ಹಡಗುಗಳ ಸಂಚಾರ ಆರಂಭಗೊಂಡರೆ ಮೀನುಗಾರಿಕೆ ನಿಷೇಧಿಸಲಾಗುತ್ತದೆ. ಹಡಗುಗಳಿಂದ ಹೊರಸೂಸುವ ರಾಸಾಯನಿಕಗಳಿಂದ ಮೀನಿನ ಸಂತತಿ ಕ್ಷೀಣಿಸುತ್ತದೆ. ಈಗಾಗಲೇ ಹಲವು ಯೋಜನೆಗಳಿಂದ ನೆಲೆ ಕಳೆದುಕೊಂಡಿರುವ ಮೀನುಗಾರರಿಗೆ ಜೀವನಕ್ಕೆ ದಾರಿ ಇಲ್ಲದಂತಾಗುತ್ತದೆ' ಎಂಬುದು ಅವರ ಆತಂಕ.

ಏನಿದು ಯೋಜನೆ?: ದೇಶದ ಒಟ್ಟಾರೆ ಸರಕು ಸಾಗಣೆಯಲ್ಲಿ ನವ ಮಂಗಳೂರು ಬಂದರು ಮಂಡಳಿ (ಎನ್‌ಎಂಪಿಬಿ) ನಿರ್ವಹಿಸುವ ಪ್ರಮಾಣ ಶೇ 3ರಷ್ಟು. ಈ ಪ್ರಮಾಣ ಹೆಚ್ಚಿಸಲು ಖಾಸಗಿ ಸಹಭಾಗಿತ್ವದಲ್ಲಿ ಬಂದರು ಯೋಜನೆ ಜಾರಿಗೊಳಿಸಬೇಕು ಎಂಬ ವಾದದೊಂದಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಎರಡು ಬೃಹತ್ ಬಂದರು ಯೋಜನೆ ಜಾರಿಗೆ ತರಲಾಗುತ್ತಿದೆ. ಹೊನ್ನಾವರ ತಾಲ್ಲೂಕಿನ ಟೊಂಕದಲ್ಲಿ ಖಾಸಗಿ ಕಂಪನಿಯು ಜನರ ಪ್ರಬಲ ವಿರೋಧದ ನಡುವೆಯೂ ಬಂದರು ಯೋಜನೆ ಜಾರಿಗೊಳಿಸಲು ಕಾಮಗಾರಿ ಆರಂಭಿಸಿದೆ. ಈಗ ಅಂಕೋಲಾದ ಕೇಣಿಯಲ್ಲಿ ನಿರಂತರ ವಿರೋಧದ ಹೊರತಾಗಿಯೂ ಅಂದಾಜು ₹6,515 ಕೋಟಿ ವೆಚ್ಚದ ಬಂದರು ನಿರ್ಮಾಣಕ್ಕೆ ಕೆಪಿಪಿಎಲ್ ಸಿದ್ಧತೆ ಕೈಗೊಂಡಿದೆ.

ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಆಧಾರದಲ್ಲಿ ಕೇಣಿ ಬಂದರು ಯೋಜನೆ ಕೈಗೊಳ್ಳಲು 2022ರಲ್ಲಿ ರಾಜ್ಯ ಸರ್ಕಾರ ಆದೇಶಿಸಿತ್ತು. 2023ರಲ್ಲಿ ಸರ್ಕಾರದೊಂದಿಗೆ ಕಂಪನಿ ಒಪ್ಪಂದ ಮಾಡಿಕೊಂಡಿದೆ. ಕೇಣಿ ಗ್ರಾಮದ ಕಡಲತೀರದಿಂದ ಅನತಿ ದೂರದಲ್ಲಿ, ಸಮುದ್ರದಲ್ಲೇ 457 ಎಕರೆ ಪ್ರದೇಶದಲ್ಲಿ ಬಂದರು ನಿರ್ಮಿಸುವ ಯೋಜನೆ ಇದು. 309 ಎಕರೆ ಪ್ರದೇಶದಲ್ಲಿ ಸರಕು ಸಂಗ್ರಹಣೆ ಪ್ರದೇಶ, 116 ಎಕರೆಯಲ್ಲಿ ರಸ್ತೆ, ರೈಲು ಮಾರ್ಗ ನಿರ್ಮಾಣ ನಡೆಯಲಿದೆ. ಇಲ್ಲಿಂದ ಅಂಕೋಲಾ ತಾಲ್ಲೂಕಿನ ಬಾಳೆಗುಳಿ ಸಮೀಪ ರಾಷ್ಟ್ರೀಯ ಹೆದ್ದಾರಿ–66ಕ್ಕೆ 4.5 ಕಿ.ಮೀ ಷಟ್ಪಥ ಮಾರ್ಗ, 6.5 ಕಿ.ಮೀ ಉದ್ದದ ರೈಲು ಮಾರ್ಗ ಸ್ಥಾಪನೆ ಯೋಜನೆಯಲ್ಲಿ ಸೇರಿದೆ. ಜೊತೆಗೆ ಕೇಣಿಯಲ್ಲೇ ವಿಶಾಲವಾದ ಸರಕು ದಾಸ್ತಾನು ಉಗ್ರಾಣಗಳನ್ನೂ ನಿರ್ಮಿಸುವುದಾಗಿ ಕೆಪಿಪಿಎಲ್ ಕಂಪನಿ ಹೇಳಿಕೊಂಡಿದೆ.

ಆರಂಭದಲ್ಲಿ ವಾರ್ಷಿಕ ಮೂರು ಕೋಟಿ ಟನ್ (ಎಂಟಿಪಿಎ), ಬಳಿಕ ಹಂತ ಹಂತವಾಗಿ ವಾರ್ಷಿಕವಾಗಿ 9.2 ಕೋಟಿ ಟನ್ ಸರಕು ಸಾಗಣೆ ವಹಿವಾಟು ನಡೆಸಲು ಬಂದರು ಬಳಕೆಯಾಗಲಿದೆ. ಕಲ್ಲಿದ್ದಲು, ಕಚ್ಚಾ ಲೋಹದ ಸೂಕ್ಷ್ಮ ವಸ್ತುಗಳು, ಎಲ್‌ಪಿಜಿ, ಕಚ್ಚಾ ತೈಲದ ಕಾರ್ಗೋಗಳು, ಕಂಟೇನರ್ ಕಾರ್ಗೋಗಳ ಮೂಲಕ ಅಗತ್ಯ ವಸ್ತುಗಳ ಆಮದು, ರಫ್ತು ಚಟುವಟಿಕೆ ನಡೆಯಲಿದೆ ಎಂದು ಕಂಪನಿ ಹೇಳುತ್ತಿದೆ.

'ಬಳ್ಳಾರಿಯಲ್ಲಿ ಬೃಹತ್ ಮಟ್ಟದಲ್ಲಿ ಕೈಗಾರಿಕೆ ಹೊಂದಿರುವ ಜೆಎಸ್‌ಡಬ್ಲ್ಯು ಕಂಪನಿ ಕಚ್ಚಾ ವಸ್ತುಗಳ ಆಮದು, ಸಿದ್ಧವಸ್ತುಗಳ ರಫ್ತು ಚಟುವಟಿಕೆಗೆ ಬಂದರು ಬಳಕೆಯಾಗಲಿದೆ. ಜೊತೆಗೆ ಉತ್ತರ ಕರ್ನಾಟಕ ಭಾಗದಲ್ಲಿನ ಕೈಗಾರಿಕೆಗಳಿಗೆ ಪೂರಕವಾಗಿ ಅಗತ್ಯ ಸರಕು ಪೂರೈಕೆ–ಸಾಗಾಟಕ್ಕೂ ನೆರವಾಗಲಿದೆ. ಈ ಮೂಲಕ ಉತ್ತರ ಕರ್ನಾಟಕ, ಪಶ್ಚಿಮ ಕರ್ನಾಟಕ ಭಾಗದಲ್ಲಿನ ಕೈಗಾರಿಕೋದ್ಯಮಿಗಳು ಸರಕು ಸಾಗಾಟಕ್ಕೆ ಗೋವಾ, ಆಂಧ್ರ ಪ್ರದೇಶದ ಬಂದರುಗಳನ್ನು ಅವಲಂಬಿಸುವದು ತಪ್ಪಲಿದೆ' ಎಂಬುದು ಕೇಣಿ ಪೋರ್ಟ್ ಪ್ರೈವೆಟ್ ಲಿಮಿಟೆಡ್ ಕಂಪನಿಯ (ಕೆಪಿಪಿಎಲ್) ವಾದ.

ಸಿಆರ್‌ಝಡ್ ನಿಯಮ ಉಲ್ಲಂಘನೆಯ ಆರೋಪ: 'ಕೇಣಿ ಬಂದರು ಯೋಜನೆ ಜಾರಿಯಾದಲ್ಲಿ ಕರಾವಳಿ ನಿಯಂತ್ರಣ ವಲಯ (ಸಿಆರ್‌ಝಡ್) ಕಾಯ್ದೆಯ ಸಂಪೂರ್ಣ ಉಲ್ಲಂಘನೆ ಆಗಲಿದೆ. ಯೋಜನೆಗೆ ಸಮುದ್ರದಲ್ಲಿನ 4.44 ಕೋಟಿ ಘನ ಮೀಟರ್‌ಗಳಷ್ಟು ಮಣ್ಣು ತೆಗೆಯಲಾಗುತ್ತದೆ. ಹಡಗುಗಳ ಸಂಚಾರಕ್ಕಾಗಿ ಸಮುದ್ರದಲ್ಲಿ 10 ಕಿ.ಮೀ ದೂರದವರೆಗೆ ಬೃಹತ್ ಯಂತ್ರಗಳ ಮೂಲಕ ಹೂಳೆತ್ತುವ ಕಾಮಗಾರಿ ನಡೆಯಲಿದೆ. ಇದು ಜಲಚರಗಳ ನಾಶಕ್ಕೆ ಕಾರಣವಾಗಲಿದೆ. ಜೊತೆಗೆ ಯೋಜನೆಗೆ ನಿರ್ಮಿಸುವ ಅಲೆ ತಡೆಗೋಡೆಗಳಿಂದ ಕಡಲು ಕೊರೆತದ ಸಮಸ್ಯೆ ಹೆಚ್ಚಲಿದೆ. ಇವೆಲ್ಲವೂ ಸಿಆರ್‌ಝಡ್ ಕಾಯ್ದೆಯ ಉಲ್ಲಂಘನೆ ಆಗಲಿದೆ ಎಂದು ವಿಜ್ಞಾನಿಗಳು ಹೇಳುತ್ತಿದ್ದಾರೆ' ಎಂದು ಉತ್ತರ ಕನ್ನಡ ಜಿಲ್ಲಾ ಪರಿಸರ ಸಂರಕ್ಷಣಾ ಸಮಿತಿ ದೂರಿದೆ.

'ಯೋಜನೆ ವ್ಯಾಪ್ತಿಯ ಪ್ರದೇಶದಲ್ಲಿ ಕಾಂಡ್ಲಾ, ಮರಳುಗುಡ್ಡಗಳು, ಸಸ್ಯ ಮತ್ತು ಜೀವವೈವಿಧ್ಯ ಇಲ್ಲ. ಸಂವೇದನಾಶೀಲ ಪರಿಸರ ವ್ಯವಸ್ಥೆ ಇಲ್ಲದ ಕಾರಣ ಈ ಪ್ರದೇಶವು ಸಿಆರ್‌ಝಡ್‌ನ ಮೊದಲ ಹಂತದ ಪ್ರದೇಶಕ್ಕೆ ಸೇರುವುದಿಲ್ಲ ಎಂದು ಇಐಎ ವರದಿಯಲ್ಲಿ ಉಲ್ಲೇಖಿಸಿರುವುದು ಸಂಶಯಕ್ಕೆ ಎಡೆಮಾಡಿಕೊಟ್ಟಿದೆ' ಎಂದು ಅದು ಹೇಳಿದೆ.

ಇಂದು ಅಹವಾಲು ಸಭೆ

ಕರ್ನಾಟಕವು 343 ಕಿ.ಮೀ ಉದ್ದದ ಕಡಲತೀರ ಹೊಂದಿದ್ದರೂ ನೆರೆ ರಾಜ್ಯಗಳಿಗೆ ಹೋಲಿಸಿದರೆ ಸಮುದ್ರ ಮಾರ್ಗವಾಗಿ ಸರಕು ಸಾಗಣೆ ವಿಷಯದಲ್ಲಿ ಹಿಂದೆ ಬಿದ್ದಿದೆ ಎಂಬ ಕಾರಣ ನೀಡಿ ಕೇಣಿ ಬಂದರು ನಿರ್ಮಿಸಲಾಗುತ್ತಿದೆ. ಒಂದೆಡೆ ಸ್ಥಳೀಯ ಮೀನುಗಾರರು, ರೈತರ ವಿರೋಧ, ಇನ್ನೊಂದೆಡೆ ಪರಿಸರವಾದಿಗಳ ಆಕ್ಷೇಪದ ನಡುವೆಯೇ ಯೋಜನೆ ಕಾರ್ಯಗತಗೊಳಿಸಲಿರುವ ಜೆಎಸ್‌ಡಬ್ಲ್ಯು, ಕೆಪಿಪಿಎಲ್ ಪರಿಸರ ಪರಿಣಾಮ ಮೌಲ್ಯಮಾಪನ ವರದಿ (ಇಐಎ) ಸಿದ್ಧಪಡಿಸಿವೆ. ಅದರ ಆಧಾರದಲ್ಲಿ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು ಶುಕ್ರವಾರ (ಆಗಸ್ಟ್ 22) ಸಾರ್ವಜನಿಕ ಅಹವಾಲು ಆಲಿಕೆ ಸಭೆ ಆಯೋಜಿಸಿದೆ.

'ವಿರೋಧದಿಂದ ಅನ್ಯ ರಾಜ್ಯಕ್ಕೆ ಲಾಭ'

'ಕೇಣಿ ಸರ್ವಋತು ಆಳ ಸಮುದ್ರ ಬಂದರು ಸ್ಥಾಪನೆ ರಾಜ್ಯದ ಅಭಿವೃದ್ಧಿಗೆ ಪೂರಕ ಆಗಲಿದೆ. ಅತಿ ಉದ್ದದ ಕರಾವಳಿ ಪ್ರದೇಶ ಇದ್ದರೂ ಕರ್ನಾಟಕದಲ್ಲಿ ಒಂದೂ ಸರ್ಕಾರಿ–ಖಾಸಗಿ ಸಹಭಾಗಿತ್ವದ ಬಂದರು ಸ್ಥಾಪನೆ ಆಗಿಲ್ಲ. ಗುಜರಾತ್, ಕೇರಳಕ್ಕೆ ಹೋಲಿಸಿದರೆ ನಾವಿನ್ನೂ ಹಿಂದುಳಿದಿದ್ದೇವೆ. ಈಗ ಬಂದರು ಯೋಜನೆಗೆ ವಿರೋಧ ವ್ಯಕ್ತವಾದರೆ ಕಂಪನಿಯು ಅನ್ಯ ರಾಜ್ಯದಲ್ಲಿ ಬಂದರು ನಿರ್ಮಿಸಬಹುದು' ಎನ್ನುತ್ತಾರೆ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಮಂಕಾಳ ವೈದ್ಯ.

'ಬಂದರು ನಿರ್ಮಾಣವಾದರೆ ಕೈಗಾರಿಕೆಗಳಿಗೆ ಪೂರಕ ಕಚ್ಚಾವಸ್ತುಗಳ ಲಭ್ಯತೆ ಸುಲಭವಾಗಲಿದೆ. ಕರಾವಳಿ ಭಾಗದಲ್ಲಷ್ಟೇ ಅಲ್ಲದೆ ರಾಜ್ಯದ ಉಳಿದ ಪ್ರದೇಶಗಳಲ್ಲೂ ಕೈಗಾರಿಕೆಗಳ ಸ್ಥಾಪನೆಗೆ ಉದ್ಯಮಿಗಳು ಮುಂದೆ ಬರಬಹುದು. ಅಷ್ಟಕ್ಕೂ ಮೀನುಗಾರರು, ರೈತರ ಭೂಮಿ ಸ್ವಾಧೀನಪಡಿಸಿಕೊಂಡು ಬಂದರು ಸ್ಥಾಪನೆಗೆ ನೀಡುತ್ತಿಲ್ಲ. ಸಮುದ್ರ ಪ್ರದೇಶದಲ್ಲೇ ಬಂದರು ನಿರ್ಮಿಸುವ ಯೋಜನೆ ಇದು' ಎಂದು ಅವರು ಯೋಜನೆ ಸಮರ್ಥಿಸಿಕೊಳ್ಳುತ್ತಾರೆ.

'ಅಭಿವೃದ್ಧಿ, ಉದ್ಯೋಗ ಸೃಷ್ಟಿಗೆ ಅನುಕೂಲ'

'ಕೇಣಿ ಬಂದರು ಯೋಜನೆಯಿಂದ ಆಮದು–ರಫ್ತು ಚಟುವಟಿಕೆ ನಡೆಯುವುದರ ಮೂಲಕ ಕೇವಲ ಬಂದರು ವ್ಯಾಪ್ತಿಯಲ್ಲಷ್ಟೇ ಅಲ್ಲದೆ ಸುತ್ತಮುತ್ತಲೂ ಕೈಗಾರಿಕೆ ಸ್ಥಾಪನೆಗೆ, ವಾಣಿಜ್ಯ ಚಟುವಟಿಕೆ ವೃದ್ಧಿಗೆ ಅವಕಾಶ ಆಗಲಿದೆ. ಬಂದರು ನಿರ್ಮಾಣದ ವೇಳೆಯಲ್ಲೇ ಕನಿಷ್ಠ 2,000 ಉದ್ಯೋಗ ಸೃಷ್ಟಿಯಾಗಲಿದೆ. ಬಂದರು ನಿರ್ಮಾಣದ ಬಳಿಕ, ನಿರ್ವಹಣೆ ವಿಭಾಗದಲ್ಲಿ 500 ಜನರಿಗೆ ಉದ್ಯೋಗಾವಕಾಶ ಲಭಿಸಲಿದೆ' ಎನ್ನುತ್ತಾರೆ ಕೆಪಿಪಿಎಲ್ ಯೋಜನಾ ನಿರ್ದೇಶಕ ಭರಮಪ್ಪ ಕುಂಟಿಗೇರಿ.

'ಬಂದರು ಯೋಜನೆ ಜಾರಿಯಾದರೆ ಬಂದರಿಗೆ ಸರಕು ಸಾಗಣೆಗೆ ಪೂರಕವಾಗಿ ಹುಬ್ಬಳ್ಳಿ–ಅಂಕೋಲಾ ರೈಲು ಯೋಜನೆ ಕಾರ್ಯಗತಗೊಳಿಸಲಾಗುತ್ತದೆ. ಇದಕ್ಕಾಗಿ ಗರಿಷ್ಠ ಪ್ರಯತ್ನವನ್ನು ನಡೆಸಲಿದೆ. ಯೋಜನೆಗೆ ರಸ್ತೆ, ರೈಲು ಸಂಪರ್ಕಕ್ಕೆ 140 ಎಕರೆಯಷ್ಟು ಜಾಗ ಮಾತ್ರ ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ. ಸುಮಾರು 75 ಮನೆಗಳು ತೆರವುಗೊಳ್ಳಬಹುದು. ಅವುಗಳಿಗೆ ಪರಿಹಾರ ಸಿಗಲಿದೆ. ಜೊತೆಗೆ ಸ್ಥಳೀಯರ ಆರ್ಥಿಕ ಸಬಲೀಕರಣಕ್ಕೆ ವಿವಿಧ ಯೋಜನೆ ಹಮ್ಮಿಕೊಳ್ಳಲಾಗುವುದು. ಉದ್ಯೋಗಾವಕಾಶ ಲಭ್ಯತೆಗೆ ಪೂರಕವಾಗಿ ಕೌಶಲ ತರಬೇತಿ ನೀಡಲಾಗುವುದು' ಎಂದು ಅವರು ಭರವಸೆಯನ್ನೂ ನೀಡುತ್ತಾರೆ.

ಅಂಕಿ ಅಂಶಗಳು

₹6,515 ಕೋಟಿ ಯೋಜನೆಯ ವೆಚ್ಚ

882 ಎಕರೆ ಯೋಜನೆಗೆ ಬಳಕೆಯಾಗುವ ಭೂಮಿ

11.20 ಕಿ.ಮೀ ಹಡಗು ಸಂಚಾರ ಮಾರ್ಗ

4.44 ಕೋಟಿ ಘನ ಮೀಟರ್ ಹೂಳೆತ್ತುವ ಪ್ರಮಾಣ

150 ಯೋಜನೆಗೆ ತೆರವುಗೊಳ್ಳಲಿರುವ ಮನೆಗಳು

116 ಎಕರೆ ಸ್ವಾಧೀನ ಆಗಲಿರುವ ಕೃಷಿಭೂಮಿ

ಮಾಲಿನ್ಯದ ಉಲ್ಲೇಖ

ಕೇಣಿ ಬಂದರು ನಿರ್ಮಾಣದ ಬಳಿಕ ಸರಕು ಸಾಗಣೆ ವೇಳೆ ಈ ಭಾಗದಲ್ಲಿ ಸಮುದ್ರ ಮಾಲಿನ್ಯ ನಡೆಯುವುದು ಸಹಜ ಎಂದು ಯೋಜನೆಗೆ ಸಂಬಂಧಿಸಿದ ಪರಿಸರ ಪರಿಣಾಮ ಮೌಲ್ಯಮಾಪನ ವರದಿಯಲ್ಲಿ (ಇಐಎ) ಉಲ್ಲೇಖಿಸಲಾಗಿದೆ.

'ವಾರ್ಷಿಕವಾಗಿ 3.4 ಕೋಟಿ ಟನ್ ಕಲ್ಲಿದ್ದಲು, 80 ಲಕ್ಷ ಟನ್‌ಗಳಷ್ಟು ಲೈಮ್ ಸ್ಟೋನ್, ಡೋಲೊಮೈಟ್, ಬೆಂಟೋಮೈಟ್‌ಗಳ ಸಾಗಾಟ ನಡೆಯಲಿದೆ. ತಲಾ 30 ಲಕ್ಷ ಟನ್ ಸಿಮೆಂಟ್ ಕ್ಲಿಂಕರ್ ಮತ್ತು ಹಾರುಬೂದಿ, ಬಾಕ್ಸೈಟ್ ಮುಂತಾದ ಅದಿರುಗಳನ್ನು ಸಾಗಿಸಲಾಗುತ್ತದೆ. ಇದಲ್ಲದೇ ದ್ರವರೂಪದ ಸರಕುಗಳು, ಆಹಾರ ಸಾಮಗ್ರಿಗಳೂ ಇದೇ ಬಂದರು ಮೂಲಕ ಆಮದಾಗಲಿವೆ' ಎಂದು ವರದಿಯಲ್ಲಿ ತಿಳಿಸಲಾಗಿದೆ.

ಹಡಗು, ಇತರ ಸರಕು ಸಾಗಣೆ ವಾಹನಗಳಿಂದ ಹೊರಸೂಸುವ ತೈಲ, ಹೊಗೆಗಳಿಂದ ಪರಿಸರದ ಮೇಲೆ ಪರಿಣಾಮ ಬೀರುವುದು ಸಹಜ. ಆದರೆ, ಅವುಗಳನ್ನು ಸಾಧ್ಯವಾದಷ್ಟು ನಿಯಂತ್ರಿಸಲು ಮಾರ್ಗೋಪಾಯಗಳನ್ನು ಕೈಗೊಳ್ಳಲು ಸಲಹೆಗಳನ್ನೂ ವರದಿಯಲ್ಲಿ ನೀಡಲಾಗಿದೆ.

ಕೇಣಿಯಲ್ಲಿ ಸರ್ವಋತು ಆಳ ಸಮುದ್ರ ಗ್ರೀನ್‌ಫೀಲ್ಡ್ ಬಂದರು (ಕೆಂಪು ಬಣ್ಣದಲ್ಲಿ ಗುರುತಿಸಿರುವುದು) ಸ್ಥಾಪನೆಯಾಗಲಿರುವ ಪ್ರದೇಶದ ಗ್ರಾಫಿಕ್ ಚಿತ್ರ.

'ಇಐಎ ವರದಿಯೇ ತಪ್ಪು'

ಅನಂತ ಹೆಗಡೆ

'ಕೇಣಿ ಬಂದರು ಯೋಜನೆಯ ಪರಿಸರ ಪರಿಣಾಮ ಮೌಲ್ಯಮಾಪನ (ಇಐಎ) ವರದಿ ಹಲವು ತಪ್ಪುಗಳಿಂದ ಕೂಡಿದೆ. ಹಲವು ಅಪೂರ್ಣ ಮಾಹಿತಿಗಳಿಂದ ಕೂಡಿದ್ದು ವಿವರವಾದ ಅಧ್ಯಯನ ನಡೆದಿಲ್ಲ. ಕೇವಲ ಮೂರು ತಿಂಗಳಲ್ಲಿ ಪರಿಸರ ಸಮೀಕ್ಷೆ ನಡೆಸುವುದು ಅಸಾಧ್ಯ. ಯೋಜನೆಯಿಂದ ಹಲವು ಕಾಯ್ದೆಗಳ ಉಲ್ಲಂಘನೆ ಆಗುತ್ತಿದೆ. ಬಂದರು ಯೋಜನೆ ಜಾರಿ ಮಾಡುವ ಖಾಸಗಿ ಸಂಸ್ಥೆಯ ಪರವಾಗಿ ಇಐಎ ವರದಿ ನೀಡಲಾಗಿದೆ. ಇದು ನಿಷ್ಪಕ್ಷಪಾತ ವರದಿ ಅಲ್ಲ' ಎಂಬುದು ಜೀವವೈವಿಧ್ಯ ಮಂಡಳಿಯ ಮಾಜಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಸೇರಿದಂತೆ ಹಲವು ಪರಿಸರ ತಜ್ಞರನ್ನು ಒಳಗೊಂಡಿರುವ ಉತ್ತರ ಕನ್ನಡ ಜಿಲ್ಲಾ ಪರಿಸರ ಸಂರಕ್ಷಣಾ ಸಮಿತಿಯ ಆರೋಪ.

'ಸ್ವತಂತ್ರ ವಿಜ್ಞಾನ ಸಂಸ್ಥೆ ಮೂಲಕ ಪರಿಸರ ಅಧ್ಯಯನ ನಡೆಯಬೇಕು. ಈಗ ಸಿದ್ಧಪಡಿಸಲಾದ ವರದಿ ರದ್ದು ಮಾಡಬೇಕು' ಎಂಬ ಒತ್ತಾಯ ಸಮಿತಿಯದ್ದು.

'ಕೇಣಿ ಬಂದರು ಯೋಜನೆಯಿಂದ ಅಪರೂಪದ, ವಿನಾಶದ ಅಂಚಿನ ಜಲಚರ ಸಮುದ್ರ ಹಾಗೂ ಸಮುದ್ರದ ಅಂಚಿನ ಸಸ್ಯ ಸಮೂಹಗಳು ನಾಶವಾಗಲಿವೆ. ಕೇಣಿ ಸಮುದ್ರ ಪ್ರದೇಶ ನೈಸರ್ಗಿಕ ಜೀವ ವೈವಿಧ್ಯತಾಣ ಎಂದು 2020ರಲ್ಲೇ ಜೀವವೈವಿಧ್ಯ ಮಂಡಳಿ ಗುರುತಿಸಿದೆ. ಇಐಎ ವರದಿಗೆ ಮುನ್ನ ಜೀವವೈವಿಧ್ಯ ಮಂಡಳಿಯಿಂದ ತಜ್ಞರ ಅಭಿಪ್ರಾಯ ಪಡೆದಿಲ್ಲ. ಕೇಣಿ ಸಮುದ್ರದ ಒಳಗೆ ಚಾಚಿಕೊಂಡಿರುವ ನಂದಿಬೆಟ್ಟವನ್ನು ಯೋಜನೆ ನೆಲಸಮ ಮಾಡಲಿದೆ. ಇದು ಪವಿತ್ರ ಐತಿಹಾಸಿಕ ಸ್ಥಳ. ಅರಣ್ಯ ಇಲಾಖೆ ಇದಕ್ಕೆ ಒಪ್ಪಿಗೆ ನೀಡಬಾರದು' ಎಂಬುದು ಸಮಿತಿಯ ಒತ್ತಾಯ.

'600 ಪುಟಗಳ ಇಐಎ ವರದಿಯನ್ನು ತಮಿಳುನಾಡಿನ ಅಣ್ಣಾಮಲೈ ವಿಶ್ವವಿದ್ಯಾಲಯ ಸಿದ್ಧಪಡಿಸಿದೆ. ಇಂಗ್ಲಿಷ್‌ನಲ್ಲಿರುವ ವರದಿಯ ಕನ್ನಡ ಸಾರಾಂಶವನ್ನು 48 ಪುಟಕ್ಕೆ ಸೀಮಿತಗೊಳಿಸಿದ್ದು, ಹಲವು ತಪ್ಪುಗಳಿಂದ ಕೂಡಿದೆ. ಇಐಎ ವರದಿಯ ಮೂಲಕ ಸ್ಥಳೀಯರ ದಿಕ್ಕು ತಪ್ಪಿಸುವ ಪ್ರಯತ್ನ ನಡೆದಿದೆ' ಎನ್ನುತ್ತಾರೆ ಕಡಲ ಜೀವವಿಜ್ಞಾನಿ ವಿ.ಎನ್.ನಾಯಕ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ವೃದ್ಧರೊಬ್ಬರು ವೃದ್ಧೆಯೊಬ್ಬರನ್ನು ಮನೆಯಿಂದ ಹೊರಕ್ಕೆ ಎಳೆದುಕೊಂಡು ಬಂದು, ಜೀವಂತವಾಗಿ ಹೂಳಲು ಯತ್ನಿಸುತ್ತಿರುವ ವಿಡಿಯೊ ತುಣುಕೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಈ ಘಟನೆ ಕಾಂಗ್ರೆಸ್ ಆಡಳಿತದಲ್ಲಿರುವ ಕರ್ನಾಟಕದಲ್ಲಿ ನಡೆದಿದೆ. 65 ವರ್ಷದ ಮುಸ್ಲಿಂ ವ್ಯಕ್ತಿ, 42 ವರ್ಷದ ತನ್ನ ತಂಗಿಯನ್ನೇ ಮದುವೆಯಾದ ನಂತರ ತನ್ನ ಅನಾರೋಗ್ಯ ಪೀಡಿತ 62 ವರ್ಷ ವಯಸ್ಸಿನ ಪತ್ನಿಯ ಮೇಲೆ ಹಲ್ಲೆ ನಡೆಸಿದ್ದಲ್ಲದೇ, ಆಕೆಯನ್ನು ಜೀವಂತ ಹೂಳಲು ಯತ್ನಿಸಿದ್ದಾನೆ' ಎಂಬ ಪ್ರತಿಪಾದನೆಯೊಂದಿಗೆ ವಿಡಿಯೊವನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು. ಇದು ಕರ್ನಾಟಕದಲ್ಲಿ ನಡೆದ ಘಟನೆ ಅಲ್ಲ.

ವಿಡಿಯೊ ತುಣುಕಿನ ಕೀಫ್ರೇಮ್ ಅನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಾಟ ನಡೆಸಿದಾಗ, ಬಾಂಗ್ಲಾದೇಶದ ಬಂಗಾಳಿ ಭಾಷೆಯ ದಿನಪತ್ರಿಕೆ 'ಪ್ರೊತೊಮ್ ಅಲೊ'ದಲ್ಲಿ ಪ್ರಕಟವಾದ ವರದಿಯೊಂದು ಸಿಕ್ಕಿತು. ವಿಡಿಯೊದ ಕೀ ಫ್ರೇಮ್‌ನಲ್ಲಿದ್ದ ಚಿತ್ರವು ಪತ್ರಿಕೆಯಲ್ಲಿ ಪ್ರಕಟವಾದ ಚಿತ್ರವನ್ನೇ ಹೋಲುತ್ತಿತ್ತು. ಆಗಸ್ಟ್ 8ರಂದು ಮಹಮ್ಮದ್ ಖಲಿಲೂರ್ ರೆಹಮಾನ್ (80) ಎಂಬವರು ಪತ್ನಿ ಖೊಶೆಡಾ ಬೇಗಂ (70) ಅವರ ಅನಾರೋಗ್ಯದಿಂದ ಬೇಸತ್ತು ಆಕೆಯನ್ನು ಸಜೀವವಾಗಿ ಹೂಳಲು ಯತ್ನಿಸಿದ್ದಾರೆ ಎಂದು ವರದಿಯಲ್ಲಿತ್ತು. ಇನ್ನಷ್ಟು ಹುಡುಕಾಟ ನಡೆಸಿದಾಗ ಇದೇ ಪ್ರಕರಣವನ್ನು ಅಲ್ಲಿನ ಹಲವು ಮಾಧ್ಯಮಗಳು ವರದಿ ಮಾಡಿರುವುದೂ ತಿಳಿದು ಬಂತು. ಇದು ಬಾಂಗ್ಲಾದೇಶದಲ್ಲಿ ನಡೆದ ಘಟನೆಯಾಗಿದ್ದು, ಅದನ್ನು ಕರ್ನಾಟಕದಲ್ಲಿ ನಡೆದಿರುವುದು ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಏನಿದೆ, ಏನಿಲ್ಲ ಎಂಬುದರ ನಡುವೆ...

ನುಡಿ ಬೆಳಗು

ದಯಾ ಗಂಗನಘಟ್ಟ

ಯಜಮಾನ್ತಿ ಗೌರಕ್ಕ ಕೆರೆಯ ದಂಡೆಯಲಿದ್ದ ಹಿಪ್ಪೆ ಮರದ ಬುಡಕ್ಕೆ ಒರಗಿಕೊಂಡು ಮನೆಯ ಬಟ್ಟೆ ತೊಳೆವ ಗಂಗಮ್ಮನನ್ನೇ ನೋಡುತ್ತಾ ಮುಖ ಇಳಿಬಿಟ್ಟು ಕುಳಿತಿದ್ದಳು. ಬಟ್ಟೆ ಒಗೆಯುವಾಗ ತನ್ನ ಜೊತೆ ಬರುತ್ತಿದ್ದ ಗೌರಕ್ಕ ಯಾವತ್ತೂ ಹೀಗೆ ಕುಳಿತವಳಲ್ಲ. ಅವಳು ಅಷ್ಟು ದೊಡ್ಡ ಮನೆಯ ಯಜಮಾನ್ತಿಯಾದರೂ ಮನೆಯ ಹಿರಿಯರ, ಗಂಡಸರ, ಅವರ, ಇವರ ನಿರ್ಬಂಧಗಳೇ ಹೆಚ್ಚಾಗಿದ್ದು ಗಂಡನೂ ಜಮೀನ್ದಾರಿಕೆಯ ದೌಲತ್ತಿನ ಗಂಡಸಾಗಿದ್ದ ಕಾರಣ ಮನೆ ಎಂದರೆ ಉಸಿರುಗಟ್ಟಿದಂತೆ ಅನಿಸುತ್ತಿತ್ತು. ಹೀಗೆ ಕೆಲಸದವರು ಸರಿಯಾಗಿ ಕೆಲಸ ಮಾಡುತ್ತಾರೋ ಇಲ್ಲವೋ ಎಂದು ಮೇಲುಸ್ತುವಾರಿ ಮಾಡುವ ನೆಪ ಇಟ್ಟುಕೊಂಡು ಆಗಾಗ ಹೊಲ, ತೋಟ, ಕೆರೆಯ ಕಡೆಗೆ ಬರುತ್ತಿದ್ದಳು. ಹಾಗೆ ಬಂದ ದಿನವಷ್ಟೇ ಅವಳಿಗೆ ಕಟ್ಟು ಬಿಚ್ಚಿದ ಆಕಳಿನ ಅನುಭವ.

ಅಂಥದ್ದರಲ್ಲಿ ಇವತ್ತು ಗೌರಕ್ಕ ಯಾರ ಜೊತೆಯೂ ತುಟಿ ಎರಡು ಮಾಡಲಿಲ್ಲ. ಏನನ್ನೋ ಕಳೆದುಕೊಂಡವಳಂತೆ, ತನ್ನೊಳಗೇ ಅಳುತ್ತಿರುವವಳಂತೆ ಸೋತವಳಂತೆ ಕುಂತುಬಿಟ್ಟಿದ್ದಳು. ನೋಡುವ ತನಕ ನೋಡಿದ ಗಂಗಮ್ಮ ತಡೆಯಲಾರದೆ, 'ಅಲ್ಲ ಅವ್ವೋರೆ, ನಾನೂ ಅವಾಗಿಂದ ನೋಡ್ತಿದೀನಿ; ಆಕಾಶ ತಲೇಮೇಲೆ ಬಿದ್ದಂಗೆ ಕೂತಿದಿರಲ್ಲ.. ಏನಾಯ್ತು' ಅಂದಳು. ಗೌರಮ್ಮ ತನ್ನ ನೋವನ್ನು ಇವಳ ಬಳಿ ಹೇಳಲೋ ಬೇಡವೋ ಎಂಬ ಗೊಂದಲದಲ್ಲಿ ಸುಮ್ಮನೇ ಕುಳಿತಳು. ಈಗ ಮನಸ್ಸಿಗೆ ಆಗಿರುವ ನೋವನ್ನು ಹೇಳಿಕೊಳ್ಳಬೇಕು. ಆದರೆ ಹೇಳಿಕೊಂಡರೆ ಏನಾಗುತ್ತದೋ, ಅದರ ಪರಿಣಾಮ ಘೋರವಾದರೆ? ಹೀಗೆ ಏನೇನೋ ಯೋಚನೆಗಳ ಗೊಂದಲಕ್ಕೆ ಬಿದ್ದು ಮೌನವನ್ನೇ ತಬ್ಬಿದಳು.

'ಅವ್ವೋರೆ, ಈ ಕೆರೆ ಸುತ್ತಮುತ್ತ ಎಷ್ಟು ತಂಪಾಗಿದೆ ಅಲ್ಲವಾ. ಅಗೋ ನೋಡಿ ಆ ಕೊಕ್ಕರೆಗಳು ಎಷ್ಟು ಚಂದ ಆಡ್ತಾವೆ. ಕೆರೆ ಮಧ್ಯ ಇರೋ ಹೂಗಳ ಬಣ್ಣ ನೋಡಿ ಎಷ್ಟು ಚಂದ' ಅಂದಳು. ಗೌರಮ್ಮ ಮೆಲ್ಲಗೆ ಕತ್ತೆತ್ತಿ ಸುತ್ತಮುತ್ತ ನೋಡಿದಳು. ಸುತ್ತಲಿನ ಹಸಿರು ಭರಿತ ವಾತಾವರಣ, ತಣ್ಣನೆಯ ಗಾಳಿ, ಕೆರೆಯೊಳಗೆ ಪುಳಗುಟ್ಟ ಮೀನು ಇವೆಲ್ಲವನ್ನು ನೋಡುತ್ತಾ ನೋಡುತ್ತಾ ಅವಳ ಮನಸ್ಸು ಸ್ವಲ್ಪ ಸಮಾಧಾನಕ್ಕೆ ಬಂತು. 'ಅವ್ವೋರೆ, ಈ ಜಾಗ ಯಾಕೆ ಇಷ್ಟು ಚೆನ್ನಾಗಿದೆ ಗೊತ್ತಾ ನಿಮಗೆ' ಅಂದಳು ಗಂಗಮ್ಮ. ಅವಳ ಕಡೆ ಯಾಕೆ ಎಂಬಂತೆ ನೋಡಿದಳು ಗೌರಮ್ಮ. 'ತನ್ನ ಸುತ್ತಮುತ್ತ ಇರೋ ಕೊರತೆನ ಈ ಕೆರೆ ತುಂಬುತ್ತೆ ಕಣವ್ವಾ, ಅದಕ್ಕೇ ಈ ಜಾಗ ಹಿಂಗಿದೆ. ಮನುಷ್ಯನ ಮನಸ್ಸು ಈ ಕೆರೆ ಇದ್ದಂಗೆ. ಈ ನೋವು, ದುಃಖ, ಯಾತನೆ, ಅಸೂಯೆ, ಆಸೆ, ಸಮಸ್ಯೆ ಇವೆಲ್ಲಾ ಇಲ್ನೋಡಿ ಈ ಕೆರೇಲಿ ನೀರು ತುಂಬ್ಕೈತಲ್ಲ ಹಂಗೆ ಅವನ ಮನಸ್ಸಿನಲ್ಲಿ ತುಂಬ್ಕಂಡೇ ಇರ್ತವೆ. ಈ ಕೆರೆ ತನ್ನ ಸುತ್ತ ಮುತ್ತ ಇರೋ ಹೊಲ ಗದ್ದೆ ತೋಟ ಎಲ್ಲದಕ್ಕೂ ತನ್ನೊಳಗಿರೋ ನೀರನ್ನು ಹಂಚಿ, ಕುಡಿಸಿ ತಾನು ಖಾಲಿ ಆಯ್ತದೆ. ಹಂಗೆ ಖಾಲಿ ಆದಾಗ್ಲೇ ಅದು ಮತ್ತೆ ತುಂಬಕೆ ಜಾಗ ಸಿಗದು ಅಲ್ವೇನವ್ವಾ, ನೀವೂ ನಿಮ್ಮೊಳಗೆ ಅದೇನು ತುಂಬ್ಕಂಡಿದೀರೋ ಅದನ್ನ ಹೊರಕ್ಹಾಕಿ ಹಗುರಾಗಿಬಿಡಿ. ದೇವರು ನಿಮಗೆ ಏನೆಲ್ಲಾ ಕೊಟ್ಟಿದ್ದಾನೆಯೋ ಅದರ ಬಗ್ಗೆ ಯೋಚಿಸಿ, ಸಾಧ್ಯ ಆದ್ರೆ ಈ ಕೆರೆಯಂಗೆ ನಿಮ್ಮ ಸುತ್ತಮುತ್ತಲಿನವರ ಕಷ್ಟಕ್ಕೆ ಜೊತೆಯಾಗಿ' ಅಂದಳು ಗಂಗಮ್ಮ. ಗಂಗಮ್ಮನ ಮಾತುಗಳು ಗೌರಮ್ಮನ ಮನಸ್ಸನ್ನು ನಿರಾಳಗೊಳಿಸಿದವು.

ನಮ್ಮ ಬಳಿ ಏನಿದೆಯೋ ಅದರ ಬಗ್ಗೆ ನಮಗೆ ಅರಿವು ಮತ್ತು ಗೌರವ ಇರಬೇಕು ಆಗ ಮಾತ್ರ ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವ ಶಕ್ತಿ ನಮಗೆ ದಕ್ಕುತ್ತದೆ. ಅದು ಬಿಟ್ಟು ನಮ್ಮಲ್ಲಿ ಇಲ್ಲದಿದ್ದುದರ ಬಗ್ಗೆ ದುಗುಡಪಡುತ್ತಾ ಕುಳಿತರೆ ನಾವೇ ಹಾಳಾಗುತ್ತೇವೆ. ನಮ್ಮ ಬಳಿ ಇರುವುದು ಏನು... ಅದರ ಸರಿಯಾದ ಬಳಕೆ ಹೇಗೆ ಎಂಬುದನ್ನು ಅರಿತು ನಡೆದರೆ ಸಂತೋಷ ಬೆನ್ನಿಗೆ ಬೀಳುವುದರಲ್ಲಿ ಅನುಮಾನವಿಲ್ಲ. ❖

ಪದಬಂಧ 6142

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಿಡಿ ಹಿಡಿದಿರುವ ವಯ್ಯಾರಿ (5)
4.ವೇದಗಳಿಂದ ಸಂಗ್ರಹಿಸಿದ ಭಾಗ (3)
5.ವ್ಯಾಕರಣದಲ್ಲಿ ಕ್ರಿಯೆಗೆ ನಿಮಿತ್ತವಾಗಿರುವುದು (3)
6.ಕೊನೆಗೆ ಹಿಸ್ಸೆಯಿರುವ ಅಂಚೆ (3)
8.ಆಸ್ಥಾನದಲ್ಲಿರುವ ನೆಲೆ (2)
9.ಗಡಿಬಿಡಿಯಿಂದ ಪ್ರವೇಶಿಸಿರುವ ಎಲ್ಲೆ (2)
10.ದನ, ಕುದುರೆ ಮೊದಲಾದವುಗಳ ಕೊಳಗು (3)
14.ನಕ್ಷತ್ರದ ಹೆಸರೂ ಆಗಿರುವ ಕರಂಡಕ (3)
15.ಅರ್ಧಗೋಳಾಕಾರದ ಗೋಪುರ (3)
16.ಆಕಾಶವನ್ನು ಮುಟ್ಟುವಂಥದ್ದು (5)

ಮೇಲಿಂದ ಕೆಳಕ್ಕೆ

1.ಮಿತದಲ್ಲಿನ ಸ್ಪಂದನ (3)
2.ಚಪ್ಪಾಳೆಯನ್ನು ಹೀಗೆನ್ನಿ (5)
3.ಕಾವು ಇದ್ದಾಗ ಕಾಣಿಸಿದ್ದು ಹೊರಗಿನ ಅಂದ (3)
4.ನೋವು ಹೀಗೆ ಬಂದಿದೆ (3)
7.ಈತ ಸಂಪ್ರದಾಯ ವಿರೋಧಿ (3)
8.ಸ್ಥಿರವಾದುದು ಇದು (3)
9.ಆನೆಯ ನಡಿಗೆ (5)
11.ವೀರಯೋಧ ಇಲ್ಲಿದ್ದಾನೆ (3)
12.ಗಾಣದಿಂದ ಎಣ್ಣೆ ತೆಗೆಯುವವನು (3)
13.ಮುಳ್ಳುಗಳ ನಡುವೆ ಅರಳುವ ಹೂ (3)



6141ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 4.ಮಾರ್ಗದರ್ಶಕ 5.ಸಲಗ 6.ವರಿಸು 8.ಮತ 11.ಲೋಪ 12.ರಥಾಂಗ 13.ಹಗೆ 14.ಸುಮ 16.ಕನಕ 19.ದಸರ 20.ಮದುವಣಿಗ

ಮೇಲಿಂದ ಕೆಳಕ್ಕೆ: 1.ಸಮಾಗಮ 2.ಅಂದಣ 3.ಕಕವ 5.ಸಮಾಲೋಚಕ 7.ಸುಲಿಗೆಗಾರ 9.ತರಳೆ 10.ಹೆಂಗಸು 15ಮದಗಜ 17.ಕಮರಿ 18.ಬೆವರು

ಸುಡೊಕು 6526

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4				1	8	2	
8		9						5
	6					3		7
	8			1			5	
9		3	5	2	8	4		6
	5			3			8	
5		4		8			7	
2	9		1		7	5		4
		6		4			9	

6525 ಸುಡೊಕು

9	2	5	1	8	3	4	7	6
6	8	4	7	2	5	3	1	9
7	3	1	4	6	9	2	5	8
4	7	9	8	1	6	5	3	2
3	6	2	5	4	7	8	9	1
1	5	8	3	9	2	6	4	7
8	9	7	2	5	4	1	6	3
5	1	6	9	3	8	7	2	4
2	4	3	6	7	1	9	8	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

22 ಆಗಸ್ಟ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಚತುರ್ದಶಿ ಗಂ. 11-57 **ನಕ್ಷತ್ರ:** ಆಶ್ಲೇಷ ಗಂ. 24-17 **ಯೋಗ:** ವರಿಯಾನ್ ಗಂ. 14-35 ಕರಣ: ಶಕುನಿ ಗಂ. 11-57 ಸಿಂಹ ಮಾಸದ 05 ನೇ ದಿನ. ಮಳೆ ನಕ್ಷತ್ರ : ಮಘಾ 2 ನೇ ಪಾದ. **ರಾಹುಕಾಲ :** ಬೆಳಿಗ್ಗೆ 10-30 12-00, **ಸೂರ್ಯೋದಯ :** 06-22 **ಸೂರ್ಯಾಸ್ತ :** 06-45, **ಮುಸ್ಲಿಂ ದಿನಾಂಕ :** 27 ಸಫರ್, **ಅದೃಷ್ಟ ಸಂಖ್ಯೆ :** 4, 7

ಮೇಷ: ಹಲವು ದಿನಗಳ ನಂತರ ತಾಯಿಯೊಂದಿಗೆ ಕಳೆದ ಸಮಯ ಮನಸ್ಸಿಗೆ ಮುದ ನೀಡಲಿದೆ. ಮನೆಯಲ್ಲಿನ ಸಣ್ಣ ಮಕ್ಕಳ ಆರೋಗ್ಯದಲ್ಲಿನ ಏರುಪೇರು ಕಳವಳ ತಂದೊಡ್ಡಬಹುದು. ಅವಿವಾಹಿತರಿಗೆ ಕಂಕಣಬಲ ಕೂಡಿಬರಲಿದೆ.

ವೃಷಭ: ಆರ್ಥಿಕ ಸ್ಥಿತಿಯಲ್ಲಿ ಮತ್ತು ಉದ್ಯೋಗದಲ್ಲಿ ಎದುರಾಗುವ ಏರಿಳಿತದ ನಡುವೆ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ ಇದೆ. ಪರಿಸ್ಥಿತಿಯು ಕ್ಷಣಿಕ ಆದ್ದರಿಂದ ಯಾವುದೇ ವಿಚಾರಗಳಿಗೂ ಬೇಸರಪಡುವ ಅವಶ್ಯಕತೆ ಇಲ್ಲ.

ಮಿಥುನ: ಕಾರ್ಮಿಕ ವರ್ಗದವರ ಹೆಚ್ಚಿನ ಬೇಡಿಕೆಗಳು ಈಡೇರಲಿವೆ. ಔದ್ಯೋಗಿಕ ಕ್ಷೇತ್ರದಲ್ಲಿ ತಲೆದೋರುವ ಸಮಸ್ಯೆಗಳು ಕಾರ್ಯ ಕ್ಷಮತೆಯನ್ನು ಬಯಸುವುದು. ಹಣದ ಜೊತೆ ಜನಬಲವೂ ಅವಶ್ಯ.

ಕರ್ಕಾಟಕ: ಹೆಚ್ಚಿನ ಎಲ್ಲಾ ಕೆಲಸಗಳು ಸಿಬ್ಬಂದಿ ವರ್ಗದವರ ಸಹಕಾರದಿಂದ ವ್ಯವಸ್ಥಿತವಾಗಿ ಕೈಗೂಡಲಿದೆ. ಹೋಟೆಲ್ ನಿರ್ವಾಹಕರಿಗೆ ಉತ್ತಮ ದಿನವಾಗಿರುತ್ತದೆ.

ಸಿಂಹ: ಅನಾರೋಗ್ಯದ ಸ್ಥಿತಿಗೆ ವೈದ್ಯಕೀಯ ಮತ್ತು ಧಾರ್ಮಿಕ ಎರಡೂ ಸೇರಿದರೆ ಅನುಕೂಲವಿರುವುದು. ಹೆಚ್ಚಿನ ಪ್ರಯೋಜನವಿರುವುದಿಲ್ಲ. ಹೊಸಬರ ಪರಿಚಯ ವ್ಯವಹಾರಕ್ಕೆ ಅನುಕೂಲವೆನಿಸಲಿದೆ.

ಕನ್ಯಾ: ಅಸೂಯೆ ಪಡುವ ಸಹೋದ್ಯೋಗಿಗಳು ಹಾಗೂ ಮೇಲಧಿಕಾರಿಗಳೊಂದಿಗೆ ಜಾಣ್ಮೆಯಿಂದ ವ್ಯವಹರಿಸಿ. ಬೇಜವಾಬ್ದಾರಿತನದಿಂದ ಉದ್ಯೋಗಕ್ಕೆ ಸಂಬಂಧಿಸಿದಂಥ ಯಂತ್ರಗಳ ಹಾನಿ ಉಂಟಾಗಬಹುದು.

ತುಲಾ: ಜೀವನ ಸುಲಭವಾಗಿ ಸಾಗುವಂಥ ಹೊಂದಾಣಿಕೆಗಳನ್ನು ಮಾಡಿಕೊಳ್ಳುವಿರಿ. ಆಫೀಸಿನ ಕೆಲಸದ ಮೇರೆಗೆ ವಿದೇಶ ಪ್ರಯಾಣ ಮಾಡಬೇಕಾಗಬಹುದು. ಟಿಂಬರ್ ವ್ಯಾಪಾರಿಗಳಿಗೆ ವರಮಾನ ಇರುವುದು.

ವೃಶ್ಚಿಕ: ಮೇಲಧಿಕಾರಿಗಳು ನಿಮ್ಮನ್ನು ಪರೀಕ್ಷಿಸುವ ಕಾರಣವಾಗಿ ಜವಾಬ್ದಾರಿ ನಿಮಗೊಪ್ಪಿಸಲಿದ್ದಾರೆ. ಉತ್ತೀರ್ಣರಾಗುವುದು ಪ್ರಯತ್ನದ ಫಲವಾಗಿರುತ್ತದೆ. ಬಿಳಿ ಬಣ್ಣ ಶುಭ ತರಲಿದೆ.

ಧನು: ವಸ್ತುವನ್ನು ಯಾವುದೇ ಮಧ್ಯವರ್ತಿಗಳ ಸಹಾಯವಿಲ್ಲದೆ ಮಾರಾಟ ಮಾಡುವುದು ಲಾಭದ ಜೊತೆ ಸಂತೋಷ ತರುವುದು. ಸ್ನೇಹ ಸಂಬಂಧಗಳಿಗೆ ಪ್ರಾಮುಖ್ಯತೆ ಸಿಕ್ಕಿ, ಜೀವನ ಭದ್ರವಾಗಿರುತ್ತದೆ.

ಮಕರ: ಸುಖಗಳ ಮೇಲಿನ ಮೋಹವನ್ನು ಬಿಟ್ಟು ಆಂತರಿಕ ಸಂತೋಷ ಹುಡುಕಿ. ಇಷ್ಟು ದಿನದ ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು. ಹತ್ತಿ ವ್ಯಾಪಾರಿಗಳು ಉತ್ತಮ ಗಳಿಕೆಯನ್ನು ನಿರೀಕ್ಷಿಸಬಹುದು.

ಕುಂಭ: ಕಚೇರಿಯಲ್ಲಿನ ಕೆಲಸದ ಒತ್ತಡಗಳಿಗೆ ಇನ್ನೊಬ್ಬರನ್ನು ಹೊಣೆ ಮಾಡಬೇಡಿ. ಕಾರ್ಯಸಾಧನೆಗೆ ಕಳೆದುಕೊಂಡ ಸ್ನೇಹಿತನ ಸಹಾಯ ಅಗತ್ಯವೆನ್ನಿಸುವುದು. ಕೃಷಿ ಪದಾರ್ಥದ ದಲ್ಲಾಳಿಗೆ ನಷ್ಟವಾಗಬಹುದು.

ಮೀನ: ಸಾಹಿತ್ಯಾಸಕ್ತರ ವಲಯದಲ್ಲಿ ಗಂಭೀರ ಚರ್ಚೆ ನಡೆಸಿ ಪಾಂಡಿತ್ಯ ಪ್ರದರ್ಶನ ಆಗಲಿದೆ. ಆರ್ಥಿಕ ಶಕ್ತಿಯನ್ನು ಅರಿತುಕೊಂಡು ಕನಸಿನ ಯೋಜನೆಗಳಿಗೆ ಸ್ಪಷ್ಟ ರೂಪ ನೀಡುವುದು ಸರಿಯಾದ ಮಾರ್ಗ.

ಗುಂಡಣ್ಣ

ಅಡಿಕೆ ಧಾರಣೆ

ಚಿತ್ರದುರ್ಗ	
ಆಪಿ	50919-51329
ಬೆಟ್ಟೆ	30059-304999
ಕೆಂಪುಗೋಟು	21109-51510
ರಾಶಿ	50439-50889

ಶಿವಮೊಗ್ಗ	
ಬೆಟ್ಟೆ	50574-65699
ಗೊರಬಲು	17800-37599
ರಾಶಿ	48099-61699
ಸರಕು	60101-93896

ಸಾಗರ	
ಬಿಳಿಗೋಟು	10199-27199
ಚಾಲಿ	21989-38899
ಕೋಕ	8569-28599
ಕೆಂಪುಗೋಟು	21129-32699
ರಾಶಿ	30299-60570
ಸಿಪ್ಪೆಗೋಟು	8399-19699

ಸಿದ್ದಾಪುರ	
ಬಿಳಿಗೋಟು	24899-31969
ಚಾಲಿ	34609-42209
ಕೋಕ	18319-26399
ಕೆಂಪುಗೋಟು	20689-22219
ರಾಶಿ	44099-50399
ತಟ್ಟಿಬೆಟ್ಟೆ	32619-46869

ಶಿರಸಿ	
ಬೆಟ್ಟೆ	28909-38389
ಬಿಳಿಗೋಟು	24409-34499
ಚಾಲಿ	38099-43609
ಕೆಂಪುಗೋಟು	23199-25099
ರಾಶಿ	44618-50308

ಯಲ್ಲಾಪುರ	
ಬಿಳಿಗೋಟು	17599-33200
ಚಾಲಿ	33600-43211
ಕೋಕ	11009-19799
ಕೆಂಪುಗೋಟು	18899-27369
ರಾಶಿ	41119-58100
ತಟ್ಟಿಬೆಟ್ಟೆ	29716-39169

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,050
ಇಂದಿನ ಅಂತ್ಯ:	25,083
ದಿನದ ಗರಿಷ್ಠ:	25,153
	33

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹540
12 ಕ್ಕೆ	₹72
ಮೈಸೂರು: 100 ಕ್ಕೆ	₹548

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹311-635
ದ್ವಿತಳಿ (ಬಿ.ವಿ)	₹366-788

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹189
ಆರ್‌ಎಸ್‌ಎಸ್-5	₹183
ಗುಡ್ ಲಾಟ್	₹168

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹28000-28000
ತಿಪಟೂರು	₹25500-28500
ತುರುವೇಕೆರೆ	₹25500-26000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿ)	
ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1270 (1290)
ಸೂರ್ಯಕಾಂತಿ (ರಿಫೈನ್ಡ್)	₹1400 (1415)
ಪಾಮೋಲಿನ್	₹1270 (1280)

ತೆರಿಗೆ ಹಂತ ಇಳಿಕೆ ಪ್ರಸ್ತಾವಕ್ಕೆ ಒಪ್ಪಿಗೆ

ಜಿಎಸ್‌ಟಿ ಮಂಡಳಿಯ ಸಚಿವರ ಗುಂಪಿನಿಂದ ಸಭೆ, ವರಮಾನ ನಷ್ಟದ ವಿವರ ಕೇಳಿದ ರಾಜ್ಯಗಳು

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಲ್ಲಿನ ತೆರಿಗೆ ಹಂತಗಳನ್ನು ಕಡಿಮೆ ಮಾಡುವ ಕೇಂದ್ರ ಸರ್ಕಾರದ ಪ್ರಸ್ತಾವಕ್ಕೆ ವಿವಿಧ ರಾಜ್ಯಗಳ ಸಚಿವರ ಗುಂಪು ಗುರುವಾರ ತಾತ್ವಿಕ ಒಪ್ಪಿಗೆ ನೀಡಿದೆ.

ಬಿಜೆಪಿಯನ್ನು ವಿರೋಧಿಸುವ ರಾಜಕೀಯ ಪಕ್ಷಗಳ ನೇತೃತ್ವದ ಸರ್ಕಾರ ಇರುವ ಕೆಲವು ರಾಜ್ಯಗಳು ಈ ಬದಲಾವಣೆಯಿಂದ ಆಗುವ ವರಮಾನ ನಷ್ಟ ಎಷ್ಟು ಹಾಗೂ ಆ ನಷ್ಟವನ್ನು ಹೇಗೆ ಭರ್ತಿ ಮಾಡಿಕೊಳ್ಳುವುದು ಎಂಬ ಪ್ರಶ್ನೆ ಎತ್ತಿವೆ.

ಬಿಹಾರದ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ನೇತೃತ್ವದ ಸಚಿವರ ಗುಂಪು, ಜಿಎಸ್‌ಟಿ ವ್ಯವಸ್ಥೆಯ ಅಡಿ ತೆರಿಗೆ ಹಂತಗಳನ್ನು ಕಡಿಮೆ ಮಾಡುವ ಕೇಂದ್ರದ ಪ್ರಸ್ತಾವದ ಬಗ್ಗೆ ಚರ್ಚಿಸಿತು. ಈಗಿರುವ ನಾಲ್ಕು ಹಂತಗಳ ತೆರಿಗೆ ವ್ಯವಸ್ಥೆಯ ಬದಲು ಎರಡು ಹಂತಗಳ

ತೆರಿಗೆ ವ್ಯವಸ್ಥೆಯನ್ನು ಜಾರಿಗೆ ತರುವುದು ಕೇಂದ್ರದ ಪ್ರಸ್ತಾವ. ಕೆಲವು ವಸ್ತುಗಳ ಮೇಲೆ ಶೇ 40ರಷ್ಟು ತೆರಿಗೆ ನಿಗದಿ ಮಾಡುವ ಪ್ರಸ್ತಾವವೂ ಇದರಲ್ಲಿದೆ.

ಜನಸಾಮಾನ್ಯರಿಗೆ ಪ್ರಯೋಜನ ಆಗುತ್ತದೆ ಎಂದಾದರೆ ತೆರಿಗೆ ಹಂತಗಳನ್ನು ಕಡಿಮೆ ಮಾಡುವುದು ಒಳಿತು ಎಂದು ಸಚಿವರ ಗುಂಪು ಅಭಿಪ್ರಾಯಪಟ್ಟಿತು. ಐಷಾರಾಮಿ ಕಾರುಗಳಂತಹ ಕೆಲವು ಉತ್ಪನ್ನಗಳಿಗೆ ಶೇ 40ರ ವಿಶೇಷ ತೆರಿಗೆ ಮೇಲೆ ಹೆಚ್ಚುವರಿ ಸುಂಕ ವಿಧಿಸಬೇಕು ಎಂದು ಕೆಲವು ಸದಸ್ಯರು ಹೇಳಿದರು.

ಈ ಗುಂಪಿನಲ್ಲಿ ಬಿಹಾರ, ಉತ್ತರ ಪ್ರದೇಶ, ರಾಜಸ್ಥಾನ, ಕರ್ನಾಟಕ, ಕೇರಳ, ಪಶ್ಚಿಮ ಬಂಗಾಳ ರಾಜ್ಯಗಳ ಪ್ರತಿನಿಧಿಗಳು ಇದ್ದಾರೆ. ಈ ಗುಂಪಿನ ಶಿಫಾರಸು ಈಗ ಉನ್ನತ ಅಧಿಕಾರವಿರುವ ಜಿಎಸ್‌ಟಿ ಮಂಡಳಿಯ ಎದುರು ಬರಲಿದೆ. ಜಿಎಸ್‌ಟಿ ಸುಧಾರಣೆಗಳ ಬಗ್ಗೆ ಮಂಡಳಿಯು ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತದೆ.

ಕೇಂದ್ರದ ಪ್ರಸ್ತಾವದಲ್ಲಿ ಜನಸಾಮಾನ್ಯರ ಹಿತ ಇದೆ ಎಂದು ಎಲ್ಲ ರಾಜ್ಯಗಳು ಅದನ್ನು ಒಪ್ಪಿವೆ ಎಂದು ಉತ್ತರ ಪ್ರದೇಶದ ಹಣಕಾಸು ಸಚಿವ ಸುರೇಶ್ ಕುಮಾರ್ ಖನ್ನಾ ಹೇಳಿದ್ದಾರೆ.

ತೆರಿಗೆ ಹಂತಗಳಲ್ಲಿನ ಇಳಿಕೆಯ ಕಾರಣದಿಂದಾಗಿ ಆಗಬಹುದಾದ ವರಮಾನ ನಷ್ಟದ ಬಗ್ಗೆ ಕೇಂದ್ರದ ಪ್ರಸ್ತಾವದಲ್ಲಿ ಮಾಹಿತಿ ಇರಲಿಲ್ಲ ಎಂದು ಪಶ್ಚಿಮ ಬಂಗಾಳದ ಹಣಕಾಸು ಸಚಿವೆ ಚಂದ್ರಿಮಾ ಭಟ್ಟಾಚಾರ್ಯ ಹೇಳಿದ್ದಾರೆ. 'ಜನಪರವಾಗಿ ಇರುವ ಇಂತಹ ಕ್ರಮಗಳಿಗೆ ನಮ್ಮ ಒಪ್ಪಿಗೆ ಇದೆ ಎಂದು ಹೇಳಿದ್ದೇವೆ. ಆದರೆ ಇದರಿಂದಾಗಿ ನಮಗೆ ಆಗುವ ವರಮಾನ ನಷ್ಟ ಎಷ್ಟು ಎಂಬುದು ಕೂಡ ಗೊತ್ತಾಗಬೇಕು ಎಂದಿದ್ದೇವೆ' ಎಂದು ಅವರು ತಿಳಿಸಿದ್ದಾರೆ.

ತೆರಿಗೆ ಹಂತಗಳನ್ನು ತಗ್ಗಿಸುವ ಕ್ರಮವು ರಾಜ್ಯಗಳ ವರಮಾನವನ್ನು ರಕ್ಷಿಸುವ ಸಮತೋಲನದ ಕ್ರಮವನ್ನೂ ಒಳಗೊಳ್ಳಬೇಕು. ಅದಿಲ್ಲದಿದ್ದರೆ ಬಡವರಿಗಾಗಿ, ಮಧ್ಯಮ ವರ್ಗದವರಿಗಾಗಿ ರೂಪಿಸಿದ ಅಭಿವೃದ್ಧಿ ಯೋಜನೆಗಳು ಹಾಗೂ ಮೂಲಸೌಕರ್ಯ ಯೋಜನೆಗಳಿಗೆ ಅಡ್ಡಿ ಆಗುತ್ತದೆ ಎಂದು ತೆಲಂಗಾಣದ ಉಪ ಮುಖ್ಯಮಂತ್ರಿ ಮಲ್ಲು ಭಟ್ಟಿ ವಿಕ್ರಮಾರ್ಕ ಹೇಳಿದ್ದಾರೆ.

ತೆರಿಗೆ ಹಂತ ತಗ್ಗಿಸುವ ಪ್ರಸ್ತಾವವನ್ನು ತೆಲಂಗಾಣ ಬೆಂಬಲಿಸುತ್ತದೆ. ಆದರೆ, ಪರಿಹಾರ ವ್ಯವಸ್ಥೆಯೊಂದು ಸೂಕ್ತ ರೀತಿಯಲ್ಲಿ ಜಾರಿಗೆ ಬರಬೇಕು ಎಂದು ಸರ್ಕಾರ ಹೊರಡಿಸಿರುವ ಹೇಳಿಕೆಯಲ್ಲಿ ತಿಳಿಸಲಾಗಿದೆ.

> **ಜಿಎಸ್‌ಟಿ ಅಡಿಯಲ್ಲಿ ಇರುವ ಶೇ 12 ಹಾಗೂ ಶೇ 28ರ ತೆರಿಗೆ ಹಂತಗಳನ್ನು ಇನ್ನಿಲ್ಲವಾಗಿಸುವ ಕೇಂದ್ರದ ಪ್ರಸ್ತಾವವನ್ನು ಒಪ್ಪಿಕೊಳ್ಳಲಾಗಿದೆ, ನಾವು ನಮ್ಮ ಶಿಫಾರಸು ನೀಡಿದ್ದೇವೆ**
> **ಸಾಮ್ರಾಟ್ ಚೌಧರಿ,** ಬಿಹಾರದ ಉಪ ಮುಖ್ಯಮಂತ್ರಿ

> **ತೆರಿಗೆ ಪ್ರಮಾಣ ಕಡಿಮೆ ಆದ ಬಳಿಕ ರಾಜ್ಯಗಳಿಗೆ ಆಗುವ ವರಮಾನ ನಷ್ಟಕ್ಕೆ ಪರಿಹಾರ ಕೊಡಬೇಕು ಎಂದು ಕೆಲವು ರಾಜ್ಯಗಳು ಬೇಡಿಕೆ ಇರಿಸಿವೆ. ವರಮಾನ ನಷ್ಟ ಎಷ್ಟು ಎಂಬುದನ್ನು ಲೆಕ್ಕಹಾಕಲಾಗುತ್ತದೆ**
> **ಸುರೇಶ್ ಕುಮಾರ್ ಖನ್ನಾ,** ಉತ್ತರ ಪ್ರದೇಶದ ಹಣಕಾಸು ಸಚಿವ

ಆಸ್ತಿ ನಗದೀಕರಣ ₹1.42 ಲಕ್ಷ ಕೋಟಿ

ನವದೆಹಲಿ (ಪಿಟಿಐ): 2024–25ರ ಆರ್ಥಿಕ ವರ್ಷದವರೆಗೆ ವಿವಿಧ ಮಾದರಿಯ ಆಸ್ತಿಗಳ ನಗದೀಕರಣದಿಂದ ₹1.42 ಲಕ್ಷ ಕೋಟಿ ಸಂಗ್ರಹಿಸಲಾಗಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಲೋಕಸಭೆಗೆ ತಿಳಿಸಿದ್ದಾರೆ.


ನಿತಿನ್ ಗಡ್ಕರಿ

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಆಸ್ತಿ ನಗದೀಕರಣದ ಮೂಲಕ ಸಂಗ್ರಹವಾಗುವ ಮೊತ್ತವು ₹30 ಸಾವಿರ ಕೋಟಿ ಆಗುವ ನಿರೀಕ್ಷೆ ಇದೆ ಎಂದು ಲಿಖಿತ ಉತ್ತರದಲ್ಲಿ ಗುರುವಾರ ತಿಳಿಸಿದ್ದಾರೆ.

ರಸ್ತೆ ಅಪಘಾತಗಳಲ್ಲಿ ಗಾಯಗೊಂಡವರಿಗೆ ನಗದು ರಹಿತವಾಗಿ ಚಿಕಿತ್ಸೆ ನೀಡುವ ಯೋಜನೆಯನ್ನು 2024ರ ಮಾರ್ಚ್‌ನಲ್ಲಿ ಆರು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಜಾರಿ ಮಾಡಲಾಗಿತ್ತು. ಅಂದಿನಿಂದ ಪ್ರಸಕ್ತ ವರ್ಷದ ಜುಲೈ 31ರ ವರೆಗೆ ಈ ಯೋಜನೆಯಡಿ 4,971 ರಸ್ತೆ ಅಪಘಾತ ಸಂತ್ರಸ್ತರಿಗೆ ಚಿಕಿತ್ಸೆ ನೀಡಲಾಗಿದೆ ಎಂದು ಪ್ರಶ್ನೆಯೊಂದಕ್ಕೆ ಸಚಿವರು ಉತ್ತರಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

5ನೇ ವರ್ಷದ ಪುಣ್ಯಸ್ಮರಣೆ



ಶ್ರೀ ವೈ. ಮುನಿರಾಜಪ್ಪ (ಜಮೀನ್ದಾರರು)
→ಸಂಸ್ಥಾಪಕ ಅಧ್ಯಕ್ಷರು←
ಅಖಿಲ ಕರ್ನಾಟಕ ವಹ್ನಿಕುಲ ಕ್ಷತ್ರಿಯ ತಿಗಳರ ಜಾಗೃತಿ ಸಂಘ (ರಿ)
ಜನನ: 6–11–1952 ನಿಧನ: 22–8–2020
ಸದಾ ನಿಮ್ಮ ನೆನಪಿನಲ್ಲಿ
ಶ್ರೀಮತಿ ಸಿ.ನಾರಾಯಣಮ್ಮ, ಶ್ರೀಮತಿ ಸಿ.ಜಮುನ
ಶ್ರೀಮತಿ ಆರ್.ಲತಾ ಮತ್ತು ಶ್ರೀ ವೈ.ಎಂ.ಆರ್.ಮಹೇಶ್
ವೈ.ಎಂ.ಆರ್.ಯತೀಶ್, ಹೊರಮಾವು, ಬೆಂಗಳೂರು-43

ರಿಲಯನ್ಸ್ ನಿಂದ ವಿದ್ಯಾರ್ಥಿವೇತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ರಿಲಯನ್ಸ್ ಫೌಂಡೇಷನ್ ಒಟ್ಟು 5,100 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಿದೆ.

ಪ್ರಥಮ ವರ್ಷದ ಪೂರ್ಣಾವಧಿ ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಅಕ್ಟೋಬರ್ 4.

ರಿಲಯನ್ಸ್ ಫೌಂಡೇಷನ್ ಪದವಿ ಮಟ್ಟದಲ್ಲಿ ಐದು ಸಾವಿರ ವಿದ್ಯಾರ್ಥಿಗಳಿಗೆ ಹಾಗೂ ಸ್ನಾತಕೋತ್ತರ ಪದವಿಯ 100 ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿ ವೇತನ ನೀಡುತ್ತಿದೆ. ಪದವಿ ವಿದ್ಯಾರ್ಥಿಗಳಿಗೆ ₹2 ಲಕ್ಷದವರೆಗೆ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ₹6 ಲಕ್ಷದವರೆಗೆ ಇದನ್ನು ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಮತ್ತು ಅರ್ಜಿ ಸಲ್ಲಿಸಲು scholarships.reliancefoundation.orgಗೆ ಭೇಟಿ ನೀಡಬಹುದು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರೊಂದಿಗೆ ಸಂಸದ ಡಾ.ಸಿ.ಎನ್. ಮಂಜುನಾಥ್ ಚರ್ಚಿಸಿದರು

ಕ್ಯಾನ್ಸರ್ ಔಷಧಿಗಳಿಗೆ ಸುಂಕ ವಿನಾಯಿತಿ ಹಣಕಾಸು ಸಚಿವರಿಗೆ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಡವರಿಗೆ ಕೈಗೆಟಕುವ ದರದಲ್ಲಿ ಕ್ಯಾನ್ಸರ್ ಚಿಕಿತ್ಸೆ ಒದಗಿಸಲು ಇಮ್ಯುನೋಥೆರಪಿಗೆ ಬಳಸುವ ಔಷಧಿಗಳು ಹಾಗೂ ರೇಡಿಯೋಥೆರಪಿ ಉಪಕರಣಗಳಿಗೆ ಕಸ್ಟಮ್ಸ್ ಸುಂಕ ವಿನಾಯಿತಿ ನೀಡಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್. ಮಂಜುನಾಥ್ ಮನವಿ ಮಾಡಿದರು.

ಪ್ರಸ್ತುತ ಇಮ್ಯುನೋಥೆರಪಿ ಚಿಕಿತ್ಸೆಗೆ ₹20 ಲಕ್ಷದಿಂದ ₹50 ಲಕ್ಷ ಖರ್ಚಾಗುತ್ತಿದೆ. ಸುಂಕ ವಿನಾಯಿತಿ ನೀಡಿದರೆ ಕ್ಯಾನ್ಸರ್ ಚಿಕಿತ್ಸಾ ವೆಚ್ಚ ಕಡಿಮೆಯಾಗಲಿದೆ. ಇದರಿಂದ ಲಕ್ಷಾಂತರ ರೋಗಿಗಳಿಗೆ ಅನುಕೂಲ ಆಗಲಿದೆ ಎಂಬುದನ್ನು ಅವರು ಸಚಿವರ ಗಮನಕ್ಕೆ ತಂದರು.

ಇಪಿಎಸ್: ಇಬ್ಬರಲ್ಲಿ ಒಬ್ಬರಿಗೆ ₹1,500ಕ್ಕಿಂತ ಕಡಿಮೆ ಪಿಂಚಣಿ

ನವದೆಹಲಿ (ಪಿಟಿಐ): ಉದ್ಯೋಗಿಗಳ ಪಿಂಚಣಿ ಯೋಜನೆ 1995ರ ಅಡಿ (ಇಪಿಎಸ್–95) ಪ್ರತಿ ಇಬ್ಬರು ಪಿಂಚಣಿದಾರರ ಪೈಕಿ ಒಬ್ಬರು ಮಾಸಿಕ ₹1,500ಕ್ಕಿಂತಲೂ ಕಡಿಮೆ ಪಿಂಚಣಿ ಪಡೆಯುತ್ತಿದ್ದಾರೆ ಎಂದು ಕೇಂದ್ರ ಸರ್ಕಾರ ರಾಜ್ಯಸಭೆಗೆ ಗುರುವಾರ ತಿಳಿಸಿದೆ.

ಈ ವರ್ಷದ ಮಾರ್ಚ್ 31ರ ವೇಳೆಗೆ ಇಪಿಎಸ್–95 ಯೋಜನೆಯಲ್ಲಿ ಒಟ್ಟು 81,48,490 ಪಿಂಚಣಿದಾರರು ಇದ್ದಾರೆ. ಈ ಪೈಕಿ 49,15,416 ಪಿಂಚಣಿದಾರರು ₹1,500ಕ್ಕಿಂತ ಕಡಿಮೆ ಪಿಂಚಣಿ ಪಡೆಯುತ್ತಿದ್ದಾರೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆಯ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದ್ದಾರೆ.

ಶೋಭಾ ಕರಂದ್ಲಾಜೆ

53,541 ಪಿಂಚಣಿದಾರರಿಗೆ ಮಾತ್ರ ಮಾಸಿಕ ₹6 ಸಾವಿರಕ್ಕಿಂತ ಹೆಚ್ಚಿನ ಪಿಂಚಣಿ ದೊರೆಯುತ್ತಿದೆ. ಇವರ ಪ್ರಮಾಣವು ಒಟ್ಟು ಪಿಂಚಣಿದಾರರಲ್ಲಿ ಶೇ 0.65ರಷ್ಟಿದೆ. 78,69,560 ಪಿಂಚಣಿದಾರರು ₹4 ಸಾವಿರಕ್ಕಿಂತಲೂ ಕಡಿಮೆ ಪಿಂಚಣಿ ಸ್ವೀಕರಿಸಿದ್ದಾರೆ. ಪ್ರಸ್ತುತ ಈ ಯೋಜನೆಯಡಿ ಮಾಸಿಕ ಕನಿಷ್ಠ ಪಿಂಚಣಿ ₹1 ಸಾವಿರ ಆಗಿದೆ.

2022–23ರ ಆರ್ಥಿಕ ವರ್ಷದಲ್ಲಿ ₹22,112 ಕೋಟಿ ಪಿಂಚಣಿ ವಿತರಿಸಲಾಗಿತ್ತು. 2023–24ರಲ್ಲಿ ಇದು ₹23,027 ಕೋಟಿಗೆ ಏರಿಕೆಯಾಗಿದೆ ಎಂದು ತಿಳಿಸಿದ್ದಾರೆ.

ಬೆಳ್ಳಿ ದರ ಕೆ.ಜಿಗೆ ₹1,500 ಏರಿಕೆ

ನವದೆಹಲಿ/ಮುಂಬೈ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹600 ಹೆಚ್ಚಳವಾಗಿ, ₹1,00,620ರಂತೆ ಮಾರಾಟವಾಗಿದೆ. ಆಭರಣ ಚಿನ್ನದ ಬೆಲೆಯು (ಶೇ 99.5 ಪರಿಶುದ್ಧತೆ) ₹500 ಏರಿಕೆಯಾಗಿ, ₹1,00,200 ಆಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹1,500 ಹೆಚ್ಚಳವಾಗಿ, ₹1,14,000ಕ್ಕೆ ಮುಟ್ಟಿದೆ.

ದಾಸ್ತಾನುಗಾರರಿಂದ ಖರೀದಿ ಪ್ರಮಾಣ ಹೆಚ್ಚಳವಾಗಿದೆ. ಹೀಗಾಗಿ ಹಳದಿ ಲೋಹದ ದರ ಏರಿಕೆಯಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಅಮೆರಿಕದ ಫೆಡರಲ್ ರಿಸರ್ವ್‌ನ ಸ್ವಾತಂತ್ರ್ಯದ ಬಗ್ಗೆ ಕಳವಳ ವ್ಯಕ್ತಪಡಿಸಿದ ಬ್ಯಾಂಕ್‌ನ ಗವರ್ನರ್ ಒಬ್ಬರಿಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರಾಜೀನಾಮೆ ನೀಡುವಂತೆ ಹೇಳಿದ್ದಾರೆ. ಇದರಿಂದ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಚಿನ್ನದ ಮೇಲೆ ಹಣ ತೊಡಗಿಸಲು ಮುಂದಾಗಿದ್ದರಿಂದ ಹಳದಿ ಲೋಹದ ದರವು ಏರಿಕೆಯಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಡಾಲರ್ ಮೌಲ್ಯವು ಇಳಿಕೆಯಾಗುತ್ತಿದೆ. ಇದು ಸಹ ಚಿನ್ನದ ದರ ಏರಿಕೆಗೆ ಕಾರಣವಾಗಿದೆ ಎಂದು ಹೇಳಿದ್ದಾರೆ.

ಸೂಚ್ಯಂಕ ಏರಿಕೆ: ಐಸಿಐಸಿಐ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್‌ನ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರು ಪೇಟೆ ಸೂಚ್ಯಂಕಗಳು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 142 ಅಂಶ ಏರಿಕೆಯಾಗಿ, 82 ಸಾವಿರಕ್ಕೆ ವಹಿವಾಟು ಕೊನೆಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 33 ಅಂಶ ಹೆಚ್ಚಳವಾಗಿ, 25,083ಕ್ಕೆ ಅಂತ್ಯಗೊಂಡಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Drivers

ಅನುಭವವುಳ್ಳ ವಾಹನ_ಚಾಲಕರು ಬೇಕಾಗಿದ್ದಾರೆ. Heavy vehicle ಲೈಸನ್ಸ್ ಹೊಂದಿರಬೇಕು. ಸಂಪರ್ಕಿಸಿ: ಗಾಯತ್ರಿ ಅಸೋಸಿಯೆಟ್ಸ್, ಬೈರತಿ, ಬೆಂಗಳೂರು_560077. 8453353646/ 6362872796/ 9448488536.

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಬೆಂಗಳೂರಿನಲ್ಲಿ ಆಫೀಸ್ ಅಟೆಂಡರ್‌ಗಳು / ಪ್ಯೂನ್‌ಗಳು, ಎಲೆಕ್ಟ್ರಿಷಿಯನ್‌ಗಳು, ಪ್ಲಂಬರ್‌ಗಳು ಮತ್ತು ಸೆಕ್ಯುರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ: 8277193108.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಕರ್ನಾಟಕದಾದ್ಯಂತ ಕಂಪನಿಗಳಿಗೆ work from Home ಕೆಲಸಕ್ಕೆ ಯುವಕ & ಯುವತಿಯರು ಬೇಕಾಗಿದ್ದಾರೆ. (17,900-25,000) 7th,10th, Any Degree. Ph:9019427194

ಕಂಪನಿಗಳಿಗೆ ಬೇಕಾಗಿದ್ದಾರೆ ಟಯೋಟಾ, TVS, ಹಿಮಾಲಯ ಬ್ರಿಟಾನಿಯಾಗಳಿಗೆ SSLC, PUC, DegreeITI Degree, Diploma ಆದವರು 18K/86K (ವಿದ್ಯಾರ್ಹತೆಯಿಲ್ಲದವರಿಗೂ ವಸತಿಯೂಟವಿದೆ) 8317415401/ 7625020184

ಹುಬ್ಬಳ್ಳಿಯಲ್ಲಿ ಮನೆ ಕೆಲಸಗಾರ್ತಿ ಬೇಕಾಗಿದ್ದಾರೆ. ಮಾಸಿಕ ವೇತನ: ರೂ18,000. ಹೆಚ್ಚಿನ ವಿವರಗಳಿಗೆ ಭೇಟಿನೀಡಿ: www.hubballijob.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಹೀರೊ ಗ್ಲಾಮರ್ ಎಕ್ಸ್ 125 ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಚಕ್ರ ವಾಹನಗಳ ತಯಾರಿಕಾ ಕಂಪನಿ ಹೀರೊ ಮೋಟೊಕಾರ್ಪ್ 125 ಸಿಸಿ ಸಾಮರ್ಥ್ಯದ 'ಗ್ಲಾಮರ್ ಎಕ್ಸ್' ದ್ವಿಚಕ್ರ ವಾಹನ ಬಿಡುಗಡೆ ಮಾಡಿದೆ.

ಈ ದ್ವಿಚಕ್ರ ವಾಹನ ಎರಡು ಮಾದರಿಗಳಲ್ಲಿ ಲಭ್ಯವಿದೆ. ಡ್ರಮ್ ಮತ್ತು ಡಿಸ್ಕ್ ಬ್ರೇಕ್ ಆವೃತ್ತಿಗಳ ದೆಹಲಿಯ ಎಕ್ಸ್ ಷೋರೂಂ ದರ ಕ್ರಮವಾಗಿ ₹89,999 ಮತ್ತು ₹99,999 ಆಗಿದೆ. ಕಂಪನಿಯ ಎಲ್ಲಾ ಡೀಲರ್‌ಗಳ ಬಳಿ ವಾಹನ ಲಭ್ಯವಿದೆ. ಇಂಧನ ಟ್ಯಾಂಕ್ ಸಾಮರ್ಥ್ಯ 10 ಲೀಟರ್ ಆಗಿದೆ ಎಂದು ಕಂಪನಿ ತಿಳಿಸಿದೆ.

ಈ ದ್ವಿಚಕ್ರ ವಾಹನವು ಹೊಸ ವಿನ್ಯಾಸ, ಸುಧಾರಿತ ತಂತ್ರಜ್ಞಾನ ಹೊಂದಿದ್ದು, ಉತ್ತಮ ಕಾರ್ಯದಕ್ಷತೆಯನ್ನು ಹೊಂದಿದೆ. ತುರ್ತು ಸಂದರ್ಭಗಳಲ್ಲಿ ನಿಲ್ಲಿಸಲು ಸುರಕ್ಷತೆಯ ದೃಷ್ಟಿಯಿಂದ ಪ್ಯಾನಿಕ್ ಬ್ರೇಕ್ ಅಲರ್ಟ್ ವ್ಯವಸ್ಥೆ ಅಳವಡಿಸಲಾಗಿದೆ ಎಂದು ತಿಳಿಸಿದೆ.

ಉಕ್ರೇನ್ ಮೇಲೆ ರಷ್ಯಾ ದಾಳಿ

ಕೀವ್(ಎಪಿ): ರಷ್ಯಾ ಪಡೆಗಳು 574 ಡ್ರೋನ್ ಹಾಗೂ 40 ಕ್ಷಿಪಣಿಗಳನ್ನು ಬಳಸಿ ಉಕ್ರೇನ್ ಮೇಲೆ ಬುಧವಾರ ರಾತ್ರಿ ಭಾರಿ ದಾಳಿ ನಡೆಸಿದೆ. ಈ ವರ್ಷ ದೇಶದ ಮೇಲೆ ರಷ್ಯಾ ನಡೆಸಿದ ಅತಿ ದೊಡ್ಡ ವೈಮಾನಿಕ ದಾಳಿ ಇದಾಗಿದೆ ಎಂದು ಉಕ್ರೇನ್ ವಾಯುಪಡೆ ಗುರುವಾರ ಹೇಳಿದೆ.

ಉಕ್ರೇನ್‌ನ ಪಶ್ಚಿಮ ಭಾಗಗಳನ್ನು ಗುರಿಯಾಗಿಸಿ ದಾಳಿಗಳನ್ನು ನಡೆಸಲಾಗಿದೆ. ಉಕ್ರೇನ್‌ಗೆ ಪಶ್ಚಿಮದ ಮಿತ್ರ ರಾಷ್ಟ್ರಗಳು ಒದಗಿಸಿದ್ದ ಸೇನಾ ನೆರವು ಗುರಿಯಾಗಿಸಿ ದಾಳಿ ನಡೆಸಲಾಗಿದ್ದು, ಕನಿಷ್ಠ ಒಬ್ಬ ವ್ಯಕ್ತಿ ಮೃತಪಟ್ಟು ಇತರ 15 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ದಾಳಿಯನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಖಂಡಿಸಿದ್ದಾರೆ.

ಡ್ರೋನ್‌ಗಳ ಬಳಕೆ ವಿಚಾರದಲ್ಲಿ ಇದು ಈ ವರ್ಷ ನಡೆದಿರುವ ಮೂರನೇ ಅತಿದೊಡ್ಡ ವೈಮಾನಿಕ ದಾಳಿಯಾಗಿದೆ. ಕ್ಷಿಪಣಿಗಳ ಸಂಖ್ಯೆ ದೃಷ್ಟಿಯಿಂದ ಇದು 8ನೇ ದೊಡ್ಡ ದಾಳಿಯಾಗಿದೆ ಎಂದೂ ಹೇಳಿದ್ದಾರೆ.

'ಡ್ರೋನ್ ತಯಾರಿಕಾ ಕಾರ್ಖಾನೆಗಳು, ಸಂಗ್ರಹಾಗಾರಗಳು, ಕ್ಷಿಪಣಿ ಉಡ್ಡಯನ ನೆಲೆಗಳು ಹಾಗೂ ಯೋಧರು ಸೇರುವ ಜಾಗಗಳನ್ನು ಗುರಿಯಾಗಿಸಿ ದಾಳಿ ಮಾಡಲಾಗಿದೆ' ಎಂದು ರಷ್ಯಾ ರಕ್ಷಣಾ ಸಚಿವಾಲಯ ತಿಳಿಸಿದೆ.

ಉಕ್ರೇನ್ ಮೇಲೆ ರಷ್ಯಾ ಪಡೆಗಳು ವೈಮಾನಿಕ ದಾಳಿ ನಡೆಸಿದ್ದರಿಂದ ಜನರು ಕೀವ್ ನಗರದ ಮೆಟ್ರೊ ನಿಲ್ದಾಣದಲ್ಲಿ ಗುರುವಾರ ಆಶ್ರಯ ಪಡೆದಿದ್ದರು ಎಎಫ್‌ಪಿ ಚಿತ್ರ

ಅಮೆರಿಕದ ಎಲೆಕ್ಟ್ರಾನಿಕ್ಸ್ ಘಟಕವೊಂದರ ಮೇಲೂ ರಷ್ಯಾ ಪಡೆಗಳು ದಾಳಿ ನಡೆಸಿವೆ.

ಪಾಕ್: ವಾಂಗ್, ಇಶಾಕ್ ಸಮಾಲೋಚನೆ

ಇಸ್ಲಾಮಾಬಾದ್(ಪಿಟಿಐ): ವಿದೇಶಾಂಗ ಸಚಿವ ಇಶಾಕ್ ಡಾರ್ ಅವರು ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಅವರನ್ನು ಗುರುವಾರ ಭೇಟಿ ಮಾಡಿ, ದ್ವಿಪಕ್ಷೀಯ ಒಪ್ಪಂದಗಳ ಕುರಿತು ವ್ಯಾಪಕ ಸಮಾಲೋಚನೆ ನಡೆಸಿದ್ದಾರೆ.

'ವಾಂಗ್ ಯಿ ಅವರೊಂದಿಗೆ ನಡೆದ ಮಾತುಕತೆ ವೇಳೆ, ಪ್ರಾದೇಶಿಕ ಮತ್ತು ಜಾಗತಿಕವಾಗಿ ಮಹತ್ವದ ವಿಷಯಗಳ ಕುರಿತು ಚರ್ಚೆ ನಡೆಯಿತು. ಎರಡೂ ದೇಶಗಳ ಹಿತಾಸಕ್ತಿ ಒಳಗೊಂಡ ವಿಚಾರಗಳ ಬಗ್ಗೆಯೂ ನಡೆದ ಮಾತುಕತೆ ಫಲಪ್ರದವಾಗಿತ್ತು' ಎಂದು ಸಭೆ ಬಳಿಕ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಡಾರ್ ಹೇಳಿದರು.

'ಚೀನಾ–ಪಾಕಿಸ್ತಾನ ಆರ್ಥಿಕ ಕಾರಿಡಾರ್ (ಸಿಪಿಇಸಿ) 2.0', ವ್ಯಾಪಾರ, ಆರ್ಥಿಕ ಸಂಬಂಧಗಳು ಹಾಗೂ ಸಹಕಾರ ವೃದ್ಧಿ ಸೇರಿ ಹಲವು ವಿಚಾರಗಳ ಬಗ್ಗೆ ಉಭಯ ನಾಯಕರು ದೀರ್ಘ ಸಮಾಲೋಚನೆ ನಡೆಸಿದ್ದಾರೆ' ಎಂದು ವಿದೇಶಾಂಗ ಕಚೇರಿ ಹೇಳಿದೆ.

ಭೇಟಿ: ಇದಕ್ಕೂ ಮುನ್ನ, ವಾಂಗ್ ಯಿ ಅವರು ಪಾಕಿಸ್ತಾನ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಹಾಗೂ ಪ್ರಧಾನಿ ಶಹಬಾಜ್ ಶರೀಫ್ ಅವರನ್ನು ಭೇಟಿ ಮಾಡಿ, ಮಾತುಕತೆ ನಡೆಸಿದರು.

ಅಫ್ಗಾನಿಸ್ತಾನ ರಾಜಧಾನಿ ಕಾಬೂಲ್‌ನಲ್ಲಿ ನಡೆದ ತ್ರಿಪಕ್ಷೀಯ ಸಭೆಯಲ್ಲಿ ಪಾಲ್ಗೊಂಡ ಬಳಿಕ, ಬುಧವಾರ ರಾತ್ರಿ ವಾಂಗ್ ಅವರು ಇಸ್ಲಾಮಾಬಾದ್‌ಗೆ ಬಂದಿಳಿದರು.

ಮುಂಬೈ ಧಾರಣೆ (ಶೇಂಗಾ)
21-08-2025

ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7400-7500
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1390 (1390)
ಒಂದು ವಾರದ ಡೆಲಿವರಿ	1385 (1385)
ಪಾಮ್ ವಾರದ ಡೆಲಿವರಿ	1268 (1278)
ಸೂರ್ಯಕಾಂತಿ ಎಣ್ಣೆ ಕಚ್ಚಾ	1330 (1335)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	99,000 (98,900)
ಬೆಳ್ಳಿ ಕೆ.ಜಿಗೆ	1,13,400 (1,12,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕದನ ವಿರಾಮ: ರಷ್ಯಾ ವಿದೇಶಾಂಗ ಸಚಿವ ಲಾವ್ರೋವ್ ಪ್ರಶ್ನೆ

'ಝೆಲೆನ್‌ಸ್ಕಿಗೆ ಯಾವ ಅಧಿಕಾರ ಇದೆ?'

ಮಾಸ್ಕೊ(ರಾಯಿಟರ್ಸ್/ಎಎಫ್‌ಪಿ): 'ಕದನ ವಿರಾಮ ಕುರಿತು ಚರ್ಚಿಸಲು ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರನ್ನು ಭೇಟಿ ಮಾಡಲು ಸಿದ್ಧರಿದ್ದಾರೆ. ಇದಕ್ಕೂ ಮುನ್ನ ಕೆಲವು ಪ್ರಮುಖ ವಿಚಾರಗಳ ಕುರಿತು ಸ್ಪಷ್ಟತೆ ಅಗತ್ಯ ಇದೆ' ಎಂದು ರಷ್ಯಾ ವಿದೇಶಾಂಗ ಸಚಿವ ಸೆರ್ಗೆ ಲಾವ್ರೋವ್ ಗುರುವಾರ ಹೇಳಿದ್ದಾರೆ.

'ಒಂದು ವೇಳೆ ಉಕ್ರೇನ್ ಮತ್ತು ರಷ್ಯಾ ನಡುವೆ ಕದನ ವಿರಾಮ ಕುರಿತು ಒಪ್ಪಂದ ಏರ್ಪಟ್ಟಲ್ಲಿ, ಅದಕ್ಕೆ ಸಹಿ ಹಾಕುವುದಕ್ಕೆ ಝೆಲೆನ್‌ಸ್ಕಿ ಅವರಿಗೆ ಯಾವ ಅಧಿಕಾರ ಇದೆ? ಇದು ಸೇರಿದಂತೆ ಹಲವು ವಿಚಾರಗಳ ಕುರಿತು ಉನ್ನತ ಮಟ್ಟದಲ್ಲಿ ಚರ್ಚೆ ನಡೆಯಬೇಕು. ಆ ನಂತರ, ತಜ್ಞರು ಮತ್ತು ಸಚಿವರು ಸೂಕ್ತ ಶಿಫಾರಸುಗಳನ್ನು ಸಿದ್ಧಪಡಿಸಬೇಕು' ಎಂದು ಲಾವ್ರೋವ್ ಹೇಳಿದರು.

'ಝೆಲೆನ್‌ಸ್ಕಿ ಅವರ ಅಧಿಕಾರಾವಧಿ ಕಳೆದ ವರ್ಷ ಮೇನಲ್ಲಿ ಮುಗಿಯಲಿತ್ತು. ಯುದ್ಧ ನಡೆಯುತ್ತಿರುವ ಕಾರಣ, ಉಕ್ರೇನ್‌ನಲ್ಲಿ ಅಧ್ಯಕ್ಷೀಯ ಚುನಾವಣೆ ಇನ್ನೂ ನಡೆದಿಲ್ಲ. ಝೆಲೆನ್‌ಸ್ಕಿಯವರೇ ನ್ಯಾಯಸಮ್ಮತ ಅಧ್ಯಕ್ಷ ಎಂದು ಉಕ್ರೇನ್ ಹೇಳುತ್ತಿದೆ. ಆದರೆ, ಝೆಲೆನ್‌ಸ್ಕಿ ಅಧ್ಯಕ್ಷರಾಗಿ ಮುಂದುವರಿಯುತ್ತಿರುವುದು ಕಾನೂನುಬದ್ಧವೇ ಎಂಬ ಶಂಕೆಯನ್ನು ಪುಟಿನ್ ಹಲವು ಬಾರಿ ವ್ಯಕ್ತಪಡಿಸುತ್ತಿದ್ದಾರೆ' ಎಂದು ಲಾವ್ರೋವ್ ಹೇಳಿದರು.

'ಒಂದು ವೇಳೆ, ಕದನ ವಿರಾಮ ಒಪ್ಪಂದಕ್ಕೆ ಝೆಲೆನ್‌ಸ್ಕಿ ಸಹಿ ಹಾಕುತ್ತಾರೆ ಎಂದುಕೊಳ್ಳೋಣ. ಇವರ ಅವಧಿ ಮುಗಿದ ನಂತರ ಉಕ್ರೇನ್‌ನ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವ ನಾಯಕ, ಒಪ್ಪಂದಕ್ಕೆ ಝೆಲೆನ್‌ಸ್ಕಿ ಸಹಿ ಹಾಕಿದ್ದನ್ನು ಪ್ರಶ್ನಿಸಬಹುದು. ತಾಂತ್ರಿಕವಾಗಿ ನೋಡುವುದಾದರೆ, ಝೆಲೆನ್‌ಸ್ಕಿ ಅವರ ಅವಧಿ ಮುಗಿದಿದೆ ಅಲ್ಲವೇ' ಎಂದು ರಷ್ಯಾ ಅಧಿಕಾರಿಗಳು ಪ್ರಶ್ನಿಸಿದ್ದಾರೆ.

ಉಕ್ರೇನ್ ವಿರುದ್ಧ ರಷ್ಯಾ ನಡೆಸುತ್ತಿರುವ ಯುದ್ಧವನ್ನು ಕೊನೆಗಾಣಿಸುವ ಉದ್ದೇಶದಿಂದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪುಟಿನ್ ಅವರೊಂದಿಗೆ ಸೋಮವಾರ ನಡೆಸಿದ ಸಭೆ ಹಾಗೂ ನಂತರ ನಡೆದ ಬೆಳವಣಿಗೆಗಳ ಕಾರಣಗಳಿಂದಾಗಿ, ಲಾವ್ರೋವ್ ಅವರ ಈ ಹೇಳಿಕೆಗೆ ಮಹತ್ವ ಬಂದಿದೆ.

> **2022ರಲ್ಲಿ ಉಕ್ರೇನ್ ಮತ್ತು ರಷ್ಯಾ ನಡುವೆ ನಡೆದಿದ್ದ ಮಾತುಕತೆ ಆಧಾರದಲ್ಲಿ ಭದ್ರತಾ ಖಾತ್ರಿ ಕಂಡುಕೊಳ್ಳುವುದು ಉಕ್ರೇನ್ ಪಾಲಿಗೆ ಅತ್ಯುತ್ತಮ ಆಯ್ಕೆಯಾಗಿದೆ**
> **ಸೆರ್ಗೆ ಲಾವ್ರೋವ್** ರಷ್ಯಾ ವಿದೇಶಾಂಗ ಸಚಿವ

'ಉಕ್ರೇನ್‌ಗೆ ಶಾಶ್ವತ ಶಾಂತಿ ಬೇಕಾಗಿಲ್ಲ'

'ಶಾಶ್ವತವಾಗಿ ಶಾಂತಿ ನೆಲಸುವಂತಹ ಒಪ್ಪಂದದ ಬಗ್ಗೆ ಉಕ್ರೇನ್‌ಗೆ ಆಸಕ್ತಿ ಇಲ್ಲ. ಅದು, ರಷ್ಯಾದ ಬೇಡಿಕೆಗಳಿಗೆ ಹೊಂದಾಣಿಕೆಯಾಗದಂತಹ ಭದ್ರತಾ ಖಾತ್ರಿಯನ್ನು ಬಯಸುತ್ತದೆ' ಎಂದು ಲಾವ್ರೋವ್ ಹೇಳಿದರು.

'ಉಭಯ ದೇಶಗಳ ನಡುವಿನ ಪ್ರಸ್ತುತ ಸನ್ನಿವೇಶಗಳ ಕುರಿತು ಉಕ್ರೇನ್ ಸರ್ಕಾರ ಹಾಗೂ ಅದರ ಪ್ರತಿನಿಧಿಗಳು ನೀಡುತ್ತಿರುವ ಹೇಳಿಕೆಗಳು ಈ ಮಾತಿಗೆ ಪುಷ್ಟಿ ನೀಡುವಂತಿವೆ' ಎಂದಿದ್ದಾರೆ.

ಉಕ್ರೇನ್‌ನಲ್ಲಿ ಐರೋಪ್ಯ ದೇಶಗಳ ಸೇನೆ ನಿಯೋಜನೆ ಕುರಿತ ಪ್ರಶ್ನೆಗೆ, 'ಇಂತಹ ನಡೆ ಒಪ್ಪುವಂಥದ್ದಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ.

'ಸವಾಲಿಗೆ ಸೃಜನಶೀಲ ಉತ್ತರ ಕೊಡಬೇಕಿದೆ'

ನವದೆಹಲಿ/ಮಾಸ್ಕೊ (ಪಿಟಿಐ): ಭಾರತ ಮತ್ತು ರಷ್ಯಾ ದೇಶಗಳು ಸಂಕೀರ್ಣ ಭೌಗೋಳಿಕ ರಾಜಕೀಯ ಸವಾಲುಗಳನ್ನು ಎದುರಿಸಲು ಸೃಜನಶೀಲ ಮತ್ತು ನವೀನ ವಿಧಾನಗಳನ್ನು ರೂಪಿಸಬೇಕು ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ತಿಳಿಸಿದರು.

ರಷ್ಯಾದಿಂದ ಕಚ್ಚಾ ತೈಲ ಖರೀದಿಗೆ ಸಂಬಂಧಿಸಿದಂತೆ ಅಮೆರಿಕದರಿಂದ ಭಾರತದ ಮೇಲೆ ಒತ್ತಡ ಹೆಚ್ಚುತ್ತಿರುವ ಬೆನ್ನಲ್ಲೇ ಅವರು ಈ ಕುರಿತು ಹೇಳಿಕೆ ನೀಡಿದರು.

'ಎರಡೂ ದೇಶಗಳು ಇನ್ನೂ ಹೆಚ್ಚಿನದ್ದನ್ನು ಮತ್ತು ವಿಭಿನ್ನವಾಗಿ ಮಾಡುವ ಮಂತ್ರವನ್ನು ಮೈಗೂಡಿಸಿಕೊಳ್ಳಬೇಕಿದೆ' ಎಂದು ಅವರು ಇದೇ ವೇಳೆ ಹೇಳಿದರು.

ಮಾಸ್ಕೊದಲ್ಲಿ ರಷ್ಯಾದ ಉಪ ಪ್ರಧಾನಿ ಡೆನಿಸ್ ಮಂತುರೊವ್ ಅವರನ್ನು ಭೇಟಿಯಾಗಿ ಜೈಶಂಕರ್ ಮಾತುಕತೆ ನಡೆಸಿದರು.

'ಉಭಯ ದೇಶಗಳು ನಿರಂತರವಾಗಿ ದ್ವಿಪಕ್ಷೀಯ ವ್ಯಾಪಾರವನ್ನು ವೈವಿಧ್ಯಗೊಳಿಸಿಕೊಂಡಿವೆ. ಅದನ್ನು ಇನ್ನಷ್ಟು ವಿಸ್ತರಿಸಬೇಕಾದ ಅಗತ್ಯವಿದೆ' ಎಂದು ಅವರು ಪ್ರತಿಪಾದಿಸಿದರು. ಜೈಶಂಕರ್ ಅವರು ರಷ್ಯಾಗೆ ಮೂರು ದಿನಗಳ ಪ್ರವಾಸ ಕೈಗೊಂಡಿದ್ದಾರೆ. ಉಭಯ ದೇಶಗಳ ನಡುವಿನ ವ್ಯಾಪಾರ, ಆರ್ಥಿಕ, ವೈಜ್ಞಾನಿಕ, ತಾಂತ್ರಿಕ ಮತ್ತು ಸಾಂಸ್ಕೃತಿಕ ಸಹಕಾರ ಕುರಿತು ಇಬ್ಬರು ನಾಯಕರು ಮಾತುಕತೆ ನಡೆಸಿದ್ದಾರೆ.

ರಷ್ಯಾದಿಂದ ಅತ್ಯಧಿಕ ತೈಲ ಖರೀದಿಸುವ ದೇಶ ಭಾರತವಲ್ಲ: ಜೈಶಂಕರ್

'ರಷ್ಯಾದಿಂದ ಅತಿ ಹೆಚ್ಚು ತೈಲ ಖರೀದಿಸುತ್ತಿರುವ ದೇಶ ಭಾರತವಲ್ಲ. ಅಲ್ಲದೆ 2022ರ ಬಳಿಕ ರಷ್ಯಾದೊಂದಿಗಿನ ವ್ಯಾಪಾರದಲ್ಲಿ ಅತ್ಯಧಿಕ ಏರಿಕೆ ಕಂಡ ದೇಶವೂ ನಮ್ಮದಲ್ಲ' ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಗುರುವಾರ ತಿಳಿಸಿದರು.

ರಷ್ಯಾದ ವಿದೇಶಾಂಗ ಸಚಿವ ಸರ್ಗಿ ಲಾವ್ರೋವ್ ಅವರ ಜತೆ ಮಾತುಕತೆ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು. 'ನಾವು ರಷ್ಯಾದಿಂದ ಅತಿ ಹೆಚ್ಚು ತೈಲ ಖರೀದಿಸುತ್ತಿರುವ ದೇಶವಲ್ಲ. ಚೀನಾ ದೇಶವು ರಷ್ಯಾದಿಂದ ಅತ್ಯಧಿಕ ತೈಲ ಖರೀಸುತ್ತಿದೆ. ಅಲ್ಲದೆ ನಾವು ರಷ್ಯಾದಿಂದ ಅತ್ಯಧಿಕ ಎಲ್‌ಎನ್‌ಜಿ ಅನ್ನೂ ಖರೀದಿಸುತ್ತಿಲ್ಲ. ಬಹುಷಃ ಅದನ್ನು ಐರೋಪ್ಯ ಒಕ್ಕೂಟ ಖರೀದಿಸುತ್ತಿರಬಹುದು' ಎಂದು ಅವರು ಉತ್ತರಿಸಿದರು.

ಗದ್ದಲ, ಕೋಲಾಹಲಗಳಲ್ಲೇ ಅಂತ್ಯಗೊಂಡ ಮುಂಗಾರು ಅಧಿವೇಶನ

ಲೋಕಸಭೆಯಲ್ಲಿ 84 ಗಂಟೆ ವ್ಯರ್ಥ

ನವದೆಹಲಿ (ಪಿಟಿಐ): ಸಾಲು–ಸಾಲು ಗದ್ದಲ, ಕೋಲಾಹಲಗಳಿಗೆ ಸಾಕ್ಷಿಯಾದ ಸಂಸತ್ತಿನ ಮುಂಗಾರು ಅಧಿವೇಶನ ಗುರುವಾರ ಅನಿರ್ದಿಷ್ಟಾವಧಿಗೆ ಮುಂದೂಡಿಕೆಯಾಗಿದೆ. 84 ಗಂಟೆಗಳಷ್ಟು ಕಲಾಪದ ಸಮಯ ವ್ಯರ್ಥವಾಗುವುದರೊಂದಿಗೆ 18ನೇ ಲೋಕಸಭೆಯ ಅವಧಿಯಲ್ಲೇ ಇದು ಅತ್ಯಂತ ಹೆಚ್ಚು ಸಮಯ ವ್ಯರ್ಥವಾದ ಅಧಿವೇಶನ ಎನಿಸಿಕೊಂಡಿತು.

ಜುಲೈ 21ರಂದು ಅಧಿವೇಶನ ಆರಂಭವಾಗಿತ್ತು. ಸದನ 21 ದಿನ ನಡೆಯಿತಾದರೂ, ಪರಿಣಾಮಕಾರಿಯಾದ ಕಲಾಪ ನಡೆದಿದ್ದು 37 ಗಂಟೆ 7 ನಿಮಿಷಗಳಷ್ಟು ಮಾತ್ರ ಎಂದು ಲೋಕಸಭೆಯ ಸಚಿವಾಲಯ ತಿಳಿಸಿದೆ.

ಅಧಿವೇಶನ ಆರಂಭವಾದಾಗ 120 ಗಂಟೆಗಳಷ್ಟು ಕಾಲ ಸದನ ಕಲಾಪ ನಡೆಯಬೇಕು ಎಂದು ಎಲ್ಲಾ ಪಕ್ಷಗಳೂ ನಿರ್ಧರಿಸಿದ್ದವು. ಇದಕ್ಕೆ ಕಲಾಪ ಸಲಹಾ ಸಮಿತಿಯೂ ಒಪ್ಪಿತ್ತು. ಪದೇ ಪದೇ ಕಲಾಪ ಸ್ಥಗಿತಗೊಂಡಿದ್ದರಿಂದ ಕೇವಲ 37 ಗಂಟೆಗಳಷ್ಟು ಕಲಾಪ ನಡೆದಿದೆ ಎಂದು ಲೋಕಸಭೆ ಅಧ್ಯಕ್ಷ ಓಂ ಬಿರ್ಲಾ ತಿಳಿಸಿದರು.

ಗದ್ದಲ, ಗಲಾಟೆ ನಡುವೆಯೂ 14 ಮಸೂದೆಗಳನ್ನು ಮಂಡಿಸಿದ ಸರ್ಕಾರ, 12 ಪ್ರಮುಖ ಮಸೂದೆಗಳಿಗೆ ಕಾಯ್ದೆಯ ದಾರಿ ತೆರೆಯುವ ಅವಕಾಶಗಳನ್ನು ಪಡೆದುಕೊಂಡಿದೆ.

ರಾಜ್ಯಸಭೆಯಲ್ಲಿ ಗುರುವಾರ ಸಚಿವ ಅಶ್ವಿನಿ ವೈಷ್ಣವ್ ಮಾತನಾಡಿದರು ಪಿಟಿಐ ಚಿತ್ರ

> **ಅಡೆತಡೆಗಳ ನಡುವೆಯೂ ಅಧಿವೇಶನವು ದೇಶ ಮತ್ತು ಸರ್ಕಾರಕ್ಕೆ ಫಲಪ್ರದವಾಗಿದೆ. ಆದರೆ ವಿಪಕ್ಷಗಳಿಗೆ ಹಾನಿಕರವಾಗಿದೆ**
> **ಕಿರಣ್ ರಿಜಿಜು,** ಸಂಸದೀಯ ವ್ಯವಹಾರಗಳ ಸಚಿವ

ಗಂಭೀರ ಅಪರಾಧ ಪ್ರಕರಣಗಳಲ್ಲಿ 30 ದಿನಕ್ಕಿಂತ ಹೆಚ್ಚು ಕಾಲ ಬಂಧನದಲ್ಲಿದ್ದರೆ ಪ್ರಧಾನಿ, ಮುಖ್ಯಮಂತ್ರಿ ಮತ್ತು ಸಚಿವರನ್ನು ವಜಾ ಮಾಡಬಹುದು ಎಂಬ ಮಸೂದೆಯನ್ನು ಬುಧವಾರ ಸಚಿವ ಅಮಿತ್ ಶಾ ಮಂಡಿಸಿದ್ದರು. ಇದು ಲೋಕಸಭೆಯಲ್ಲಿ ಭಾರಿ ಕೋಲಾಹಲಕ್ಕೆ ಕಾರಣವಾಗಿತ್ತು.

419 ಚುಕ್ಕೆ ಗುರುತಿನ ಪ್ರಶ್ನೆಗಳನ್ನು ಈ ಬಾರಿ ಕೇಳಲಾಗಿತ್ತಾದರೂ 55ಕ್ಕೆ ಮಾತ್ರ ಉತ್ತರ ದೊರೆಯಿತು. 4,829 ಚುಕ್ಕಿ ಗುರುತಿಲ್ಲದ ಪ್ರಶ್ನೆಗಳನ್ನೂ ಕೇಳಲಾಗಿತ್ತು.

ಆನ್‌ಲೈನ್ ಮನಿ ಗೇಮ್ ನಿಷೇಧ ಮಸೂದೆ: ಸಂಸತ್‌ನಲ್ಲಿ ಒಪ್ಪಿಗೆ

ಹಣ ಹೂಡಿ ಆಡುವ ಎಲ್ಲ ರೀತಿಯ ಆನ್‌ಲೈನ್ ಗೇಮ್‌ಗಳು, ಇ-ಸ್ಪೋರ್ಟ್ಸ್‌ಗಳು ಮತ್ತು ಆನ್‌ಲೈನ್ ಸೋಷಿಯಲ್ ಗೇಮ್‌ಗಳನ್ನು ನಿಷೇಧಿಸುವ ಮಹತ್ವದ ಮಸೂದೆಗೆ ಸಂಸತ್ತು ಗುರುವಾರ ಸಮ್ಮತಿ ನೀಡಿದೆ. ರಾಜ್ಯಸಭೆಯಲ್ಲಿ ಗುರುವಾರ ಯಾವುದೇ ಚರ್ಚೆ ಇಲ್ಲದೇ ಮಸೂದೆಗೆ ಅನುಮೋದನೆ ನೀಡಲಾಯಿತು.

ಆನ್‌ಲೈನ್ ಗೇಮಿಂಗ್ (ಉತ್ತೇಜನ ಮತ್ತು ನಿಯಂತ್ರಣ) ಮಸೂದೆ–2025ಕ್ಕೆ ಒಪ್ಪಿಗೆ ಸಿಕ್ಕಿದ್ದು, ಕಾಯ್ದೆಯು ಆನ್‌ಲೈನ್ ಗೇಮಿಂಗ್‌ನ ಮೂರನೇ ಎರಡರಷ್ಟು ಭಾಗವನ್ನು ಉತ್ತೇಜಿಸಲಿದೆ ಎಂದು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು. ಬುಧವಾರ ಮಸೂದೆಗೆ ಲೋಕಸಭೆಯ ಒಪ್ಪಿಗೆ ಸಿಕ್ಕಿತ್ತು.

'45 ಕೋಟಿ ಜನರು ಆನ್‌ಲೈನ್ ಗೇಮಿಂಗ್ ಚಟಕ್ಕೆ ಒಳಗಾಗಿದ್ದಾರೆ. ಮಧ್ಯಮ ವರ್ಗದ ಕುಟುಂಬಗಳು ದುಡಿದ ₹20 ಸಾವಿರ ಕೋಟಿಗೂ ಹೆಚ್ಚು ಹಣ ಆನ್‌ಲೈನ್ ಗೇಮ್‌ಗಳ ಪಾಲಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯೇ ಆನ್‌ಲೈನ್ ಗೇಮ್ ಅನ್ನು ಅಸ್ವಸ್ಥತೆಯ ಆಟ ಎಂದು ಗುರುತಿಸಿದೆ' ಎಂದು ಅಶ್ವಿನಿ ವೈಷ್ಣವ್ ತಿಳಿಸಿದರು.

'ಮಸೂದೆಯಲ್ಲಿ ಆನ್‌ಲೈನ್ ಮನಿ ಗೇಮ್‌ಗಳಿಗೆ ಸಂಬಂಧಿಸಿದ ಜಾಹೀರಾತುಗಳನ್ನೂ ನಿರ್ಬಂಧಿಸುವ ಅವಕಾಶವಿದೆ. ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳು ಹಣ ಒದಗಿಸುವುದನ್ನೂ ತಡೆಯಲಿದೆ' ಎಂದರು.

ಕಾಯ್ದೆ ಉಲ್ಲಂಘಿಸಿದವರಿಗೆ ಮೂರು ವರ್ಷ ಜೈಲು ವಾಸ, ₹1 ಕೋಟಿ ದಂಡ ಅಥವಾ ಈ ಎರಡನ್ನೂ ವಿಧಿಸುವ ಅವಕಾಶ ಇದೆ ಎಂದರು.

ಆನ್‌ಲೈನ್ ಗೇಮಿಂಗ್ ಜಾಹೀರಾತುಗಳಲ್ಲಿ ಭಾಗಿಯಾದವರಿಗೆ ಎರಡು ವರ್ಷ ಜೈಲು, ₹50 ಲಕ್ಷದವರೆಗೆ ದಂಡ ಅಥವಾ ಎರಡನ್ನೂ ವಿಧಿಸುವ ಅವಕಾಶ ಕಲ್ಪಿಸಲಾಗಿದೆ ಎಂದು ಸಚಿವರು ತಿಳಿಸಿದರು.

ನ್ಯಾಯಾಲಯದ ಕೈ ಕಟ್ಟಿ ಹಾಕಬಹುದೇ?

ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದ ಸುಪ್ರೀಂ ಕೋರ್ಟ್ ಪೀಠ

ನವದೆಹಲಿ (ಪಿಟಿಐ): 'ಸಾಂವಿಧಾನಿಕ ಹುದ್ದೆಯಲ್ಲಿರುವವರು ತಮ್ಮ ಕರ್ತವ್ಯ ನಿರ್ವಹಿಸಲು ನಿರಾಕರಿಸಿದರೆ ಅಥವಾ ರಾಜ್ಯ ವಿಧಾನಸಭೆ ಅಂಗೀಕಾರ ನೀಡಿರುವ ಮಸೂದೆಯ ವಿಚಾರವಾಗಿ ರಾಜ್ಯಪಾಲರು ನಿಷ್ಕ್ರಿಯತೆ ತೋರಿದ ಸಂದರ್ಭದಲ್ಲಿ ಸಾಂವಿಧಾನಿಕ ನ್ಯಾಯಾಲಯಗಳ ಕೈ ಕಟ್ಟಿ ಹಾಕಬಹುದೇ' ಎಂದು ಸುಪ್ರೀಂ ಕೋರ್ಟ್ ಗುರುವಾರ ಕೇಂದ್ರ ಸರ್ಕಾರವನ್ನು ಕೇಳಿದೆ.

ಕೇಂದ್ರ ಸರ್ಕಾರದ ಪರ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, 'ಕೆಲವು ರಾಜ್ಯಪಾಲರು ವಿಧಾನಸಭೆ ಅಂಗೀಕರಿಸಿದ ಮಸೂದೆಗಳ ಬಗ್ಗೆ ಯಾವುದೇ ನಿರ್ಧಾರ ತೆಗೆದುಕೊಳ್ಳದಿದ್ದರೆ ನ್ಯಾಯಾಂಗದ ಮೂಲಕ ಪರಿಹಾರ ಕಂಡುಕೊಳ್ಳುವ ಬದಲು ರಾಜಕೀಯ ಪರಿಹಾರಗಳನ್ನು ಅನ್ವೇಷಿಸಬೇಕಾಗುತ್ತದೆ' ಎಂದಾಗ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠ ಈ ಹೇಳಿಕೆ ನೀಡಿದೆ.

ರಾಜ್ಯ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕಲು ಕಾಲಮಿತಿ ನಿಗದಿಪಡಿಸಬಹುದೇ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉಲ್ಲೇಖಿಸಿರುವ ಸಾಂವಿಧಾನಿಕ ಪ್ರಶ್ನೆಗಳ ಕುರಿತ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ. ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್, ವಿಕ್ರಮನಾಥ್, ಪಿ.ಎಸ್.ನರಸಿಂಹ ಮತ್ತು ಎ.ಎಸ್. ಚಂದೂರ್ಕರ್ ಅವರು ಪೀಠದಲ್ಲಿದ್ದಾರೆ. 'ಸಾಂವಿಧಾನಿಕ ಹುದ್ದೆಯಲ್ಲಿರುವವರು ಸಕಾರಣವಿಲ್ಲದೆ ತಮ್ಮ ಕರ್ತವ್ಯಗಳನ್ನು ನಿರ್ವಹಿಸದಿದ್ದ ಸಂದರ್ಭದಲ್ಲಿ ನ್ಯಾಯಾಲಯಗಳ ಕೈ ಕಟ್ಟಿ ಹಾಕಬಹುದೇ' ಎಂದು ಸಿಜೆಐ ಗವಾಯಿ ಅವರು ಮೆಹ್ತಾ ಅವರನ್ನು ಕೇಳಿದರು.

ಎಲ್ಲಾ ಸಮಸ್ಯೆಗಳಿಗೂ ನ್ಯಾಯಾಲಯಗಳಿಂದ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಾದಕ್ಕೆ ಆದ್ಯತೆ ನೀಡಬೇಕು ಎಂದು ಮೆಹ್ತಾ ವಿಚಾರಣೆ ವೇಳೆ ವಾದಿಸಿದರು.

ಪರಿಶೀಲನೆಗಾಗಿ ರಾಜ್ಯಪಾಲರಿಂದ ಬಂದ ಮಸೂದೆಗಳ ವಿಚಾರವಾಗಿ ರಾಷ್ಟ್ರಪತಿಯವರು ಮೂರು ತಿಂಗಳ ಅವಧಿಯಲ್ಲಿ ತೀರ್ಮಾನ ಕೈಗೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಏಪ್ರಿಲ್ 8ರಂದು ಹೇಳಿತ್ತು. ಅದರ ಬೆನ್ನಲ್ಲೇ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸುಪ್ರೀಂ ಕೋರ್ಟ್‌ಗೆ ಐದು ಪುಟಗಳ ಪತ್ರ ಬರೆದು, 14 ಪ್ರಶ್ನೆ ಗಳನ್ನು ಕೇಳಿದ್ದರು.

ಮಧ್ಯಪ್ರವೇಶಿಸುವ ಅಧಿಕಾರ ಇಲ್ಲವೇ?

ಮಸೂದೆಯ ವಿಚಾರವಾಗಿ ರಾಜ್ಯಪಾಲರು ಹಲವು ವರ್ಷ ಯಾವುದೇ ನಿರ್ಧಾರ ತೆಗೆದುಕೊಳ್ಳದೆ ರಾಜ್ಯ ಶಾಸನಸಭೆಗಳನ್ನು 'ನಿಸ್ತೇಜ'ಗೊಳಿಸಿದರೆ ಮಧ್ಯಪ್ರವೇಶಿಸುವ ಅಧಿಕಾರ ನ್ಯಾಯಾಲಯಗಳಿಗೆ ಇಲ್ಲವೇ ಎಂದು ಸುಪ್ರೀಂ ಕೋರ್ಟ್ ಪೀಠವು ಕೇಂದ್ರ ಸರ್ಕಾರವನ್ನು ಕೇಳಿದೆ.

ಇಂತಹ ಪರಿಸ್ಥಿತಿಯಲ್ಲಿ ನ್ಯಾಯಾಲಯಗಳು ಮಧ್ಯಪ್ರವೇಶಿಸುವುದರಿಂದ ತನ್ನನ್ನು ತಾನು ತಡೆದಿಟ್ಟುಕೊಳ್ಳಬೇಕು ಎಂಬ ತುಷಾರ್ ಮೆಹ್ತಾ ಅವರ ವಾದಕ್ಕೆ ಪ್ರತಿಕ್ರಿಯೆಯಾಗಿ ಪೀಠವು ಹೀಗೆ ಹೇಳಿದೆ.

'ವಿಧಾನಸಭೆಯು ಸರ್ವಾನುಮತದಿಂದ ಮಸೂದೆಯನ್ನು ಅಂಗೀಕರಿಸುತ್ತದೆ. ರಾಜ್ಯಪಾಲರು ಆ ಮಸೂದೆ ಬಗ್ಗೆ ಯಾವುದೆ ನಿರ್ಧಾರ ತೆಗೆದುಕೊಳ್ಳದಿದ್ದರೆ ವಾಸ್ತವವಾಗಿ ಶಾಸಕಾಂಗವನ್ನು ನಿಷ್ಕ್ರಿಯಗೊಳಿಸಿದಂತೆ ಆಗುತ್ತದೆ' ಎಂದು ಪೀಠ ಹೇಳಿತು.

'ದಾಂಪತ್ಯದಲ್ಲಿ ಪರಸ್ಪರ ಅವಲಂಬನೆ ಮುಖ್ಯ'

ದಾಂಪತ್ಯ ಜೀವನದಲ್ಲಿ ಪತಿ ಅಥವಾ ಪತ್ನಿ ಸಂಗಾತಿಯಿಂದ ಸ್ವತಂತ್ರವಾಗಿರಲು ಬಯಸುವುದಾಗಿ ಹೇಳುವುದು 'ಅಸಾಧ್ಯ' ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

'ಸಂಗಾತಿಯಿಂದ ಸ್ವತಂತ್ರವಾಗಿರಲು ಬಯಸುವವರು ವೈವಾಹಿಕ ಜೀವನಕ್ಕೆ ಪ್ರವೇಶಿಸಲೇಬಾರದು' ಎಂದು ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಆರ್. ಮಹಾದೇವನ್ ಅವರ ಪೀಠ ಎಚ್ಚರಿಸಿದೆ.

'ಈ ವಿಷಯದಲ್ಲಿ ನಾವು ಸ್ಪಷ್ಟವಾಗಿದ್ದೇವೆ. ವೈವಾಹಿಕ ಜೀವನ ಮುಂದುವರಿಯುತ್ತಿರುವಾಗ ಯಾವುದೇ ಪತಿ ಅಥವಾ ಪತ್ನಿ ತನ್ನ ಸಂಗಾತಿಯಿಂದ ಸ್ವತಂತ್ರರಾಗಿರಲು ಬಯಸುತ್ತೇನೆ ಎಂದು ಹೇಳಲು ಸಾಧ್ಯವಿಲ್ಲ. ವಿವಾಹವು ಎರಡು ಆತ್ಮ ಮತ್ತು ವ್ಯಕ್ತಿಗಳನ್ನು ಒಟ್ಟಿಗೆ ಸೇರಿಸುತ್ತದೆ. ಇಲ್ಲಿ ನೀವು ಹೇಗೆ ಸ್ವತಂತ್ರರಾಗಲು ಸಾಧ್ಯ' ಎಂದು ಪೀಠ ಅರ್ಜಿದಾರರನ್ನು ಪ್ರಶ್ನಿಸಿತು.

ಅಪ್ರಾಪ್ತ ವಯಸ್ಸಿನ ಇಬ್ಬರು ಮಕ್ಕಳಿಂದ ದೂರವಿರುವ ದಂಪತಿಯ ಪ್ರಕರಣವನ್ನು ಪೀಠ ವಿಚಾರಣೆ ನಡೆಸಿ ಈ ರೀತಿ ಹೇಳಿತು.

'ನ್ಯಾಯಿಕ ಭಯೋತ್ಪಾದನೆ ಆಗಬಾರದು'

'ನ್ಯಾಯಾಂಗದ ಕ್ರಿಯಾಶೀಲತೆಯು ನ್ಯಾಯಿಕ ಭಯೋತ್ಪಾದನೆಯಾಗಿ ಬದಲಾಗಬಾರದು' ಎಂಬ ಅಭಿಪ್ರಾಯವನ್ನು ಸಿಜೆಐ ಬಿ.ಆರ್. ಗವಾಯಿ ಅವರು ವ್ಯಕ್ತಪಡಿಸಿದರು.

'ಸಾಕಷ್ಟು ಅನುಭವ ಹೊಂದಿರುವ ಜನಪ್ರತಿನಿಧಿಗಳನ್ನು ಎಂದಿಗೂ ಕಡೆಗಣಿಸ ಬಾರದು' ಎಂದು ತುಷಾರ್ ಮೆಹ್ತಾ ಹೇಳಿದಾಗ, ಸಿಜೆಐ ಈ ಪ್ರತಿಕ್ರಿಯೆ ನೀಡಿದರು. 'ಜನಪ್ರತಿನಿಧಿಗಳ ವಿಚಾರವಾಗಿ ನಾವು ಯಾವತ್ತೂ ಏನನ್ನೂ ಹೇಳಿಲ್ಲ. ನ್ಯಾಯಾಂಗದ ಕ್ರಿಯಾಶೀಲತೆಯು ನ್ಯಾಯಿಕ ಭಯೋತ್ಪಾದನೆ ಅಥವಾ ಸಾಹಸ ಆಗಬಾರದು ಎಂದು ನಾನು ಹೇಳುತ್ತಲೇ ಬಂದಿದ್ದೇನೆ' ಎಂದರು.

ಇಂದು ತೀರ್ಪು

ದೆಹಲಿ ಹಾಗೂ ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ ಬೀದಿನಾಯಿಗಳನ್ನು ಶಾಶ್ವತವಾಗಿ ಸ್ಥಳಾಂತರಿಸಬೇಕು ಎಂದು ಆಗಸ್ಟ್ 11ರಂದು ಸೂಚಿಸಿದ್ದ ಸುಪ್ರೀಂ ಕೋರ್ಟ್, ಈ ಕುರಿತ ತಕರಾರು ಅರ್ಜಿಯ ವಿಚಾರಣೆಯ ತೀರ್ಪನ್ನು ಶುಕ್ರವಾರ (ಆಗಸ್ಟ್ 22) ಪ್ರಕಟಿಸಲಿದೆ.

ಉಪರಾಷ್ಟ್ರಪತಿ: 'ಇಂಡಿಯಾ' ಅಭ್ಯರ್ಥಿ ನಾಮಪತ್ರ ಸಲ್ಲಿಕೆ

ಸುದರ್ಶನ ರೆಡ್ಡಿ

ನವದೆಹಲಿ (ಪಿಟಿಐ): ಉಪರಾಷ್ಟ್ರಪತಿ ಚುನಾವಣೆಯ 'ಇಂಡಿಯಾ' ಕೂಟದ ಅಭ್ಯರ್ಥಿ, ನಿವೃತ್ತ ನ್ಯಾಯಮೂರ್ತಿ ಬಿ.ಸುದರ್ಶನ ರೆಡ್ಡಿ ಅವರು ಗುರುವಾರ ನಾಮಪತ್ರ ಸಲ್ಲಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಮುಖಂಡರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್, ಸಮಾಜವಾದಿ ಪಕ್ಷದ ನಾಯಕ ರಾಮಗೋಪಾಲ್ ಯಾದವ್, ಡಿಎಂಕೆ ನಾಯಕ ತಿರುಚ್ಚಿ ಶಿವ, ಶಿವಸೇನಾ (ಯುಬಿಟಿ) ಮುಖಂಡ ಸಂಜಯ ರಾವುತ್ ಹಾಗೂ ಸಿಪಿಎಂನ ಜಾನ್ ಬ್ರಿಟ್ಟಾಸ್ ಅವರ ಸಮ್ಮುಖದಲ್ಲಿ, ರಾಜ್ಯಸಭೆಯ ಮಹಾಕಾರ್ಯದರ್ಶಿ ಅವರಿಗೆ ತಮ್ಮ ಉಮೇದುವಾರಿಕೆ ಸಲ್ಲಿಸಿದರು.

'ಉಪ ರಾಷ್ಟ್ರಪತಿಯಾಗಿ ಆಯ್ಕೆಯಾದಲ್ಲಿ, ನಿಷ್ಪಕ್ಷಪಾತವಾಗಿ, ಘನತೆಯಿಂದ ಹಾಗೂ ಸಂವಾದ ಮತ್ತು ಶಿಷ್ಟಾಚಾರಕ್ಕೆ ಕುಂದುಬರದಂತೆ ಕರ್ತವ್ಯ ನಿಭಾಯಿಸುವೆ' ಎಂದು ನಾಮಪತ್ರ ಸಲ್ಲಿಸಿದ ನಂತರ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ಅವರು ತಿಳಿಸಿದ್ದಾರೆ.

'ಈ ಚುನಾವಣೆ ಕೇವಲ ಒಬ್ಬ ವ್ಯಕ್ತಿಗೆ ಸಂಬಂಧಿಸಿದ್ದಲ್ಲ. ನಮ್ಮ ರಾಷ್ಟ್ರ ನಿರ್ಮಾತೃಗಳ ಕನಸಿನ ಭಾರತವನ್ನು ಕಟ್ಟುವ ನಿಟ್ಟಿನಲ್ಲಿನ ಬದ್ಧತೆಯನ್ನು ಪುನರುಚ್ಚರಿಸುವುದಾಗಿದೆ. ಸಂಸತ್ ಸಮಗ್ರತೆಯಿಂದ ಕಾರ್ಯನಿರ್ವಹಿಸುವ, ಭಿನ್ನಾಭಿಪ್ರಾಯವನ್ನು ಗೌರವಿಸುವ, ಸರ್ಕಾರದ ಸಂಸ್ಥೆಗಳು ಸ್ವತಂತ್ರ ಹಾಗೂ ನ್ಯಾಯಸಮ್ಮತವಾಗಿ ಕಾರ್ಯನಿರ್ವಹಿಸಿ ಜನರ ಸೇವೆ ಮಾಡುವಂತಹ ಭಾರತವನ್ನು ಕಟ್ಟುವುದಕ್ಕೆ ಸಂಬಂಧಿಸಿದ ಚುನಾವಣೆ ಇದು' ಎಂದೂ ಹೇಳಿದ್ದಾರೆ.

ಎಸ್‌ಎಸ್‌ಸಿ: ಪರೀಕ್ಷಾ ಸೂಚನಾ ಅವಧಿ ಕಡಿತ

ನವದೆಹಲಿ (ಪಿಟಿಐ): 'ಸ್ಟಾಫ್ ಸೆಲೆಕ್ಷನ್ ಕಮಿಷನ್' (ಎಸ್‌ಎಸ್‌ಸಿ) ವಿವಿಧ ನೇಮಕಾತಿಗಳಿಗೆ ಪರೀಕ್ಷಾ ಸೂಚನಾ ಅವಧಿಯನ್ನು 45 ದಿನಗಳಿಂದ 21 ದಿನಗಳಿಗೆ ಕಡಿತಗೊಳಿಸುವುದೂ ಸೇರಿದಂತೆ ನೇಮಕಾತಿ ಪ್ರಕ್ರಿಯೆಯಲ್ಲಿ ಹಲವು ಸುಧಾರಣಾ ಕ್ರಮಗಳನ್ನು ಪರಿಚಯಿಸಿದೆ ಎಂದು ಕೇಂದ್ರ ಸರ್ಕಾರ ಗುರುವಾರ ರಾಜ್ಯಸಭೆಗೆ ತಿಳಿಸಿದೆ.

ಈ ಕ್ರಮಗಳ ಪರಿಣಾಮ ವಿವಿಧ ಪರೀಕ್ಷೆಗಳ ನೇಮಕಾತಿ ಪ್ರಕ್ರಿಯೆಯು 15–18 ತಿಂಗಳುಗಳಿಂದ 6–10 ತಿಂಗಳಿಗೆ ಇಳಿಸಿದಂತಾಗಿದೆ ಎಂದು ಕೇಂದ್ರ ಸಿಬ್ಬಂದಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಲಿಖಿತ ಉತ್ತರ ನೀಡಿದ್ದಾರೆ.

ಪೆನ್ ಮತ್ತು ಪೇಪರ್ ಆಧಾರಿತ ಪರೀಕ್ಷೆಗಳನ್ನು ಕಂಪ್ಯೂಟರ್ ಆಧಾರಿತ ಪರೀಕ್ಷೆಗಳಿಗೆ ಪರಿವರ್ತಿಸುವುದು, ಪರೀಕ್ಷಾ ಹಂತಗಳ ಸಂಖ್ಯೆಯನ್ನು ಕಡಿತಗೊಳಿಸುವುದು ಸೇರಿದಂತೆ ಹಲವು ಸುಧಾರಣಾ ಕ್ರಮಗಳಲ್ಲಿ ಇವೆ ಎಂದು ಸಚಿವರು ಹೇಳಿದ್ದಾರೆ.

ಚಿಟಿಕೆ ಸುದ್ದಿ

ಪತ್ನಿಗೆ ಆಹಾರ ನೀಡದೇ ವ್ಯಾಯಾಮ ಮಾಡಿಸಿದ ಪತಿ

ಲಖನೌ: 'ನಟಿ ನೋರಾ ಫತೇಹಿಯಂತೆ ಮೈಕಟ್ಟು ಹೊಂದಿರಬೇಕು ಎಂದು ಕಿರಿಕಿರಿ ಮಾಡಿದ ನನ್ನ ಪತಿ, ಗಂಟೆಗಟ್ಟಲೆ ದೈಹಿಕ ಕಸರತ್ತು ಮಾಡಿಸಿದರು. ಒಲ್ಲೆ ಎಂದಿದ್ದಕ್ಕೆ ಹಲವು ದಿನಗಳ ಕಾಲ ಆಹಾರ ನೀಡದೇ ನನ್ನನ್ನು ಕೂಡಿ ಹಾಕಿದ್ದರು' ಎಂದು ಆರೋಪಿಸಿ ಉತ್ತರ ಪ್ರದೇಶದ ಘಾಜಿಯಾಬಾದ್‌ನ ಮಹಿಳೆಯೊಬ್ಬರು ಪೊಲೀಸರಿಗೆ ದೂರು ನೀಡಿದ್ದಾರೆ.

'ಪ್ರತಿ ದಿನ ಎರಡರಿಂದ ಮೂರು ಬಾರಿ ವ್ಯಾಯಾಮ ಮಾಡಿಸುತ್ತಿದ್ದರು. ಅನಾರೋಗ್ಯದಿಂದಾಗಿ ನಾನು ವ್ಯಾಯಾಮ ಮಾಡಲು ಆಗುತ್ತಿರಲಿಲ್ಲ. ತುಂಬಾ ದಿನ ನನಗೆ ಊಟವನ್ನೂ ಕೊಟ್ಟಿರಲಿಲ್ಲ' ಎಂದು ಮಹಿಳಾ ಠಾಣೆಗೆ ಕೊಟ್ಟ ದೂರಿನಲ್ಲಿ ತಿಳಿಸಿದ್ದಾರೆ.

'ದೈಹಿಕ ಶಿಕ್ಷಣ ಶಿಕ್ಷಕರಾಗಿರುವ ನನ್ನ ಪತಿ ದೇಹಾಕಾರದ ವಿಷಯದಲ್ಲಿ ವಿಲಕ್ಷಣವಾಗಿ ವರ್ತಿಸುತ್ತಿದ್ದರು. ನಿನ್ನ ಮೈಕಟ್ಟು ಸರಿಯಿಲ್ಲ. ನೀನು ನೋರಾ ಫತೇಹಿ ರೀತಿ ಆಗಬೇಕು ಎನ್ನುತ್ತಿದ್ದರು. ಗಂಡನ ಮನೆಯವರೂ ಕಿರುಕುಳ ನೀಡುತ್ತಿದ್ದರು. ದೈಹಿಕ ಮತ್ತು ಮಾನಸಿಕ ಹಿಂಸೆಯಿಂದ ನನಗೆ ಗರ್ಭಪಾತವೂ ಆಗಿದೆ' ಎಂದು ಮಹಿಳೆ ದೂರಿದ್ದಾರೆ.

'ಜುಲೈನಲ್ಲಿ ತವರು ಮನೆಗೆ ಹೋಗಿ ಬಂದಾದ ಮೇಲೆ ನನ್ನನ್ನು ಮನೆಯೊಳಗೂ ಬಿಟ್ಟುಕೊಂಡಿಲ್ಲ. ಪತಿ ಮತ್ತು ಮನೆಯವರ ವಿರುದ್ಧ ಕಠಿಣ ಕ್ರಮ ಜರುಗಿಸಿ' ಎಂದು ಆಗ್ರಹಿಸಿದ್ದಾರೆ.

ಶಾಲೆಯಲ್ಲಿ ಕಚ್ಚಾ ಬಾಂಬ್ ಸ್ಫೋಟ

ತಿರುವನಂತಪುರ: ಕೇರಳದ ಪಾಲಕ್ಕಾಡ್ ಜಿಲ್ಲೆಯ ಶಾಲೆಯೊಂದರಲ್ಲಿ ಕಚ್ಚಾ ಬಾಂಬ್ ಸ್ಫೋಟಗೊಂಡಿದ್ದು, ಆತಂಕ ಮತ್ತು ರಾಜಕೀಯ ಚರ್ಚೆಗೆ ಕಾರಣವಾಗಿದೆ.

ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ನಿರ್ವಹಿಸುತ್ತಿರುವ ವ್ಯಾಸ ವಿದ್ಯಾಪೀಠ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ಸಂಜೆ ಸ್ಫೋಟ ಸಂಭವಿಸಿದೆ. ಒಬ್ಬ ವಿದ್ಯಾರ್ಥಿ ಮತ್ತು ಮಹಿಳೆಗೆ ಗಾಯಗಳಾಗಿವೆ.

ಶಾಲಾ ಆವರಣದಲ್ಲಿ ಪತ್ತೆಯಾದ ವಸ್ತು ಬಾಂಬ್ ಎಂದು ತಿಳಿಯದೇ ವಿದ್ಯಾರ್ಥಿಯು ಅದನ್ನು ಎಸೆದಿದ್ದರು. ಈ ವೇಳೆ ಆ ವಸ್ತು ಸ್ಫೋಟಗೊಂಡಿದೆ. ಕಾಡುಹಂದಿಗಳನ್ನು ಹಿಡಿಯಲು ಈ ಬಾಂಬ್ ಅನ್ನು ಇರಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಜಮ್ಮು: ಬೆದರಿಕೆ ಪತ್ರ ಒಯ್ಯುತ್ತಿದ್ದ ಪಾರಿವಾಳ ಸೆರೆ

ಜಮ್ಮು (ಪಿಟಿಐ): ಜಮ್ಮು ಗಡಿ ಪ್ರದೇಶದಲ್ಲಿ ಬೆದರಿಕೆ ಪತ್ರ ಹೊತ್ತೊಯ್ಯುತ್ತಿದ್ದ ಪಾರಿವಾಳವನ್ನು ಭದ್ರತಾ ಪಡೆಯ ಸಿಬ್ಬಂದಿ ಹಿಡಿದಿದ್ದಾರೆ. 'ಜಮ್ಮು ರೈಲು ನಿಲ್ದಾಣವನ್ನು ಸ್ಫೋಟಿಸುತ್ತೇವೆ' ಎಂಬ ಬೆದರಿಕೆಯ ಒಕ್ಕಣೆ ಆ ಪತ್ರದಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಗಸ್ಟ್ 18ರ ರಾತ್ರಿ ಸುಮಾರು 9 ಗಂಟೆಗೆ ಪಾಕಿಸ್ತಾನದಿಂದ ಹಾರಿ ಬಂದ ಪಾರಿವಾಳವನ್ನು ಅಂತರರಾಷ್ಟ್ರೀಯ ಗಡಿ ಪ್ರದೇಶವಾದ ಕಟಾರಿಯಾ ಬಳಿ ಸೆರೆಹಿಡಿಯಲಾಗಿದೆ. ಬೆದರಿಕೆ ಪತ್ರವನ್ನು ಪಾರಿವಾಳದ ಉಗುರಿಗೆ ಕಟ್ಟಲಾಗಿತ್ತು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಉರ್ದು ಮತ್ತು ಇಂಗ್ಲಿಷ್‌ನಲ್ಲಿ ಬರೆಯಲಾದ ಈ ಬೆದರಿಕೆ ಪತ್ರದಲ್ಲಿ 'ಕಾಶ್ಮೀರ ಸ್ವಾತಂತ್ರ್ಯ' ಮತ್ತು 'ಕಾಲ ಕೂಡಿಬಂದಿದೆ' ಎಂಬ ಅರ್ಥದ ಸಾಲುಗಳು ಸಹ ಇದ್ದವು ಎಂದು ಮೂಲಗಳು ತಿಳಿಸಿವೆ.

ಪಾಕಿಸ್ತಾನವು ಬಲೂನ್, ಧ್ವಜ ಮತ್ತು ಪಾರಿವಾಳಗಳ ಮೂಲಕ ಭಾರತದ ಗಡಿ ಪ್ರದೇಶಗಳಲ್ಲಿ ಅನೇಕ ಸಂದೇಶಗಳನ್ನು ಕಳುಹಿಸುತ್ತಿತ್ತು. ಆದರೆ, ಬೆದರಿಕೆ ಪತ್ರ ಹೊತ್ತೊಯ್ಯುತ್ತಿದ್ದ ಪಾರಿವಾಳವನ್ನು ಇದೇ ಮೊದಲ ಬಾರಿಗೆ ಸೆರೆಹಿಡಿಯಲಾಗಿದೆ ಎಂದು ಅವರು ತಿಳಿಸಿದ್ದಾರೆ.

ದೇಶದ ರಕ್ಷಣೆಯ ದೃಷ್ಟಿಯಿಂದಾಗಿ ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ಭದ್ರತಾ ಸಂಸ್ಥೆಗಳು ತನಿಖೆ ನಡೆಸುತ್ತಿವೆ ಮತ್ತು ರೈಲು ನಿಲ್ದಾಣದಲ್ಲಿ ಹೆಚ್ಚು ಭದ್ರತೆ ಕಲ್ಪಿಸಿದ್ದು, ಶ್ವಾನ ದಳ ಮತ್ತು ಬಾಂಬ್ ನಿಷ್ಕ್ರಿಯ ತಂಡಗಳನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಬಾಹ್ಯಾಕಾಶಯಾನದಿಂದ ಸಾಕಷ್ಟು ಕಲಿತೆ: ಶುಭಾಂಶು ಶುಕ್ಲಾ

'ನಮ್ಮದೇ ರಾಕೆಟ್‌ನಲ್ಲಿ ಗಗನಯಾನ ಶೀಘ್ರ'



ಶುಭಾಂಶು

ನವದೆಹಲಿ (ಪಿಟಿಐ): ನಮ್ಮದೇ ನೆಲದಿಂದ, ನಮ್ಮದೇ ರಾಕೆಟ್‌ನಲ್ಲಿ ಆದಷ್ಟು ಶೀಘ್ರದಲ್ಲಿ ಒಬ್ಬರು ಬಾಹ್ಯಾಕಾಶ ಯಾನ ಮಾಡಲಿದ್ದಾರೆ ಎಂದು ಅಂತರರಾಷ್ಟ್ರೀಯ ಬಾಹ್ಯಾಕಾಶಯಾನವನ್ನು ಯಶಸ್ವಿಯಾಗಿ ಪೂರೈಸಿರುವ ಗಗನಯಾನಿ ಶುಭಾಂಶು ಶುಕ್ಲಾ ಅವರು ಗುರುವಾರ ಹೇಳಿದರು.

'ಭಾರತವು ಜಗತ್ತಿನಲ್ಲಿಯೇ ಅತ್ಯುತ್ತಮವಾಗಿ ಕಾಣುತ್ತಿದೆ. 1984ರಲ್ಲಿ ಗಗನಯಾನ ಮಾಡಿದ ಭಾರತದ ರಾಕೇಶ್ ಶರ್ಮಾ ಅವರ ಹೆಸರು ಇಂದಿಗೂ ಪ್ರಸಿದ್ಧವಾಗಿದೆ' ಎಂದು ಶುಕ್ಲಾ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಆಕ್ಸಿಯಂ-4' ಗಗನಯಾನದಿಂದ ದೊರೆತಿರುವ ಅದ್ಭುತ ಅನುಭವವು ಭಾರತದ ಗಗನಯಾನ ಯೋಜನೆಗೆ ಅನುಕೂಲಕಾರಿಯಾಗಲಿದೆ. ನಾನು ಸಾಕಷ್ಟು ಕಲಿತಿದ್ದೇನೆ' ಎಂದು ಶುಕ್ಲಾ ಹರ್ಷ ವ್ಯಕ್ತಪಡಿಸಿದರು. 'ಇನ್ನು ಕೆಲವೇ ತಿಂಗಳುಗಳಲ್ಲಿ ದೀಪಾವಳಿ ಬರಲಿದೆ. ಇದೇ ಸಮಯದಲ್ಲಿ ಶ್ರೀರಾಮ ಆಯೋಧ್ಯೆಯನ್ನು ಪ್ರವೇಶಿ ಸಿದ್ದು. ಪ್ರಸ್ತುತ ನನ್ನನ್ನು ನಾನು ಲಕ್ಷ್ಮಣ ಮತ್ತು ಶುಕ್ಲಾ ಅವರನ್ನು ರಾಮ ಎಂದು ಪರಿಗಣಿಸುತ್ತೇನೆ. ನಾನು ಶುಕ್ಲಾ ಅವರಿಗಿಂತ ಹಿರಿಯನಾಗಿದ್ದರೂ ಅವರು ನನಗೆ ಅಣ್ಣನಂತೆ' ಎಂದು ಭಾರತ ಗಗನ ಯಾನದ ಭಾಗವಾಗಿರುವ ಗ್ರೂಪ್ ಕ್ಯಾಪ್ಟನ್ ಪ್ರಶಾಂತ್ ನಾಯರ್ ಹೇಳಿದರು.

'ಗಗನಯಾತ್ರಿಗಳ ಜೀವ ಅಪಾಯದಲ್ಲಿತ್ತು'

ನವದೆಹಲಿ (ಪಿಟಿಐ): 'ಫಾಲ್ಕನ್ 9' ರಾಕೆಟ್‌ನಲ್ಲಿನ ದ್ರವ್ಯ ಆಮ್ಲಜನಕ ಸೋರಿಕೆ ವಿಷಯವನ್ನು ಸ್ಪೇಸ್‌ಎಕ್ಸ್ ಲಘುವಾಗಿ ತೆಗದುಕೊಂಡಿತ್ತು. ಶುಭಾಂಶು ಶುಕ್ಲಾ ಸೇರಿದಂತೆ ನಾಲ್ವರು ಗಗನಯಾತ್ರಿಗಳ ಜೀವವನ್ನು ಅಪಾಯಕ್ಕೆ ತಳ್ಳಿತ್ತು ಎಂದು ಇಸ್ರೊ ಮುಖ್ಯಸ್ಥ ವಿ. ನಾರಾಯಣ್ ಗುರುವಾರ ತಿಳಿಸಿದ್ದಾರೆ.



ನಾರಾಯಣ್

ಇಸ್ರೊ ಎಂಜಿನಿಯರ್‌ಗಳ ಒತ್ತಾಯದ ಮೇರೆಗೆ ಪರಿಶೀಲನೆ ನಡೆಸಿದಾಗ ಸ್ಪೇಸ್‌ಎಕ್ಸ್ ರಾಕೆಟ್ ಎಂಜಿನ್‌ಗಳಿಗೆ ದ್ರವ ಆಮ್ಲಜನಕವನ್ನು ಸಾಗಿಸುವ ಆಕ್ಸಿಡೈಸರ್ ಲೈನ್‌ಗಳಲ್ಲಿ ಸೋರಿಕೆಯಾಗುತ್ತಿರುವುದು ಮತ್ತು ಬಿರುಕು ಬಿಟ್ಟಿರುವುದು ಪತ್ತೆಯಾಗಿತ್ತು ಎಂದು ನಾರಾಯಣ್ ತಿಳಿಸಿದ್ದಾರೆ.

'ಬಿರುಕಿನೊಂದಿಗೆ ರಾಕೆಟ್ ಉಡಾವಣೆಯಾಗಿದ್ದರೆ ಕಂಪನಗಳೊಂದಿಗೆ ಅದು ಮೇಲಕ್ಕೇರುವಾಗಲೇ ದಾರಿ ತಪ್ಪುವ ಆತಂಕವಿತ್ತು. ಹಾಗೆ ಆಗಿದ್ದಿದ್ದರೆ ದೊಡ್ಡ ದುರಂತವೇ ಸಂಭವಿಸುತ್ತಿತ್ತು' ಎಂದು ತಿಳಿಸಿದ್ದಾರೆ. 'ಬಿರುಕನ್ನು ಕಂಡು ಸ್ಪೇಸ್‌ಎಕ್ಸ್ ಆಶ್ಚರ್ಯಪಟ್ಟಿತ್ತು. ಅಂತಿಮವಾಗಿ ಎಲ್ಲವನ್ನೂ ಸರಿಪಡಿಸಲಾಗಿತ್ತು. ದ್ರವ್ಯ ಆಮ್ಲಜನಕ ಚಾಲಿತ ಎಂಜಿನ್ ಮೇಲೆ ಕೆಲಸ ಮಾಡುತ್ತಿರುವ ಇಸ್ರೊ ಇದನ್ನು ಸರಿಪಡಿಸುವಂತೆ ಸ್ಪೇಸ್‌ಎಕ್ಸ್‌ಗೆ ಒತ್ತಾಯಿಸಿತ್ತು. ಆ ಮೂಲಕ ನಾಲ್ಕು ಗಗನಯಾತ್ರಿಗಳ ಜೀವ ಉಳಿಸಿದ್ದೇವೆ' ಎಂದರು.

ತೆಲಂಗಾಣ: ಇಬ್ಬರು ನಕ್ಸಲರ ಶರಣಾಗತಿ

ಹೈದರಾಬಾದ್ (ಪಿಟಿಐ): ನಿಷೇಧಿತ ನಕ್ಸಲ್ ಸಂಘಟನೆ ಸಿಪಿಐ (ಮಾವೋವಾದಿ)ಯ ಇಬ್ಬರು ನಕ್ಸಲರು ಗುರುವಾರ ತೆಲಂಗಾಣ ಪೊಲೀಸರಿಗೆ ಶರಣಾಗಿದ್ದಾರೆ.

40 ವರ್ಷಗಳಿಂದ ಸಿಪಿಐ (ಮಾವೋವಾದಿ)ನ ಸಕ್ರಿಯ ಸದಸ್ಯೆಯಾಗಿದ್ದ ಕಾಕರಾಳ ಸುನಿತಾ ಅಲಿಯಾಸ್ ಬದ್ರಿ (62) ಮತ್ತು ಚೆನ್ನೂರು ಹರೀಶ್ (35) ಅಲಿಯಾಸ್ ರಾಮಣ್ಣ ಅವರು ರಾಚಕೊಂಡ ಪೊಲೀಸ್ ಕಮಿಷನರ್ ಜಿ ಸುಧೀರ್ ಬಾಬು ಅವರ ಸಮ್ಮುಖದಲ್ಲಿ ಮುಖ್ಯವಾಹಿನಿಗೆ ಬಂದಿದ್ದಾರೆ. ವಿದ್ಯಾರ್ಥಿ ಜೀವನದಲ್ಲೇ ಮಾವೋವಾದಿ ಸಿದ್ಧಾಂತಗಳಿಂದ ಪ್ರೇರೇಪಿತರಾಗಿದ್ದ ಇಬ್ಬರೂ ನಕ್ಸಲ್ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದರು.

ಮುಖ್ಯವಾಹಿನಿಗೆ ಬರುವ ನಕ್ಸಲರಿಗೆ ಸರ್ಕಾರವು ನೀಡುವ ಬೆಂಬಲದಿಂದ ಸುನಿತಾ ಮತ್ತು ಹರೀಶ್ ಬದಲಾವಣೆ ಬಯಸಿದರು ಎಂದು ಪೊಲೀಸರು ತಿಳಿಸಿದ್ದಾರೆ.

ಗಣಿ ಅಕ್ರಮ: ₹52,453 ಕೋಟಿ ನಷ್ಟ

ಒಂದನೇ ಪುಟದಿಂದ...

ರಾಜ್ಯದಲ್ಲಿ 'ಬಿ' ವರ್ಗದ 60 ಮತ್ತು 'ಸಿ' ವರ್ಗದ 51 ಸೇರಿ ಒಟ್ಟು 111 ಗಣಿ ಗುತ್ತಿಗೆಗಳಿವೆ. ಕಬ್ಬಿಣದ ಅದಿರನ್ನು ಅಂದಾಜಿಸಲು ಕೇಂದ್ರ ಉನ್ನತಾಧಿಕಾರ ಸಮಿತಿಯ ಸದಸ್ಯ ಕಾರ್ಯದರ್ಶಿಯ ಅಧ್ಯಕ್ಷತೆಯಲ್ಲಿ ರಾಜ್ಯ ಸರ್ಕಾರ ರಚಿಸಿದ 'ಅದಿರು ಮೌಲ್ಯಮಾಪನ ಸಮಿತಿ'ಯು 'ಸಿ' ವರ್ಗದ 51 ಗಣಿಗುತ್ತಿಗೆಗಳ ಪೈಕಿ 13 ಗಣಿ ಗುತ್ತಿಗೆಗಳಲ್ಲಿ ಹೆಚ್ಚುವರಿಯಾಗಿ 4.56 ಕೋಟಿ ಟನ್ ಕಬ್ಬಿಣದ ಅದಿರು ತೆಗೆದಿರುವುದಾಗಿ ಅಂದಾಜಿಸಿದೆ. ಇನ್ನುಳಿದ 'ಸಿ' ವರ್ಗದ 38 ಗಣಿ ಗುತ್ತಿಗೆಗಳಿಂದ ರಾಜಧನ ಪಾವತಿಸದೆ 5.14 ಕೋಟಿ ಟನ್ ಅದಿರು ತೆಗೆಯಲಾಗಿದೆ ಎಂದು ಕೆಎಸ್‌ಆರ್‌ಎಸ್‌ಎಸಿ ಅಂದಾಜಿಸಿದೆ.

ಅದಿರು ಮೌಲ್ಯಮಾಪನ ಸಮಿತಿಯು 'ಬಿ' ವರ್ಗದ 19 ಗಣಿ ಗುತ್ತಿಗೆಗಳಿಂದ 2.44 ಕೋಟಿ ಟನ್ ಕಬ್ಬಿಣದ ಅದಿರನ್ನು ಅನುಮತಿ ಇಲ್ಲದೆ ಹೆಚ್ಚುವರಿಯಾಗಿ ಹೊರತೆಗೆಯಲಾಗಿದೆ ಎಂದು ಅಂದಾಜಿಸಿದೆ. ಇನ್ನುಳಿದ 'ಬಿ' ವರ್ಗದ 43 ಗಣಿಗುತ್ತಿಗೆಗಳಿಂದ 6.93 ಕೋಟಿ ಟನ್ ಅದಿರು ತೆಗೆದಿರುವುದನ್ನು ಉಪಗ್ರಹ ಚಿತ್ರಗಳ ಮಾಹಿತಿ ಆಧರಿಸಿ ಕೆಎಸ್‌ಆರ್‌ಎಸ್‌ಎಸಿ ಅಂದಾಜಿಸಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಕಬ್ಬಿಣದ ಅದಿರಿನ ಪ್ರಮಾಣ ಅಂದಾಜಿಸಲು ಕೆಎಸ್‌ಆರ್‌ಎಸ್‌ಎಸಿ ಸಾಕಷ್ಟು ಕಾಲಾವಕಾಶ ತೆಗೆದುಕೊಂಡಿರುವುದು ಅಕ್ರಮದ ತನಿಖೆಯ ಮೇಲೆ ಪರಿಣಾಮ ಬೀರಿದೆ. ಈ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಈ ಸಂಸ್ಥೆಯ ಜವಾಬ್ದಾರಿಯುತ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿ 'ಸಿ' ವರ್ಗದ ಗಣಿ ಗುತ್ತಿಗೆಗಳಿಗೆ ಸಂಬಂಧಿಸಿದ ವರದಿಗಳನ್ನು ಮೂರು ತಿಂಗಳ ಒಳಗಾಗಿ ಅಂತಿಮಗೊಳಿಸಲು ಸೂಚಿಸಬಹುದು ಎಂದೂ ವರದಿ ಹೇಳಿದೆ.

ಭಾರತ ಎ ತಂಡಕ್ಕೆ ಶಫಾಲಿ ಆಸರೆ

ಬ್ರಿಸ್ಬೇನ್ (ಪಿಟಿಐ): ಭಾರತ ಮಹಿಳಾ 'ಎ' ತಂಡವು ಮಳೆಯ ಆಟ ಕಂಡ 'ಟೆಸ್ಟ್' ಪಂದ್ಯದಲ್ಲಿ ಆಸ್ಟ್ರೇಲಿಯಾ 'ಎ' ವಿರುದ್ಧ ಮೊದಲ ದಿನ 5 ವಿಕೆಟ್‌ಗೆ 93 ರನ್ ಗಳಿಸಿ ಸಂಕಷ್ಟದಲ್ಲಿದೆ.

ಗುರುವಾರ ಟಾಸ್ ಗೆದ್ದ ಆತಿಥೇಯ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಏಕದಿನ ವಿಶ್ವಕಪ್ ಟೂರ್ನಿಗೆ ತಂಡದಲ್ಲಿ ಸ್ಥಾನ ಪಡೆಯಲು ವಿಫಲರಾದ ಶಫಾಲಿ ವರ್ಮಾ (35; 38ಎ, 4x8) ಅವರು ಭಾರತದ ಪರ ಕೊಂಚ ಪ್ರತಿರೋಧ ತೋರಿದರು. ಅಗ್ರ ಬ್ಯಾಟರ್‌ಗಳಾದ ನಂದಿನಿ ಕಶ್ಯಪ್ ಮತ್ತು ಧಾರಾ ಗುಜ್ಜರ್ ಅವರು ಖಾತೆ ತೆರೆಯುವ ಮುನ್ನ ಪೆವಿಲಿಯನ್ ಸೇರಿದರು.

ಆರು ರನ್ ಗಳಿಸುವಷ್ಟರಲ್ಲಿ ಎರಡು ವಿಕೆಟ್ ಕಳೆದುಕೊಂಡ ತಂಡಕ್ಕೆ ಶಫಾಲಿ ಮತ್ತು ರಾಘವಿ ಬಿಸ್ಟ್ (ಔಟಾಗದೇ 26; 44ಎ, 4x5) ಚೇತರಿಕೆ ನೀಡಿದರು. ಆತಿಥೇಯ ತಂಡದ ಜಾರ್ಜಿಯಾ ಪ್ರೆಸ್ಟ್‌ವಿಡ್ಜ್ ಮೂರು ವಿಕೆಟ್ ಪಡೆದು ಮಿಂಚಿದರು.

ಸಂಕ್ಷಿಪ್ತ ಸ್ಕೋರ್: ಭಾರತ ಎ: 23.2 ಓವರ್‌ಗಳಲ್ಲಿ 5 ವಿಕೆಟ್‌ಗೆ 93 (ಶಫಾಲಿ ವರ್ಮಾ 35, ರಾಘವಿ ಬಿಸ್ಟ್ ಔಟಾಗದೇ 26; ಜಾರ್ಜಿಯಾ ಪ್ರೆಸ್ಟ್‌ವಿಡ್ಜ್ 25ಕ್ಕೆ 3). ಆಸ್ಟ್ರೇಲಿಯಾ ಎ ಎದುರು.

ದ್ವಿಪಕ್ಷೀಯ ಟೂರ್ನಿಗಳ ಆಯೋಜನೆ ಇಲ್ಲ: ಕ್ರೀಡಾ ಸಚಿವಾಲಯ ಸ್ಪಷ್ಟನೆ

ಏಷ್ಯಾಕಪ್: ಭಾರತ–ಪಾಕ್ ಪಂದ್ಯ ತಡೆ ಅಸಾಧ್ಯ

ನವದೆಹಲಿ (ಪಿಟಿಐ): ಭಾರತ ಮತ್ತು ಪಾಕಿಸ್ತಾನ ಕ್ರಿಕೆಟ್ ತಂಡಗಳ ನಡುವಣ ದ್ವಿಪಕ್ಷೀಯ ಸರಣಿಗಳನ್ನು ಆಯೋಜಿಸುವುದಿಲ್ಲ. ತಟಸ್ಥ ಸ್ಥಳಗಳಲ್ಲಿಯೂ ಆಡಿಸುವುದಿಲ್ಲ. ಆದರೆ ಬಹು ತಂಡಗಳ ಏಷ್ಯಾ ಕಪ್ ಟೂರ್ನಿಯಲ್ಲಿ ಭಾರತ, ಪಾಕ್ ಮುಖಾಮುಖಿಯನ್ನು ತಡೆಯುವುದು ಸಾಧ್ಯವಿಲ್ಲ ಎಂದು ಕೇಂದ್ರ ಕ್ರೀಡಾ ಸಚಿವಾಲಯ ಸ್ಪಷ್ಟಪಡಿಸಿದೆ.

ನೂತನ ಕ್ರೀಡಾ ನೀತಿ ಅನ್ವಯ ಭಾರತದ ಅಥ್ಲೀಟ್‌ಗಳು ಪಾಕಿಸ್ತಾನಕ್ಕೆ ಹೋಗುವುದನ್ನು ಹಾಗೂ ಅಲ್ಲಿಯ ಕ್ರೀಡಾಪಟುಗಳು ಭಾರತದಲ್ಲಿ ನಡೆಯುವ ಟೂರ್ನಿಗಳಿಗೆ ಬರುವುದಕ್ಕೆ ತಡೆಯೊಡ್ಡಲಾಗಿದೆ. ಇದು ಕೂಡಲೇ ಜಾರಿಗೆ ಬಂದಿರುವ ನಿಯಮವಾಗಿದೆ ಎಂದು ಸಚಿವಾಲಯದ ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಹು ತಂಡಗಳ ಟೂರ್ನಿಗಳು ಪಾಕಿಸ್ತಾನದಲ್ಲಿ ನಡೆದರೆ ಭಾರತಕ್ಕೆ ಪ್ರವಾಸ ಮಾಡಲು ಅವಕಾಶವಿದೆಯೇ ಎಂಬ ಪ್ರಶ್ನೆಗೆ, 'ಅಂತಹ ಸಂದರ್ಭಗಳಲ್ಲಿ ಕೂಲಂಕಷವಾಗಿ ಪರಿಶೀಲಿಸಿ ನಿರ್ಣಯ ಕೈಗೊಳ್ಳುತ್ತೇವೆ' ಎಂದು ಪ್ರತಿಕ್ರಿಯಿಸಿದರು.

'ಬಹು ತಂಡಗಳ ಟೂರ್ನಿಗಳಲ್ಲಿಯೂ ನಮ್ಮ ಅಥ್ಲೀಟ್‌ಗಳನ್ನು ತೊಂದರೆಗೆ ಸಿಲುಕಿಸುವುದಿಲ್ಲ. ಎಷ್ಟೇ ಆದರೂ ಪಾಕಿಸ್ತಾನವು ಕೊಂಪೆಯೆಂದು ಘೋಷಿಸಲು ಹಿಂಜರಿಕೆ ಏನಿಲ್ಲ ಮತ್ತು ಅದು ಫಳಫಳ ಹೊಳೆಯುವ ಮರ್ಸಿಡೀಸ್ ಕಾರಿನಂತಿರುವ ಭಾರತಕ್ಕೆ ಕೊಳೆ ಅಂಟಿಸಬಹುದು' ಎಂದು ಅಧಿಕಾರಿ ಹೇಳಿದರು.

ಸಚಿವಾಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ವಿವರವಾದ ಕ್ರೀಡಾ ನೀತಿಯನ್ನು ಪ್ರಕಟಿಸಲಾಗಿದೆ. ಅದರಲ್ಲಿ; 'ಈಚೆಗೆ ಪೆಹಲ್ಗಾಮ್‌ನಲ್ಲಿ ನಡೆದಿದ್ದ ಭಯೋತ್ಪಾದನಾ ದಾಳಿಯಲ್ಲಿ 26 ಜನರು ಹತರಾಗಿದ್ದರು. ಆ ದಾಳಿಯು ಪಾಕ್ ಪ್ರಚೋದಿತವಾಗಿದೆ. ಆದ್ದರಿಂದ ನೆರೆಯ ದೇಶವು ಅಪರಾಧಿಯಾಗಿದೆ. ಆ ದಾಳಿಗೆ ಪ್ರತಿಕಾರವಾಗಿ ಭಾರತವು 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ನಡೆಸಿತ್ತು' ಎಂದು ಉಲ್ಲೇಖಿಸಿದೆ.

'ಪಾಕಿಸ್ತಾನ ತಂಡ ಇರುವ ಕ್ರೀಡಾಕೂಟಗಳಲ್ಲಿ ಭಾರತದ ಭಾಗವಹಿಸುವಿಕೆಯ ಕುರಿತ ನೀತಿಯು ಸ್ಪಷ್ಟವಾಗಿದೆ. ಭಾರತ ತಂಡಗಳು ಪಾಕಿಸ್ತಾನದಲ್ಲಿ ನಡೆಯುವ ಟೂರ್ನಿಗಳಲ್ಲಿ ಭಾಗವಹಿಸುವುದಿಲ್ಲ. ಅಲ್ಲದೇ ಪಾಕ್ ತಂಡಗಳು ಭಾರತಕ್ಕೆ ಬಂದು ಆಡಲು ಅನುಮತಿಯನ್ನೂ ನೀಡುವುದಿಲ್ಲ' ಎಂದು ಹೇಳಿದ್ದಾರೆ.

'ಅಮೆರಿಕದಲ್ಲಿ ಆಯೋಜನೆಗೊಂಡರೂ ಭಾರತ ಮತ್ತು ಪಾಕ್ ನಡುವಣ ದ್ವಿಪಕ್ಷೀಯ ಸರಣಿ ನಡೆಸುವುದಿಲ್ಲ' ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಭಾರತವು 2030ರಲ್ಲಿ ಕಾಮನ್‌ವೆಲ್ತ್ ಗೇಮ್ಸ್ ಮತ್ತು 2036ರಲ್ಲಿ ಒಲಿಂಪಿಕ್ ಕೂಟಕ್ಕೆ ಆತಿಥ್ಯ ವಹಿಸುವ ಅವಕಾಶಕ್ಕಾಗಿ ಬಿಡ್ ಮಾಡಿದೆ. ವಿಶ್ವಮಟ್ಟದ ಕ್ರೀಡಾ ಕೂಟಗಳನ್ನು ಆಯೋಜಿಸುವ ದೇಶಗಳು ಎಲ್ಲರನ್ನೂ ಒಳಗೊಳ್ಳಬೇಕಿರುವುದು ಒಲಿಂಪಿಕ್ ಆಂದೋಲನದ ಧ್ಯೇಯವಾಗಿದೆ. ಅದಕ್ಕಾಗಿಯೇ ಮುಂದಿನ ತಿಂಗಳು ಬಿಹಾರದಲ್ಲಿ ನಡೆಯಲಿರುವ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಆಡಲು ಪಾಕಿಸ್ತಾನದ ಆಟಗಾರರಿಗೆ ಕೇಂದ್ರ ಸರ್ಕಾರವು ವೀಸಾ ನೀಡಲು ಸಮ್ಮತಿಸಿದೆ.

'ಹೊಸ ಕಾಯ್ದೆಯಡಿಯಲ್ಲಿ ಬಿಸಿಸಿಐ ಚುನಾವಣೆ'

ನವದೆಹಲಿ (ಪಿಟಿಐ): ಮುಂದಿನ ತಿಂಗಳು ನಡೆಯಲಿರುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಚುನಾವಣೆಗಳನ್ನು ಹೊಸ ಕ್ರೀಡಾ ಕಾಯ್ದೆಯ ಪ್ರಕಾರ ನಡೆಸಬೇಕು ಎಂದು ಕೇಂದ್ರ ಕ್ರೀಡಾ ಸಚಿವಾಲಯವು ಇಂಗಿತ ವ್ಯಕ್ತಪಡಿಸಿದೆ.

ಆದರೆ ಕಾಯ್ದೆಯನ್ನು ಆರು ತಿಂಗಳಲ್ಲಿ ಪೂರ್ಣಪ್ರಮಾಣದಲ್ಲಿ ಅನುಷ್ಠಾನ ಮಾಡಲು ಸಚಿವಾಲಯವು ಗುರಿಯಿಟ್ಟುಕೊಂಡಿದೆ. ಆದರೆ ಕ್ರಿಕೆಟ್ ಸಂಸ್ಥೆಯಲ್ಲಿ ಸೂಕ್ತ ಸಮಯಕ್ಕೆ ಹೊಸ ಕಾಯ್ದೆಯ ಅನುಷ್ಠಾನವು ಪೂರ್ಣಗೊಳ್ಳದಿದ್ದರೆ ಸುಪ್ರೀಂಕೋರ್ಟ್ ಅನುಮೋದಿಸಿರುವ ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ಸಮಿತಿಯ ಶಿಫಾರಸುಗಳ ಅನ್ವಯ ಚುನಾವಣೆ ನಡೆಸಬಹುದು ಎಂದು ಕ್ರೀಡಾ ಸಚಿವಾಲಯದ ಮೂಲಗಳು ತಿಳಿಸಿವೆ.

'ಬಿಸಿಸಿಐ ಸೇರಿದಂತೆ ಎಲ್ಲ ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳು (ಎನ್‌ಎಸ್‌ಎಫ್) ಕಾಯ್ದೆಯನ್ನು ಪೂರ್ಣವಾಗಿ ಜಾರಿಗೊಳಿಸಿದ ನಂತರ ಅದರನ್ವಯ ಚುನಾವಣೆಗಳನ್ನು ನಡೆಸಬೇಕಾಗುತ್ತದೆ' ಎಂದು ಮೂಲಗಳು ತಿಳಿಸಿವೆ.

ಲೋಧಾ ಸಮಿತಿಯ ಶಿಫಾರಸುಗಳಲ್ಲಿ ಪದಾಧಿಕಾರಿಗಳ ವಯೋಮಿತಿಯನ್ನು 70 ವರ್ಷಕ್ಕೆ ಮಿತಿಗೊಳಿಸಲಾಗಿದೆ. ಆದರೆ ಹೊಸ ಕಾಯ್ದೆಯಲ್ಲಿ ಅಂತರರಾಷ್ಟ್ರೀಯ ಫೆಡರೇಷನ್‌ಗಳ ಬೈಲಾ ಮತ್ತು ಕಾನೂನುಗಳು ಅನುವು ಮಾಡಿದರೆ 70 ರಿಂದ 75 ವರ್ಷಗಳವರೆಗೆ ವಯಸ್ಸಿನ ಮಿತಿ ಇರುತ್ತದೆ. ಹೊಸ ಕಾಯ್ದೆಯಲ್ಲಿ ಬಿಸಿಸಿಐ ಚುನಾವಣೆ ನಡೆಸಲು ಸಿದ್ಧವಾದರೆ, ಐಸಿಸಿ ನಿಯಮದಲ್ಲಿ ಪದಾಧಿಕಾರಿಗಳ ಸ್ಪರ್ಧೆಗೆ ವಯಸ್ಸಿನ ಮಿತಿ ಇಲ್ಲದಿರುವ ನಿಯಮ ಅನ್ವಯವಾಗುತ್ತದೆ.

ಬಿಸಿಸಿಐ ಅಧ್ಯಕ್ಷರಾಗಿದ್ದ ರೋಜರ್ ಬಿನ್ನಿ ಅವರಿಗೆ ಈಚೆಗೆ 70 ವರ್ಷ ವಯಸ್ಸು ತುಂಬಿತು. ಅದರಿಂದಾಗಿ ಅವರ ಅಧಿಕಾರಾವಧಿ ಕೊನೆಗೊಂಡಿತು. ಆದರೂ ಕೂಡ ಬಿಸಿಸಿಐ ಇದುವರೆಗೂ ಹಂಗಾಮಿ ಅಧ್ಯಕ್ಷರನ್ನು ನೇಮಕ ಮಾಡಿಲ್ಲ. ಸೆಪ್ಟೆಂಬರ್ ಕೊನೆಯ ವಾರದಲ್ಲಿ ಮಂಡಳಿಯು ತನ್ನ ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ ಚುನಾವಣೆಗಳು ನಡೆಯಲಿವೆ.

ರಾಷ್ಟ್ರೀಯ ಅಂತರ ರಾಜ್ಯ ಸೀನಿಯರ್ ಅಥ್ಲೆಟಿಕ್ ಕೂಟ

400 ಮೀ. ಓಟ: ವಿಶಾಲ್ ದಾಖಲೆ



ವಿಶಾಲ್ ತೆನ್ನರಸು ಕಾಯಲ್ವಿಳಿ

ಚೆನ್ನೈ (ಪಿಟಿಐ): ತಮಿಳುನಾಡಿನ ವಿಶಾಲ್ ತೆನ್ನರಸು ಕಾಯಲ್ವಿಳಿ ಅವರು ರಾಷ್ಟ್ರೀಯ ಅಂತರ ರಾಜ್ಯ ಸೀನಿಯರ್ ಅಥ್ಲೆಟಿಕ್ ಕೂಟದ ಎರಡನೇ ದಿನವಾದ ಗುರುವಾರ ಪುರುಷರ 400 ಮೀ. ಓಟವವನ್ನು 45.12 ಸೆ.ಗಳ ದಾಖಲೆ ಅವಧಿಯೊಳಗೆ ಓಡಿ ಮಿಂಚಿದರು.

21 ವರ್ಷ ವಯಸ್ಸಿನ ವಿಶಾಲ್ ತೆನ್ನರಸು ಅಮೋಘ ಓಟ ಓಡಿ ಎದುರಾಳಿಗಳನ್ನೆಲ್ಲಾ ಆರಾಮವಾಗಿ ಹಿಂದೆಹಾಕಿ ನೂತನ ರಾಷ್ಟ್ರೀಯ ದಾಖಲೆ ಬರೆದರು. ಆ ಮೂಲಕ ದೇಶದ ಅಗ್ರಮಾನ್ಯ 'ಕ್ವಾರ್ಟರ್ ಮೈಲ್ ಓಟಗಾರ' ಎಂಬ ಹಿರಿಮೆಯನ್ನು ಇನ್ನಷ್ಟು ಗಟ್ಟಿಗೊಳಿಸಿದರು. ಈ ಹಿಂದಿನ ದಾಖಲೆ (45.21 ಸೆ.) ಕೇರಳದ ಮುಹಮ್ಮದ್ ಅನಸ್ ಹೆಸರಿನಲ್ಲಿತ್ತು. ಅವರು ಝೆಕ್ ರಿಪಬ್ಲಿಕ್‌ನ ಕ್ಲಾಡ್ನೊ ಅಥ್ಲೆಟಿಕ್ ಕೂಟದಲ್ಲಿ ಇದನ್ನು ದಾಖಲಿಸಿದ್ದರು.

ವಿಶಾಲ್ ಅವರ ಈ ಹಿಂದಿನ ಶ್ರೇಷ್ಠ ಸಾಧನೆ 45.57 ಸೆ.ಗಳಾಗಿದ್ದು, ಈ ವರ್ಷದ ಮೇ ತಿಂಗಳಲ್ಲಿ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ದಾಖಲಿಸಿದ್ದರು. ದಕ್ಷಿಣ ಕೊರಿಯಾದಲ್ಲಿ ನಡೆದ ಆ ಕೂಟದಲ್ಲಿ ಅವರು ನಾಲ್ಕನೇ ಸ್ಥಾನ ಗಳಿಸಿದ್ದರು. 4x400 ಮೀ ಮಿಶ್ರ ರಿಲೇ ಚಿನ್ನ ಮತ್ತು 4x400 ಮೀ. ರಿಲೆಯಲ್ಲಿ ಬೆಳ್ಳಿ ಗೆದ್ದ ತಂಡದಲ್ಲಿ ಅವರು ಓಡಿದ್ದರು.

ಇದು (45.12 ಸೆ.) ಈ ವರ್ಷದ ನಾಲ್ಕನೇ ಅತಿ ವೇಗದ ಅವಧಿ ಎನಿಸಿತು. ಜಪಾನ್‌ನ ಯುಕಿ ಜೋಸೆಫ್ ನಕಾಜಿಮ (44.84 ಸೆ.), ಕತಾರ್‌ನ ಅಮ್ಮರ್ ಇಸ್ಮಾಯಿಲ್ ಇಬ್ರಾಹಿಂ (44.90 ಸೆ.) ಮತ್ತು ಚೀನಾದ ಲಿಯಕೈ ಲಿಯು (45.06 ಸೆ.) ಅವರು ಇದಕ್ಕಿಂತ ವೇಗವಾಗಿ ಓಡಿದ್ದಾರೆ. ಆದರೆ, ಅವರು ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆಗೆ ನಿಗದಿಪಡಿಸಿದ್ದ ಅವಧಿ (44.85 ಸೆ.) ಒಳಗೆ ಗುರಿಮುಟ್ಟಲಾಗಲಿಲ್ಲ.

ತಮಿಳುನಾಡಿನ ರಾಜೇಶ್ ರಮೇಶ್ (46.04 ಸೆ.) ಮತ್ತು ಹರಿಯಾಣದ ವಿಕ್ರಾಂತ್ ಪಾಂಚಾಲ್ (46.17 ಸೆ.) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಮಹಿಳೆಯರ ಪೋಲ್ ವಾಲ್ಟ್‌ನಲ್ಲಿ ತಮಿಳುನಾಡಿನ ಬರನಿಕಾ ಇಳಂಗೋವನ್ 4.10 ಮೀ. ಜಿಗಿದು ಪವಿತ್ರಾ ವೆಂಕಟೇಶ್ ಹೆಸರಿನಲ್ಲಿದ್ದ (2023ರ) ಕೂಟ ದಾಖಲೆ ಸರಿಗಟ್ಟಿದರು. ಕೇರಳದ ಮರಿಯಾ ಜೈಸನ್ (4.05 ಮೀ) ಮತ್ತು ತಮಿಳುನಾಡಿನ ಸತ್ಯಾ ತಮಿಳರಸನ್ (4 ಮೀ.) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಫೈನಲ್‌ಗೆ ಕಾಜಲ್ ಲಗ್ಗೆ



ಸಮಕೋವ್ (ಬಲ್ಗೇರಿಯಾ), (ಪಿಟಿಐ): ಉದಯೋನ್ಮುಖ ಕುಸ್ತಿಪಟು ಕಾಜಲ್ ಅವರು ಸುಲಭ ಗೆಲುವುಗಳೊಂದಿಗೆ ವಿಶ್ವ 20 ವರ್ಷದೊಳಗಿವರ ಕುಸ್ತಿ ಚಾಂಪಿಯನ್‌ಷಿಪ್‌ನ ಮಹಿಳೆಯರ 72 ಕೆ.ಜಿ. ವಿಭಾಗದಲ್ಲಿ ಗುರುವಾರ ಫೈನಲ್ ತಲುಪಿದರು. ರೀನಾ (55 ಕೆಜಿ) ಮತ್ತು ಪ್ರಿಯಾ (76 ಕೆಜಿ) ಬೆಳ್ಳಿ ಪದಕ ಗೆದ್ದರು.

ಸೆಮಿಫೈನಲ್ ಸೆಣಸಾಟಗಳಲ್ಲಿ ಸೋತ ಶ್ರುತಿ (50 ಕೆ.ಜಿ) ಮತ್ತು ಸಾರಿಕಾ (53 ಕೆ.ಜಿ) ಅವರು ಕಂಚಿನ ಪದಕಕ್ಕೆ ಸೆಣಸಾಡುವ ಅವಕಾಶ ಹೊಂದಿದ್ದಾರೆ.

ಗ್ರೀಕೊ ರೋಮನ್ (60 ಕೆ.ಜಿ.) ಸ್ಪರ್ಧೆಯಲ್ಲಿ ಸೂರಜ್ ಕೂಡ ಸೆಮಿಫೈನಲ್ ತಲುಪಿದ್ದಾರೆ. ಆದರೆ 82 ಕೆ.ಜಿ. ವಿಭಾಗದಲ್ಲಿ ಪ್ರಿನ್ಸ್, ಕ್ವಾರ್ಟರ್‌ಫೈನಲ್‌ನಲ್ಲಿ ನಿರ್ಗಮಿಸಿದರು.

2024ರ ಕೆಡೆಟ್ ವಿಶ್ವ ಚಾಂಪಿಯನ್ ಹಾಗೂ 20 ವರ್ಷದೊಳಗಿನವರ ಏಷ್ಯನ್ ಚಾಂಪಿಯನ್ ಆಗಿರುವ ಕಾಜಲ್, ಸೆಮಿಫೈನಲ್‌ನಲ್ಲಿ 13–6 ರಿಂದ ಅಮೆರಿಕದ ಜಾಸ್ಮಿನ್ ಡೊಲೊರೆಸ್ ರಾಬಿನ್ಸನ್ ವಿರುದ್ಧ ಜಯಗಳಿಸಿದರು.

ಪ್ರಿಯಾ ಫೈನಲ್‌ನಲ್ಲಿ 0–4ರಿಂದ ಉಕ್ರೇನ್‌ನ ನಾಡಿಯಾ ಸೊಕೊಲೊವ್ಸ್ಕಾ ವಿರುದ್ಧ ಹಾಗೂ ರೀನಾ 2-10 ಅಂತರದಿಂದ ಅಮೆರಿಕದ ಎವರೆಸ್ಟ್ ಶಿಯಾ ಲೇಡೆಕರ್ ವಿರುದ್ಧ ಸೋತರು.

ಗ್ರೀಕೊ ರೋಮನ್ (60 ಕೆ.ಜಿ.) ಸ್ಪರ್ಧೆಯಲ್ಲಿ ಸೂರಜ್ ಅವರು ಸೆಮಿಫೈನಲ್‌ನಲ್ಲಿ ಸೋಲನುಭವಿಸಿದ್ದು, ಕಂಚಿನ ಪದಕಕ್ಕೆ ಸೆಣಸಾಡುವ ಅರ್ಹತೆ ಪಡೆದರು.

ಮಿಂಚಿದ ಶ್ರೇಯಸ್, ಕ್ರಾಂತಿ

ಮಹಾರಾಜ ಟ್ರೋಫಿ: ಮೈಸೂರು ವಾರಿಯರ್ಸ್ ವಿರುದ್ಧ ಮಂಗಳೂರಿಗೆ ಜಯ

● ಮೋಹನ್ ಕುಮಾರ ಸಿ.

ಮೈಸೂರು: ಮಂಗಳೂರು ಡ್ರ್ಯಾಗನ್ಸ್ ನಾಯಕ ಶ್ರೇಯಸ್ ಗೋಪಾಲ್ (29 ರನ್ ಮತ್ತು 36ಕ್ಕೆ 3) ಅವರ ಆಲ್‌ರೌಂಡ್ ಆಟ ಮತ್ತು ಕ್ರಾಂತಿಕುಮಾರ್ (30ಕ್ಕೆ 4) ಪರಿಣಾಮಕಾರಿ ಬೌಲಿಂಗ್ ದಾಳಿಗೆ ಆತಿಥೇಯ ಮೈಸೂರು ವಾರಿಯರ್ಸ್ ಧೂಳೀಪಟವಾಯಿತು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಟ್ವೆಂಟಿ–20 ಕ್ರಿಕೆಟ್ ಟೂರ್ನಿಯ ಗುರುವಾರದ ಪಂದ್ಯದಲ್ಲಿ ಮೈಸೂರು ವಿರುದ್ಧ ಮಂಗಳೂರು 52 ರನ್‌ಗಳ ಭರ್ಜರಿ ಜಯ ಸಾಧಿಸಿತು.

ಟಾಸ್ ಗೆದ್ದ ಮೈಸೂರು ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮಂಗಳೂರು ತಂಡದ ಲೋಚನ್ ಗೌಡ (34; 31 ಎಸೆತ, 4x4, 6x1) ಹಾಗೂ ಬಿ.ಆರ್.ಶರತ್ (25) ಮೊದಲ ವಿಕೆಟ್ ಜೊತೆಯಾಟದಲ್ಲಿ 54 ರನ್ ಸೇರಿಸಿದರು. ಉತ್ತಮವಾಗಿ ಆಡುತ್ತಿದ್ದ ಶರತ್ ಅವರನ್ನು ಕುಶಾಲ್ ವಾಧ್ವಾನಿ (37ಕ್ಕೆ 2) ಔಟ್ ಮಾಡಿದರೆ, ಲೋಚನ್ ಅವರಿಗೆ ಯಶೋವರ್ಧನ್ ಪರಂತಾಪ್ (25ಕ್ಕೆ 3) ಪೆವಿಲಿಯನ್ ದಾರಿ ತೋರಿದರು. 20 ರನ್ ಸೇರಿಸುವಷ್ಟರಲ್ಲಿ 4 ವಿಕೆಟ್ ಉದುರಿದವು. ಸಂಕಷ್ಟದಲ್ಲಿದ್ದ ತಂಡಕ್ಕೆ ಶ್ರೇಯಸ್ ಗೋಪಾಲ್ (29) ಮತ್ತು ಮೆಕ್ನೀಲ್ ನರೋನಾ (31; 17 ಎಸೆತ, 6x4) ಆಸರೆಯಾದರು. 5ನೇ ವಿಕೆಟ್‌ಗಳಿಗೆ 41ರನ್ ಸೇರಿಸಿದರು.

ಇಂಗ್ಲೆಂಡ್ ಟೆಸ್ಟ್ ಸರಣಿ ನಂತರ ಮೈಸೂರು ತಂಡಕ್ಕೆ ಮರಳಿದ ಪ್ರಸಿದ್ಧ ಕೃಷ್ಣ (25ಕ್ಕೆ 2) ಕರಾರುವಾಕ್ ಬೌಲಿಂಗ್ ಮಾಡಿ, ತಿಪ್ಪಾರೆಡ್ಡಿ (5) ಹಾಗೂ ಶ್ರೇಯಸ್ ವಿಕೆಟ್ ಪಡೆದರು. ಕಡೆ ಎರಡು ಓವರ್‌ಗಳಲ್ಲಿ ಬೀಸಾಟವಾಡಿದ ಎಸ್. ಶಿವರಾಜ್ (27; 14 ಎಸೆತ, 4x2, 6x2) ತಂಡದ ಮೊತ್ತ 7ಕ್ಕೆ 173ರನ್ ತಲುಪಲು ಕಾರಣರಾದರು.

ಮಿಂಚಿದ ಕ್ರಾಂತಿ: ಗುರಿ ಬೆನ್ನಟ್ಟಿದ ಮೈಸೂರು ವಾರಿಯರ್ಸ್‌ಗೆ ಶ್ರೇಯಸ್ ಆಘಾತ ನೀಡಿದರು. ಎಸ್.ಯು.ಕಾರ್ತಿಕ್ (8), ನಾಯಕ ಮನೀಷ್ ಪಾಂಡೆ (8) ಹಾಗೂ ಕೆ.ಎಸ್.ಲಂಕೇಶ್ (11) ವಿಕೆಟ್ ಪಡೆದ ಅವರು ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ಬೆನ್ನೆಲುಬು ಮುರಿದರು.

ಉತ್ತಮವಾಗಿ ಆಡುತ್ತಿದ್ದ ಆರಂಭಿಕ ಬ್ಯಾಟರ್ ಸಿ.ಎ.ಕಾರ್ತಿಕ್ (34, 21 ಎಸೆತ, 4x2, 6x3) ಅವರನ್ನು ಸಚಿನ್ ಶಿಂಧೆ ಔಟ್ ಮಾಡಿದರೆ, ಪ್ರತಿರೋಧ ತೋರಿದ್ದ ಯಶೋವರ್ಧನ್ ಪರಂತಾಪ್ (28; 20 ಎಸೆತ, 6x2) ಮತ್ತು ಎಸ್. ಶ್ರೀನಿವಾಸ್ (14) ಅವರ ವಿಕೆಟ್ ಅನ್ನು ಕ್ರಾಂತಿಕುಮಾರ್ ಪಡೆದು ಮಿಂಚಿದರು. ಕೆ.ಗೌತಮ್ ಅವರಿಗೆ ಖಾತೆ ತೆರೆಯಲೂ ಬಿಡಲಿಲ್ಲ. ಆ ವೇಳೆಗೆ ಪಂದ್ಯವು ಡ್ರ್ಯಾಗನ್ಸ್ ವಶವಾಗಿತ್ತು.

ಸಂಕ್ಷಿಪ್ತ ಸ್ಕೋರ್: ಮಂಗಳೂರು ಡ್ರ್ಯಾಗನ್ಸ್ 20 ಓವರ್‌ಗಳಲ್ಲಿ 7ಕ್ಕೆ 173 (ಲೋಚನ್ ಗೌಡ 34, ಶ್ರೇಯಸ್ ಗೋಪಾಲ್ 29, ಎಸ್.ಶಿವರಾಜ್ 27. ಯಶೋವರ್ಧನ್ ಪರಂತಾಪ್ 25ಕ್ಕೆ 3, ಪ್ರಸಿದ್ಧ ಕೃಷ್ಣ 25ಕ್ಕೆ 2) ಮೈಸೂರು ವಾರಿಯರ್ಸ್ 17.1 ಓವರ್‌ಗಳಲ್ಲಿ 121 (ಸಿ.ಎ.ಕಾರ್ತಿಕ್ 34, ಯಶೋವರ್ಧನ್ ಪರಂತಾಪ್ 28. ಕ್ರಾಂತಿಕುಮಾರ್ 30ಕ್ಕೆ 4, ಶ್ರೇಯಸ್ ಗೋಪಾಲ್ 36ಕ್ಕೆ 3) ಪಂದ್ಯದ ಆಟಗಾರ: ಶ್ರೇಯಸ್ ಗೋಪಾಲ್

ಮೈಸೂರು ವಾರಿಯರ್ಸ್‌ನ ನಾಯಕ ಮನೀಷ್ ಪಾಂಡೆ ವಿಕೆಟ್ ಪಡೆದ ಮಂಗಳೂರು ಡ್ರ್ಯಾಗನ್ಸ್ ನಾಯಕ ಶ್ರೇಯಸ್ ಗೋಪಾಲ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು ಪ್ರಜಾವಾಣಿ ಚಿತ್ರ/ಅನೂಪ್ ರಾಘ ಟಿ.

ಪ್ಲೇ ಆಫ್ ರೇಸ್‌ನಿಂದ ಲಯನ್ಸ್ ಹೊರಕ್ಕೆ

ಮೈಸೂರು: ರೋಹನ್ ಪಾಟೀಲ (74; 45 ಎಸೆತ, 4x7, 6x3) ಅರ್ಧಶತಕದ ಬಲದಿಂದ ಬೆಂಗಳೂರು ಬ್ಲಾಸ್ಟರ್ಸ್ 7 ವಿಕೆಟ್‌ಗಳಿಂದ ಶಿವಮೊಗ್ಗ ಲಯನ್ಸ್ ತಂಡವನ್ನು ಮಣಿಸಿತು. ಸತತ ಆರು ಪಂದ್ಯಗಳಲ್ಲಿ ಸೋತ ಲಯನ್ಸ್ ಪ್ಲೇ ಆಫ್ ರೇಸ್‌ನಿಂದ ಹೊರಬಿತ್ತು.

ಮೊದಲು ಬ್ಯಾಟಿಂಗ್ ಮಾಡಿದ ಶಿವಮೊಗ್ಗ ತಂಡ ಅನೀಶ್ವರ್ ಗೌತಮ್ (23) ಬ್ಯಾಟಿಂಗ್ ನೆರವಿನಿಂದ ಶಿವಮೊಗ್ಗ ತಂಡ 9 ವಿಕೆಟ್‌ಗೆ 111 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಬ್ಲಾಸ್ಟರ್ಸ್ ತಂಡವು ಇನ್ನೂ 32 ಎಸೆತಗಳು ಇರುವಂತೆ 3 ವಿಕೆಟ್‌ಗೆ 117 ರನ್ ಕಲೆಹಾಕಿ ಸಂಭ್ರಮಿಸಿತು.

ಸಂಕ್ಷಿಪ್ತ ಸ್ಕೋರ್: ಶಿವಮೊಗ್ಗ ಲಯನ್ಸ್ 20 ಓವರ್‌ಗಳಲ್ಲಿ 9ಕ್ಕೆ 111 (ಅನೀಶ್ವರ್ ಗೌತಮ್ 23. ಮಾಧವ್ ಪಿ.ಬಜಾಜ್ 12ಕ್ಕೆ 4, ಎಂ.ಜಿ.ನವೀನ್ 30ಕ್ಕೆ 3). ಬೆಂಗಳೂರು ಬ್ಲಾಸ್ಟರ್ಸ್ 14.4 ಓವರ್‌ಗಳಲ್ಲಿ 3ಕ್ಕೆ 117 (ರೋಹನ್ ಪಾಟೀಲ 74, ಸೂರಜ್ ಅಹುಜಾ ಔಟಾಗದೇ 20) ಪಂದ್ಯದ ಆಟಗಾರ: ರೋಹನ್ ಪಾಟೀಲ

ಡ್ರಾ ಪಂದ್ಯಗಳಲ್ಲಿ ಪ್ರಜ್ಞಾನಂದ, ಗುಕೇಶ್

ಸೇಂಟ್ ಲೂಯಿ (ಪಿಟಿಐ): ವೈಲ್ಡ್ ಕಾರ್ಡ್ ಪಡೆದ ಏಕೈಕ ಆಟಗಾರ ಸಾಮ್ಯುಯೆಲ್ ಸೆವಿಯನ್ ಅವರು ಸಿಂಕ್ವೆಫೀಲ್ಡ್ ಕಪ್ ಚೆಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಜೊತೆ ಡ್ರಾ ಮಾಡಿಕೊಂಡರು.

ಭಾರತದ ಇನ್ನೊಬ್ಬ ಆಟಗಾರ ಆರ್.ಪ್ರಜ್ಞಾನಂದ ಅವರೂ ಬುಧವಾರ ಅರ್ಧ ಪಾಯಿಂಟ್ ಪಡೆದರು. ಅವರು ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್ ಜೊತೆ ಡ್ರಾ ಮಾಡಿಕೊಂಡರು.

ಮೂರು ಸುತ್ತುಗಳ ನಂತರ ಎರಡು ಪಾಯಿಂಟ್ಸ್ ಪಡೆದಿರುವ ಪ್ರಜ್ಞಾನಂದ, ಅಮೆರಿಕದ ಫ್ಯಾಬಿಯಾನೊ ಕರುವಾನ, ಲೆವೋನ್ ಅರೋನಿಯನ್ ಜೊತೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಒಟ್ಟು 10 ಆಟಗಾರರು ₹3.26 ಕೋಟಿ ಬಹುಮಾನದ ಟೂರ್ನಿಯ ಕಣದಲ್ಲಿದ್ದಾರೆ.

ಮೊದಲ ಸುತ್ತಿನಲ್ಲಿ ಪ್ರಜ್ಞಾನಂದ ಅವರಿಗೆ ಸೋತಿದ್ದ ಗುಕೇಶ್ 1.5 ಪಾಯಿಂಟ್ಸ್ ಗಳಿಸಿದ್ದಾರೆ. ಅಲಿರೇಜಾ, ವೆಸ್ಲಿ ಸೊ, ಲಗ್ರಾವ್, ಸೇವಿಯನ್ ಸಹ ಇಷ್ಟೇ ಪಾಯಿಂಟ್ಸ್ ಗಳಿಸಿದ್ದಾರೆ.

ಆರ್. ಪ್ರಜ್ಞಾನಂದ

ಕರುವಾನ ಮೂರನೇ ಸುತ್ತಿನಲ್ಲಿ ಫ್ರಾನ್ಸ್‌ನ ಅಲಿರೇಜಾ ಫಿರೋಜ ಅವರಿಗೆ ಮೊದಲ ಸೋಲು ಕಾಣಿಸಿದರು. ಅರೋನಿಯನ್ ಅವರು ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಜೊತೆ ಡ್ರಾ ಮಾಡಿಕೊಂಡರೆ, ಅಮೆರಿಕದ ವೆಸ್ಲಿ ಸೊ, ಪೋಲೆಂಡ್‌ನ ಡೂಡಾ ಯಾನ್ ಕ್ರಿಸ್ಟೋಫ್ ಅವರ ಜೊತೆ ಪಾಯಿಂಟ್ ಹಂಚಿಕೊಳ್ಳಬೇಕಾಯಿತು.

ಇನ್ನು ಆರು ಸುತ್ತುಗಳು ಉಳಿದಿವೆ.

ಮಾನಸಿ, ಅಭಿನವ್‌ಗೆ ಚಿನ್ನ

ಶಿಮ್ಕೆಟ್ (ಕಜಾಕಸ್ತಾನ): ಭಾರತದ ಮಾನಸಿ ರಘುವಂಶಿ ಮತ್ತು ಯಶಸ್ವಿ ರಾಥೋಡ್ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ಮಹಿಳಾ ಜೂನಿಯರ್ ಸ್ಕೀಟ್ ಸ್ಪರ್ಧೆಯಲ್ಲಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದುಕೊಂಡು ಗಮನ ಸೆಳೆದರು.

ಕೂಟದ ನಾಲ್ಕನೇ ದಿನ ಭಾರತದ ಶೂಟರ್‌ಗಳು ಐದು ಚಿನ್ನದ ಪದಕಗಳಲ್ಲಿ ನಾಲ್ಕನ್ನು ಗೆದ್ದು ಪ್ರಾಬಲ್ಯ ಮೆರೆದರು. ಇದರೊಂದಿಗೆ ಭಾರತದ ಪದಕಗಳ ಸಂಖ್ಯೆ 26ಕ್ಕೆ (14 ಚಿನ್ನ, 6 ಬೆಳ್ಳಿ, 6 ಕಂಚು) ಏರಿಕೆಯಾಗಿದೆ.

ಮಾನಸಿ ಫೈನಲ್‌ನಲ್ಲಿ 53 ಸ್ಕೋರ್ ಗಳಿಸಿದರೆ, ಯಶಸ್ವಿ ಅವರು ಗುರಿಯಲ್ಲಿ 52ರ ಸ್ಕೋರ್ ಮಾಡಿದರು. ಕಜಾಕಸ್ತಾನದ ಲಿಡಿಯಾ ಬಶರೋವಾ (40) ಕಂಚಿನ ಪದಕ ಗಳಿಸಿದರು.

ಜೂನಿಯರ್ ಪುರುಷರ 10 ಮೀ. ಏರ್ ರೈಫಲ್‌ನಲ್ಲಿ ಅಭಿನವ್ ಶಾ ವೈಯಕ್ತಿಕ ಚಿನ್ನ ಗೆದ್ದರು. ಅಭಿನವ್ (628.1), ನರೇನ್ ಪ್ರಣವ್ (631.1) ಮತ್ತು ಹಿಮಾಂಶು (630.9) ಅವರ ತಂಡವೂ ಚಿನ್ನದ ಸಾಧನೆ ಮೆರೆಯಿತು.

ಇದಕ್ಕೂ ಮುನ್ನ ಸೀನಿಯರ್ ಪುರುಷರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಭಾರತ ತಂಡ ಚಾಂಪಿಯನ್ ಆಯಿತು.

ಅಭಿನವ್ ಶಾ

ಅಯ್ಯರ್‌ಗೆ ಏಕದಿನ ತಂಡದ ಸಾರಥ್ಯ?

ಬೆಂಗಳೂರು: ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಭಾರತ ತಂಡವನ್ನು ಪ್ರಕಟಿಸಲಾಗಿದೆ. ಆದರೆ, ಶ್ರೇಯಸ್ ಅಯ್ಯರ್ ಅವರನ್ನು ಆಯ್ಕೆ ಮಾಡದಿರುವುದು ಚರ್ಚೆಗೆ ಗ್ರಾಸವಾಗಿದೆ.

ಆದರೆ ಶುಕ್ರವಾರ ಸಂಜೆಯಿಂದ ಸಾಮಾಜಿಕ ಜಾಲತಾಣಗಳು ಮತ್ತು ವೆಬ್‌ಸೈಟ್‌ಗಳಲ್ಲಿ ಪ್ರಕಟವಾಗಿರುವ ಸುದ್ದಿಗಳ ಪ್ರಕಾರ ಶ್ರೇಯಸ್ ಅವರನ್ನು ಭಾರತ ಏಕದಿನ ತಂಡದ ನಾಯಕರನ್ನಾಗಿ ಮಾಡುವ ಬಗ್ಗೆ ಸಿದ್ಧತೆ ನಡೆದಿದೆ ಎನ್ನಲಾಗಿದೆ. ಅಕ್ಟೋಬರ್‌ನಲ್ಲಿ ನಡೆಯಲಿರುವ ಆಸ್ಟ್ರೇಲಿಯಾ ಎದುರಿನ ಏಕದಿನ ಸರಣಿಯಲ್ಲಿ ರೋಹಿತ್ ಶರ್ಮಾ ಅವರು ನಾಯಕರಾಗಿ ತಂಡವನ್ನು ಮುನ್ನಡೆಸುವ ಸಾಧ್ಯತೆ ಇದೆ. ಅದರ ನಂತರದ ಸರಣಿಗಳಲ್ಲಿ ಶ್ರೇಯಸ್ ಅವರಿಗೆ ನಾಯಕತ್ವ ನೀಡುವ ಕುರಿತು ಬಿಸಿಸಿಐನಲ್ಲಿ ಚಿಂತನೆ ನಡೆದಿದೆ ಎನ್ನಲಾಗಿದೆ.

ಭಾರತ ತಂಡವು ಚಾಂಪಿಯನ್ಸ್ ಟ್ರೋಫಿ ಜಯಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ಅದರಿಂದಾಗಿ ಅವರಿಗೆ ಏಕದಿನ ಮಾದರಿಯ ನಾಯಕತ್ವ ನೀಡಲು ಯೋಚಿಸಲಾಗುತ್ತಿದೆ ಎಂದು ಹೇಳಲಾಗಿದೆ.

ಅವರ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡವು ಐಪಿಎಲ್ ಫೈನಲ್ ತಲುಪಿತ್ತು. ಅಲ್ಲದೇ ಐಪಿಎಲ್‌ನಲ್ಲಿ ಅವರ ಬ್ಯಾಟಿಂಗ್ ಕೂಡ ರಂಗೇರಿತ್ತು. ಆದರೂ ಅವರಿಗೆ ಭಾರತ ತಂಡದಲ್ಲಿ ಸ್ಥಾನ ನೀಡದಿರುವುದು ಕ್ರಿಕೆಟ್ ವಲಯದಲ್ಲಿ ಅಚ್ಚರಿಗೆ ಕಾರಣವಾಗಿತ್ತು.

ಮುಂಬೈ ನಾಯಕತ್ವ ತೊರೆದ ರಹಾನೆ

ಮುಂಬೈ (ಪಿಟಿಐ): ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ ಸಮೀಪಿಸುತ್ತಿರುವ ಈ ಸಂದರ್ಭದಲ್ಲಿ ಅಜಿಂಕ್ಯ ರಹಾನೆ ಅವರು ಮುಂಬೈ ಕ್ರಿಕೆಟ್ ತಂಡದ ನಾಯಕತ್ವದಿಂದ ಕೆಳಗಿಳಿದಿದ್ದಾರೆ. ಆದರೆ ಅವರು ಬ್ಯಾಟರ್ ಆಗಿ ತಂಡದಲ್ಲಿ ಮುಂದುವರಿಯಲಿದ್ದಾರೆ.

'ಮುಂಬೈ ತಂಡದ ನಾಯಕತ್ವ ವಹಿಸಿದ್ದು ಮತ್ತು ಚಾಂಪಿಯನ್‌ಷಿಪ್ ಗೆದ್ದಿದ್ದು ನನಗೆ ಸಂದ ದೊಡ್ಡ ಗೌರವ' ಎಂದು ಅಜಿಂಕ್ಯ ಅವರು 'ಎಕ್ಸ್'ನಲ್ಲಿ ಬರೆದಿದ್ದಾರೆ.

'ದೇಶಿ ಕ್ರಿಕೆಟ್‌ನ ಹೊಸ ಋತು ಆರಂಭವಾಗಲಿದೆ. ಹೊಸ ನಾಯಕನನ್ನು ಬೆಳೆಸಲು ಇದು ಸೂಕ್ತ ಸಮಯ. ಆದ್ದರಿಂದ ನಾನು ನಾಯಕತ್ವದ ಸ್ಥಾನವನ್ನು ಬಿಟ್ಟು ಕೊಡಲು ನಿರ್ಧರಿಸಿರುವೆ. ತಂಡಕ್ಕೆ ಸನ್ನ ಸಂಪೂರ್ಣ ಸಾಮರ್ಥ್ಯವನ್ನು ವಿನಿಯೋಗಿಸಿ ಆಡುತ್ತೇವೆ. ಮುಂಬೈ ತಂಡವು ಮತ್ತಷ್ಟು ಟ್ರೋಫಿಗಳನ್ನು ಜಯಿಸಲು ನೆರವಾಗುವೆ' ಎಂದೂ ಉಲ್ಲೇಖಿಸಿದ್ದಾರೆ.

ಭಾರತ ತಂಡದಲ್ಲಿ ಆಡಿರುವ ಅಜಿಂಕ್ಯ ಅವರು 201 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿ 14 ಸಾವಿರ ರನ್ ಗಳಿಸಿದ್ದಾರೆ. ರಹಾನೆ ನಾಯಕತ್ವದಲ್ಲಿ ಮುಂಬೈ ತಂಡವು 2023–24ರ ರಣಜಿ ಟ್ರೋಫಿ ಜಯಿಸಿತ್ತು.

ಹಾಕಿ ತಂಡಕ್ಕೆ ಸಲೀಮಾ ನಾಯಕಿ

ನವದೆಹಲಿ (ಪಿಟಿಐ): ಅನುಭವಿ ಮಿಡ್‌ಫೀಲ್ಡರ್ ಸಲೀಮಾ ಟೆಟೆ ಅವರನ್ನು ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಆಡುವ ಭಾರತ ಮಹಿಳಾ ತಂಡದ ನಾಯಕಿಯನ್ನಾಗಿ ಮುಂದುವರಿಸಲಾಗಿದೆ. ಈ ಟೂರ್ನಿ ಸೆಪ್ಟೆಂಬರ್ 5ರಿಂದ 14ರವರೆಗೆ ಚೀನಾದ ಹಾಂಗ್‌ಝೌನಲ್ಲಿ ನಡೆಯಲಿದೆ.

ಈ ಟೂರ್ನಿಯಲ್ಲಿ ಚಾಂಪಿಯನ್ ಕಿರೀಟ ಧರಿಸುವ ತಂಡ, ಮುಂದಿನ ವರ್ಷದ ಎಫ್‌ಐಎಚ್ ಮಹಿಳಾ ವಿಶ್ವಕಪ್‌ನಲ್ಲಿ ಆಡುವ ಅರ್ಹತೆ ಪಡೆಯಲಿದೆ.

ಭಾರತ ವನಿತೆಯರು 'ಬಿ' ಗುಂಪಿನಲ್ಲಿದ್ದು, ಜಪಾನ್, ಥಾಯ್ಲೆಂಡ್ ಮತ್ತು ಸಿಂಗಪುರ ತಂಡಗಳ ವಿರುದ್ಧ ಆಡಬೇಕಾಗಿದೆ. ಮೊದಲ ಪಂದ್ಯ ಸೆ. 5ರಂದು ಥಾಯ್ಲೆಂಡ್ ವಿರುದ್ಧ ನಡೆಯಲಿದೆ. 6ರಂದು ಜಪಾನ್ ವಿರುದ್ಧ ಮತ್ತು 8ರಂದು ಗುಂಪಿನ ಕೊನೆ ಪಂದ್ಯವನ್ನು ಸಿಂಗಪುರ ವಿರುದ್ಧ ಆಡಲಿದೆ.

'ತಂಡದಲ್ಲಿ ಅನುಭವಿಗಳ ಜೊತೆ ಯುವ ಪ್ರೋತ್ಸಾಹಿಗಳಿದ್ದು ಸಮತೋಲನ ಹೊಂದಿದೆ' ಎಂದು ಚೀಫ್ ಕೋಚ್ ಹರೇಂದ್ರ ಸಿಂಗ್ ಅವರು ಹಾಕಿ ಇಂಡಿಯಾ ಬಿಡುಗಡೆ ಮಾಡಿದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಲಿಮಾ ಟೆಟೆ

23 ವರ್ಷದ ಸಲೀಮಾ ಅವರನ್ನು ಕಳೆದ ವರ್ಷ ಮೊದಲ ಬಾರಿ ನಾಯಕಿಯನ್ನಾಗಿ ಆಯ್ಕೆ ಮಾಡಲಾಗಿತ್ತು.

20 ಮಂದಿಯ ತಂಡ ಹೀಗಿದೆ: ಗೋಲ್‌ಕೀಪರ್ಸ್: ಬನ್ಸಾರಿ ಸೋಲಂಕಿ, ಬಿಚು ದೇವಿ ಕರಿಬಮ್, ಡಿಫೆಂಡರ್ಸ್: ಮನಿಶಾ ಚೌಹಾನ್, ಉದಿತಾ, ಜ್ಯೋತಿ, ಸುಮನ್ ದೇವಿ, ನಿಕ್ಕಿ ಪ್ರಧಾನ್, ಇಶಿಕಾ ಚೌಧರಿ. ಮಿಡ್‌ಫೀಲ್ಡರ್ಸ್: ನೇಹಾ, ವೈಷ್ಣವಿ ವಿಠ್ಠಲ್ ಫಾಲ್ಕೆ, ಸಲಿಮಾ ಟೆಟೆ, ಶರ್ಮಿಳಾ ದೇವಿ, ಲಾಲ್ರೆಮ್‌ಸಿಯಾಮಿ, ಸುನೆಲಿಟಾ ಟೊಪ್ಪೊ. ಫಾರ್ವರ್ಡ್ಸ್: ನವನೀತ್ ಕೌರ್, ರುತುಜಾ ದಾದಾಸೊ ಪಿಸಾಳ್, ಬ್ಯೂಟಿ ಡುಂಗ್ ಡುಂಗ್, ಮುಮ್ತಾಜ್ ಖಾನ್, ದೀಪಿಕಾ ಮತ್ತು ಸಂಗೀತಾ ಕುಮಾರಿ.

ಸಂಕ್ಷಿಪ್ತ ಸುದ್ದಿ

ಟಿಟಿ: ಶರ್ವಿಲ್, ನಂದನಾಗೆ ಪ್ರಶಸ್ತಿ

ಪ್ರಶಸ್ತಿಯೊಂದಿಗೆ ಶರ್ವಿಲ್ ಕರಂಬೆಲ್ಕರ ಮತ್ತು ನಂದನಾ ಬಂಡಿ

ಹೊಸಪೇಟೆ: ಶರ್ವಿಲ್ ಕರಂಬೆಲ್ಕರ ಮತ್ತು ನಂದನಾ ಬಂಡಿ ಇಲ್ಲಿ ಗುರುವಾರ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಹೋಪ್ಸ್ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಇಲ್ಲಿನ ತುಂಗಭದ್ರಾ ಬೋರ್ಡ್ ಸ್ಪೋರ್ಟ್ಸ್ ಸೆಂಟರ್‌ನಲ್ಲಿ ನಡೆದ ಬಾಲಕರ ಫೈನಲ್ ನಲ್ಲಿ ಶರ್ವಿಲ್ 9-11, 11-7, 11-9, 11-9 ರಿಂದ ಅರ್ಣವ್ ಮಿಥುನ್ ಅವರನ್ನು ಮಣಿಸಿದರು. ಬಾಲಕಿಯರ ಫೈನಲ್‌ನಲ್ಲಿ ನಂದನಾ 9-11, 11-7, 12-10, 9-11, 11-9ರಿಂದ ಸಮನ್ವಿ ಸಂದೀಪ್ ವಿರುದ್ಧ ಗೆಲುವು ಸಾಧಿಸಿದರು.

ಇರಾನಿ–ಆಂಡ್ರಿಯಾ ಜೋಡಿಗೆ ಕಿರೀಟ

ನ್ಯೂಯಾರ್ಕ್ (ಎಪಿ): ಇಟಲಿಯ ಸಾರಾ ಇರಾನಿ ಮತ್ತು ಆಂಡ್ರಿಯಾ ವಾವಸ್ಸೋರಿ ಜೋಡಿ, ಅಮೆರಿಕ ಓಪನ್ ಟೆನಿಸ್ ಮಿಶ್ರ ಡಬಲ್ಸ್ ಪ್ರಶಸ್ತಿಯನ್ನು ತನ್ನಲ್ಲೇ ಉಳಿಸಿಕೊಂಡಿತು. ಪ್ರತ್ಯೇಕವಾಗಿ ನಡೆದ ಮೂರು ದಿನಗಳ ಮಿಶ್ರ ಡಬಲ್ಸ್ ಈ ಬಾರಿ 16 ತಂಡಗಳಿಗೆ ಸೀಮಿತಗೊಂಡಿದ್ದು, ಮೂರು ದಿನಗಳಲ್ಲಿ ನಡೆಯಿತು.

ಡಬಲ್ಸ್‌ನಲ್ಲಿ ಆಡಲು ಸಿಂಗಲ್ಸ್ ಆಟಗಾರರಿಗೂ ಅವಕಾಶ ದೊರೆಕಿತ್ತು. ಎಂಟು ಜೋಡಿಗಳು ರ್‍ಯಾಂಕಿಂಗ್ ಆಧಾರದಲ್ಲಿ ಪ್ರವೇಶ ಪಡೆದರೆ, ಉಳಿದ ಎಂಟು ಜೋಡಿಗಳಿಗೆ ವೈಲ್ಡ್ ಕಾರ್ಡ್ ಪ್ರವೇಶ ನೀಡಲಾಗಿತ್ತು.

ಪ್ರೇಕ್ಷಕರಿಂದ ಭರ್ತಿಯಾಗಿದ್ದ ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ಸಾರಾ–ವಾವಸ್ಸೋರಿ ಜೋಡಿ 6–3, 5–7 , 10–6 ರಿಂದ ಮೂರನೇ ಶ್ರೇಯಾಂಕದ ಇಗಾ ಶ್ವಾಂಟೆಕ್– ಕ್ಯಾಸ್ಪರ್ ರುಡ್ ಜೋಡಿಯನ್ನು ಮಣಿಸಿತು. ₹8.72 ಕೋಟಿ ಬಹುಮಾನ ವಿಜೇತರ ಪಾಲಾಯಿತು. ಕ್ರೀಡಾಂಗಣ ಭರ್ತಿಯಾಗಿತ್ತು.

ಬಿಎಫ್‌ಐ ಅಧ್ಯಕ್ಷರಾಗಿ ಅಜಯ್ ಸಿಂಗ್

ಗುರುಗ್ರಾಮ (ಪಿಟಿಐ): ಅಜಯ್ ಸಿಂಗ್ ಅವರು ಭಾರತ ಬಾಕ್ಸಿಂಗ್ ಫೆಡರೇಷನ್ (ಬಿಎಫ್‌ಐ) ಅಧ್ಯಕ್ಷರಾಗಿ ಪುನರಾಯ್ಕೆಯಾಗಿದ್ದಾರೆ. ಅವರು ಗುರುವಾರ ನಡೆದ ಚುನಾವಣೆಯಲ್ಲಿ ಜಸ್‌ಲಾಲ್ ಪ್ರಧಾನ್ ವಿರುದ್ಧ ಗೆದ್ದರು.

ಅಜಯ್ ಸಿಂಗ್ 40–26 ಮತಗಳಿಂದ ಜಯಿಸಿದರು. ಅವರು ಸ್ಪೈಸ್‌ಜೆಟ್ ಏರ್‌ಲೈನ್ಸ್‌ನ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆ. ಉತ್ತರಪ್ರದೇಶದ ಪ್ರಮೋದ್ ಕುಮಾರ್ ಮಹಾಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಪಾನ್ ಭಾಸ್ಕರನ್ ಖಜಾಂಚಿಯಾಗಿ ಚುನಾಯಿತರಾಗಿದ್ದಾರೆ.

MOFPI MINISTRY OF FOOD PROCESSING INDUSTRIES GOVERNMENT OF INDIA | ಕರ್ನಾಟಕ ಸರ್ಕಾರ | PMFME | KAPPEC

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗಾಗಿ ವಿಶೇಷ ಅಭಿಯಾನ

ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ

- ಯೋಜನೆಯಡಿಯಲ್ಲಿ ಕಿರು ಆಹಾರ ಉದ್ದಿಮೆ ಸ್ಥಾಪಿಸಲು ಶೇ.50 ರಷ್ಟು ಅಥವಾ ಗರಿಷ್ಠ ರೂ.15.00 ಲಕ್ಷ ಸಾಲ ಸಂಪರ್ಕಿತ ಸಹಾಯಧನ (ಕೇಂದ್ರ ಸರ್ಕಾರದ ರೂ.6.00 ಲಕ್ಷ ಹಾಗೂ ರಾಜ್ಯ ಸರ್ಕಾರದ ರೂ.9.00 ಲಕ್ಷ ಸಹಾಯಧನ ಲಭ್ಯವಿರುತ್ತದೆ)
- ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ಶೇ.3 ರಷ್ಟು ಬಡ್ಡಿ ಸಹಾಯಧನ (NSCFDC / NSTFDC ವತಿಯಿಂದ)

ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಸ್ಥಾಪನೆ / ಅಭಿವೃದ್ಧಿಗೆ ಸುವರ್ಣಾವಕಾಶ

ಆಸಕ್ತ ಪರಿಶಿಷ್ಟ ಜಾತಿ ಮತ್ತು ಪಂಗಡದ ಉದ್ದಿಮೆದಾರರು ಕೆಪೆಕ್ ಕಚೇರಿಗೆ ಈ ಕೆಳಕಂಡ ದಾಖಲಾತಿಗಳೊಂದಿಗೆ ಭೇಟಿ ನೀಡುವುದು:
ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ರೇಷನ್ ಕಾರ್ಡ್/ವಿದ್ಯುತ್ ಬಿಲ್ಲು, ಉದ್ದಿಮೆದಾರರ ಫೋಟೋಗಳು, ಕಳೆದ 6 ತಿಂಗಳ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ, ಯಂತ್ರೋಪಕರಣಗಳ ವಿವರಗಳು ಮತ್ತು ಕೊಟೇಷನ್, ಬಾಡಿಗೆ/ಲೀಸ್ ಕರಾರು ಪತ್ರ, ಸ್ಥಾಪಿಸಬೇಕಿರುವ ಉದ್ದಿಮೆಯ ವಿವರಗಳು

ಯೋಜನೆಯಡಿಯಲ್ಲಿ ಸ್ಥಾಪಿಸಬಹುದಾದ ಕಿರು ಆಹಾರ ಉದ್ದಿಮೆಗಳು

ಸಿರಿಧಾನ್ಯ ಆಧಾರಿತ ಉತ್ಪನ್ನಗಳು, ಎಣ್ಣೆ ಬೀಜ ಆಧಾರಿತ ಉತ್ಪನ್ನಗಳು, ಬೇಕರಿ ಉತ್ಪನ್ನಗಳು, ಬೆಲ್ಲ ಆಧಾರಿತ ಉತ್ಪನ್ನಗಳು, ಮಸಾಲೆ ಪದಾರ್ಥಗಳು, ಮೆಣಸಿನಕಾಯಿ ಆಧಾರಿತ ಉತ್ಪನ್ನಗಳು ಅಥವಾ ಇನ್ನ್ಯಾವುದೇ ಸಂಸ್ಕರಿಸಿದ ಆಹಾರ ಉತ್ಪನ್ನಗಳ ಉದ್ದಿಮೆ ಸ್ಥಾಪಿಸಲು ಅವಕಾಶವಿದೆ.

ಕೆಪೆಕ್ ಕೇಂದ್ರ ಕಚೇರಿಗೆ ಬರಲು ಸಾಧ್ಯವಾಗದವರು ಸಂಬಂಧಪಟ್ಟ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಕಚೇರಿಗೂ ಸಹ ಭೇಟಿ ನೀಡಿ ಈ ವಿಶೇಷ ಅಭಿಯಾನದ ಪ್ರಯೋಜನ ಪಡೆದುಕೊಳ್ಳಬಹುದು

ವಿಶೇಷ ಅಭಿಯಾನದ ಭಾಗವಾಗಿ ಕೆಪೆಕ್ ಸಂಸ್ಥೆಯಲ್ಲಿ ಕಲ್ಪಿಸಿರುವ ವ್ಯವಸ್ಥೆಗಳು

- ಬ್ಯಾಂಕಿಂಗ್ ಸಲಹಾ ಕೋಶ ಸ್ಥಾಪನೆ
- ಸಹಾಯವಾಣಿ ಕೇಂದ್ರ ಸ್ಥಾಪನೆ
- ಅರ್ಜಿ ಸಲ್ಲಿಕೆ ಮತ್ತು ವಿಲೇವಾರಿಗೆ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳ ಲಭ್ಯತೆ
- ಅರ್ಜಿ ಸಲ್ಲಿಸಿದ ದಿನದಂದೇ ಅರ್ಜಿಯ ಪರಿಶೀಲನೆ ಹಾಗೂ ಸಹಾಯಧನಕ್ಕೆ ಶಿಫಾರಸ್ಸು
- ಆಯ್ದ ಜಿಲ್ಲೆಗಳಲ್ಲಿ ತರಬೇತಿ ಮತ್ತು ಅರಿವು ಮೂಡಿಸುವ ವಿಶೇಷ ಕಾರ್ಯಕ್ರಮ

ಹೆಚ್ಚಿನ ಮಾಹಿತಿಗಾಗಿ ವಿಶೇಷ ಸಹಾಯವಾಣಿಯ ಸಲಹೆಗಾರರು / ಕೆಪೆಕ್ ಸಿಬ್ಬಂದಿಯನ್ನು ಸಂಪರ್ಕಿಸಿ: **ಶ್ರೀಮತಿ ನೌಶಿನ್ ಸಬಾ** ಮತ್ತು **ಶ್ರೀ ಪ್ರೇಮ್ ಹೆಚ್.ಜಿ.**
080 – 22271190 / 22271198 | email: **pmfmekarnataka@gmail.com** | website: **https://kappec.karnataka.gov.in**

ಪ್ರಕಟಣೆ: ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಒಂದು ಉದ್ಯಮ) ಹಾಗೂ ರಾಜ್ಯ ನೋಡಲ್ ಏಜೆನ್ಸಿ– PMFME
ನಂ.17, ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ (ರಿಚ್ಮಂಡ್ ರಸ್ತೆ), ಬೆಂಗಳೂರು-560 025